ಗುರುವಾರ, ಫೆಬ್ರುವರಿ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 53 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಜಿಲ್ಲಾ ನ್ಯಾಯಾಲಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ




ವಿದೇಶ ವಿದ್ಯಮಾನ
ಪಾಕಿಸ್ತಾನ: ಸ್ಥಿತಿ ಡೋಲಾಯಮಾನ

ಷೇರುಪೇಟೆ ಸೂಚ್ಯಂಕಗಳು ಕುಸಿತ 14

ವಿಪಕ್ಷಗಳ ಅಡ್ಡಿ: ಸಿ.ಎಂ ಮಾತು ಮೊಟಕು 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,623 ▼	22,055 ▼	₹64,150 (ಬೆಂಗಳೂರು) ▲	₹73,000 (ಬೆಂಗಳೂರು) ▲	82.96 ▲



ಫಾಲಿ ಸ್ಯಾಮ್ ನರೀಮನ್

ನ್ಯಾಯಶಾಸ್ತ್ರಜ್ಞ ನರೀಮನ್ ವಿಧಿವಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಂತರರಾಜ್ಯ ಜಲ ವಿವಾದಗಳಲ್ಲಿ ಕರ್ನಾಟಕ ಕಾನೂನು ತಂಡದ ಮುಖ್ಯಸ್ಥರಾಗಿದ್ದ ಪ್ರಖ್ಯಾತ ನ್ಯಾಯಶಾಸ್ತ್ರಜ್ಞ ಹಾಗೂ ಸಂವಿಧಾನ ತಜ್ಞ ಫಾಲಿ ಸ್ಯಾಮ್ ನರೀಮನ್ (95) ಇಲ್ಲಿ ವಿಧಿವಶರಾದರು.

ನರೀಮನ್ ಬುಧವಾರ ಬೆಳಗ್ಗಿನ ಜಾವ ಕೊನೆಯುಸಿರೆಳೆದರು. ಅವರು ಹೃದಯ ಸಂಬಂಧಿ ಸಮಸ್ಯೆಗಳು ಸೇರಿದಂತೆ ಅನೇಕ ಕಾಯಿಲೆಗಳಿಂದ ಬಳಲುತ್ತಿದ್ದರು. ಅವರ ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಅವರಿಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯಾದ ಪುತ್ರ ರೋಹಿಂಟನ್ ಎಫ್. ನರೀಮನ್ ಹಾಗೂ ಪುತ್ರಿ ಅನಾಹಿತಾ ಎಫ್. ನರೀಮನ್ ಇದ್ದಾರೆ.

70 ವರ್ಷಗಳ ಸುದೀರ್ಘ ವಕೀಲ ವೃತ್ತಿಯಲ್ಲಿ ನರೀಮನ್ ಅವರು ಭೋಪಾಲ್ ಅನಿಲ ದುರಂತ, ಟಿಎಂಎ ಪೈ ಪ್ರಕರಣ, ಜಯಲಲಿತಾ ಅಕ್ರಮ ಆಸ್ತಿ ಪ್ರಕರಣ, ಗುಜರಾತ್‌ನ ನರ್ಮದಾ ಪುನರ್ವಸತಿ ಪ್ರಕರಣ, ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗದ ಪ್ರಕರಣ ಸೇರಿದಂತೆ ಹಲವಾರು ಪ್ರಸಿದ್ಧ ವ್ಯಾಜ್ಯಗಳಲ್ಲಿ ವಾದಿಸಿದ್ದಾರೆ. ಹಲವು ಕೃತಿಗಳನ್ನು ರಚಿಸಿದ್ದಾರೆ.

11ನೇ ಪುಟ ನೋಡಿ

ರೈತರು– ಪೊಲೀಸರ ನಡುವೆ ಘರ್ಷಣೆ • ಅಶ್ರುವಾಯು ಶೆಲ್, ರಬ್ಬರ್ ಗುಂಡಿನ ದಾಳಿ

ರೈತ ಸಾವು: ‘ಚಲೋ’ಗೆ ವಿರಾಮ

ಚಂಡೀಗಢ (ಪಿಟಿಐ): ಪುನರಾರಂಭವಾದ ರೈತರ ‘ದೆಹಲಿ ಚಲೋ’ ಪ್ರತಿಭಟನಾ ಮೆರವಣಿಗೆ ಬುಧವಾರ ಬಿರುಸು ಪಡೆದುಕೊಂಡಿತು. ರೈತರು ಮತ್ತು ಪೊಲೀಸರ ನಡುವೆ ಘರ್ಷಣೆಗೆ ಕಾರಣವಾಯಿತು. ಘರ್ಷಣೆಯಲ್ಲಿ ಪಂಜಾಬಿನ 21 ವರ್ಷದ ಯುವ ರೈತ ಮೃತಪಟ್ಟು, ಕೆಲ ರೈತರು ಮತ್ತು 12 ಪೊಲೀಸರು ಗಾಯಗೊಂಡರು. ಇದರ ಬೆನ್ನಲ್ಲೇ ರೈತ ಮುಖಂಡರು ‘ದೆಹಲಿ ಚಲೋ’ಗೆ ಎರಡು ದಿನಗಳ ಮಟ್ಟಿಗೆ ವಿರಾಮ ನೀಡಿದ್ದಾರೆ.

ಪ್ರತಿಭಟನೆಗೆ ಸಂಬಂಧಿಸಿ ಮುಂದಿನ ಕ್ರಮಗಳ ಕುರಿತು ಶುಕ್ರವಾರ ಸಂಜೆ ನಿರ್ಧರಿಸಲಾಗುವುದು ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ್ ಹೇಳಿದರು. ಈ ವಿರಾಮದ ಸಮಯದಲ್ಲಿ ಸಹಸ್ರಾರು ರೈತರು ಗಡಿಗಳಲ್ಲಿಯೇ ಬಿಡಾರ ಹೂಡಲಿದ್ದಾರೆ.

ಪಂಜಾಬ್ ಮತ್ತು ಹರಿಯಾಣ ಗಡಿಭಾಗವಾದ ಶಂಭು ಮತ್ತು ಖನೌರಿ ಭಾಗಗಳಲ್ಲಿ ಪ್ರತಿಭಟನೆನಿರತ ರೈತರು ಬ್ಯಾರಿಕೇಡ್‌ಗಳತ್ತ ಮುನ್ನುಗ್ಗಲು ಯತ್ನಿಸಿದಾಗ, ಅವರನ್ನು ಚದುರಿಸಲು ಹರಿಯಾಣ ಪೊಲೀಸರು ಮೂರು ಸುತ್ತು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು. ಇದಕ್ಕೆ ಅವರು ಡ್ರೋನ್ ಅನ್ನೂ ಬಳಸಿದರು.

ಅಶ್ರುವಾಯು ಶೆಲ್ ದಾಳಿಯಿಂದ ತಪ್ಪಿಸಿಕೊಳ್ಳಲು ರೈತರು ಚದುರಿದಂತೆ ಓಡಿದಾಗ, ಕೆಲವರಿಗೆ ಗಾಯಗಳಾಗಿವೆ. ಹೊಗೆಯಿಂದ ರಕ್ಷಿಸಿಕೊಳ್ಳಲು ಹಲವರು ಮಾಸ್ಕ್ ಮತ್ತು ಕನ್ನಡಕಗಳನ್ನು ಧರಿಸಿದ್ದರು. ಪೊಲೀಸರು ರಬ್ಬರ್ ಬುಲೆಟ್‌ಗಳನ್ನೂ ಹಾರಿಸಿದ್ದಾರೆ ಎಂದು ರೈತರು ದೂರಿದರು.

ಖನೌರಿಯಲ್ಲಿ ನಡೆದ ಘರ್ಷಣೆಯಲ್ಲಿ ಮೃತಪಟ್ಟ ರೈತನನ್ನು ಪಂಜಾಬಿನ ಬಠಿಂಡಾ ಜಿಲ್ಲೆಯ ಬಾಲೋಕೆ ಗ್ರಾಮದ ನಿವಾಸಿ ಸುಭಕರನ್ ಸಿಂಗ್ (21) ಎಂದು ಗುರುತಿಸಲಾಗಿದೆ ಎಂದು ರೈತ ಮುಖಂಡ ಬಲದೇವ್ ಸಿಂಗ್ ಸಿರ್ಸಾ ತಿಳಿಸಿದರು. ‘ದೆಹಲಿ ಚಲೋ’ ಮೆರವಣಿಗೆ ಫೆ. 13ರಿಂದ ಆರಂಭವಾದ ನಂತರ ನಡೆದ ಘರ್ಷಣೆಯಲ್ಲಿ ಸಂಭವಿಸಿದ ಮೊದಲ ಸಾವು ಇದಾಗಿದೆ ಎಂದು ಅವರು ಹೇಳಿದರು.

‘ಘರ್ಷಣೆಯಲ್ಲಿ ಗಾಯಗೊಂಡ ಮೂವರನ್ನು ಪಟಿಯಾಲದ ರಾಜೇಂದ್ರ ಆಸ್ಪತ್ರೆಗೆ ಕರೆತರಲಾಯಿತು. ಅವರಲ್ಲಿ ಒಬ್ಬರು ಮೃತಪಟ್ಟಿದ್ದಾರೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಎಚ್.ಎಸ್.ರೇಖಿ ಸುದ್ದಿಗಾರರಿಗೆ ತಿಳಿಸಿದರು.

ಲಾಠಿ ಮತ್ತು ಕಲ್ಲು ತೂರಾಟದಿಂದ ಸುಮಾರು 12 ಪೊಲೀಸರು ಗಾಯಗೊಂಡಿದ್ದಾರೆ ಎಂದು ಹರಿಯಾಣ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

11ನೇ ಪುಟ ನೋಡಿ



ಶಂಭು ಗಡಿಯಲ್ಲಿ ಪ್ರತಿಭಟನೆನಿರತರನ್ನು ಚದುರಿಸಲು ಹರಿಯಾಣ ಪೊಲೀಸರು ಬುಧವಾರ ಅಶ್ರುವಾಯು ಶೆಲ್ ಸಿಡಿಸಿದಾಗ, ರಕ್ಷಿಸಿಕೊಳ್ಳಲು ರೈತರು ಓಡಿದರು —ಪಿಟಿಐ ಚಿತ್ರ

ಪ್ರಮುಖ ಬೆಳವಣಿಗೆಗಳು

- ರೈತರ ಪ್ರತಿಭಟನೆಯು ಉತ್ತರ ಪ್ರದೇಶದ ಪಶ್ಚಿಮ ಭಾಗದ ಪಟ್ಟಣಗಳಿಗೂ ವ್ಯಾಪಿಸುವ ಲಕ್ಷಣಗಳು ಗೋಚರಿಸಿವೆ. ಉತ್ತರ ಪ್ರದೇಶದ ಮೀರಠ್, ಸಹರಾನ್‌ಪುರ, ಮುಜಾಫರ್‌ನಗರ ಸೇರಿದಂತೆ ಕೆಲವೆಡೆ ಪ್ರತಿಭಟನೆಗಳು ನಡೆದಿವೆ. ಇಲ್ಲೆಲ್ಲ ನೂರಾರು ರೈತರು ಟ್ರ್ಯಾಕ್ಟರ್‌ಗಳಲ್ಲಿ ಬಂದು ಜಿಲ್ಲಾಧಿಕಾರಿ ಕಚೇರಿಗಳ ಮುಂಭಾಗ ಪ್ರತಿಭಟಿಸಿದ್ದಾರೆ. ರೈತರು ಬ್ಯಾರಿಕೇಡ್‌ಗಳನ್ನು ದಾಟಿ ಮುನ್ನಡೆದಾಗ ಪೊಲೀಸರ ಜತೆ ಮಾತಿನ ಚಕಮಕಿಯೂ ನಡೆದಿದೆ
- ಪಂಜಾಬ್– ಹರಿಯಾಣ ಗಡಿಯಲ್ಲಿ 1,200 ಟ್ರ್ಯಾಕ್ಟರ್–ಟ್ರಾಲಿಗಳು, 300 ಕಾರುಗಳು, 10 ಮಿನಿ ಬಸ್‌ಗಳು ಮತ್ತು ಸಣ್ಣ ವಾಹನಗಳೊಂದಿಗೆ ಸುಮಾರು 14 ಸಾವಿರ ಜನರು ಜಮಾಯಿಸಿದ್ದಾರೆ. ‘ಕೆಲ ದಿನಗಳಿಂದ ಈ ಭಾಗದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿರುವುದು ಕಳವಳ ಮೂಡಿಸಿದೆ. ಕಾನೂನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಿ ’ಎಂದು ಕೇಂದ್ರ ಗೃಹ ಸಚಿವಾಲಯವು ಪಂಜಾಬ್ ಸರ್ಕಾರಕ್ಕೆ ಪತ್ರ ಮುಖೇನ ತಿಳಿಸಿದೆ
- ರೈತರ ಪ್ರತಿಭಟನೆಯಿಂದ ದೆಹಲಿ– ಗುರುಗ್ರಾಮ ಗಡಿಯಲ್ಲಿ ದೆಹಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿದ್ದರಿಂದ ಎಕ್ಸ್‌ಪ್ರೆಸ್ ವೇಯಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿತ್ತು
- ರೈತರ ಪ್ರತಿಭಟನೆಯನ್ನು ಬೆಂಬಲಿಸಿ, ಯುವಮಿತ್ರ ಯೋಜನೆಯಡಿ ಕೆಲಸ ಮಾಡುತ್ತಿರುವ ಯುವ ಜನರನ್ನು ಮರು ಸೇರ್ಪಡೆಗೆ ಒತ್ತಾಯಿಸಿ ಜೈಪುರದಲ್ಲಿ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ರಾಜಸ್ಥಾನ ಪೊಲೀಸರು ಲಾಠಿ ಪ್ರಹಾರ ನಡೆಸಿದರು
- ಜೈಪುರದಲ್ಲಿ ರೈತರ ಟ್ರ್ಯಾಕ್ಟರ್ ರ‍್ಯಾಲಿ ನಡೆಸಲು ಯೋಜಿಸಿದ್ದ ಕಿಸಾನ್ ಮಹಾಪಂಚಾಯತ್‌ನ ರಾಷ್ಟ್ರೀಯ ಅಧ್ಯಕ್ಷ ರಾಂಪಾಲ್ ಜಾಟ್ ಅವರನ್ನು ಬುಧವಾರ ಅಜ್ಮೀರ್ ಜಿಲ್ಲೆಯ ಅರೈ ಗ್ರಾಮದಲ್ಲಿ ಪೊಲೀಸರು ಬಂಧಿಸಿದರು
- ಉತ್ತರ ಪ್ರದೇಶದ ಮುಜಾಫರ್ ನಗರದಲ್ಲಿ ಪ್ರತಿಭಟನಾನಿರತ ರೈತರೊಬ್ಬರು ಬೆಂಕಿ ಹಚ್ಚಿಕೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು

ರಾಜಕಾರಣಿಗಳು ಗ್ರಾಮಕ್ಕೆ ಬರಲು ಬಿಡಲ್ಲ: ಟಿಕಾಯತ್

ಮೀರಠ್ (ಉತ್ತರ ಪ್ರದೇಶ): ‘ರೈತರಿಗೆ ದೆಹಲಿಗೆ ಹೋಗಲು ಸರ್ಕಾರ ಅವಕಾಶ ನೀಡದಿದ್ದರೆ, ಚುನಾವಣಾ ಸಮಯದಲ್ಲಿ ಗ್ರಾಮಗಳಿಗೆ ಬರಲು ರಾಜಕಾರಣಿಗಳಿಗೆ ಕೂಡ ರೈತರು ಅವಕಾಶ ನೀಡುವುದಿಲ್ಲ’ ಎಂದು ಭಾರತೀಯ ಕಿಸಾನ್ ಯೂನಿಯನ್‌ನ (ಬಿಕೆಯು) ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಎಚ್ಚರಿಸಿದರು.

ಮೀರಠ್‌ನಲ್ಲಿ ರೈತ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅವರು, ‘ರಸ್ತೆಗೆ ಮೊಳೆ ಹೊಡೆಯುವುದು ಸರಿಯಲ್ಲ. ನಮ್ಮ ದಾರಿಗೆ ನೀವು ಮೊಳೆ ಹಾಕಿದರೆ, ನೀವು ನಮ್ಮ ಹಳ್ಳಿಗಳಿಗೆ ಬಂದಾಗ ನಾವೂ ಹಾಗೆಯೇ ಮಾಡುತ್ತೇವೆ. ಹಳ್ಳಿಗಳಲ್ಲಿ ನಾವೂ ಬ್ಯಾರಿಕೇಡ್‌ಗಳನ್ನು ಹಾಕುತ್ತೇವೆ’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ರೈತರು ಇದೇ 26ರಂದು ವಿವಿಧೆಡೆ ಬೀದಿಗಿಳಿದು ಹೋರಾಡಲಿದ್ದಾರೆ. ಈ ಕುರಿತು ಗುರುವಾರ ರೈತ ಮುಖಂಡರ ಸಭೆ ಕರೆಯಲಾಗಿದ್ದು, ಮುಂದಿನ ಕ್ರಮಗಳನ್ನು ತೀರ್ಮಾನಿಸಲಾಗುವುದು. ದೊಡ್ಡ ಆಂದೋಲನಕ್ಕೆ ಸಿದ್ಧರಾಗಿ’ ಎಂದು ಬಿಕೆಯು ಅಧ್ಯಕ್ಷ ನರೇಶ್ ಟಿಕಾಯತ್ ಕರೆ ನೀಡಿದ್ದಾರೆ.

26, 27ರಂದು ‘ಯುವ ಸಮೃದ್ಧಿ ಮೇಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ಡಿಪ್ಲೊಮಾ ಮತ್ತಿತರ ವೃತ್ತಿಪರ ಕೋರ್ಸ್ ಸೇರಿದಂತೆ ನಿರುದ್ಯೋಗಿ ಪದವೀಧರರಿಗೆ ಉದ್ಯೋಗಾವಕಾಶ ಕಲ್ಪಿಸುವ ‘ಯುವ ಸಮೃದ್ಧಿ ಮೇಳ’ವನ್ನು 26, 27ರಂದು ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬೃಹತ್ ಉದ್ಯೋಗ ಮೇಳ ನಡೆಸಲಾಗಿತ್ತು. ಸಿದ್ದರಾಮಯ್ಯ ಅವರ ಸೂಚನೆಯಂತೆ ಈ ಬಾರಿ ಬೃಹತ್ ಮೇಳ ಆಯೋಜಿಸಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲಾಭಿವೃದ್ಧಿ ಹಾಗೂ ಜೀವನೋಪಾಯ ಸಚಿವ ಶರಣ ಪ್ರಕಾಶ್ ಪಾಟೀಲ ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆನ್‌ಲೈನ್ ನೋಂದಣಿ ಈಗಾಗಲೇ ಆರಂಭಿಸಿದ್ದು, 31 ಸಾವಿರ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಮೇಳ ಆರಂಭದ ದಿನದವರೆಗೂ ನೋಂದಣಿಗೆ ಅವಕಾಶ ನೀಡಲಾಗಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳಲ್ಲಿ ಒಂದು ಲಕ್ಷ ಹುದ್ದೆಗಳು ಲಭ್ಯವಿವೆ. ಶೈಕ್ಷಣಿಕ ಅರ್ಹತೆಗೆ ತಕ್ಕಂತೆ ಉದ್ಯೋಗ ಪಡೆಯಲು ಮೇಳ ಸಹಕಾರಿಯಾಗಲಿದೆ ಎಂದರು.

ಮೇಳದಲ್ಲಿನ ಪ್ರತಿ ಮಳಿಗೆಗೂ ಅಭ್ಯರ್ಥಿಗಳು ಭೇಟಿ ನೀಡಬಹುದು. ತಮ್ಮ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಲಭ್ಯವಿರುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಆಯಾ ಕಂಪನಿಗಳ ನುರಿತ ತಜ್ಞರು, ಪರಿಣತರು ಇದಕ್ಕೆ ನೆರವಾಗುವರು. ನೋಂದಣಿ ವೇಳೆ ನೀಡಿದ ಮಾಹಿತಿ ಆಧಾರದಲ್ಲಿ ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಪ್ರತಿ ಅಭ್ಯರ್ಥಿಯೂ ಭೇಟಿ ನೀಡಬಹುದಾದ ಮಳಿಗೆಗಳ ಕುರಿತು ಮಾಹಿತಿ ಸಂದೇಶ ರವಾನೆಯಾಗಲಿದೆ ಎಂದು ಹೇಳಿದರು.

ಅಂಕಿ ಅಂಶಗಳು

- 31 ಸಾವಿರ — ಆನ್‌ಲೈನ್ ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳು
- 500 — ಭಾಗಿಯಾಗುವ ಕಂಪನಿಗಳು
- 600 — ಮೇಳದಲ್ಲಿನ ಮಳಿಗೆಗಳು

ಬಿಟ್‌ಕಾಯಿನ್: ಸಂದೀಪ್ ಪಾಟೀಲ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿಯ ವಿಶೇಷ ತನಿಖಾದಳದ (ಎಸ್‌ಐಟಿ) ಅಧಿಕಾರಿಗಳು ಕೆಎಸ್‌ಆರ್‌ಪಿ ಐಜಿಪಿ ಸಂದೀಪ್ ಪಾಟೀಲ ಅವರನ್ನು ಬುಧವಾರ ತೀವ್ರ ವಿಚಾರಣೆಗೆ ಒಳಪಡಿಸಿದರು.

ಎಸ್‌ಐಟಿ ನೋಟಿಸ್ ಜಾರಿ ಮಾಡಿದ್ದರಿಂದ ಮಧ್ಯಾಹ್ನ 3.30ಕ್ಕೆ ಸಿಐಡಿ ಕಚೇರಿಗೆ ಬಂದಿದ್ದ ಸಂದೀಪ್ ಪಾಟೀಲ ಅವರನ್ನು ಸಂಜೆ 6.30ರವರೆಗೆ ವಿಚಾರಣೆಗೆ ಒಳಪಡಿಸಲಾಯಿತು ಎಂದು ಮೂಲಗಳು ಹೇಳಿವೆ.



ಸಂದೀಪ್ ಪಾಟೀಲ

10ನೇ ಪುಟ ನೋಡಿ

ಕುಪೇಂದ್ರ ರೆಡ್ಡಿ ಗೆಲ್ಲಿಸಲು ‘ಮೈತ್ರಿ’ ನಾಯಕರ ಕಸರತ್ತು

ಬೆಂಗಳೂರು: ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ನಡೆಯಲಿರುವ ಚುನಾವಣೆಯಲ್ಲಿ ಐದನೇ ಅಭ್ಯರ್ಥಿಯಾಗಿ ಕಣದಲ್ಲಿರುವ ಜೆಡಿಎಸ್‌ನ ಡಿ. ಕುಪೇಂದ್ರ ರೆಡ್ಡಿ ಅವರನ್ನು ಗೆಲ್ಲಿಸಿಕೊಳ್ಳಲು ಬಿಜೆಪಿ- ಜೆಡಿಎಸ್ ನಾಯಕರು ಇನ್ನಿಲ್ಲದ ಕಸರತ್ತು ಆರಂಭಿಸಿದ್ದಾರೆ. 10

‘ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ–2024’ಕ್ಕೆ ಅಂಗೀಕಾರ

ನಗರ ಆಸ್ತಿ ನೋಂದಣಿ: ಇ–ಖಾತೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಆಸ್ತಿ ನೋಂದಣಿಗೆ ಇ-ಸ್ವತ್ತು ಕಡ್ಡಾಯಗೊಳಿಸಿದ ಮಾದರಿಯಲ್ಲೇ ನಗರ ಪ್ರದೇಶಗಳ ಆಸ್ತಿ ನೋಂದಣಿಗೆ ಡಿಜಿಟಲ್ ಸ್ವರೂಪದ ಇ-ಖಾತಾ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸುವ ‘ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ–2024’ಕ್ಕೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಡಿಜಿಟಲ್ ಸ್ವರೂಪದಲ್ಲಿ ಹಾಜರುಪಡಿಸುವ ಕೆಲವು ದಾಖಲೆಗಳನ್ನು ಎರಡೂ ಕಡೆಯವರ ಖುದ್ದು ಹಾಜರಿ ಇಲ್ಲದೆ ಕಡ್ಡಾಯವಾಗಿ ನೋಂದಣಿಗೆ ಅವಕಾಶ ಕಲ್ಪಿಸುವ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಲಾಗಿತ್ತು. ಅದನ್ನು ಅನುಷ್ಠಾನಕ್ಕೆ ತರಲು ಈ ತಿದ್ದುಪಡಿ ಮಸೂದೆ ರೂಪಿಸಲಾಗಿದೆ. ಇದೇ ಮಸೂದೆಯಲ್ಲಿ ಇ-ಖಾತಾ ಕಡ್ಡಾಯಗೊಳಿಸುವ ಅಂಶವೂ ಇದೆ.

‘ವಿದ್ಯುನ್ಮಾನ ಮಾಧ್ಯಮದ ಸಾಧನಗಳ ಮೂಲಕ ಇತರ ಇಲಾಖೆಯ ತಂತ್ರಾಂಶದೊಂದಿಗೆ ಸಂಯೋಜಿಸಿದ ಹೊರತು ಸ್ಥಿರ ಸ್ವತ್ತಿನ ವರ್ಗಾವಣೆ ಅಥವಾ ಪರಭಾರೆ ಮಾಡುವಂತಿಲ್ಲ’ ಎಂಬುದನ್ನು ನೋಂದಣಿ ಕಾಯ್ದೆ–1908ರ ಸೆಕ್ಷನ್ 71–ಎಗೆ ಸೇರಿಸಲಾಗಿದೆ.

8ನೇ ಪುಟ ನೋಡಿ

ಸಾಮಾನ್ಯ ಸಂಗ್ರಹಣಾ ನಿಧಿ ‘ಸಿ’ ವರ್ಗದ ದೇವಳಕ್ಕೆ ಮೀಸಲು

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆಯ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ‘ಸಾಮಾನ್ಯ ಸಂಗ್ರಹಣಾ ನಿಧಿ’ಯನ್ನು ‘ಸಿ’ ವರ್ಗದ ದೇವಸ್ಥಾನಗಳಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ‘ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಮಸೂದೆ–2024’ಕ್ಕೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಹುಂಡಿಯಿಂದ ವರ್ಷಕ್ಕೆ ₹ 1 ಕೋಟಿಗಿಂತ ಹೆಚ್ಚು ವರಮಾನ ಹೊಂದಿರುವ ದೇವಸ್ಥಾನಗಳಿಂದ ಶೇಕಡ 10ರಷ್ಟು ಮತ್ತು ₹ 10 ಲಕ್ಷದಿಂದ ₹ 1 ಕೋಟಿವರೆಗಿನ ವರಮಾನ ಹೊಂದಿರುವ ದೇವಸ್ಥಾನಗಳಿಂದ ಶೇ 5ರಷ್ಟನ್ನು ಸಾಮಾನ್ಯ ಸಂಗ್ರಹಣಾ ನಿಧಿಗೆ ಸಂದಾಯ ಮಾಡುವ ತಿದ್ದುಪಡಿಯೂ ಮಸೂದೆಯಲ್ಲಿದೆ.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿಗೆ ನೇಮಿಸಲಾಗುವ ನಾಲ್ವರು ಸಾಮಾನ್ಯ ಸದಸ್ಯರಲ್ಲಿ ಒಬ್ಬರು ವಿಶ್ವಕರ್ಮ ಸಮುದಾಯವರಿಗೆ ಅವಕಾಶ ನೀಡಲಾಗುತ್ತದೆ. ಹಿಂದೂ ದೇವಾಲಯ ವಾಸ್ತುಶಿಲ್ಪ ಮತ್ತು ಶಿಲ್ಪಶಾಸ್ತ್ರದಲ್ಲಿ ಅವರು ಕೌಶಲವುಳ್ಳವರಾಗಿರಬೇಕು ಎಂಬ ತಿದ್ದುಪಡಿ ಮಾಡಲಾಗಿದೆ.

ಮಸೂದೆ ಮಂಡಿಸಿದ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ‘ಸಾಮಾನ್ಯ ಸಂಗ್ರಹಣಾ ನಿಧಿಯನ್ನು ಬಳಸಿಕೊಂಡು 34,000 ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ವಿಮಾ ಸೌಲಭ್ಯ ಒದಗಿಸುವ ಪ್ರಸ್ತಾವ ಇಲಾಖೆಯ ಮುಂದಿದೆ’ ಎಂದರು.

ಮುಜರಾಯಿ ದೇವಸ್ಥಾನಗಳ ಜಮೀನುಗಳ ಒತ್ತುವರಿ ತೆರವಿಗೆ ಕಾರ್ಯಪಡೆ ರಚಿಸುವ ಪ್ರಸ್ತಾವವೂ ಇದೆ ಎಂದು ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಖಾಸಗಿ ಶಾಲೆಗಳಲ್ಲೂ ಕಡ್ಡಾಯಗೊಳಿಸಿ ಆದೇಶ

ನಾಡಗೀತೆ: ಸರ್ಕಾರದ ನಿರ್ಧಾರ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ, ಅನುದಾನ ರಹಿತ ಶಾಲೆಗಳಲ್ಲಿ ನಾಡಗೀತೆ ಹಾಡುವುದು ಕಡ್ಡಾಯವಲ್ಲ’ ಎಂಬರ್ಥದಲ್ಲಿ ಆದೇಶ ಹೊರಡಿಸಿದ್ದ ಸರ್ಕಾರ, ಇದು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ತಿದ್ದುಪಡಿ ಆದೇಶ ಹೊರಡಿಸಿ ಬಚಾವಾಗುವ ದಾರಿ ಹುಡುಕಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೇ 16ರಂದು ಹೊರಡಿಸಿದ್ದ ಆದೇಶದಲ್ಲಿ ಎಡವಟ್ಟು ಮಾಡಿತ್ತು. ‘ಎಲ್ಲ ಶಾಲೆಗಳಲ್ಲಿ ನಾಡಗೀತೆಯನ್ನು ದೈನಂದಿನ ಚಟುವಟಿಕೆಗಳು ಆರಂಭವಾಗುವ ಮುನ್ನ ಹಾಡುವುದು’ ಎಂಬ ವಾಕ್ಯವನ್ನು ‘ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ’ ಎಂದು ಬದಲಾವಣೆ ಮಾಡಿತ್ತು.

10ನೇ ಪುಟ ನೋಡಿ

ವಾರದಲ್ಲಿ 3ನೇ ಎಡವಟ್ಟು

- ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಟಿಪ್ಪಣಿ ಆಧರಿಸಿ ಫೆ.15ರಂದು ಸುತ್ತೋಲೆ ಹೊರಡಿಸಿದ್ದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕ, ‘ರಾಷ್ಟ್ರೀಯ ಹಬ್ಬಗಳನ್ನು ಬಿಟ್ಟು ಯಾವುದೇ ಧಾರ್ಮಿಕ ಹಬ್ಬಗಳನ್ನು (ಯುಗಾದಿ, ರಂಜಾನ್, ಕ್ರಿಸ್‌ಮಸ್, ಈದ್ ಮಿಲಾದ್, ಸಂಕ್ರಾಂತಿ) ಆಚರಿಸಿದರೆ ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರು ಮತ್ತು ಶಿಕ್ಷಕರ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಎಚ್ಚರಿಸಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತವಾಗುತ್ತಿದ್ದಂತೆಯೇ ಅದೇ ದಿನ ರಾತ್ರಿ ವೇಳೆಗೆ ಸುತ್ತೋಲೆ ವಾಪಸ್ ಪಡೆಯಲಾಗಿತ್ತು.
- ವಸತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ದ್ವಾರದಲ್ಲಿ ಬರೆಯಲಾಗಿದ್ದ ‘ಜ್ಞಾನದೇಗುಲವಿದು ಕೈ ಮುಗಿದು ಒಳಗೆ ಬಾ’ ಎಂಬ ಘೋಷವಾಕ್ಯವನ್ನು ‘ಜ್ಞಾನದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ’ ಎಂದು ಬದಲಾಗಿಸಿತ್ತು. ಸಾರ್ವಜನಿಕವಾಗಿ ಯಾವುದೇ ಚರ್ಚೆ, ಸಂವಾದವನ್ನೂ ನಡೆಸದೇ, ಸರ್ಕಾರಿ ಆದೇಶ ಹೊರಡಿಸದೇ ಈ ಬದಲಾವಣೆ ಮಾಡಲಾಗಿತ್ತು. ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರ ಟೆಲಿಗ್ರಾಂ ಖಾತೆಯ ಸಂದೇಶವೇ ಈ ಬದಲಾವಣೆಗೆ ನೀಡಿದ್ದ ಸೂಚನೆಯಾಗಿತ್ತು. ಈ ತೀರ್ಮಾನವು ಫೆ.19ರಂದು ವಿವಾದಕ್ಕೆ ತಿರುಗಿತು. ತನ್ನ ನಿಲುವನ್ನು ಸಮರ್ಥನೆ ಮಾಡಿಕೊಳ್ಳಲು ಸರ್ಕಾರ ಮುಂದಾಗಲಿಲ್ಲ. ಬದಲಾವಣೆ ಮಾಡಿದ್ದ ಘೋಷವಾಕ್ಯವನ್ನು ಅಳಿಸಿ, ಹಿಂದಿನದನ್ನೇ ಬರೆಯಿಸಿತು.
- ಶಾಲೆಗಳಲ್ಲಿ ನಾಡಗೀತೆ ಹಾಡುವುದನ್ನೇ ಬದಲಾವಣೆ ಮಾಡಿದ ಮತ್ತೊಂದು ಪ್ರಮಾದ ಫೆ. 16ರಂದೇ ನಡೆದಿತ್ತು. ಫೆ.21ರಂದು ಇದು ಹೊರ ಜಗತ್ತಿಗೆ ಗೊತ್ತಾಗಿ, ವಿವಾದಕ್ಕೆ ಕಾರಣವಾಯಿತು. ಅದೇ ದಿನ ಆದೇಶ ವಾಪಸ್ ಪಡೆದು, ಮರು ಆದೇಶ ಹೊರಡಿಸಲಾಯಿತು.

ಪಿಯು ಪರೀಕ್ಷೆ: ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ

ಬೆಂಗಳೂರು: ಪರೀಕ್ಷೆ ಬರೆಯಲು ತೆರಳುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬಿಎಂಟಿಸಿ ಉಚಿತ ಪ್ರಯಾಣದ ಅವಕಾಶವನ್ನು ಕಲ್ಪಿಸಿದೆ.

ಮಾರ್ಚ್ 1ರಿಂದ ಮಾರ್ಚ್ 22ರವರೆಗೆ ಪರೀಕ್ಷೆಗಳು ನಡೆಯಲಿವೆ. ಈ ಸಮಯದಲ್ಲಿ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ವಿದ್ಯಾರ್ಥಿಗಳು ವಾಸಸ್ಥಳದಿಂದ ಪರೀಕ್ಷಾ ಕೇಂದ್ರಕ್ಕೆ ಮತ್ತು ಪರೀಕ್ಷಾ ಕೇಂದ್ರದಿಂದ ವಾಸಸ್ಥಳಕ್ಕೆ ಪ್ರಯಾಣಿಸಬಹುದು. ಹೆಚ್ಚುವರಿ ಬಸ್‌ಗಳ ಅವಶ್ಯಕತೆ ಕಂಡು ಬಂದರೆ ಅದಕ್ಕೂ ಕ್ರಮ ಕೈಗೊಳ್ಳಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.



ಬಿಐಸಿಯಲ್ಲಿ ನಾಳೆಯಿಂದ ವಿಶಿಷ್ಟ ಸಂವಾದ, ಛಾಯಾಚಿತ್ರ ಪ್ರದರ್ಶನ

ನೀಲಿ ಬೆಟ್ಟಗಳನ್ನು ನೋಡಬನ್ನಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಲಗಿರಿಯ ನಿಸರ್ಗದ ಮಡಿಲಲ್ಲಿ ಪವಡಿಸಿರುವ ಊಟಿಗೆ ನೀವು ಹೋಗಿ ಬಂದಿರಬಹುದು. ಆದರೆ, ಅಲ್ಲಿಯ ನೈಜ ಸೌಂದರ್ಯವನ್ನು ನೀವು ಆಸ್ವಾದಿಸಿದ್ದೀರಾ? ಈ ಗಿರಿಶ್ರೇಣಿಯ ಮೂಲನಿವಾಸಿಗಳ ಕುರಿತು ನಿಮಗೆ ಗೊತ್ತಾ? ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾದ ಇಲ್ಲಿನ ಗಿರಿಧಾಮದ ಚರಿತ್ರೆಯನ್ನು ತಿಳಿದುಕೊಂಡಿದ್ದೀರಾ? ಹೋಗಲಿ, ನೀಲಗಿರಿಯ ಜೇನ್ನೊಣಗಳನ್ನಾದರೂ ಕಂಡಿದ್ದೀರಾ?

ಪಶ್ಚಿಮಘಟ್ಟ ಶ್ರೇಣಿಯ 'ನೀಲಗಿರಿ' ಕುರಿತ ನಿಮ್ಮೆಲ್ಲ ಕುತೂಹಲವನ್ನು ತಣಿಸುವಂತಹ ಕಾರ್ಯಕ್ರಮವನ್ನು ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಫೆ. 23ರಿಂದ ಆಯೋಜಿಸಲಾಗಿದೆ. ಈ ಅವಧಿಯಲ್ಲಿ 'ನೀಲಗಿರಿಯ ನೀಲಿ ಬೆಟ್ಟಗಳು' ನಿಮಗೆ ಬೆಂಗಳೂರಿನಲ್ಲಿಯೇ ಗೋಚರಿಸಲಿವೆ!

ತೋಡರು, ಶೋಲಾ ನಾಯಕರು, ಇರುಂಬರು, ಕುರುಬರು, ಕೋಟ ಮತ್ತು ಕಣಿ ಜನಾಂಗದವರ ಬೀಡಾಗಿದ್ದ ನೀಲಗಿರಿಯಲ್ಲಿ ಊಟಿ ನಗರವನ್ನು ಅಷ್ಟು ದೊಡ್ಡದಾಗಿ ಬೆಳೆಸಿದವರು ಮದ್ರಾಸ್ ಪ್ರಾಂತ್ಯದ ಅಂದಿನ ಗವರ್ನರ್ ಆಗಿದ್ದ ಜಾನ್ ಸುಲಿವನ್. ಸಮುದ್ರ ಮಟ್ಟದಿಂದ ಸುಮಾರು 7,350 ಅಡಿ ಎತ್ತರದಲ್ಲಿರುವ



ನೀಲಗಿರಿಯ ನೀಲಿ ಬೆಟ್ಟಗಳ ವಿಹಂಗಮ ನೋಟ

ಈ ಪ್ರದೇಶ ಅರ್ಧ ಚಂದ್ರಕಾರದಲ್ಲಿದ್ದು, ಇಲ್ಲಿ ಸುಲಿವನ್ 1823ರಲ್ಲಿ ಹಿಲ್ ಸ್ಟೇಷನ್ (ಗಿರಿಧಾಮ) ಸ್ಥಾಪಿಸಿದರು.

ಊಟಿಯ ಅಂದವನ್ನು ಹೆಚ್ಚಿಸಿದ ಸೇಂಟ್ ಸ್ಟೀಫನ್ ಚರ್ಚ್, ಹೋಲಿ ಟ್ರಿನಿಟಿ ಚರ್ಚ್, ಸೇಕ್ರೆಡ್ ಹಾರ್ಟ್ ಚರ್ಚ್, ಸೇಂಟ್ ಥೆರೇಸಾ ಚರ್ಚ್, ಸೇಂಟ್ ಮೇರಿಸ್ ಚರ್ಚ್ ಕಟ್ಟಿದರು. ಇಂಗ್ಲಿಷ್ ಮಿಷನರಿಗಳನ್ನು ಸ್ಥಾಪಿಸಿ ಸ್ಥಳೀಯರಿಗೂ ಒಳ್ಳೆಯ ವಿದ್ಯಾಭ್ಯಾಸ ಸಿಗುವಂತೆ ನೋಡಿಕೊಂಡರು. ಸರ್ ಫ್ರೆಡ್ರಿಕ್ ಪ್ರೈಸ್, ನೀಲಗಿರಿಯ ಈ 'ಕೂಸಿ'ನ ಚರಿತ್ರೆಯನ್ನು ಸೊಗಸಾಗಿ ನಿರೂಪಿಸಿದ್ದಾರೆ.

ಇಂತಹ ನೀಲಗಿರಿಯ ನೀಲಿ ಬೆಟ್ಟಗಳ ಕಥೆಗಳನ್ನು ಹೇಳುವ ಕಾರ್ಯಕ್ರಮ ಫೆ. 23ರಂದು ಸಂಜೆ 7ಕ್ಕೆ ನಡೆಯಲಿದೆ. ಪ್ರೊ. ಶಾರದಾ ಶ್ರೀನಿವಾಸನ್, ಅಲ್ಲಿನ ಸಂಸ್ಕೃತಿ, ಚಿನ್ನಾಭರಣ, ಲೋಹದ ಪಾತ್ರೆ, ಹೂವು ಮತ್ತು ಸಸ್ಯಗಳ ಲೋಕವನ್ನು ಕೇಳುಗರ ಮುಂದೆ ತೆರೆದಿಡಲಿದ್ದಾರೆ. ಅಲ್ಲಿಯೇ ಕ್ಷೇತ್ರಕಾರ್ಯ ಮಾಡಿರುವ ತರುಣ್ ಛಬ್ರಾ ಅವರು ಅಲ್ಲಿಯ ಮೂಲನಿವಾಸಿಗಳ ಕುರಿತು ಮಾತನಾಡಲಿದ್ದಾರೆ. ನೀಲಗಿರಿಯ ಜೇನು ಕುರುಬ ಸಮುದಾಯದ ಜಾನಕಿಯಮ್ಮ ಮತ್ತು ಪಿ.ಚಂದ್ರನ್ ಅವರೊಂದಿಗೆ ರಂಜನಿ ಪ್ರಸಾದ್ ಮತ್ತು ಫೈಸಲ್ ರೆಹಮಾನ್ ಅವರು ಸಂವಾದ ನಡೆಸಲಿದ್ದಾರೆ. ಸಮುದಾಯದ ಚಟುವಟಿಕೆಗಳು ಮತ್ತು ಜೇನು ಸಂಗ್ರಹದ ವಿಧಾನಗಳ ಮೇಲೆ ಅವರು ಬೆಳಕು ಚೆಲ್ಲಲಿದ್ದಾರೆ.

ನೀಲಗಿರಿ ಬೆಟ್ಟಗಳ ಕುರಿತು ಫೆ. 23ರಿಂದ 26ರವರೆಗೆ ಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿದ್ದು, 300ಕ್ಕೂ ಅಧಿಕ ಚಿತ್ರಗಳನ್ನು ಪ್ರದರ್ಶನಕ್ಕೆ ಇಡಲಾಗುತ್ತದೆ. ಈ ಚಿತ್ರಗಳು ನೀಲಗಿರಿ ಬೆಟ್ಟಗಳ ಚರಿತ್ರೆ, ಸಸ್ಯಸಿರಿ ಹಾಗೂ ಅಲ್ಲಿನ ಪ್ರಾಕೃತಿಕ ಸೌಂದರ್ಯ ಲೋಕದಲ್ಲಿ ಸುತ್ತಾಡಿಸಲಿವೆ. ವಸಾಹತು ಕಾಲದ ಛಾಯಾಗ್ರಾಹಕರು ತೆಗೆದ ಅತ್ಯಪೂರ್ವ ಚಿತ್ರಗಳು ಪ್ರದರ್ಶನದಲ್ಲಿ ಇರಲಿವೆ. ಇದೇ ಅವಧಿಯಲ್ಲಿ 'ನೀಲಗಿರಿಯ ಜೇನ್ನೊಣಗಳು' ಪ್ರದರ್ಶನವನ್ನೂ ಏರ್ಪಡಿಸಲಾಗಿದೆ. ನೀಲಗಿರಿಯ ನಿಸರ್ಗದತ್ತವಾದ ಜೇನು, ಆ ಜೇನನ್ನು ಸಂಗ್ರಹಿಸಿ ತರುವ ಕುರುಬ ಸಮುದಾಯದ ಜಗತ್ತು ನೋಡುಗರ ಮುಂದೆ ಅನಾವರಣಗೊಳ್ಳಲಿದೆ ಎಂದು ಬಿಐಸಿ ಪ್ರಕಟಣೆ ತಿಳಿಸಿದೆ.

ಕಬ್ಬಿನ ಎಫ್‌ಆರ್‌ಪಿ ₹25 ಹೆಚ್ಚಳ

ನವದೆಹಲಿ(ಪಿಟಿಐ): ಈ ವರ್ಷದ ಅಕ್ಟೋಬರ್‌ನಿಂದ ಆರಂಭವಾಗುವ 2024–25ನೇ ಅವಧಿಗೆ ಕಬ್ಬಿನ ಎಫ್‌ಆರ್‌ಪಿ ದರವನ್ನು ಪ್ರತಿ ಕ್ವಿಂಟಲ್‌ಗೆ ₹25ರಷ್ಟು ಹೆಚ್ಚಳ ಮಾಡಿರುವುದಾಗಿ ಕೇಂದ್ರ ಸರ್ಕಾರ ಬುಧವಾರ ಘೋಷಿಸಿದೆ.

ಇದರೊಂದಿಗೆ, ಪ್ರತಿ ಕ್ವಿಂಟಲ್ ಕಬ್ಬಿನ ಎಫ್‌ಆರ್‌ಪಿ ದರ ₹340ಕ್ಕೆ ಹೆಚ್ಚಳವಾಗಲಿದೆ. ಮಹಾರಾಷ್ಟ್ರ, ಉತ್ತರ ಪ್ರದೇಶ ಹಾಗೂ ಕರ್ನಾಟಕದಲ್ಲಿ ಅಧಿಕ ಪ್ರಮಾಣದಲ್ಲಿ ಕಬ್ಬು ಬೆಳೆಯಲಾಗುತ್ತದೆ. 'ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಎಫ್‌ಡಿಐ: ಬಾಹ್ಯಾಕಾಶ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ(ಎಫ್‌ಡಿಐ) ಸಂಬಂಧಿಸಿದ ನಿಯಮಗಳನ್ನು ಕೇಂದ್ರ ಸರ್ಕಾರ ಮತ್ತಷ್ಟು ಸರಳಗೊಳಿಸಿದೆ. ಉಪಗ್ರಹಗಳಲ್ಲಿ ಬಳಸುವ ಬಿಡಿಭಾಗಗಳ ಉತ್ಪಾದನೆಯಲ್ಲಿ ಶೇ 100ರಷ್ಟು ಎಫ್‌ಡಿಐಗೆ ಅನುಮತಿ ನೀಡಲಾಗಿದೆ.

ಎಂಎಸ್‌ಪಿಗೆ ಕಾನೂನು ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ' ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಶಾಸನಬದ್ಧ ಕಾನೂನು ರೂಪಿಸಿ ಜಾರಿಗೊಳಿಸಬೇಕು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರವೇ ನಿಗದಿ ಮಾಡುವ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ರೂಪಿಸಬೇಕೆಂದು ಒತ್ತಾಯಿಸಿ ರೈತರು ದೆಹಲಿಯಲ್ಲಿ ಪ್ರತಿಭಟಿಸುತ್ತಿದ್ದಾರೆ. ಆದರೆ, ಕೇಂದ್ರ ಸರ್ಕಾರ ರೈತರನ್ನು ಭಯೋತ್ಪಾದಕರು, ದೇಶದ್ರೋಹಿಗಳು ಹಾಗೂ ಖಾಲಿಸ್ತಾನಿಗಳೆಂದು ಕರೆಯುತ್ತಿದೆ. ರೈತ ಚಳವಳಿಯಲ್ಲಿ ಭಾಗವಹಿಸಲು ಬರುವ ರೈತರ ಮೇಲೆ ರಬ್ಬರ್ ಬುಲೆಟ್‌ಗಳು ಹಾಗೂ ಅಶ್ರುವಾಯು ಪ್ರಯೋಗಿಸುತ್ತಿದೆ' ಎಂದು ಆರೋಪಿಸಿದರು.

'ರೈತರ ಸಾಲ ಮನ್ನಾ, ಎಂ.ಎಸ್. ಸ್ವಾಮಿನಾಥನ್ ವರದಿಯಂತೆ ಕನಿಷ್ಠ ಬೆಂಬಲ ಬೆಲೆ, ರೈತರಿಗೆ ಪಿಂಚಣಿ ನೀಡುವ ಯೋಜನೆ ಜಾರಿಗೊಳಿಸಬೇಕು. ಫಸಲ್ ಬಿಮಾ ಹಾಗೂ ಬೆಳೆವಿಮೆ ಪದ್ಧತಿಯನ್ನು ಬದಲಾಯಿಸಬೇಕು. ಕಳೆದ ವರ್ಷ ದೆಹಲಿಯಲ್ಲಿ ನಡೆದ ರೈತ ಹೋರಾಟದಲ್ಲಿ ಹುತಾತ್ಮರಾದ 750 ರೈತ ಕುಟುಂಬಗಳಿಗೆ ಕೇಂದ್ರ ಸರ್ಕಾರ ನೆರವು ನೀಡಬೇಕು. ಹುತಾತ್ಮ ರೈತರ ಮನೆಯ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು' ಎಂದು ಒತ್ತಾಯಿಸಿದರು.

ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ ರೆಡ್ಡಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ನೆಲಮಂಗಲ ತಾಲ್ಲೂಕು ಘಟಕದ ಅಧ್ಯಕ್ಷ ರಾಜೇಶ್, ಹಾರೋಹಳ್ಳಿ ಗಜೇಂದ್ರಸಿಂಗ್, ಕನಕಪುರ ಶಿವಕುಮಾರ್, ನರಸಿಂಹಯ್ಯ, ವೆಂಕಟೇಶ್ ಭಾಗವಹಿಸಿದ್ದರು.



ಬೇಡಿಕೆ ಈಡೇರಿಸಲು ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕಲ್ಯಾಣ ಕರ್ನಾಟಕ 371(ಜೆ) ಕಲಂ ಕಾನೂನು ತಿದ್ದುಪಡಿ ಹೋರಾಟ ಸಮಿತಿ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕಚೇರಿ ಸ್ಥಳಾಂತರ: ಪ್ರತಿಭಟನಕಾರರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ–ಕಾಡಾದ ಹಸನಾಪುರ ವಿಭಾಗ ಮತ್ತು ಉಪ ವಿಭಾಗದ ಕಚೇರಿಗಳನ್ನು ಕಿತ್ತೂರು ಕರ್ನಾಟಕಕ್ಕೆ ಸ್ಥಳಾಂತರ ಮಾಡುತ್ತಿರುವ ಕ್ರಮ ಖಂಡಿಸಿ, ಕಲ್ಯಾಣ ಕರ್ನಾಟಕ 371(ಜೆ) ಕಲಂ ಕಾನೂನು ತಿದ್ದುಪಡಿ ಹೋರಾಟ ಸಮಿತಿ ನೇತೃತ್ವದಲ್ಲಿ ಬುಧವಾರ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ಕಚೇರಿಗಳ ಸ್ಥಳಾಂತರದಿಂದ ಲಕ್ಷಾಂತರ ಮಂದಿ ರೈತರಿಗೆ ತೊಂದರೆ ಆಗಲಿದೆ. ಹೈದರಾಬಾದ್ ಕರ್ನಾಟಕದ 150ಕ್ಕೂ ಹೆಚ್ಚು ಸರ್ಕಾರಿ ನೌಕರರಿಗೆ ಅನ್ಯಾಯವಾಗಲಿದೆ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

ಈ ಪ್ರದೇಶವು ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿದೆ. 2013ರಲ್ಲಿ 371(ಜೆ) ಕಲಂ ಅನ್ನು ಜಾರಿಗೆ ತಂದು ಸರ್ಕಾರವು ಈ ಭಾಗದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಅದು ಸ್ವಾಗತಾರ್ಹ. ಹಸನಾಪುರ ಕಾರ್ಯಪಾಲಕ ಎಂಜಿನಿಯರ್ ಹೊಲಗಾವಲು ವಿಭಾಗ–2, ಇದಕ್ಕೆ ಸಂಬಂಧಿಸಿದ ಕಚೇರಿಗಳನ್ನು ಈ ಭಾಗದಿಂದ ಸ್ಥಳಾಂತರ ಮಾಡಿದರೆ 150ಕ್ಕೂ ಅಧಿಕ ಸರ್ಕಾರಿ ಹುದ್ದೆ ಕಳೆದುಕೊಳ್ಳಬೇಕಾಗುತ್ತದೆ. ಸ್ಥಳಾಂತರದಿಂದ ಯುವಕರಿಗೆ ಹಾಗೂ ರೈತರಿಗೆ ಬಹುದೊಡ್ಡ ಅನ್ಯಾಯವಾಗಲಿದೆ ಎಂದು ನೋವು ತೋಡಿಕೊಂಡರು.

'ಕೆಲವರ ಕುತಂತ್ರದಿಂದ ಕಿತ್ತೂರು ಕರ್ನಾಟಕಕ್ಕೆ ಕಚೇರಿಗಳನ್ನು ಸ್ಥಳಾಂತರಿಸಲು ಹೊರಟಿರುವ ಕ್ರಮ ಸರಿಯಲ್ಲ. ಸರ್ಕಾರಿ ನೌಕರರಿಗೆ 371(ಜೆ) ಕಲಂ ಅಡಿ ಬಡ್ತಿ ಸಹ ದೊರೆಯುವುದಿಲ್ಲ' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಮಿತಿ ಸಂಸ್ಥಾಪಕ ರಾಜ್ಯ ಅಧ್ಯಕ್ಷ ಸೈಬಣ್ಣಾ ಜಮಾದಾರ ಹಾಗೂ ಸಂಜು ಹೊಡಲ್ಕರ್, ಪ್ರಕಾಶ ಪಟ್ಟೇದಾರ್ ಮೊದಲಾದವರು ಪಾಲ್ಗೊಂಡಿದ್ದರು.

1.84 ಲಕ್ಷ ಬೀದಿನಾಯಿಗಳಿಗೆ ಮೈಕ್ರೊ ಚಿಪ್

ಬೆಂಗಳೂರು: ನಗರದಲ್ಲಿರುವ ಅರ್ಧದಷ್ಟು ಬೀದಿನಾಯಿಗಳಿಗೆ ಮೈಕ್ರೊ ಚಿಪ್ ಅಳವಡಿಸಲು ಬಿಬಿಎಂಪಿ ಮುಂದಾಗಿದೆ.

ನಗರದಲ್ಲಿ 2.79 ಲಕ್ಷ ಬೀದಿನಾಯಿಗಳಿದ್ದು, 1,84,671 ಬೀದಿನಾಯಿಗಳಿಗೆ ಮೈಕ್ರೊ ಚಿಪ್‌ಗಳನ್ನು 90 ದಿನದಲ್ಲಿ ಅಳವಡಿಸಲು ಟೆಂಡರ್ ಕರೆಯಲಾಗಿದೆ. ಸುಮಾರು ₹58 ಲಕ್ಷ ವೆಚ್ಚ ಮಾಡಲು ನಿರ್ಧರಿಸಲಾಗಿದೆ.

'ಫೈವ್ ಇನ್ ಒನ್' ಲಸಿಕೆಗಳನ್ನು ಮೊದಲ ಬಾರಿಗೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳಿಗೆ ನೀಡಲಾಗುತ್ತಿದೆ. ಕೋರೆಹಲ್ಲು ರೋಗ ಸೇರಿದಂತೆ ಹಲವು ರೋಗಗಳಿಂದ ಬೀದಿ ನಾಯಿಗಳಿಗೆ ರಕ್ಷಣೆ ನೀಡಲು ಏಪ್ರಿಲ್‌ನಲ್ಲಿ ಲಸಿಕೆ ನೀಡುವ ಅಭಿಯಾನ ಆರಂಭವಾಗಿದೆ. ಲಸಿಕೆ ಖರೀದಿಗೂ ಟೆಂಡರ್ ಆಹ್ವಾನಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

2023ರ ಜುಲೈ 11ರಿಂದ ಆಗಸ್ಟ್ 2ರವರೆಗೆ ನಡೆದ ಬೀದಿ ನಾಯಿಗಳ ಸಮೀಕ್ಷಾ ವರದಿಯನ್ನು ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಮೈಕ್ರೊ ಚಿಪ್ ಅಳವಡಿಸುವ ಹಾಗೂ ಲಸಿಕೆ ನೀಡುವ ಯೋಜನೆಯನ್ನು ಪ್ರಕಟಿಸಲಾಗಿತ್ತು.

ಬಿಬಿಎಂಪಿ ಕಚೇರಿಗೆ ಹೋಗುವ ಅಗತ್ಯವಿಲ್ಲ, ಆನ್‌ಲೈನ್‌ನಲ್ಲೇ ಎಲ್ಲ ಪ್ರಕ್ರಿಯೆ

ಒಂದೇ ದಿನದಲ್ಲಿ ಕಟ್ಟಡ ನಕ್ಷೆ ಲಭ್ಯ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮನೆ ನಿರ್ಮಿಸುವವರು ಇನ್ನು ಮುಂದೆ ಕಟ್ಟಡ ನಕ್ಷೆಗಾಗಿ ವಾರಗಟ್ಟಲೆ ಕಾಯುವಂತಿಲ್ಲ. ಅರ್ಜಿ ಸಲ್ಲಿಸಿದ ದಿನವೇ 'ತಾತ್ಕಾಲಿಕ ನಕ್ಷೆ' ಕೈಸೇರಲಿದೆ.

ಬಿಬಿಎಂಪಿ ಕಚೇರಿಗೆ ಹೋಗದೆಯೇ ಮನೆ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಪಡೆದುಕೊಳ್ಳುವ ಆನ್‌ಲೈನ್ ವ್ಯವಸ್ಥೆ– 'ನಂಬಿಕೆಯೊಂದಿಗೆ ಪರಿಶೀಲಿಸುವ' (ಟ್ರಸ್ಟ್ ಆ್ಯಂಡ್ ವೆರಿಫೈ) ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಆರ್ಕಿಟೆಕ್ಟ್‌ಗಳ ಕಚೇರಿಯಲ್ಲೇ ಎಲ್ಲ ದಾಖಲೆಗಳನ್ನು ನೀಡಿ, ಶುಲ್ಕ ಪಾವತಿಸಿದ ದಿನವೇ 'ತಾತ್ಕಾಲಿಕ ನಕ್ಷೆ' ಪಡೆದುಕೊಂಡು ಮುಂದಿನ ಪ್ರಕ್ರಿಯೆಯನ್ನು ನಾಗರಿಕರು ಆರಂಭಿಸಬಹುದು.

ಪಾಲಿಕೆ ವತಿಯಿಂದ ಸ್ವಯಂ ಚಾಲಿತ ನಕ್ಷೆ ಮಂಜೂರು ವ್ಯವಸ್ಥೆಯ ಪೋರ್ಟಲ್ ಆರಂಭಿಸಲಾಗುತ್ತಿದ್ದು, ಇದು ಎಲ್ಲ ವಿಭಾಗಗಳ ಸಂಪರ್ಕವನ್ನೂ ಹೊಂದಿರುತ್ತದೆ. ನಾಗರಿಕರು ಆರ್ಕಿಟೆಕ್ಟ್ ಕಚೇರಿಗಳಲ್ಲಿ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸಬಹುದು.

ಬಿಬಿಎಂಪಿ ಕಾಯ್ದೆ ಹಾಗೂ ನಿಯಮದಂತೆ ಕಟ್ಟಡ ನಕ್ಷೆಯನ್ನು ಆರ್ಕಿಟೆಕ್ಟ್‌ಗಳು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಇದರ ಜೊತೆಗೆ ಆಸ್ತಿಗೆ ಸಂಬಂಧಿಸಿದ ಅಗತ್ಯ


ಸಾಂದರ್ಭಿಕ ಚಿತ್ರ

ದಾಖಲೆಗಳನ್ನೂ ಸಲ್ಲಿಸಬೇಕು. ಈ ದಾಖಲೆಗಳ ನೈಜತೆಗೆ ಮಾಲೀಕರೇ ಜವಾಬ್ದಾರರಾಗಿದ್ದು, ನಕಲು ಅಥವಾ ತಿದ್ದುಪಡಿ ಮಾಡಿದ ವಿವರಗಳನ್ನು ಸಲ್ಲಿಸಿದ್ದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬಹುದು.

'ಆರ್ಕಿಟೆಕ್ಟ್‌ಗಳು ದಾಖಲೆಗಳೊಂದಿಗೆ ನಕ್ಷೆಯನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರ ಅದನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್ ಆರ್‌ಎಸ್‌ಎಸಿ) ವತಿಯಿಂದ ಪರಿಶೀಲಿಸಲಾಗುತ್ತದೆ. ಈ ಕೇಂದ್ರದಲ್ಲಿ ಜಿಪಿಎಸ್ ಆಧಾರಿತ ನಕ್ಷೆ ಲಭ್ಯವಿದ್ದು, ಅದನ್ನು ಆರ್ಕಿಟೆಕ್ಟ್‌ಗಳು ಸಲ್ಲಿಸಿರುವ ದಾಖಲೆಗಳೊಂದಿಗೆ ಹೊಂದಿಸಿ, ಪರಾಮರ್ಶಿಸಲಾಗುತ್ತದೆ. ಬಫರ್ ಝೋನ್ ಸೇರಿದಂತೆ ಕೆರೆ, ಸರ್ಕಾರಿ ಪ್ರದೇಶಗಳಲ್ಲಿ ಈ ಕಟ್ಟಡ ಬರುವುದಿಲ್ಲ ಎಂಬುದನ್ನೂ ಸ್ಪಷ್ಟೀಕರಿಸುತ್ತದೆ. ಎಲ್ಲವೂ ಸರಿ ಇದೆ ಎಂದಾದರೆ 'ತಾತ್ಕಾಲಿಕ ನಕ್ಷೆ' ಮಾಲೀಕರ ಕೈಸೇರುತ್ತದೆ. ಬೆಳಿಗ್ಗೆ ಅರ್ಜಿ ಸಲ್ಲಿಸಿದರೆ, ಸಂಜೆ ವೇಳೆಗೆ ಈ ಪ್ರಕ್ರಿಯೆ ಮುಗಿಯುತ್ತದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಯಾರಿಗೆ ಸೌಲಭ್ಯ?

- 50x80 ಅಡಿಯವರೆಗಿನ ನಿವೇಶನದ ಕಟ್ಟಡಗಳಿಗೆ ನಕ್ಷೆ
- ಗರಿಷ್ಠ 4 ಅಂತಸ್ತಿನ ಕಟ್ಟಡಗಳಿಗೆ ಅನ್ವಯ
- ಗರಿಷ್ಠ 4 ಅಡುಗೆ ಮನೆಗಳಿರುವ ಕಟ್ಟಡಗಳಿಗೆ ಮಾತ್ರ ಆನ್‌ಲೈನ್ ನಕ್ಷೆ

ಉಲ್ಲಂಘನೆ: ಆರ್ಕಿಟೆಕ್ಟ್‌ಗಳಿಗೂ ಜವಾಬ್ದಾರಿ!

ಬಿಬಿಎಂಪಿಯಲ್ಲಿ ಆರ್ಕಿಟೆಕ್ಟ್‌ಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಿ ನೋಂದಣಿ ಮಾಡಿಸಬಹುದು. ಇಷ್ಟೇ ಆರ್ಕಿಟೆಕ್ಟ್‌ಗಳೆಂಬ ನಿಯಮವಿಲ್ಲ, ಎಷ್ಟು ಜನರು ಬೇಕಾದರೂ ನೋಂದಣಿಯಾಗಬಹುದು. ಅವರಿಗೆ ಪೋರ್ಟಲ್‌ನ ಲಾಗಿನ್ ನೀಡಲಾಗುತ್ತದೆ. ಪಾಲಿಕೆ ನಿಗದಿಪಡಿಸಿದ ಶುಲ್ಕವನ್ನು ನಾಗರಿಕರು ಆರ್ಕಿಟೆಕ್ಟ್‌ಗಳಿಗೆ ಪಾವತಿಸಬೇಕು. ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿ, ನಾಗರಿಕರಿಗೆ ನಕ್ಷೆ ಮಂಜೂರು ಮಾಡಿಕೊಡುವ ಆರ್ಕಿಟೆಕ್ಟ್‌ಗಳು, ನಕ್ಷೆ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ.

ಕಟ್ಟಡಗಳನ್ನು ನಿರ್ಮಿಸುವ ಸಂದರ್ಭದಲ್ಲಿ ನಕ್ಷೆಯನ್ನು ಅನುಸರಿಸಲಾಗುತ್ತಿದೆಯೇ ಎಂಬುದನ್ನು ಆರ್ಕಿಟೆಕ್ಟ್‌ಗಳೂ ಖಾತರಿಪಡಿಸಿಕೊಳ್ಳಬೇಕು. ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವುದು ಪತ್ತೆಯಾದರೆ ಮಾಲೀಕರು, ಸ್ಥಳೀಯ ಎಂಜಿನಿಯರ್‌ಗಳ ಜೊತೆಗೆ ಆರ್ಕಿಟೆಕ್ಟ್‌ಗಳ ಮೇಲೂ ಕ್ರಮ ಕೈಗೊಳ್ಳಲಾಗುತ್ತದೆ. 'ಬಿಬಿಎಂಪಿ ರೂಪಿಸಿರುವ ಎಲ್ಲ ನಿಯಮಗಳನ್ನೂ ಪಾಲಿಸುವ ಜವಾಬ್ದಾರಿ ಹೊಂದಿರುತ್ತೇವೆ' ಎಂಬ ಪ್ರಮಾಣ ಪತ್ರವನ್ನೂ ನೋಂದಣಿ ಸಮಯದಲ್ಲಿ ಆರ್ಕಿಟೆಕ್ಟ್‌ಗಳಿಂದ ಬಿಬಿಎಂಪಿ ಪಡೆದುಕೊಂಡಿರುತ್ತದೆ.

'ತಾತ್ಕಾಲಿಕ ನಕ್ಷೆ' ಮಂಜೂರಾದ ಮೇಲೆ ಮಾಲೀಕರು ಕಟ್ಟಡ ನಿರ್ಮಿಸುವುದನ್ನು ಆರಂಭಿಸಬಹುದು. ಬ್ಯಾಂಕ್‌ಗಳೂ ಸೇರಿದಂತೆ ಸಂಬಂಧಪಟ್ಟ ಸಂಸ್ಥೆಗಳು ಈ 'ತಾತ್ಕಾಲಿಕ ನಕ್ಷೆ' ಪರಿಗಣಿಸಿ ಪ್ರಕ್ರಿಯೆ ಮುಂದುವರಿಸಬಹುದು. 'ತಾತ್ಕಾಲಿಕ ನಕ್ಷೆ' ಮಂಜೂರಾದ 15 ದಿನದೊಳಗೆ 'ಅನುಮೋದಿತ ನಕ್ಷೆ' ಮಾಲೀಕರ ಕೈಸೇರಲಿದೆ. ಈ ನಡುವಿನ ಎಲ್ಲ ಪ್ರಕ್ರಿಯೆಗಳು ಆನ್‌ಲೈನ್‌ನಲ್ಲೇ ನಡೆಯಲಿದ್ದು, ಕಂದಾಯ, ಎಂಜಿನಿಯರಿಂಗ್ ವಿಭಾಗದವರು ಅವರಿಗೆ ನಿಗದಿಯಾದ ದಿನಗಳಲ್ಲಿ ಮಂಜೂರಾತಿ ನೀಡಬೇಕು. ಇಲ್ಲದಿದ್ದರೆ ಸ್ವಯಂಚಾಲಿತವಾಗಿ ಮಂಜೂರಾಗುತ್ತದೆ.

'ನಿಗದಿತ ಅವಧಿಯೊಳಗೆ ನಕ್ಷೆಗೆ ಮಂಜೂರು ನೀಡದ ಅಧಿಕಾರಿಗೆ ಆನ್‌ಲೈನ್‌ನಲ್ಲೇ ನೋಟಿಸ್ ಜಾರಿಯಾಗುತ್ತದೆ. ಮೂರು ನೋಟಿಸ್ ಜಾರಿಯಾದ ಮೇಲೆ ವಿಚಾರಣೆ ನಡೆಸಲಾಗುತ್ತದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಟ್ರಸ್ಟ್ ಆ್ಯಂಡ್ ವೆರಿಫೈ' ಆನ್‌ಲೈನ್ ವ್ಯವಸ್ಥೆ ಪ್ರಾಯೋಗಿಕವಾಗಿ ಜಾರಿಯಾಗಿದ್ದು, ಇನ್ನೊಂದು ವಾರದಲ್ಲಿ ಅಧಿಕೃತವಾಗಿ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.



ಗುಜರಾತ್ ಕೋಆಪರೇಟೀವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ (ಜಿಸಿಎಂಎಂಎಫ್) ಸುವರ್ಣ ಮಹೋತ್ಸವವನ್ನು ಆಚರಿಸಲಾಗುತ್ತಿದೆ!


ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನದದ 24ನೇ ವಾರ್ಷಿಕೋತ್ಸವದಲ್ಲಿ ಪಂಡಿತ್ ಅನಂತ ಕುಲಕರ್ಣಿ ಬಾಗಲಕೋಟೆ ಅವರಿಗೆ 'ಶ್ರೀ ಗುರುರಾಘವೇಂದ್ರ ಸಂಸ್ಮರಣಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಡಾ. ಮೋಹನ್, ಭಾರತಿ ರಾಜೇಶ್, ಡಾ. ನಿಶಿತಾ ಪುತ್ತೂರು, ಗಾನಕಲಾ ಭೂಷಣ ಸಂಸ್ಥೆ ಅಧ್ಯಕ್ಷರಾದ ಗೌರಿ ನಾಗರಾಜ್ ದಂಪತಿ, ಉಪಾಧ್ಯಕ್ಷೆ ವೀಣಾ ಸುರೇಶ್ ಭಾಗವಹಿಸಿದ್ದರು

ಅಕ್ಕಿ ಸಾಲ: ಅಧಿಕಾರಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಹಿಂದುಳಿದ ವರ್ಗಗಳ (ಬಿಸಿಎಂ) ವಿದ್ಯಾರ್ಥಿ ನಿಲಯಗಳಿಗೆ ಸಿದ್ಧಗಂಗಾ ಮಠದಿಂದ ಅಕ್ಕಿ ಸಾಲ ಪಡೆದ ಪ್ರಕರಣದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎಸ್.ಆರ್.ಗಂಗಪ್ಪ ಅವರನ್ನು ವರ್ಗಾವಣೆ ಮಾಡಲಾಗಿದೆ.

ಗಂಗಪ್ಪ ಅವರಿಗೆ ಯಾವುದೇ ಸ್ಥಳ ತೋರಿಸಿಲ್ಲ. ಇಲಾಖೆ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಈ ಪ್ರಕರಣದಲ್ಲಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಗೀತಮ್ಮ ಅವರನ್ನು ಈಗಾಗಲೇ ಅಮಾನತು ಮಾಡಲಾಗಿದೆ.


ಗಂಗಪ್ಪ ಅವರ ಜಾಗಕ್ಕೆ ಕೋಲಾರ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಯು.ಸೋನಿಯಾ ವರ್ಣೇಕರ್ ಅವರನ್ನು ವರ್ಗಾವಣೆ ಮಾಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬುಧವಾರ ಆದೇಶಿಸಿದೆ. 'ಸಿದ್ಧಗಂಗಾ ಮಠದಿಂದ ಅಕ್ಕಿ ಸಾಲ' ಸುದ್ದಿ ಫೆ. 19ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು.

24–25ಕ್ಕೆ 'ಕ್ಯಾನ್ಸರ್ ಎಕ್ಸ್‌ಪೊ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್ ತಪಾಸಣೆ ಮತ್ತು ಜಾಗೃತಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಸಹಯೋಗದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಇದೇ 24 ಮತ್ತು 25ರಂದು ಎಂ.ಜಿ. ರಸ್ತೆಯ 'ನಮ್ಮ ಮೆಟ್ರೊ ನಿಲ್ದಾಣದ ಆವರಣದಲ್ಲಿ 'ಕ್ಯಾನ್ಸರ್ ಎಕ್ಸ್‌ಪೊ' ಹಮ್ಮಿಕೊಂಡಿದೆ.

'ಕ್ಯಾನ್ಸರ್‌ಗೆ ವಿದಾಯ ಹೇಳಿ, ಹೊಸ ಜೀವನಕ್ಕೆ ನಾಂದಿ ಹಾಡಿ' ಎಂಬ ಶೀರ್ಷಿಕೆಯಡಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಉಚಿತವಾಗಿ ಕ್ಯಾನ್ಸರ್ ತಪಾಸಣೆ ಮಾಡಲಾಗುತ್ತದೆ. ನಗರದ ಪ್ರಮುಖ ಆಸ್ಪತ್ರೆಗಳ ಕ್ಯಾನ್ಸರ್ ತಜ್ಞರು ಪಾಲ್ಗೊಳ್ಳಲಿದ್ದು, ಅವರೊಂದಿಗೆ ಸಮಾಲೋಚನೆ ನಡೆಸುವ ಅವಕಾಶವೂ ಇರಲಿದೆ.



ಬದಲಾದ ಜೀವನಶೈಲಿ, ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ನಗರದಲ್ಲಿ ಹೆಚ್ಚಳವಾಗುತ್ತಿವೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಬೇಗ ಗುಣಮುಖ ಮಾಡಬಹುದಾಗಿದೆ. ಕ್ಯಾನ್ಸರ್ ಚಿಕಿತ್ಸೆ, ಲಕ್ಷಣಗಳು ಹಾಗೂ ಹೊಸ ಆವಿಷ್ಕಾರಗಳ ಬಗ್ಗೆ ವೈದ್ಯಕೀಯ ತಜ್ಞರು ಈ ಕಾರ್ಯಕ್ರಮದಲ್ಲಿ ತಿಳಿಸಿಕೊಡಲಿದ್ದಾರೆ.

ಸೀಳು ತುಟಿ ಚಿಕಿತ್ಸೆಗೆ ಮೊಬೈಲ್ ಕ್ಲಿನಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೀಳು ತುಟಿ ಮತ್ತು ಸೀಳು ಅಂಗುಳದ ಸಮಸ್ಯೆ ಎದುರಿಸುತ್ತಿರುವ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆ ಒದಗಿಸಲು ಸ್ಮೈಲ್ ಟ್ರೈನ್ ಸಂಸ್ಥೆಯ ಸಹಯೋಗದಲ್ಲಿ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯು ಮೊಬೈಲ್ ಕ್ಲಿನಿಕ್ ಪ್ರಾರಂಭಿಸಿದೆ.

ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು 'ಸ್ಮೈಲ್ ಟ್ರೈನ್ ಸೀಳು ತುಟಿ ಸಂಚಾರ ಘಟಕ'ಕ್ಕೆ ಚಾಲನೆ ನೀಡಿ, ವ್ಯವಸ್ಥೆಯನ್ನು ಪರಿಶೀಲಿಸಿದರು. ಈ ಮೊಬೈಲ್ ವ್ಯಾನ್ ಪ್ರತಿ ವಾರ ತಾಲ್ಲೂಕು ಕೇಂದ್ರಗಳಿಗೆ ತೆರಳಲಿದ್ದು, ಉಚಿತವಾಗಿ ವಾಕ್ ಚಿಕಿತ್ಸೆ, ದಂತ ತಪಾಸಣೆ ಹಾಗೂ ಸಾಮಾನ್ಯ ಚಿಕಿತ್ಸೆಗಳನ್ನು ಒದಗಿಸಲಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯ ಇದ್ದಲ್ಲಿ ಆಸ್ಪತ್ರೆಗೆ ಕರೆತರಲಾಗುತ್ತದೆ. ಶಸ್ತ್ರಚಿಕಿತ್ಸೆಯನ್ನೂ ಉಚಿತವಾಗಿ ಮಾಡಲಾಗುತ್ತದೆ.


'ಸ್ಮೈಲ್ ಟ್ರೈನ್ ಸೀಳು ತುಟಿ ಸಂಚಾರ ಘಟಕ'ಕ್ಕೆ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ಮಹಾವೀರ್ ಜೈನ್ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಪಾಲ್ಗೊಂಡಿದ್ದರು

ಈ ವೇಳೆ ಮಾತನಾಡಿದ ದಿನೇಶ್ ಗುಂಡೂರಾವ್, 'ಸೀಳು ತುಟಿ ಅಥವಾ ಸೀಳು ಅಂಗುಳದ ಸಮಸ್ಯೆ ಎದುರಿಸುತ್ತಿರುವ ಮಕ್ಕಳು ಬೇರೆಯವರೊಂದಿಗೆ ಬೆರೆಯಲು ಹಿಂಜರಿಯುತ್ತಾರೆ. ಆತ್ಮವಿಶ್ವಾಸದ ಕೊರತೆ ಎದುರಿಸಿ, ಖಿನ್ನತೆಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಶ್ರವಣ ಸಮಸ್ಯೆಯಿಂದ ಕಲಿಕೆಯಲ್ಲಿ ಹಿಂದೆ ಬೀಳುವ ಸಂಭವವೂ ಇರುತ್ತದೆ. ಶಸ್ತ್ರಚಿಕಿತ್ಸೆಯ ಮೂಲಕ ಈ ಸಮಸ್ಯೆಯನ್ನು ನಿವಾರಿಸಬಹುದಾಗಿದೆ. ಬಡ ಕುಟುಂಬದ ಮಕ್ಕಳಿಗೆ ಉಚಿತ ಶಸ್ತ್ರ ಚಿಕಿತ್ಸೆ ಒದಗಿಸುತ್ತಿರುವುದು ಶ್ಲಾಘನೀಯ' ಎಂದು ಹೇಳಿದರು.

ಸೀಳು ತುಟಿ ಮತ್ತು ಸೀಳು ಅಂಗುಳದ ಶಸ್ತ್ರಚಿಕಿತ್ಸೆಯ ಯೋಜನಾ ನಿರ್ದೇಶಕ ಡಾ. ಪ್ರೀತಮ್ ಶೆಟ್ಟಿ, 'ಸೀಳು ತುಟಿ ಮತ್ತು ಸೀಳು ಅಂಗುಳದ ಸಮಸ್ಯೆ ನಿವಾರಣೆಗೆ ಶಸ್ತ್ರಚಿಕಿತ್ಸೆ ನಡೆಸಿ, ವಾಕ್ ಥೆರಪಿ ನೀಡಬೇಕಾಗುತ್ತದೆ. ಹಲ್ಲಿನ ಆರೋಗ್ಯದ ಕಡೆಗೂ ಗಮನ ಹರಿಸಬೇಕಾಗುತ್ತದೆ. 18 ವರ್ಷಗಳಿಂದ ಸೀಳು ತುಟಿ ಮತ್ತು ಸೀಳು ಅಂಗುಳ ಸಮಸ್ಯೆಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ಜತೆಗೆ ಥೆರಪಿ ಸೇರಿ ವಿವಿಧ ಚಿಕಿತ್ಸೆಗಳನ್ನು ಒದಗಿಸಲಾಗುತ್ತಿದೆ. ಮಗುವಿಗೆ ಹುಟ್ಟಿನಿಂದ 18 ವರ್ಷದವರೆಗೆ ಎಲ್ಲ ರೀತಿಯ ಚಿಕಿತ್ಸೆ ನೀಡಲಾಗುತ್ತದೆ. ವಾಕ್ ಥೆರಪಿಗೆ ದೂರದ ಊರುಗಳಿಂದ ಆಸ್ಪತ್ರೆಗೆ ಬರುವುದನ್ನು ತಪ್ಪಿಸಲು ಈ ಮೊಬೈಲ್ ವ್ಯಾನ್ ಸಹಕಾರಿಯಾಗಲಿದೆ' ಎಂದು ತಿಳಿಸಿದರು.

'ಸ್ಮೈಲ್ ಟ್ರೈನ್ ಸಂಸ್ಥೆ ಉಚಿತವಾಗಿ ಬಸ್ ನೀಡಿದ್ದು, ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯು ವೈದ್ಯರನ್ನು ಒದಗಿಸಲಿದೆ. ಈ ಬಸ್‌ನಲ್ಲಿ ಹಲ್ಲಿನ ಆರೈಕೆಯ ಚಿಕಿತ್ಸೆಯೂ ದೊರೆಯಲಿದೆ. ಬಸ್‌ನಲ್ಲಿ ಐದಾರು ಮಂದಿ ವೈದ್ಯರು ತೆರಳಲು ಅವಕಾಶವಿದೆ. 18 ವರ್ಷಗಳಲ್ಲಿ ಹತ್ತು ಸಾವಿರಕ್ಕೂ ಅಧಿಕ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಪ್ರತಿ ತಿಂಗಳು 40ರಿಂದ 50 ಮಂದಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ' ಎಂದು ಹೇಳಿದರು.



"ಉತ್ತಮ ಚಲನೆ, ಸಂಪರ್ಕ, ಉತ್ಪಾದಕತೆ, ಸ್ವಯಂ ಪೋಷಣೆ ಹಾಗೂ ಸುರಕ್ಷೆಯನ್ನು ಖಾತರಿಪಡಿಸುವ ಸಲುವಾಗಿ ನಮ್ಮ ಸರ್ಕಾರವು ಮುಂಬರುವ ತಲೆಮಾರಿನ ಮೂಲಸೌಲಭ್ಯಗಳ ನಿರ್ಮಾಣ ಕಾರ್ಯದಲ್ಲಿ ಎಲ್ಲಾ ವಿಧದ ಪ್ರಯತ್ನವನ್ನು ಮಾಡುತ್ತಲಿದೆ."

ನರೇಂದ್ರ ಮೋದಿ, ಪ್ರಧಾನಮಂತ್ರಿಗಳು

ಒಟ್ಟು ರೂ. 13,000 ಕೋಟಿ ಮೌಲ್ಯದ 680 ಕಿ.ಮೀ. ಉದ್ದದ

36 ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ರಾಷ್ಟ್ರ ಸಮರ್ಪಣೆ ಮತ್ತು ಶಿಲಾನ್ಯಾಸ

ಗುರುವಾರ, 22ನೇ ಫೆಬ್ರವರಿ, 2024

ರಾಷ್ಟ್ರ ಸಮರ್ಪಣೆ

ರಾಹೆ-367 ರಲ್ಲಿ ಭಾನಾಪುರ-ಗದ್ದನಕೇರಿ ವಿಭಾಗದಲ್ಲಿ 2 ಲೇನ್ + ಪೇವ್ಡ್ ಶೋಲ್ಡರ್
ಯೋಜನೆಯ ಉದ್ದ: 12 ಕಿಮೀ • ಯೋಜನೆಯ ವೆಚ್ಚ: ರೂ. 90 ಕೋಟಿ

ರಾಹೆ-63 ರ ಅಂಕೋಲಾ ಗೂಟಿ ವಿಭಾಗದಲ್ಲಿ ಹುಬ್ಬಳ್ಳಿ ನಗರ ಮಿತಿಯಲ್ಲಿ 2 ಲೇನ್‌ನಿಂದ 4 ಲೇನ್
ಯೋಜನೆಯ ಉದ್ದ: 14 ಕಿಮೀ • ಯೋಜನೆಯ ವೆಚ್ಚ: ರೂ. 200 ಕೋಟಿ

ರಾಹೆ-63 ರ ದಾಸ್ತಿಕೊಪ್ಪ ಗ್ರಾಮದಲ್ಲಿ ಅಸ್ತಿತ್ವದಲ್ಲಿರುವ ಸೇತುವೆಗೆ ಸಮಾನಾಂತರವಾಗಿ ಚಿಕ್ಕ ಸೇತುವೆಯ ನಿರ್ಮಾಣ
ಯೋಜನೆಯ ಉದ್ದ: 3 ಕಿಮೀ • ಯೋಜನೆಯ ವೆಚ್ಚ: ರೂ. 26 ಕೋಟಿ

ಶಿಲಾನ್ಯಾಸ

ರಾಹೆ -848ಆರ್ ನಲ್ಲಿ 4 ಲೇನ್ ಬೆಳಗಾವಿ ರಿಂಗ್ ರಸ್ತೆ ನಿರ್ಮಾಣ (ಪ್ಯಾಕೇಜ್-1)
ಯೋಜನೆಯ ಉದ್ದ: 34 ಕಿಮೀ • ಯೋಜನೆಯ ವೆಚ್ಚ: ರೂ. 1,622 ಕೋಟಿ

ಸರ್ಜಾಪುರದಿಂದ ಪಟ್ಟದಕಲ್ಲುವರೆಗೆ 2 ಲೇನ್ + ಪೇವ್ಡ್ ಶೋಲ್ಡರ್ ಭಾನಾಪುರದಿಂದ ಗದ್ದನಕೇರಿ ವಿಭಾಗ ರಾಹೆ-367 ಗೆ ಅಗಲೀಕರಣ
ಯೋಜನೆಯ ಉದ್ದ: 26 ಕಿಮೀ • ಯೋಜನೆಯ ವೆಚ್ಚ: ರೂ. 340 ಕೋಟಿ

ರಾಹೆ-367 ರ ಭಾನಾಪುರ ಗದ್ದನಕೇರಿ ವಿಭಾಗದ ಕುಕನೂರ್, ಯಲಬುರ್ಗಾ, ಗಜೇಂದ್ರಗಡದಲ್ಲಿ 2 ಲೇನ್ + ಪೇವ್ಡ್ ಶೋಲ್ಡರ್ ಬೈಪಾಸ್‌ಗಳ ನಿರ್ಮಾಣ
ಯೋಜನೆಯ ಉದ್ದ: 17 ಕಿಮೀ | ಯೋಜನೆಯ ವೆಚ್ಚ: ರೂ. 254 ಕೋಟಿ

ರಾಹೆ-150ಎ ನಲ್ಲಿ ಮಸ್ಕಿ ಬೈಪಾಸ್ ಮತ್ತು ಸಿಂಧನೂರು ಬೈಪಾಸ್‌ನ 2 ಲೇನ್ + ಪೇವ್ಡ್ ಶೋಲ್ಡರ್ ಬೈಪಾಸ್ ನಿರ್ಮಾಣ
ಯೋಜನೆಯ ಉದ್ದ: 20 ಕಿಮೀ | ಯೋಜನೆಯ ವೆಚ್ಚ: ರೂ. 406 ಕೋಟಿ

ರಾಯಚೂರಿಗೆ ಸಂಪರ್ಕಿಸುವ ರಾಹೆ-150 ರ ಯಾದಗಿರಿ ಬೈಪಾಸ್‌ನ 2 ಲೇನ್ + ಪೇವ್ಡ್ ಶೋಲ್ಡರ್ ಬೈಪಾಸ್ ನಿರ್ಮಾಣ
ಯೋಜನೆಯ ಉದ್ದ: 9 ಕಿಮೀ | ಯೋಜನೆಯ ವೆಚ್ಚ: ರೂ. 136 ಕೋಟಿ

ಗೋಟೂರಿಗೆ ಸಂಪರ್ಕ ಕಲ್ಪಿಸುವ ಚಿಕ್ಕೋಡಿ ಬೈಪಾಸ್ ಸೇರಿದಂತೆ 4 ಲೇನ್ ರಸ್ತೆ ನಿರ್ಮಾಣ
ಯೋಜನೆಯ ಉದ್ದ: 27 ಕಿಮೀ | ಯೋಜನೆಯ ವೆಚ್ಚ: ರೂ. 942 ಕೋಟಿ

ರಾಹೆ-167ಎನ್ ನ ಮಿರಿಯನ್ ತೆಲಂಗಾಣ/ಕರ್ನಾಟಕ ಗಡಿಯ ಚಿಂಚೋಳಿ ವಿಭಾಗದ 4 ಲೇನಿಂಗ್
ಯೋಜನೆಯ ಉದ್ದ: 16 ಕಿಮೀ | ಯೋಜನೆಯ ವೆಚ್ಚ: ರೂ. 405 ಕೋಟಿ

ರಾಹೆ-150ಎ ನಲ್ಲಿ 7 ಚಿಕ್ಕ ಸೇತುವೆಗಳ ನಿರ್ಮಾಣ
ಯೋಜನೆಯ ಉದ್ದ: 3 ಕಿಮೀ | ಯೋಜನೆಯ ವೆಚ್ಚ: ರೂ. 39 ಕೋಟಿ

ರಾಹೆ-548ಬಿ ಮುರಗುಂಡಿಯಿಂದ ಚಿಕ್ಕೋಡಿಗೆ 4ಲೇನ್ + ಪೇವ್ಡ್ ಶೋಲ್ಡರ್
ಯೋಜನೆಯ ಉದ್ದ: 50 ಕಿಮೀ | ಯೋಜನೆಯ ವೆಚ್ಚ: ರೂ. 786 ಕೋಟಿ

ಶಿರಗುಪ್ಪಿಯಿಂದ ಅಂಕಲಿಗೆ ರಾಹೆ-548ಬಿ ಯ 4ಲೇನ್ + ಪೇವ್ಡ್ ಶೋಲ್ಡರ್
ಯೋಜನೆಯ ಉದ್ದ: 10 ಕಿಮೀ | ಯೋಜನೆಯ ವೆಚ್ಚ: ರೂ. 887 ಕೋಟಿ

ಮುರ್ರುಮ್ ಮಹಾರಾಷ್ಟ್ರ ಗಡಿಯಿಂದ ಐ ಬಿ ಸರ್ಕಲ್ ಬಿಜಾಪುರ ವಿಭಾಗ ರಾಹೆ-548ಬಿ ಯಲ್ಲಿ 2 ಲೇನ್ + ಪೇವ್ಡ್ ಶೋಲ್ಡರ್
ಯೋಜನೆಯ ಉದ್ದ: 102 ಕಿಮೀ | ಯೋಜನೆಯ ವೆಚ್ಚ: ರೂ. 657 ಕೋಟಿ

ರಾಹೆ-166ಇ ಯಲ್ಲಿ ಮಹಾರಾಷ್ಟ್ರ - ಕರ್ನಾಟಕ ಗಡಿ - ಕನಮಡಿ ಬಿಜ್ಜರಗಿ ಟಿಕೋಟಾ ವಿಭಾಗದ 2 ಲೇನ್ ಪೇವ್ಡ್ ಶೋಲ್ಡರ್
ಯೋಜನೆಯ ಉದ್ದ: 23 ಕಿಮೀ | ಯೋಜನೆಯ ವೆಚ್ಚ: ರೂ. 196 ಕೋಟಿ

ರಾಹೆ-150ಎ ನಲ್ಲಿ ವೆಂಕಟೇಶ್ವರ ಕ್ಯಾಂಪ್‌ನಿಂದ ದಡೇಸುಗೂರ್ ಕ್ಯಾಂಪ್ ಸೆಕ್ಷನ್‌ಗೆ 2 ಲೇನ್ ಪೇವ್ಡ್ ಶೋಲ್ಡರ್
ಯೋಜನೆಯ ಉದ್ದ: 14 ಕಿಮೀ | ಯೋಜನೆಯ ವೆಚ್ಚ: ರೂ. 147 ಕೋಟಿ

ರಾಹೆ-150ಇ ನ ಚೌಡಾಪುರ ಅಫಜಲಪುರ ಪಟ್ಟಣ ಬಳ್ಳೂರ್ಗಿ ಗ್ರಾಮದಿಂದ 2 ಲೇನ್ + ಪೇವ್ಡ್ ಶೋಲ್ಡರ್ ಸಹಿತ ರಸ್ತೆಯ ಮರು-ಜೋಡಣೆ
ಯೋಜನೆಯ ಉದ್ದ: 8 ಕಿಮೀ | ಯೋಜನೆಯ ವೆಚ್ಚ: ರೂ. 125 ಕೋಟಿ

ರಾಹೆ-63 (ಹೊಸ ರಾಹೆ-52) ನ ಅರಬೈಲ್‌ನಿಂದ ಇಡಗುಂಡಿ ಭಾಗದವರೆಗೆ ಬಲಪಡಿಸುವಿಕೆ ಮತ್ತು ಸುಧಾರಣೆ
ಯೋಜನೆಯ ಉದ್ದ: 16 ಕಿಮೀ | ಯೋಜನೆಯ ವೆಚ್ಚ: ರೂ. 33 ಕೋಟಿ

ಮಧ್ಯಾಹ್ನ 12:00 ಗಂಟೆಗೆ | ಜಿಲ್ಲಾ ಕ್ರೀಡಾಂಗಣ, ನೆಹರು ನಗರ, ಡಾ. ಅಂಬೇಡ್ಕರ್ ರಸ್ತೆ, ಬೆಳಗಾವಿ

ರಾಷ್ಟ್ರ ಸಮರ್ಪಣೆ

ರಾಹೆ-150ಎ ನ ಬಳ್ಳಾರಿಯಿಂದ ಬೈರಾಪುರ ಭಾಗಕ್ಕೆ ನಾಲ್ಕು ಪಥ
ಯೋಜನೆಯ ಉದ್ದ: 41 ಕಿಮೀ • ಯೋಜನೆಯ ವೆಚ್ಚ: ರೂ. 1,313 ಕೋಟಿ

ರಾಹೆ-766ಸಿ ಬೈಂದೂರು - ರಾಣೆಬೆನ್ನೂರು ವಿಭಾಗದಲ್ಲಿ 7 ಚಿಕ್ಕ ಸೇತುವೆಗಳ ನಿರ್ಮಾಣ
ಯೋಜನೆಯ ವೆಚ್ಚ: ರೂ. 20 ಕೋಟಿ

ರಾಹೆ-169 ತೀರ್ಥಹಳ್ಳಿಯಲ್ಲಿ ತುಂಗಾ ನದಿಗೆ ಅಡ್ಡಲಾಗಿ ದೊಡ್ಡ ಸೇತುವೆ ನಿರ್ಮಾಣ
ಯೋಜನೆಯ ವೆಚ್ಚ: ರೂ. 56 ಕೋಟಿ

ರಾಹೆ-13 ನಲ್ಲಿ ಶಿವಮೊಗ್ಗ ನಗರದಲ್ಲಿ ಎಲ್‌ಸಿ-46 ಗಾಗಿ ಆರ್‌ಒಬಿ ನಿರ್ಮಾಣ
ಯೋಜನೆಯ ವೆಚ್ಚ: ರೂ. 44 ಕೋಟಿ

ಶಿವಮೊಗ್ಗ ನಗರದ ಬೈಪಾಸ್ ರಸ್ತೆಯಲ್ಲಿ ತುಂಗಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ
ಯೋಜನೆಯ ವೆಚ್ಚ: ರೂ. 20 ಕೋಟಿ

ಶಿಲಾನ್ಯಾಸ

ಶಿವಮೊಗ್ಗದಿಂದ ಆನಂದಪುರದವರೆಗೆ ನಾಲ್ಕು ಪಥದ ಅಗಲೀಕರಣ
ಯೋಜನೆಯ ಉದ್ದ: 39 ಕಿಮೀ • ಯೋಜನೆಯ ವೆಚ್ಚ: ರೂ. 653 ಕೋಟಿ

ರಾಹೆ-69 (ಹಳೆಯ ರಾಹೆ-206) ನಲ್ಲಿ ಹೊಸೂರಿನಲ್ಲಿ ಎಲ್‌ಸಿ 110 ಮತ್ತು ತಾಳಗುಪ್ಪದಲ್ಲಿ ಎಲ್‌ಸಿ 152 ಗಾಗಿ ಆರ್‌ಒಬಿ ಗಳ ನಿರ್ಮಾಣ
ಯೋಜನೆಯ ವೆಚ್ಚ: ರೂ. 199 ಕೋಟಿ

ಶಿವಮೊಗ್ಗ ಸಂದೇಶ್ ಮೋಟಾರ್ಸ್ ನಿಂದ ಹರಕೆರೆವರೆಗೆ ನಾಲ್ಕು ಪಥದ ಅಗಲೀಕರಣ
ಯೋಜನೆಯ ಉದ್ದ: 2 ಕಿಮೀ • ಯೋಜನೆಯ ವೆಚ್ಚ: ರೂ. 40 ಕೋಟಿ

ರಾಹೆ-169 ರ + ಪಿಎಸ್ ನೆಲ್ಲಿಸರ ಕ್ಯಾಂಪ್‌ನಿಂದ ತೀರ್ಥಹಳ್ಳಿಗೆ ನಾಲ್ಕು ಪಥದ ಅಗಲೀಕರಣ
ಯೋಜನೆಯ ಉದ್ದ: 31 ಕಿಮೀ • ಯೋಜನೆಯ ವೆಚ್ಚ: ರೂ. 539 ಕೋಟಿ

ರಾಹೆ -766ಸಿ ನಲ್ಲಿ ಬೈಂದೂರಿನಿಂದ ನಾಗೋಡಿಗೆ 2 ಲೇನ್ + ಪೇವ್ಡ್ ಶೋಲ್ಡರ್ ಗೆ ಅಗಲೀಕರಣ
ಯೋಜನೆಯ ಉದ್ದ: 35 ಕಿಮೀ • ಯೋಜನೆಯ ವೆಚ್ಚ: ರೂ. 395 ಕೋಟಿ

ರಾಹೆ 766ಸಿ ನಲ್ಲಿ ಹೊಸನಗರದಿಂದ ಆಡುಗೋಡಿಗೆ 2 ಲೇನ್ + ಪೇವ್ಡ್ ಶೋಲ್ಡರ್ ನೊಂದಿಗೆ ಮರುಜೋಡಣೆ
ಯೋಜನೆಯ ಉದ್ದ: 14 ಕಿಮೀ • ಯೋಜನೆಯ ವೆಚ್ಚ: ರೂ. 314 ಕೋಟಿ

ರಾಹೆ 150ಎ ಯ ಹಿರೇಹಾಳ್ ಗ್ರಾಮ ಬಳ್ಳಾರಿ ಬೈಪಾಸ್‌ನಲ್ಲಿ 2 ಲೇನ್ + ಪೇವ್ಡ್ ಶೋಲ್ಡರ್ ಮತ್ತು 1 ಕಿಮೀ ನ ಬಾಕಿ ಕೆಲಸ
ಯೋಜನೆಯ ಉದ್ದ: 13 ಕಿಮೀ • ಯೋಜನೆಯ ವೆಚ್ಚ: ರೂ. 613 ಕೋಟಿ

ರಾಹೆ-73 (ಹೊಸ) ಸ್ಪರ್ ರಸ್ತೆಯ ಉಜಿರೆ-ಧರ್ಮಸ್ಥಳ-ಪೆರಿಯಶಾಂತಿಯನ್ 2 ಲೇನ್ + ಪೇವ್ಡ್ ಶೋಲ್ಡರ್ ಗೆ ಅಗಲೀಕರಣ
ಯೋಜನೆಯ ಉದ್ದ: 28 ಕಿಮೀ • ಯೋಜನೆಯ ವೆಚ್ಚ: ರೂ. 614 ಕೋಟಿ

ರಾಹೆ-73 ನಲ್ಲಿ ಚಾರ್ಮಾಡಿ ಘಾಟ್‌ನಲ್ಲಿ 2 ಲೇನ್ + ಪೇವ್ಡ್ ಶೋಲ್ಡರ್ ಗೆ ಅಗಲೀಕರಣ
ಯೋಜನೆಯ ಉದ್ದ: 11 ಕಿಮೀ • ಯೋಜನೆಯ ವೆಚ್ಚ: ರೂ. 344 ಕೋಟಿ

ರಾಹೆ-63 ರ ಅರಬೈಲ್‌ನಿಂದ ಇಡಗುಂಡಿಯವರೆಗೆ ಸುಧಾರಣೆಗಳು
ಯೋಜನೆಯ ಉದ್ದ: 16 ಕಿಮೀ • ಯೋಜನೆಯ ವೆಚ್ಚ: ರೂ. 32 ಕೋಟಿ

ರಾಹೆ-173 ರಲ್ಲಿ ಕಡೂರಿನಿಂದ ಹೊಸದುರ್ಗಕ್ಕೆ 2 ಲೇನ್ + ಪೇವ್ಡ್ ಶೋಲ್ಡರ್ ಗೆ ಅಗಲೀಕರಣ
ಯೋಜನೆಯ ಉದ್ದ: 48 ಕಿಮೀ • ಯೋಜನೆಯ ವೆಚ್ಚ: ರೂ. 472 ಕೋಟಿ

ರಾಹೆ-67 ರಲ್ಲಿ ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಎಲ್‌ಸಿ-110ಇ ಸುಧಾ ಕ್ರಾಸ್‌ನಲ್ಲಿ ಆರ್‌ಒಬಿ ನಿರ್ಮಾಣ
ಯೋಜನೆಯ ವೆಚ್ಚ: ರೂ. 103 ಕೋಟಿ

ಮಧ್ಯಾಹ್ನ 2:00 ಗಂಟೆಗೆ | ನೆಹರು ಕ್ರೀಡಾಂಗಣ, ಶಿವಮೊಗ್ಗ

ಯೋಜನೆಗಳ ಪ್ರಯೋಜನಗಳು

ಬೆಳಗಾವಿ ನಗರಕ್ಕೆ ರಿಂಗ್ ರಸ್ತೆ ನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಮತ್ತು ತೊಂದರೆಯಿಲ್ಲದ ಸಂಚಾರವನ್ನು ಒದಗಿಸುತ್ತದೆ.

ಭಾನಾಪುರ ಗದ್ದನಕೇರಿ ವಿಭಾಗ ಹಂಪಿ, ಐಹೊಳೆ, ಪಟ್ಟದಕಲ್ಲು ಮತ್ತು ಬಾದಾಮಿಯ ಐತಿಹಾಸಿಕ ಸ್ಥಳಗಳಿಗೆ ಸಂಪರ್ಕ ಮತ್ತು ಬಳ್ಳಾರಿ ಮತ್ತು ಹೊಸಪೇಟೆಯ ಗಣಿಗಾರಿಕೆ ಮತ್ತು ಕೈಗಾರಿಕಾ ವಲಯಗಳಿಗೆ ಸಂಪರ್ಕ ಸುಧಾರಿಸಿದೆ.

ಹುಬ್ಬಳ್ಳಿ ನಗರದ ಮೂಲಕ ಹಾದುಹೋಗುವ ಅಂಕೋಲಾ-ಗೂಟಿ ವಿಭಾಗವು ಹುಬ್ಬಳ್ಳಿಯಲ್ಲಿ ಉತ್ತರ ಕರ್ನಾಟಕದ ಅತಿದೊಡ್ಡ ಎಪಿಎಂಸಿಗೆ ಸುಧಾರಿತ ಸಂಪರ್ಕವನ್ನು ಒದಗಿಸುತ್ತದೆ ಮತ್ತು ಹುಬ್ಬಳ್ಳಿಯಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ ಶ್ರೀ ಸಿದ್ಧಾರೂಢ ಮಠಕ್ಕೆ ಸಂಪರ್ಕವನ್ನು ಒದಗಿಸುತ್ತದೆ.

ಅರಬೈಲ್‌ನಿಂದ ಇಡಗುಂದಿ ವಿಭಾಗವು ಪ್ರಮುಖ ಬಂದರು ನಗರಗಳಾದ ಕಾರವಾರ ಮತ್ತು ಮಂಗಳೂರಿಗೆ ಸುಧಾರಿತ ಸಂಪರ್ಕವನ್ನು ಒದಗಿಸುತ್ತದೆ.

ಮಹಾರಾಷ್ಟ್ರ ಗಡಿಯಿಂದ ವಿಜಯಪುರ ವಿಭಾಗವು ಕಲ್ಯಾಣ ಕರ್ನಾಟಕ ಪ್ರದೇಶದ ಕೈಗಾರಿಕಾ ವಲಯಗಳ ಅಭಿವೃದ್ಧಿಗೆ ಸಹಾಯ ಮಾಡುತ್ತದೆ, ವಿಜಯಪುರದ ಸಕ್ಕರೆ ಕೈಗಾರಿಕೆಗಳಿಗೆ ಸಂಪರ್ಕವನ್ನು ಒದಗಿಸುತ್ತದೆ ಮತ್ತು ಮಿರಿಯನ್, ಚಿಂಚೋಳಿ ಮತ್ತು ಕಲಬುರ್ಗಿಯ ಸಿಮೆಂಟ್ ಉದ್ಯಮಗಳ ವಲಯಕ್ಕೆ ಸುಧಾರಿತ ಸಂಪರ್ಕವನ್ನು ಒದಗಿಸುತ್ತದೆ.

ಬಳ್ಳಾರಿ ಬೈಪಾಸ್ ಬಳ್ಳಾರಿ ನಗರದ ದಟ್ಟಣೆಯನ್ನು ಕಡಿಮೆ ಮಾಡುತ್ತದೆ.

ಬಳ್ಳಾರಿಯಿಂದ ಬೈರಾಪುರ ಭಾಗ ಅಂತರರಾಜ್ಯ ಸಂಪರ್ಕ ಸುಧಾರಿಸಿದೆ.

ಮೂಡಿಗೆರೆಯಿಂದ ಚಿಕ್ಕಮಗಳೂರು ಭಾಗದಿಂದ ಮಲೆನಾಡು ಪ್ರದೇಶದ ತೆಂಗು, ಅಡಿಕೆ ಮತ್ತು ಕಾಫಿ ತೋಟ, ಸಿಗಂದೂರು, ಕೊಲ್ಲೂರು, ಧರ್ಮಸ್ಥಳದ ಮಂಜುನಾಥ ದೇವಸ್ಥಾನದ ಯಾತ್ರಾ ಸ್ಥಳಗಳಿಗೆ ಸಂಬಂಧಿಸಿದ ಕೃಷಿ ಆರ್ಥಿಕತೆಯನ್ನು ಸುಧಾರಿಸುತ್ತದೆ.

ನಿತಿನ್ ಗಡ್ಕರಿ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರು
ಅವರಿಂದ

ಘನ ಉಪಸ್ಥಿತಿ

ಪ್ರಲ್ಹಾದ ಜೋಶಿ
ಕೇಂದ್ರ ಸಂಸದೀಯ ವ್ಯವಹಾರಗಳು ಮತ್ತು ಕಲ್ಲಿದ್ದಲು ಮತ್ತು ಗಣಿಗಳ ಸಚಿವರು

ಮಲ್ಲಿಕಾರ್ಜುನ ಖರ್ಗೆ
ವಿರೋಧ ಪಕ್ಷದ ನಾಯಕರು (ರಾಜ್ಯಸಭಾ)

ಜನರಲ್ ಡಾ. ವಿ. ಕೆ. ಸಿಂಗ್ (ನಿವೃತ್ತ)
ಕೇಂದ್ರ ರಸ್ತೆ ಸಾರಿಗೆ ಹೆದ್ದಾರಿಗಳ ಮತ್ತು ನಾಗರಿಕ ವಿಮಾನಯಾನ ರಾಜ್ಯ ಸಚಿವರು

ರಾಜೀವ್ ಚಂದ್ರಶೇಖರ್
ಕೇಂದ್ರ ಕೌಶಲ್ಯಾಭಿವೃದ್ಧಿ, ವಾಣಿಜ್ಯೋದ್ಯಮ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಜಲ ಶಕ್ತಿ ರಾಜ್ಯ ಸಚಿವರು

ಶೋಭಾ ಕರಂದ್ಲಾಜೆ
ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮತ್ತು ಆಹಾರ ಸಂಸ್ಕರಣಾ ಕೈಗಾರಿಕೆಗಳ ರಾಜ್ಯ ಸಚಿವರು

ಎ. ನಾರಾಯಣಸ್ವಾಮಿ
ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರು

ಭಗವಂತ ಖೂಬಾ
ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಮತ್ತು ರಾಸಾಯನಿಕ ಮತ್ತು ರಸಗೊಬ್ಬರಗಳ ರಾಜ್ಯ ಸಚಿವರು

ಡಿ. ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸತೀಶ್ ಜಾರಕಿಹೊಳಿ
ಲೋಕೋಪಯೋಗಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು - ಬೆಳಗಾವಿ

ಸಂಸತ್ ಸದಸ್ಯರು

ಪಿ. ಸಿ. ಗದ್ದಿಗೌಡರ್
ಬಾಗಲಕೋಟೆ

ಶಿವಕುಮಾರ್ ಉದಾಸಿ
ಹಾವೇರಿ - ಗದಗ

ಕರಡಿ ಸಂಗಣ್ಣ ಅಮರಪ್ಪ
ಕೊಪ್ಪಳ

ಅಣ್ಣಾಸಾಹೇಬ ಜೊಲ್ಲೆ
ಚಿಕ್ಕೋಡಿ

ಡಾ. ಉಮೇಶ ಜಿ. ಜಾಧವ್
ಕಲಬುರ್ಗಿ

ರಮೇಶ ಜಿಗಜಿಣಗಿ
ವಿಜಯಪುರ

ಅನಂತಕುಮಾರ ಹೆಗಡೆ
ಕಾರವಾರ

ಮಂಗಳಾ ಸುರೇಶ ಅಂಗಡಿ
ಬೆಳಗಾವಿ

ರಾಜಾ ಅಮರೇಶ್ವರ ನಾಯ್ಕ
ರಾಯಚೂರು

ಈರಣ್ಣ ಕಡಾಡಿ
ರಾಜ್ಯಸಭಾ ಸದಸ್ಯರು

ಲೈವ್ ಸ್ಟ್ರೀಮಿಂಗ್ ಗಾಗಿ @nitingadkary @nitin_gadkari NitinGadkariOfficial

ರಸ್ತೆಗಳಷ್ಟೇ ಅಲ್ಲ, ರಾಷ್ಟ್ರ ನಿರ್ಮಾಣ

FASTag
• ಪ್ರತಿ ವರ್ಷ ಸುಮಾರು 40 ಕೋಟಿ ಗಂಟೆಗಳ ಅಮೂಲ್ಯ ಸಮಯವನ್ನು ಉಳಿಸುತ್ತದೆ • ಪ್ರತಿ ವರ್ಷ ಸರಿಸುಮಾರು 35 ಕೋಟಿ ಲೀಟರ್ ಇಂಧನ ಉಳಿತಾಯವಾಗುತ್ತದೆ
• ಸರಿಸುಮಾರು 10 ಲಕ್ಷ ಟನ್ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಮೂಲಕ ಪರಿಸರವನ್ನು ಉಳಿಸುತ್ತದೆ
ಆದ್ದರಿಂದ ಫಾಸ್ಟ್ಯಾಗ್ ಬಳಸಿ... ಮತ್ತು ದೇಶದ ಹಿತಾಸಕ್ತಿಗೆ ಕೊಡುಗೆ ನೀಡಿ...

cbc 37107/15/0045/2324

ಬಿಬಿಎಂಪಿ: ಕ್ಲಬ್‌ಹೌಸ್, ಈಜುಕೊಳ, ಆರೋಗ್ಯ ಕ್ಲಬ್, ಕ್ಯಾಂಟೀನ್‌ಗೆ ಶೇ 50ರಷ್ಟು ತೆರಿಗೆ

ವಾಹನ ನಿಲುಗಡೆ ಪ್ರದೇಶಕ್ಕೂ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿರುವ ವಾಹನ ನಿಲುಗಡೆ ಪ್ರದೇಶ, ಅಪಾರ್ಟ್‌ಮೆಂಟ್‌ಗಳಲ್ಲಿರುವ ಕ್ಲಬ್‌ಹೌಸ್, ಈಜುಕೊಳ, ಆರೋಗ್ಯ ಕ್ಲಬ್, ಕ್ಯಾಂಟೀನ್‌ಗಳಿಗೆ ಶುಲ್ಕ ವಿಧಿಸಲು ಬಿಬಿಎಂಪಿ ನಿರ್ಧರಿಸಿದೆ.

ವಸತಿ ಕಟ್ಟಡದಲ್ಲಿ ವಾಹನ ನಿಲುಗಡೆ ಪ್ರದೇಶವನ್ನು ಸ್ವಂತಕ್ಕೆ ಬಳಸಿಕೊಂಡರೆ, ಅದಕ್ಕೆ ವಸತಿ ಪ್ರದೇಶ ವರ್ಗದಲ್ಲಿ ಪ್ರತಿ ಚದರ ಅಡಿಗೆ ಮಾರ್ಗಸೂಚಿ ದರದಲ್ಲಿ ಶೇ 20ರಷ್ಟನ್ನು ಶುಲ್ಕವಾಗಿ ಪಾವತಿಸಬೇಕು. ಇತರರು ವಾಹನ ನಿಲುಗಡೆ ಪ್ರದೇಶ ಬಳಸಿಕೊಳ್ಳುತ್ತಿದ್ದರೆ, ವಾಣಿಜ್ಯ ಪ್ರದೇಶ ವರ್ಗದ ದರದಲ್ಲಿ ಶೇ 20ರಷ್ಟು ಶುಲ್ಕವಾಗಿ ನೀಡಬೇಕಾಗುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ಆಸ್ತಿಗಳಿಗೆ ಮಾರ್ಗಸೂಚಿ ದರ ಹಾಗೂ ಕಟ್ಟಡ ವೆಚ್ಚದ ಆಧಾರದಲ್ಲಿ ಆಸ್ತಿ ತೆರಿಗೆಯನ್ನು 2024–25ನೇ ಆರ್ಥಿಕ ವರ್ಷದಿಂದಲೇ ಜಾರಿಗೆ ತರಲು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಇದರಲ್ಲಿ, ಕಟ್ಟಡ ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ 'ಕಾಮನ್ ಏರಿಯಾ'ಗಳಾದ ವ್ಯವಸ್ಥಾಪಕರ ಕಚೇರಿ, ಕ್ಲಬ್‌ಹೌಸ್, ಈಜುಕೊಳ, ಆರೋಗ್ಯ ಕ್ಲಬ್, ಕ್ಯಾಂಟೀನ್‌ಗಳಿಗೆ ಮಾರ್ಗಸೂಚಿ ದರದಲ್ಲಿ ಪ್ರತಿ ಚದರ ಅಡಿಗೆ ಶೇ 50ರಷ್ಟು ತೆರಿಗೆ ವಿಧಿಸಲಾಗುತ್ತದೆ. ಉದ್ಯಾನ ಹಾಗೂ ಇತರೆ ತೆರೆದ ಪ್ರದೇಶಗಳಿಗೆ ಖಾಲಿ ಇರುವ ಪ್ರದೇಶಕ್ಕೆ ನಿಗದಿಪಡಿಸಿರುವ ಶುಲ್ಕ ಪಾವತಿಸಬೇಕಾಗುತ್ತದೆ.

ಮುಖ್ಯಾಂಶಗಳು

- 2024–25ನೇ ಆರ್ಥಿಕ ವರ್ಷದಿಂದಲೇ ಜಾರಿ
- 'ಎ' ಖಾತಾ, 'ಬಿ' ಖಾತಾ ಆಸ್ತಿಗಳಿಗೆ ಏಕರೂಪದ ತೆರಿಗೆ
- ಪ್ರತಿ ವರ್ಷ ಶೇ 5ರಷ್ಟು ಆಸ್ತಿ ತೆರಿಗೆ ಹೆಚ್ಚಳ

ಹೊರಾಂಗಣ ಕ್ರೀಡಾಂಗಣಗಳಿಗೆ ವಸತಿಯೇತರ ವರ್ಗದಲ್ಲಿ ಆಸ್ತಿ ದರದ ಶೇ 20ರಷ್ಟು ತೆರಿಗೆ ನಿಗದಿಪಡಿಸಲಾಗುತ್ತದೆ. ಬಹು ಅಂತಸ್ತಿನ ವಾಹನ ನಿಲುಗಡೆ ಕಟ್ಟಡಗಳಿಗೆ ಶೇ 50,ಗ್ರಾನೈಟ್, ಟಿಂಬರ್, ಇಟ್ಟಿಗೆ, ಟೈಲ್ಸ್‌ನಂತಹ ಸಾಮಗ್ರಿ ದಾಸ್ತಾನಿನ ಪ್ರದೇಶಗಳಿಗೆ ವಸತಿಯೇತರ ವರ್ಗದಲ್ಲಿ ಶೇ 50ರಷ್ಟು ವಿಧಿಸಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ರೇಸ್ ಕೋರ್ಸ್, ಗಾಲ್ಫ್ ಕೋರ್ಸ್, ಬಸ್ ನಿಲ್ದಾಣಗಳಲ್ಲಿ ತೆರೆದ ಪ್ರದೇಶಗಳ ಹಾಗೂ ಇತರೆ ತೆರೆದ ವಾಣಿಜ್ಯ ಪ್ರದೇಶಗಳಿಗೆ ಖಾಲಿಯಿರುವ ವಾಣಿಜ್ಯ ಪ್ರದೇಶಗಳಿಗೆ ಅನ್ವಯವಾಗುವ ತೆರಿಗೆ ನಿಗದಿಪಡಿಸಲಾಗುತ್ತದೆ.

ಪರಿಷ್ಕರಣೆ: ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಗಾಗ್ಗೆ ನಿಗದಿಪಡಿಸುವ ಮಾರ್ಗಸೂಚಿ ದರದಂತೆ ಆಸ್ತಿ ತೆರಿಗೆ ಪರಿಷ್ಕರಣೆಯಾಗುತ್ತದೆ. ಇದನ್ನು ಸಾಫ್ಟ್‌ವೇರ್‌ನಲ್ಲಿ ಅಳವಡಿಸಲಾಗುತ್ತದೆ. ಮಾರ್ಗಸೂಚಿದ ದರ ಹೆಚ್ಚಳವಾಗದ ವರ್ಷದಲ್ಲಿ, ಆಸ್ತಿ ತೆರಿಗೆಯನ್ನು ಬಿಬಿಎಂಪಿ ಶೇ 5ರಷ್ಟು ಹೆಚ್ಚಿಸುತ್ತದೆ. ಪ್ರತಿ ವರ್ಷ ಏಪ್ರಿಲ್‌ನಿಂದ ಶೇ 5ರಷ್ಟು ಆಸ್ತಿ ತೆರಿಗೆಯನ್ನು ಹೆಚ್ಚಿಸಲಾಗುತ್ತದೆ. ಇದು 2025ರ ಏಪ್ರಿಲ್‌ನಿಂದಲೇ ಜಾರಿಯಾಗಲಿದೆ.

ಕಟ್ಟಡ ನಿರ್ಮಾಣ ವೆಚ್ಚವನ್ನೂ 2025–26ರಿಂದ ಪ್ರತಿ ವರ್ಷ ಶೇ 5ರಷ್ಟು ಹೆಚ್ಚಿಸಲಾಗುತ್ತದೆ. ಎ ಖಾತಾ ಅಥವಾ ಬಿ– ಖಾತಾ ಎಂಬ ಭೇದವಿಲ್ಲದೆ, ಎಲ್ಲ ಆಸ್ತಿಗಳಿಗೂ ಏಕರೂಪದ ತೆರಿಗೆ ವಿಧಿಸಲಾಗುತ್ತದೆ.

ಶೇ 20ರಷ್ಟು ಮಾತ್ರ ಹೆಚ್ಚಳ!

'ಪ್ರಸ್ತುತ ಪಾವತಿಸುತ್ತಿರುವ ಆಸ್ತಿ ತೆರಿಗೆಗಿಂತ ಹೊಸ ವಿಧಾನದಂತೆ ತೆರಿಗೆಯಲ್ಲಿ ಹೆಚ್ಚಳವಾದರೆ, ಅದರಲ್ಲಿನ ಶೇ 20ರಷ್ಟನ್ನು ಮಾತ್ರ 2024–25ನೇ ಸಾಲಿನಲ್ಲಿ ಪಾವತಿಸಬಹುದು. ಉಳಿದಿದ್ದನ್ನು ಪ್ರತಿ ವರ್ಷ ಶೇ 20ರಂತೆ ಮುಂದಿನ ವರ್ಷಗಳಲ್ಲಿ ಪಾವತಿಸಲು ಅವಕಾಶ ನೀಡಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ನಾಗರಿಕರಿಂದ ಬರುವ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಮಾರ್ಚ್ ಮಧ್ಯಭಾಗದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು. ಅದರಂತೆ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ ಎಂದು ಸುದ್ದಿಗಾರರಿಗೆ ಬುಧವಾರ ಮಾಹಿತಿ ನೀಡಿದರು.

ಈ ಮೊದಲು ವಲಯ ಆಧಾರದಲ್ಲಿ ಆಸ್ತಿ ತೆರಿಗೆ ನಿಗದಿಯಾಗಿತ್ತು. 'ಎ' ಹಾಗೂ 'ಡಿ' ವಲಯದಲ್ಲಿರುವ ಆಸ್ತಿಗಳ ಮಾರ್ಗಸೂಚಿ ದರ ₹10 ಸಾವಿರ ಇದ್ದರೂ 'ಎ' ವಲಯದವರು ಹೆಚ್ಚಿನ ಆಸ್ತಿ ತೆರಿಗೆ, 'ಡಿ' ವಲಯದವರು ಕಡಿಮೆ ತೆರಿಗೆ ಪಾವತಿಸುತ್ತಿದ್ದರು. ಆದರೆ, ಇದೀಗ ಆಯಾ ಆಸ್ತಿಯ ಮಾರ್ಗಸೂಚಿ ದರದಂತೆಯೇ ಎಲ್ಲವೂ ನಿರ್ಧಾರವಾಗುವುದರಿಂದ ಕೆಲವರಿಗೆ ಹೆಚ್ಚು, ಕೆಲವರಿಗೆ ಕಡಿಮೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರು.

ವಸತಿ, ವಾಣಿಜ್ಯ, ಸ್ಟಾರ್ ಹೋಟೆಲ್, ಕೈಗಾರಿಕೆ ಎಂದು ನಾಲ್ಕು ವರ್ಗಗಳಲ್ಲಿ ಆಸ್ತಿ ತೆರಿಗೆ ವಿಧಿಸಿರುವುದರಿಂದ ಕೆಲವು ಕಟ್ಟಡಗಳಿಗೆ ಆಸ್ತಿ ತೆರಿಗೆ ನಿಗದಿಪಡಿಸುವ ಸಂದರ್ಭದಲ್ಲಿ ಉಂಟಾಗುತ್ತಿದ್ದ ಗೊಂದಲ ನಿವಾರಣೆಯಾಗಿದೆ. ಇದು ಸರಳ ವಿಧಾನವಾಗಿದೆ. ಕರ್ನಾಟಕ ಪೌರ ನಿಗಮಗಳ (ಕೆಎಂಸಿ) ಕಾಯ್ದೆ ಪ್ರಕಾರ ಈಗಾಗಲೇ ಇದೇ ರೀತಿಯಲ್ಲಿ ಆಸ್ತಿ ತೆರಿಗೆ ವಿಧಿಸಲಾಗುತ್ತಿದೆ. ಬಿಬಿಎಂಪಿಗೆ ಪ್ರತ್ಯೇಕ ಕಾಯ್ದೆ ಇರುವುದರಿಂದ ಇದೀಗ ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ಹೇಳಿದರು.

ಒಂದು ಕಾರಿಗೆ ₹300 ಶುಲ್ಕ!

ಒಂದು ಕಾರು ನಿಲ್ಲಿಸುವ ಸ್ಥಳ ಕಟ್ಟಡದಲ್ಲಿದ್ದರೆ ₹300 ಶುಲ್ಕ ಪಾವತಿಸಬೇಕಾಗುತ್ತದೆ. ಪ್ರತಿ ಚದರ ಅಡಿಗೆ ₹2 ಸಾವಿರ ಮಾರ್ಗಸೂಚಿ ದರವಿರುವ ಪ್ರದೇಶದ ಕಟ್ಟಡದಲ್ಲಿ 150 ಚದರ ಅಡಿ ವಾಹನ ನಿಲುಗಡೆ ಪ್ರದೇಶವಿದ್ದು, ಅದನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದರೆ ವಾರ್ಷಿಕವಾಗಿ ₹300 ಪಾವತಿಸಬೇಕು. ವಾಹನ ನಿಲುಗಡೆ ಪ್ರದೇಶವನ್ನು ಬಾಡಿಗೆಯವರು ಹಾಗೂ ಇತರರು ಬಳಸುತ್ತಿದ್ದರೆ, ₹1,500 ಶುಲ್ಕ ಪಾವತಿಸಬೇಕು.



5ನೇ ಹಣಕಾಸು ಆಯೋಗದ ಮೊದಲ ವರದಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ, ಸದಸ್ಯರಾದ ಮಹಮ್ಮದ್ ಸನಾವುಲ್ಲಾ, ಆರ್.ಎಸ್. ಫೋಂಡೆ ಸಲ್ಲಿಸಿದರು. ಆಯೋಗದ ಕಾರ್ಯದರ್ಶಿ ಉಜ್ವಲ್ ಕುಮಾರ್ ಘೋಷ್ ಉಪಸ್ಥಿತರಿದ್ದರು.

'ಉಗ್ರ' ಎಂದು ಬೆದರಿಸಿದ್ದ ಪ್ರಯಾಣಿಕ!

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಫೆ.17ರಂದು ವಿಮಾನ ಹೊರಡಲು ಸಜ್ಜಾದ ಕೆಲವೇ ಕ್ಷಣಗಳ ಮುನ್ನ ವಿಮಾನದಿಂದ ಏರದೆ ಮರಳಿದ ಪ್ರಯಾಣಿಕ ತಾನೊಬ್ಬ ಉಗ್ರ ಎಂದು ಏರ್ ಇಂಡಿಯಾ ವಿಮಾನ ಸಿಬ್ಬಂದಿಯನ್ನು ಬೆದರಿಸಿದ್ದಾನೆ.

ಲಖನೌಗೆ ಹೊರಟಿದ್ದ ವಿಮಾನ ಏರಲು ತೆರಳಿದ ಪ್ರಯಾಣಿಕ ಆದರ್ಶ್ ಕುಮಾರ್ ಸಿಂಗ್ ವಿಮಾನ ಹತ್ತದೆ ವಾಪಸ್ ಆಗುತ್ತಿದ್ದಾಗ ಆತನನ್ನು ಪ್ರಶ್ನಿಸಿದ ಸಿಬ್ಬಂದಿಯನ್ನು ಬೆದರಿಸಲು ತಾನೊಬ್ಬ ಉಗ್ರ ಎಂದು ಹೇಳಿದ್ದಾನೆ.

ಭದ್ರತಾ ಸಿಬ್ಬಂದಿಯ ಪ್ರಶ್ನೆಗೆ ಆದರ್ಶ್ ಕುಮಾರ್ ಸಿಂಗ್, 'ನಾನು ಭಯೋತ್ಪಾದಕರ ಗುಂಪಿಗೆ ಸೇರಿದವನು. ನಾನು ಲಖನೌಗೆ ತೆರಳಲ್ಲ' ಎಂದು ಹೇಳಿದ. ತಕ್ಷಣವೇ ಆರೋಪಿಯನ್ನು ವಶಕ್ಕೆ ಪಡೆದ ಭದ್ರತಾ ಸಿಬ್ಬಂದಿ ಪೊಲೀಸರಿಗೆ ಒಪ್ಪಿಸಿದರು.

ನಗರದಲ್ಲಿ ಇಂದು

ಅಂಗನವಾಡಿ ಮಕ್ಕಳ ಹಬ್ಬ ಹಾಗೂ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ ಅನುಷ್ಠಾನ: ಅತಿಥಿಗಳು: ಜಿ.ಸಿ. ಪ್ರಕಾಶ್, ಎಂ.ಎಸ್. ಅರ್ಚನಾ, ಕೆ. ದಯಾನಂದ್, ಪಿ.ಎಸ್. ಕಾಂತರಾಜ್, ಭಾರತಿ ಶೆಟ್ಟರ್, ಬಿ.ಎಚ್. ನಿಶ್ಚಲ್, ಎಸ್. ಸಿದ್ಧರಾಮಣ್ಣ, ಆಯೋಜನೆ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸ್ಥಳ: ಸಂಭ್ರಮ ಸಭಾಂಗಣ, ಬಾಲಮಂದಿರ ರಸ್ತೆ, ಹೊಂಬೇಗೌಡನಗರ, ಬೆಳಿಗ್ಗೆ 10

ಶ್ರೀರಾಮನವಮಿ ಜಾಗತಿಕ ಸಂಗೀತೋತ್ಸವ–2024ರ ವಿಶೇಷ ಪೆಂಡಾಲ್‌ನ ಗುದ್ದಲಿ ಪೂಜೆ: ಪಿ.ಎಸ್. ದಿನೇಶ್ ಕುಮಾರ್, ಸಿ.ಎಸ್. ಕೇದಾರ್, ಎಸ್.ಆರ್. ಉಮಾಶಂಕರ್, ಎನ್. ಶಿವಶೈಲಂ, ರವೀಂದ್ರ ಭಟ್ಟ, ಪಿ. ಬಾಲಸುಬ್ರಮಣಿಯಂ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ಸ್ಥಳ: ಹಳೆ ಕೋಟೆ ಪ್ರೌಢಶಾಲೆಯ ಮೈದಾನ, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ವಿಶ್ವಕರ್ಮ ಜನಜಾಗೃತಿ ಸಮಾವೇಶ: ಸಾನ್ನಿಧ್ಯ: ಅನಂತಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಸ್ವಾಮೀಜಿ, ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಚಂದ್ರಶೇಖರ ಕಂಬಾರ, ದಿನೇಶ್ ಗುಂಡೂರಾವ್, ಪಿ.ಸಿ. ಮೋಹನ್, ಸೊಕ್ರೇಟ್ಸ್, ತೇಜಸ್ವಿ ಸೂರ್ಯ, ರಾಮಲಿಂಗಾರೆಡ್ಡಿ, ಉದಯ್ ಬಿ. ಗರುಡಾಚಾರ್, ವಿಶ್ವಕರ್ಮ ರಾಷ್ಟ್ರಮಟ್ಟದ ಸೇವಾರತ್ನ ಪುರಸ್ಕೃತರು: ಅರುಣ್ ಯೋಗಿರಾಜ್, ಟಿ.ಎಸ್. ದಿವ್ಯ, ಎಂ. ರಾಮಮೂರ್ತಿ ಆಚಾರ್, ಸಿ.ಆರ್. ಚಂದ್ರಶೇಖರ್, ರಾಜಣ್ಣ, ಆಯೋಜನೆ: ವಿಶ್ವಕರ್ಮ ಸೇವಾ ಸಮಿತಿ, ಸ್ಥಳ: ಟೌನ್‌ಹಾಲ್, ಜೆ.ಸಿ. ರಸ್ತೆ, ಸಂಜೆ 4

ಸಂಗೀತ ಉತ್ಸವ: ಉದ್ಘಾಟನೆ: ಕಾಶಿ ಸ್ವರ ಶಂಕರ್, ಕಾಶಿ ರಾಮೇಶ್ವರಂ, ಗಾಯನ: ಸುಭೇಂದ್ರ ರಾವ್, ಸುಮಾ ಸುಭೇಂದ್ರಾ, ಮಹೇಶ ಕಾಳೆ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 4.45

ಜಾನಪದ ಸೊಗಡು ಉಪನ್ಯಾಸ ಹಾಗೂ ಗಾಯನ: ಆರ್. ಅಂಬುಜಾಕ್ಷಿ ಬೀರೇಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸರ ಪದಗಳ ರಸಧಾರೆ: ಗಾಯನ: ವರದೇಂದ್ರ ಗಂಗಾಖೇಡ್, ಹಾರ್ಮೋನಿಯಂ: ತೇಜಸ್ ಕಾಟೋಟಿ, ತಬಲಾ: ಸುಮಿತ್ ನಾಯಕ, ತಾಳ: ವೆಂಕಟೇಶ್ ಪುರೋಹಿತ್, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರಸ್ವಾಮಿ ಮಠ, ಪ್ರಕಾಶನಗರ, ಸಂಜೆ 7

ಭಕ್ತಿ ಸಂಗೀತ: ಗಾಯನ: ಚಿಂತಲಪಲ್ಲಿ ಸೋಮಶೇಖರ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಹರಿದಾಸ ಝೇಂಕಾರ: ಶಿಲ್ಪಾ ಸುನೀಲ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಹಿಂದೂಗಳ ತೆರಿಗೆ ಹಿಂದೂಗಳ ಹಕ್ಕು ಎಂಬ ಧ್ವನಿ ಬೇಕು'

ಪ್ರಜಾವಾಣಿ ವಾರ್ತೆ



ಅನಂತಕುಮಾರ ಹೆಗಡೆ

ಶಿರಸಿ: 'ಹಿಂದೂಗಳು ಕಟ್ಟಿದ ತೆರಿಗೆ ರಾಜ್ಯ ಸರ್ಕಾರದಿಂದ ಹಗಲು ದರೋಡೆ ಆಗುತ್ತಿದೆ. ಇಂಥ ಸಂದರ್ಭದಲ್ಲಿ ಹಿಂದೂಗಳ ತೆರಿಗೆ ಹಿಂದೂಗಳ ಹಕ್ಕು ಎಂಬ ಧ್ವನಿ ಏಳಬೇಕಿದೆ' ಎಂದು ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ನಗರದ ದೀನದಯಾಳ ಸಭಾಂಗಣದಲ್ಲಿ ಬುಧವಾರ ನಗರ ಮಂಡಳ ಅಧ್ಯಕ್ಷರ ಪದಗ್ರಹಣ ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಅಲ್ಪಸಂಖ್ಯಾತರು ಮಾತ್ರ ಈ ರಾಜ್ಯದಲ್ಲಿ ವಾಸವಿದ್ದಾರೆ ಎಂಬಂತೆ ಸಿದ್ದರಾಮಯ್ಯ ಬಜೆಟ್ ಮಂಡಿ ಸಿದ್ದಾರೆ. ಹಾಗಾದರೆ ಉಳಿದವರು ಯಾರು ಎಂಬ ಪ್ರಶ್ನೆ ಬರುತ್ತದೆ. ರಾಜ್ಯದಲ್ಲಿ ಬಹುಸಂಖ್ಯಾತರು ನೀಡುವ ತೆರಿಗೆ, ಅಲ್ಪಸಂಖ್ಯಾತರು ನೀಡುವ ತೆರಿಗೆ ಪ್ರಮಾಣ ಹೋಲಿಕೆ ಮಾಡಿ ನೋಡಬೇಕು' ಎಂದರು.

'ಶೇ 90ರಷ್ಟು ಉದ್ದಿಮೆ, ಕೈಗಾರಿಕೆ, ಆರ್ಥಿಕ ಸಂಸ್ಥೆ ನಡೆಸುವವರು ಹಿಂದೂಗಳು. ಆದರೆ, ನಾವು ತುಂಬುವ ತೆರಿಗೆ ಹಣ ನಮ್ಮತನ ಒಪ್ಪದ, ದೇಶದ ಕಾನೂನು ಪಾಲಿಸದವರಿಗೆ ಕೊಡಲಾಗುತ್ತಿದೆ. ಇಸ್ಲಾಮಿಕ್ ಸ್ಟೇಟ್ (ಐಎಸ್) ಆಗದಿದ್ದರೆ ಅಲ್ಲಿನ ಸರ್ಕಾರಕ್ಕೆ ತೆರಿಗೆ ನೀಡುವುದು ತಪ್ಪು ಎಂದು ಇಸ್ಲಾಂ ಧರ್ಮ ಗ್ರಂಥದಲ್ಲೇ ಉಲ್ಲೇಖವಿದೆ' ಎಂದರು.

ಅಲಿಪ್ತ ಚಳವಳಿ

ಯು.ಟಿ. ಆಯಿಷಾ ಫರ್ಜಾನ

ದ್ವಿತೀಯ ಜಾಗತಿಕಯುದ್ಧದ ಬಳಿಕ ರೂಪುಗೊಂಡ ಅಲಿಪ್ತ ದೇಶಗಳ ಒಕ್ಕೂಟದ ಶೃಂಗಸಭೆಯು ಉಗಾಂಡಾದ ಕಂಪಾಲಾದಲ್ಲಿ 2024ರ ಜನವರಿ19 ಮತ್ತು 20ರಂದು ನಡೆಯಿತು. ಇದಲ್ಲದೆ ಜನವರಿ 19ರಂದು ಉಗಾಂಡಾದ ಅಧ್ಯಕ್ಷ ಯೊವೆರಿ ಮುಸೆವೆನಿ ಈ ಶೃಂಗಸಭೆಯಲ್ಲಿ ಅಧಿಕೃತವಾಗಿ ಮುಂದಿನ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು.

ಅಲಿಪ್ತ ಆಂದೋಲನ (NAM- non aligned movement)

- ಅಲಿಪ್ತ ಆಂದೋಲನವು (NAM) 120 ಅಭಿವೃದ್ಧಿಶೀಲ ರಾಷ್ಟ್ರಗಳ ಒಂದು ವೇದಿಕೆಯಾಗಿದೆ. ಅದು ಜಗತ್ತಿನ ಯಾವುದೇ ಪ್ರಮುಖ ಶಕ್ತಿ ಬಣಕ್ಕೆ ಬೆಂಬಲವಾಗಿ ಅಥವಾ ವಿರುದ್ಧವಾಗಿರದೇ ತಟಸ್ಥ ನಿಲುವನ್ನು ಕಾಯ್ದುಕೊಳ್ಳುತ್ತಾ ಬಂದಿದೆ.
- ಶೀತಲ ಸಮರದ ಸಮಯದಲ್ಲಿ ಜಗತ್ತಿನಾದ್ಯಂತ ದೇಶಗಳು ವಿಶೇಷವಾಗಿ ಪಾಶ್ಚಿಮಾತ್ಯ ಅಥವಾ ಪೂರ್ವ ಬಣಗಳು ಎಂಬ ಎರಡು ಗುಂಪುಗಳಾಗಿ ವಿಭಜನೆಯಾದಾಗ ಆ ಬಲಾಢ್ಯ ರಾಜಕೀಯಕ್ಕೆ ಪ್ರತಿಕ್ರಿಯೆಯಾಗಿ ಅಲಿಪ್ತ ಬಣವನ್ನು ಪ್ರಾರಂಭಿಸಲಾಯಿತು.
- ಅಲಿಪ್ತ ಚಳವಳಿ ಎಂಬ ಪರಿಕಲ್ಪನೆಯನ್ನು ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರೂ ಅವರು ಮೊದಲ ಬಾರಿಗೆ ನೀಡಿದ್ದರು.
- NAMನ ಸಂಸ್ಥಾಪಕ ತತ್ವಗಳು ಸಾಮ್ರಾಜ್ಯಶಾಹಿ, ವಸಾಹತುಶಾಹಿ, ವರ್ಣಭೇದ ನೀತಿ ಮತ್ತು ಎಲ್ಲಾ ರೀತಿಯ ವಿದೇಶಿ ಆಕ್ರಮಣಗಳ ವಿರುದ್ಧದ ಹೋರಾಟದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ, ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆ ಮತ್ತು ಅಲಿಪ್ತ ರಾಷ್ಟ್ರಗಳ ಭದ್ರತೆಯ ಪ್ರಾಮುಖ್ಯತೆಗಳ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾಳಿದ್ದವು.
- ಇದು ಶಾಶ್ವತ ಕಾರ್ಯದರ್ಶಿ ಕಚೇರಿಯನ್ನು ಹೊಂದಿಲ್ಲ.
- ಇದರ ಅಧ್ಯಕ್ಷೀಯತೆಯನ್ನು ಈ ಆಂದೋಲನವನ್ನು ರೂಪಿಸಿದ ವಿವಿಧ ಭೌಗೋಳಿಕ ಪ್ರದೇಶಗಳ ಸದಸ್ಯರು ಆವರ್ತಕವಾಗಿ ಹಂಚಿಕೊಳ್ಳುತ್ತಾರೆ. ಅಂದರೆ ಆಫ್ರಿಕಾ, ಏಷ್ಯಾ, ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಮತ್ತು ಯುರೋಪ್‌ನ ಸದಸ್ಯರು ಸತತ ಮೂರು ವರ್ಷಗಳ ಅವಧಿಗೆ ಇದರ ಅಧ್ಯಕ್ಷೀಯತೆಯನ್ನು ಹೊಂದುತ್ತಾರೆ.



ಅಲಿಪ್ತ ಚಳವಳಿಯ ಪ್ರಧಾನ ರೂವಾರಿ ನೆಹರೂ

ಅಲಿಪ್ತ ಬಣದ ಹುಟ್ಟಿನ ಐತಿಹಾಸಿಕ ಕಾರಣಗಳು

- ಎರಡನೇ ವಿಶ್ವ ಯುದ್ಧದ ನಂತರ ಜಾಗತಿಕವಾಗಿ ಹಲವು ಮಹತ್ತರ ಬೆಳವಣಿಗೆಗಳು ನಡೆದವು. ಅವುಗಳಲ್ಲಿ ಒಂದು ಬ್ರಿಟನ್ ಸಾಮ್ರಾಜ್ಯಶಾಹಿ ತನ್ನ ಬಹುತೇಕ ವಸಾಹತುಗಳನ್ನು ಕಳೆದುಕೊಂಡಿತು.
- ಚೀನಾದಲ್ಲಿ ಅಲ್ಲಿನ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಅಂತರ್ಯುದ್ಧ ನಡೆದು ಕ್ರಾಂತಿಯಾಗಿ ನವ ಪ್ರಜಾತಾಂತ್ರಿಕ ವ್ಯವಸ್ಥೆ ಸ್ಥಾಪನೆಯಾಯಿತು.
- ಸೋವಿಯತ್ ರಷ್ಯಾದ ಜಾಗತಿಕ ಪ್ರಭಾವ ಹೆಚ್ಚಾಯಿತು. ಜಪಾನ್ ಕೂಡ ತನ್ನ ವಸಾಹತುಗಳನ್ನು ಕಳೆದುಕೊಂಡು ಹಲವು ನಿರ್ಬಂಧಗಳಿಗೆ ಒಳಗಾಗಿ ಬಲಹೀನ ಸ್ಥಿತಿಗೆ ಇಳಿಯಿತು.
- ಅಮೆರಿಕ ಆರ್ಥಿಕವಾಗಿ ರಾಜಕೀಯವಾಗಿ ಮತ್ತಷ್ಟು ಬಲಾಢ್ಯವಾಯಿತು.
- ಜರ್ಮನಿ ಪಶ್ಚಿಮ ಹಾಗೂ ಪೂರ್ವ ಎಂದು ಎರಡು ಹೋಳಾಗಿ ಮಧ್ಯೆ ಬರ್ಲಿನ್ ಗೋಡೆ ನಿರ್ಮಾಣವಾಯಿತು.
- ಪಶ್ಚಿಮ ಜರ್ಮನಿ ಅಮೆರಿಕ ನೇತೃತ್ವದ ಬಂಡವಾಳಶಾಹಿ ಬಣದೊಂದಿಗೆ, ಪೂರ್ವ ಜರ್ಮನಿ ಸೋವಿಯತ್ ರಷ್ಯಾ ನೇತೃತ್ವದ ಕಮ್ಯುನಿಸ್ಟ್ ಸಮಾಜವಾದಿ ಬಣದೊಂದಿಗೆ ಗುರುತಿಸಿಕೊಂಡಿತು.
- ಅದೇ ರೀತಿ ಜಪಾನಿನ ವಸಾಹತು ಆಗಿದ್ದ ಕೊರಿಯಾ ಕೂಡ ಇಬ್ಭಾಗವಾಗಿ ಉತ್ತರ ಕೊರಿಯಾ ಸೋವಿಯತ್ ರಷ್ಯಾದ ಬಣವಾದರೆ, ದಕ್ಷಿಣ ಕೊರಿಯಾ ಅಮೆರಿಕ ಸಂಯುಕ್ತ ಸಂಸ್ಥಾನದ ಬಣವಾಯಿತು. ವಿಶ್ವ ಮುಖ್ಯವಾಗಿ ಈ ಎರಡು ಬಣಗಳಿಗೆ ಸೇರಿಕೊಂಡಿತು. ಅದರಲ್ಲಿ ಕೆಲವು ರಾಷ್ಟ್ರಗಳು ಒಗ್ಗೂಡಿ 'ಅಲಿಪ್ತರಾಷ್ಟ್ರಗಳು' ಎಂದು ಪ್ರತ್ಯೇಕವಾಗಿ ಗುರುತಿಸಿಕೊಂಡವು.ಭಾರತದ ಪ್ರಥಮ ಪ್ರಧಾನಿ ಜವಾಹರ್ ಲಾಲ್ ನೆಹರೂ ಅವರು ಈ ಅಲಿಪ್ತ ದೇಶಗಳ ಬಣದ ಪ್ರಧಾನ ರೂವಾರಿಯಾಗಿದ್ದರು.

ವಿಕಾಸ ಮತ್ತು ಸಮಕಾಲೀನ ಪ್ರಸ್ತುತತೆ

ಶೀತಲ ಸಮರದ ನಂತರದ ಯುಗ: ಶೀತಲ ಸಮರದ ಅಂತ್ಯದೊಂದಿಗೆ, ಜಾಗತಿಕ ರಾಜಕೀಯ ವಿದ್ಯಮಾನಗಳು ಬದಲಾದ ಹಿನ್ನೆಲೆಯಲ್ಲಿ ಮತ್ತು NAM ನ ಪ್ರಸ್ತುತತೆಯನ್ನು ಕೆಲವರು ಪ್ರಶ್ನಿಸಿದರು. ಆದರೂ ಬಡತನ, ಅಸಮಾನತೆ ಮತ್ತು ಸುಸ್ಥಿರ ಅಭಿವೃದ್ಧಿಯಂತಹ ಜಾಗತಿಕ ಕಾಳಜಿಯ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಶ್ರಮಿಸುವುದನ್ನು ಈ ಅಲಿಪ್ತ ಒಕ್ಕೂಟವು ಮುಂದುವರೆಸಿದೆ.

ಹೆಚ್ಚಿದ ಸದಸ್ಯತ್ವ:ಮುಂದುವರೆದು ಅಲಿಪ್ತ ಚಳವಳಿಯ ಸದಸ್ಯತ್ವವು 120 ಸದಸ್ಯ ರಾಷ್ಟ್ರಗಳಷ್ಟು ವಿಸ್ತರಿಸಿದ್ದು ಇದು ವೈವಿಧ್ಯಮಯ ಸಂಸ್ಕೃತಿಗಳು, ರಾಜಕೀಯ ವ್ಯವಸ್ಥೆಗಳು ಮತ್ತು ಅಭಿವೃದ್ಧಿಯ ವಿವಿಧ ಹಂತಗಳನ್ನು ಪ್ರತಿನಿಧಿಸುತ್ತದೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಪರ ವಕಾಲತ್ತು: ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅಂತರರಾಷ್ಟ್ರೀಯ ವೇದಿಕೆಯಲ್ಲಿ ತಮ್ಮ ಕಳವಳಗಳನ್ನು ವ್ಯಕ್ತಪಡಿಸಲು NAM ಒಂದು ಮಹತ್ವದ ವೇದಿಕೆಯಾಗಿ ಉಳಿದಿದೆ. ಇದು ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಸಮಾನತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತದೆ.

ಪ್ರಜಾಪ್ರಭುತ್ವದ ಉನ್ನತ ಮೌಲ್ಯಗಳ ಸಮರ್ಥನೆ: ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಹೆಚ್ಚಿನ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದು ಮತ್ತು ಅಂತರರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯ ಪ್ರಾಮುಖ್ಯತೆಯ ಬಗ್ಗೆ NAM ಒತ್ತಿಹೇಳುತ್ತದೆ. ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಸುಧಾರಣೆಗಳನ್ನು ಮಾಡುವಂತೆ, ಎಲ್ಲಾ ದೇಶಗಳನ್ನು ಹೆಚ್ಚು ಒಳಗೊಳ್ಳುವಂತೆ ಮತ್ತು ಪ್ರತಿನಿಧಿಸುವಂತೆ ಮಾಡಲು ಇದು ಕರೆ ನೀಡುತ್ತದೆ.

ಪ್ರಸ್ತುತ ಸವಾಲುಗಳು: ಸಮಕಾಲೀನ ಭೌಗೋಳಿಕ ರಾಜಕೀಯ ವಿದ್ಯಮಾನಗಳಲ್ಲಿ, NAM ಆಂತರಿಕ ಒಗ್ಗಟ್ಟು, ಸದಸ್ಯ ರಾಷ್ಟ್ರಗಳ ನಡುವಿನ ವಿವಿಧ ರಾಜಕೀಯ ಸಿದ್ಧಾಂತಗಳು ಮತ್ತು ಹೊಸ ಜಾಗತಿಕ ವಾಸ್ತವಗಳಿಗೆ ಹೊಂದಿಕೊಳ್ಳುವ ಅಗತ್ಯಕ್ಕೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುತ್ತಿದೆ.

ಪ್ರಮುಖ ಲಕ್ಷಣಗಳು ಮತ್ತು ಐತಿಹಾಸಿಕ ಹಿನ್ನೆಲೆ

ರಚನೆ: 1955 ರಲ್ಲಿ ಇಂಡೋನೇಷ್ಯಾದ ಬ್ಯಾಂಡಂಗ್‌ನಲ್ಲಿ ನಡೆದ ಏಷ್ಯನ್-ಆಫ್ರಿಕನ್ ಸಮ್ಮೇಳನದ ಸಮಯದಲ್ಲಿ ಅಲಿಪ್ತ ಚಳವಳಿಯ ಕಲ್ಪನೆಯು ಹೊರಹೊಮ್ಮಿತು. ಈ ಚಳವಳಿಯ ಹಿಂದಿನ ಪ್ರಮುಖ ನಾಯಕರು ಭಾರತದ ಜವಾಹರಲಾಲ್ ನೆಹರೂ, ಇಂಡೋನೇಷ್ಯಾದ ಸುಕರ್ನೋ, ಯುಗೊಸ್ಲಾವಿಯಾದ ಜೋಸಿಪ್ ಬ್ರೋಜ್ ಟಿಟೊ, ಘಾನಾದ ಕ್ವಾಮೆ ಕ್ರುಮಾ ಮತ್ತು ಈಜಿಪ್ಟ್‌ನ ಜಮಾಲ್ ಅಬ್ದುಲ್ ನಾಸರ್.

ನಂಬಿಕೆಗಳು ಮತ್ತು ತತ್ವಗಳು: ಈ ಆಂದೋಲನವು ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಅನುಸರಿಸಲು ಯಾವುದೇ ಪ್ರಮುಖ ಶಕ್ತಿ ಗುಂಪಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ತಮ್ಮದೇ ಆದ ವೇದಿಕೆಯನ್ನು ಒದಗಿಸುವ ಗುರಿಯನ್ನು ಹೊಂದಿತ್ತು. NAM ನ ತತ್ವಗಳು ಯಾವುದೇ ದೇಶಗಳ ಸಾರ್ವಭೌಮತ್ವಕ್ಕೆ ಗೌರವ, ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು ಮತ್ತು ಎಲ್ಲಾ ರಾಷ್ಟ್ರಗಳ ಶಾಂತಿಯುತ ಸಹಬಾಳ್ವೆಯನ್ನು ಒಳಗೊಂಡಿವೆ.

ಮೊದಲ ಸಮ್ಮೇಳನ: 1961ರಲ್ಲಿ ಯುಗೊಸ್ಲಾವಿಯಾದ ಬೆಲ್‌ಗ್ರೇಡ್‌ನಲ್ಲಿ ಅಲಿಪ್ತ ರಾಷ್ಟ್ರಗಳ ಮುಖ್ಯಸ್ಥರ ಮೊದಲ ಅಧಿಕೃತ ಸಮ್ಮೇಳನವನ್ನು ನಡೆಸಲಾಯಿತು. ಈ ಮೂಲಕ ಅಲಿಪ್ತ ಚಳವಳಿಯ ಔಪಚಾರಿಕ ಸ್ಥಾಪನೆಯಾಯಿತು.

ಪಂಚಶೀಲ ತತ್ವಗಳು: ಪಂಚಶೀಲ ಎಂದು ಕರೆಯಲ್ಪಡುವ ಶಾಂತಿಯುತ ಸಹಬಾಳ್ವೆಯ ಐದು ತತ್ವಗಳನ್ನು ಅಲಿಪ್ತ ರಾಷ್ಟ್ರಗಳ(NAM) ಮಾರ್ಗದರ್ಶಿ ತತ್ವಗಳಾಗಿ ಅಳವಡಿಸಿಕೊಳ್ಳಲಾಗಿದೆ. ಈ ತತ್ವಗಳು

1. ಪರಸ್ಪರರ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಪರಸ್ಪರ ಗೌರವ.
2. ಪರಸ್ಪರ ಆಕ್ರಮಣಶೀಲತೆಯನ್ನು ಹೊಂದದಿರುವುದು.
3. ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.
4. ಸಮಾನತೆ ಮತ್ತು ಪರಸ್ಪರ ಲಾಭ ಅಥವಾ ಒಳಿತಿನತ್ತ ನಡೆಯುವುದು.
5. ಶಾಂತಿಯುತ ಸಹಬಾಳ್ವೆಯ ತತ್ವಗಳನ್ನು ಒಳಗೊಂಡಿವೆ.

ಶೀತಲ ಸಮರ: ಶೀತಲ ಸಮರದ ಸಮಯದಲ್ಲಿ, ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಮತ್ತು ಯುನೈಟೆಡ್ ಸ್ಟೇಟ್ಸ್ ನೇತೃತ್ವದ ಪಾಶ್ಚಿಮಾತ್ಯ ಬಣ ಅಥವಾ ಸೋವಿಯತ್ ಯೂನಿಯನ್ ನೇತೃತ್ವದ ಪೂರ್ವ ಬಣದೊಂದಿಗೆ ಗುರುತಿಸಿಕೊಳ್ಳಲು ಬಯಸದೇ ಇದ್ದ ದೇಶಗಳಿಗೆ ನಾಮ್ ವೇದಿಕೆ ಒದಗಿಸಿತು.

ಜಾಗತಿಕ ಶಾಂತಿಯ ಪ್ರಚಾರ: ನಾಮ್ (NAM) ನಿಶ್ಯಸ್ತ್ರೀಕರಣ ಮತ್ತು ಸಂಘರ್ಷಗಳ ಶಾಂತಿಯುತ ಪರಿಹಾರವನ್ನು ಸಕ್ರಿಯವಾಗಿ ಉತ್ತೇಜಿಸಿತು. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ಸಾಮಾಜಿಕ-ಆರ್ಥಿಕ ಅಸಮಾನತೆಗಳನ್ನು ಪರಿಹರಿಸಲು ಹೊಸ ಅಂತರರಾಷ್ಟ್ರೀಯ ಆರ್ಥಿಕ ಕ್ರಮವನ್ನು ಸ್ಥಾಪಿಸಲು ಇದು ಮುಂಗಾಣ್ಕೆಯನ್ನು ನೀಡಿತು.

ಒಟ್ಟಿನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಒಂದು ರಾಜತಾಂತ್ರಿಕ ವೇದಿಕೆಯನ್ನು ರೂಪಿಸುವಲ್ಲಿ, ಅವರ ಹಿತಾಸಕ್ತಿಗಳನ್ನು ಸಮರ್ಥಿಸುವಲ್ಲಿ ಮತ್ತು ಶಾಂತಿ, ನ್ಯಾಯ ಮತ್ತು ಪರಸ್ಪರ ಸಹಕಾರದ ತತ್ವಗಳ ಆಧಾರದ ಮೇಲೆ ವಿಶ್ವ ಕ್ರಮವನ್ನು ಉತ್ತೇಜಿಸುವಲ್ಲಿ ಅಲಿಪ್ತ ಚಳವಳಿಯು ನಿರ್ಣಾಯಕ ಪಾತ್ರವನ್ನು ವಹಿಸಿದೆ. ಜಾಗತಿಕ ರಾಜಕೀಯದಲ್ಲಿನ ಬದಲಾವಣೆಗಳ ಹೊರತಾಗಿಯೂ, ರಾಷ್ಟ್ರಗಳ ನಡುವೆ ಸಂವಾದ ಮತ್ತು ಸಹಯೋಗವನ್ನು ಬೆಳೆಸುವಲ್ಲಿ NAM ಒಂದು ಮಟ್ಟಿನಲ್ಲಿ ಶಕ್ತಿಬಣವಾಗಿ ಮುಂದುವರೆದಿದೆ. ❖

ನ್ಯಾಯಾಲಯದಲ್ಲಿ ನೇಮಕಾತಿ

ಜಿಲ್ಲಾ ನ್ಯಾಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ಹುದ್ದೆಗಳ ಸಂಖ್ಯೆ, ವಿದ್ಯಾರ್ಹತೆ, ಆಯ್ಕೆ ವಿಧಾನ, ಸಂದರ್ಶನ ಕುರಿತಾದ ಮಾಹಿತಿ ಇಲ್ಲಿದೆ.

ಎ.ಎಂ.ಸುರೇಶ

ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯದಲ್ಲಿ ಖಾಲಿ ಇರುವ ಬೆರಳಚ್ಚುಗಾರ (ಟೈಪಿಸ್ಟ್) ಮತ್ತು ಜವಾನ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲಾಗುತ್ತಿದ್ದು, ಮಾರ್ಚ್ 20ರವರೆಗೆ ಕಾಲಾವಕಾಶ ಇದೆ.

ಬೆರಚ್ಚುಗಾರರ 30 ಹುದ್ದೆ ಹಾಗೂ ಜವಾನರ 28 ಹುದ್ದೆಗಳು ಖಾಲಿ ಇದ್ದು, ಇವುಗಳ ಭರ್ತಿ ಪ್ರಕ್ರಿಯೆ ಮೀಸಲಾತಿಗೆ ಅನುಗುಣವಾಗಿ, ಅರ್ಹತೆ ಆಧಾರದ ಮೇಲೆ ನಡೆಯಲಿದೆ.

ವಿದ್ಯಾರ್ಹತೆ:ಬೆರಚ್ಚುಗಾರ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವವರು ಪಿಯುಸಿ ಅಥವಾ ಮೂರು ವರ್ಷದ ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟಿಸ್ ಪಾಸಾಗಿರಬೇಕು. ಪಿಯುಸಿ ವಿದ್ಯಾರ್ಹತೆ ಹೊಂದಿರುವವರು ಕಡ್ಡಾಯವಾಗಿ ಕನ್ನಡ, ಇಂಗ್ಲಿಷ್ ಸೀನಿಯರ್ ಗ್ರೇಡ್ ಟೈಪ್‌ರೈಟಿಂಗ್ ಪರೀಕ್ಷೆ ಪಾಸಾಗಿರಬೇಕು. ಜವಾನ ಹುದ್ದೆಗೆ ಅರ್ಜಿ ಸಲ್ಲಿಸುವವರು ಎಸ್ಸೆಸ್ಸೆಲ್ಸಿ ಪಾಸಾಗಿರಬೇಕು. ಕನ್ನಡ ಓದಲು ಹಾಗೂ ಬರೆಯಲು ಗೊತ್ತಿರಬೇಕು.



ಆಯ್ಕೆ ವಿಧಾನ: ಟೈಪಿಂಗ್ ಸ್ಪೀಡ್ ಪರೀಕ್ಷಿಸಲು ಬೆರಚ್ಚುಗಾರ ಹುದ್ದೆಗೆ 100 ಅಂಕಗಳ ಅರ್ಹತಾ ಪರೀಕ್ಷೆ ಇರುತ್ತದೆ. ಅದರಲ್ಲಿ ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಇದಕ್ಕೆ 15 ನಿಮಿಷಗಳ ಕಾಲಾವಕಾಶ ನೀಡಲಾಗುತ್ತದೆ.

ಇದರಲ್ಲಿ ಗಳಿಸುವ ಅಂಕಗಳನ್ನು ಆಧರಿಸಿ 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನಕ್ಕೆ ಗರಿಷ್ಠ 5 ಅಂಕ ನಿಗದಿಪಡಿಸಲಾಗಿದೆ. ಅರ್ಹತಾ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಆಧರಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಜವಾನ ಹುದ್ದೆಗೆ ಎಸ್ಸೆಸ್ಸೆಲ್ಸಿಯಲ್ಲಿ ಗಳಿಸಿರುವ ಅಂಕಗಳನ್ನು ಆಧರಿಸಿ 1:10ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನಕ್ಕೆ 10 ಅಂಕಗಳನ್ನು ನಿಗದಿಪಡಿಸಲಾಗಿದೆ.

ವಯೋಮಿತಿ:ಎರಡೂ ಹುದ್ದೆಗಳಿಗೆ ಕನಿಷ್ಠ ವಯೋಮಿತಿ 18 ವರ್ಷ. ವಿವಿಧ ಮೀಸಲಾತಿ ಪ್ರವರ್ಗಗಳಿಗೆ ಅನುಗುಣವಾಗಿ ಗರಿಷ್ಠ ವಯೋಮಿತಿ 40 ವರ್ಷ. ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ವಿದ್ಯಾರ್ಹತೆ ಮತ್ತು ಮೀಸಲಾತಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನಿಗದಿತ ದಿನಾಂಕದ ಒಳಗಾಗಿ ಪಡೆದುಕೊಂಡು ಅರ್ಜಿಯೊಂದಿಗೆ ಲಗತ್ತಿಸಬೇಕು. ಅರ್ಜಿ ಸಲ್ಲಿಸುವ ಮುನ್ನ ಅಧಿಸೂಚನೆಯನ್ನು ಸ್ಪಷ್ಟವಾಗಿ ಓದಿಕೊಂಡು, ಅದರಲ್ಲಿ ಕೇಳಿರುವ ಎಲ್ಲ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸಬೇಕು

ಮೀಸಲಾತಿಗೆ ಅನುಗುಣವಾಗಿ ಹುದ್ದೆಗಳ ಹಂಚಿಕೆಯಾಗಿದ್ದು, ಯಾವ ಪ್ರವರ್ಗದಡಿ ಎಷ್ಟು ಹುದ್ದೆಗಳು ಲಭ್ಯ ಇವೆ ಎಂಬುದನ್ನು ವಿವರವಾದ ಅಧಿಸೂಚನೆ ಓದುವ ಮೂಲಕ ತಿಳಿದುಕೊಳ್ಳಬಹುದು. ವೆಬ್‌ಸೈಟ್ ವಿಳಾಸ: https://bengalururural.dcourts.gov.in/online-recruitment/

ವೇತನ ಶ್ರೇಣಿ: ಬೆರಚ್ಚುಗಾರ ಹುದ್ದೆಗೆ 21,400–42,000 ವೇತನ ಶ್ರೇಣಿ ಹಾಗೂ ಜವಾನ ಹುದ್ದೆಗೆ 17,000–28,950 ವೇತನ ಶ್ರೇಣಿ ನಿಗದಿಯಾಗಿದೆ. ಈಗ ರಚನೆಯಾಗಿರುವ 7ನೇ ವೇತನ ಆಯೋಗದ ಶಿಫಾರಸುಗಳು ಜಾರಿಯಾದರೆ, ಆಗ ವೇತನ ಶ್ರೇಣಿಯಲ್ಲಿ ಬದಲಾವಣೆಯಾಗಲಿದೆ. ಆಯ್ಕೆಯಾದವರಿಗೆ ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ಅನ್ವಯವಾಗಲಿದೆ.

ಎರಡೂ ಹುದ್ದೆಗಳಿಗೆ ಸಾಮಾನ್ಯ ವರ್ಗದಡಿ ಬರುವ ಅಭ್ಯರ್ಥಿಗಳಿಗೆ ₹200 ಹಾಗೂ ಇತರರಿಗೆ ₹100 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

SECOND LANGUAGE- ENGLISH

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

Read the following extracts and answer the questions that follow:

28. 'A frightful proposition, Swami thought'.

a. What was the frightful proposition?

Ans:- Swami can sleep alone in his father's office room on that night was the frightful proposition, Swami thought.

b. Who made it?

Ans:- Swami's father made it.

c. Why did Swami regard it as 'a frightful proposition'?

Ans:- He had always slept beside his granny and any change in this arrangement kept him trembling and awake all the night. So he regarded it as a frightful proposition.

29. 'I'am new to Mumbai, but I have noticed that people here are afraid'.

a. Who is the speaker?

Ans:- Baleshwar is the speaker.

b. Why had the speaker come to Mumbai?

Ans:- The speaker Baleshwar came to Mumbai to hunt (seek) the job.

c. Why were the people afraid?

Ans:- The people were afraid because if they are getting trapped in the courts or with Police.

30. 'Tomorrow morning we perform for the boy-yes?' he said.

a. Who is the speaker?

Ans:- Ustad Sahib or Ustad Allah Rakha is the speaker.

b. Who is the 'boy' here?

Ans:- Here the boy is Ananth, the sick boy.

c. Why would they perform for the boy?

Ans:- They would perform for the boy because he was in death-bed and this was his lost desire.

31. 'We were crowded in the cabin' Nota soul would dare to sleep'.

a. Who does the word 'we' refer to here?

Ans: Here we means all the Sailors in the Ship.

b. Why were they crowded in the cabin?

Ans: They were crowded in the Cabin because the ship was cought by the storm.

c. Not a soul would dare to sleep' – why was it so?

Ans: Because all were frightened so much what would happen next, they don't know. The hungry sea was roaring like a hungry lion.

Read the passage and answer the Question (32-35)

Charlie Chaplin (Charles spencer chaplin) was born on 16th April at Kennington in London. At an early age, Charlie performed on stage with his father and brother, Sydney . By the age of eighth, charlie chaplin was already a seasoned stage performer. His skill as a comedian developed under the guidance of Fred Karno.

32. Who is the paragraph about ?

33. Which sentence in the paragraph suggests that he was born in a family of actors. Write that sentence

34. Charlie Chaplin was a great comedian (true/false) tick the right one

35. Who was his tutor in the art of acting ?

Answer

32. Who is the paragraph about?

Ans: The paragraph describes about charley Chaplin (Charles spencerchaplin)

33. Which sentence in the paragraph suggests that he was born in a family of actors. Write that sentence.

Ans : At an early age, Charlie performed stage with his father and brother.'

34. Charlie Chaplin was a great comedian (true/false) tick the right one.

Ans : true.

35. Who was his tutor in the art of acting ?

Ans : Fred karno was the tutor of Charlie Chaplin in the art if acting.

A dialogue is given below. Read it and answer the questions that follow (Questions 36 & 37)

Father : Father, I suggest we sell the Land

Grand Father : (keeps silent for a moment) No, we should not

Father : But, why ?

Grand Father : It is inherited it's my prized possession

36. The silence of the grand father Suggests his ________(willingness/unwillingness) to sell the land (tick the right underlined word)

37. Which word in the conversation above means 'property'?

Ans (36) unwillingness.

(37) prized possession

(Contd……)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

REVISION : MODEL QUESTIONS

18. Find the area of the parallelogram whose adjacent sides determined by vectors.

$$\vec{a} = 3\hat{i}+\hat{j}+4\hat{k} \quad \vec{b} = \hat{i}-\hat{j}+\hat{k}$$

$$\text{Ans :} - \vec{a}\times\vec{b} = \begin{vmatrix} \hat{i} & \hat{j} & \hat{k} \\ 3 & 1 & 4 \\ 1 & -1 & 1 \end{vmatrix}$$

$$= \hat{i}(1+4) - \hat{j}(3-4) + \hat{k}(-3-1)$$

$$= 5\hat{i}+\hat{j}-4\hat{k}$$

$$|\vec{a}\times\vec{b}| = \sqrt{25+1+16}$$

$$\text{Area of Paralellogram} = \sqrt{42} \text{ sq. units}$$

19. Obtain the projection of the vector.

$\vec{a} = 2\hat{i}+3\hat{j}+2\hat{k}$ **on the vector** $\vec{b} = \hat{i}+2\hat{j}+\hat{k}$

Ans:- $\vec{a}.\vec{b} = (2\hat{i}+3\hat{j}+2\hat{k})(\hat{i}+2\hat{j}+\hat{k})$

$$= 2+6+2 = 10$$

$$|\vec{b}| = \sqrt{1+4+1} = \sqrt{6}$$

$$\text{Projection of } \vec{a} \text{ on } \vec{b} = \frac{\vec{a}.\vec{b}}{|\vec{b}|} = \frac{10}{\sqrt{6}}$$

20. Find the equation of the plane passing through the intersection of planes x + y + z = 6 and 2x +3y +4z–5 = 0 and the point (1 1 1).

Ans:- Required eqn of plane is of the form

$$(x+y+z-6)+\lambda(2+3+4-5)=0$$

Passing through (1 1 1)

$$(1+1+1-6)+\lambda(2+3+4-5)=0$$

$$-3+\lambda 4=0 \Rightarrow \lambda=\frac{3}{4}$$

$$(x+y+z-6)+\frac{3}{4}(2x+3y+4z-5)=0$$

$$4x+4y+4z-24+6x+9y+12z-15=0$$

$$10x+13y+16z-39=0$$

21. A die is thrown. If E is the event 'the number appearing is a multiple of 3' and F be the event 'the number appearing is even'. Then prove that E and F are independent events.

Ans:- Sample space S={1, 2, 3, 4, 5, 6},

E={3,6}, F = {2, 4, 6} and $E\cap F = \{6\}$

$$P(E)=\frac{2}{6}=\frac{1}{3},\ P(F)=\frac{3}{6}=\frac{1}{2} \text{ and } P(E\cap F)=\frac{1}{6}$$

$$P(E).P(F)=\frac{1}{3}\times\frac{1}{2}=\frac{1}{6}$$

$$\Rightarrow P(E).P(F)= P(E\cap F)$$

$\therefore$ F and E are independent events.

22. Solve that the relation R in the set of all integers, Z defined by R={(a, b):2 divides (a – b)} is an equivalence relation.

Ans:- (i) (a a) $\in$ R; a – a = 0/2 = 0; R is reflexive

(ii) if $(a,\ b)\in R$ $(b,\ a)\in R$

$$\because \frac{a-b}{2} \Rightarrow -\left(\frac{b-a}{2}\right)$$

$$\text{R is symmetric} \Rightarrow \frac{b-a}{2}$$

(iii) if $(a,\ b)\in R$ $(b,\ c)\in R$

$$\because \frac{a-b}{2}, \frac{b-c}{2} \Rightarrow \frac{a-c}{2}$$

$\therefore$ R is Transitive, hence R is an equivalence relation.

23. Prove that

$$\tan^{-1}x+\tan^{-1}\left(\frac{2x}{1-x^2}\right)=\tan^{-1}\left(\frac{3x-x^3}{1-3x^2}\right) |x|<\frac{1}{\sqrt{3}}.$$

Ans:- $x=\tan\theta \Rightarrow \theta=\tan^{-1}x$

$$\text{R.H.S. } \tan^{-1}\left(\frac{3\tan\theta-\tan^3\theta}{1-3\tan^2\theta}\right)=\tan^{-1}(\tan 3\theta)$$

$$=3\theta=3\tan^{-1}x$$

$$\Rightarrow \tan^{-1}x+2\tan^{-1}x=\text{L.H.S}$$

24. For any square matrix A with real numbers. Prove that $A + A^1$ is a symmetric and $A - A^1$ is a skew symmetric.

Ans:- Consider $(A+A^1)^1 = A^1+(A^1)^1$

$$= A^1+A = A^1+A$$

$\therefore A+A^1$ Symmetric

Consider $(A-A)^1 = A^1-(A^1)^1$

$$= A^1-A$$

$$= -(A-A^1)$$

$\therefore A-A^1$ Skew Symmetric

25. If x = a (θ + sin θ) and y = a (1 – cos θ) P.T $\frac{dy}{dx} = \tan\frac{\theta}{2}$

$$\text{Soln :} - \frac{dy}{d\theta}=a\sin\theta; \quad \frac{dx}{d\theta}=a(1+\cos\theta)$$

$$\Rightarrow \frac{dy}{dx}=\frac{a\sin\theta}{a(1+\cos\theta)}=\frac{\not{2}\sin\theta/2\cos\theta/2}{\not{2}\cos^2\theta/2}=\tan\left(\frac{\theta}{2}\right)$$

26. Verify mean value theorem of f(x)=x^2 – 4x – 3 in the interval [a b] where if a = 1, b = 4

Ans:- f(x) is continuous in [1 4] and differentiable in (1, 4)

$$f(4)=-3; \quad f(1)=-6$$

$$\frac{f(b)-f(a)}{b-a}=f'(c) \Rightarrow \frac{-3+6}{4-1}=2c-4$$

$$\Rightarrow 2c-4=\frac{3}{3}=1 \Rightarrow 2c=1+4$$

$$\Rightarrow c=\frac{5}{2}\in(1 \quad 4)$$

15 ರಾಜ್ಯಗಳ 75 ಮಹಿಳಾ ಸಂಘಟನೆಗಳ ನಾಯಕಿಯರು ಭಾಗಿ

‘ನಾನೂ ರಾಣಿ ಚನ್ನಮ್ಮ’ ಸಮಾವೇಶ

ಪ್ರದೀಪ ಮೇಲಿನಮನಿ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಇಲ್ಲಿನ ಕೋಟೆ ಆವರಣದಲ್ಲಿ ದೇಶದ 75ಕ್ಕೂ ಹೆಚ್ಚು ಸಂಘಟನೆಗಳು ಬುಧವಾರ ಹಮ್ಮಿಕೊಂಡಿದ್ದ ‘ನಾನೂ ರಾಣಿ ಚನ್ನಮ್ಮ’ ರಾಷ್ಟ್ರೀಯ ಮಹಿಳಾ ಸಮಾವೇಶದಲ್ಲಿ 15 ರಾಜ್ಯಗಳ ಮಹಿಳಾ ಮುಖಂಡರು ಭಾಗವಹಿಸಿ ಸ್ತ್ರೀಶಕ್ತಿ ಪ್ರದರ್ಶಿಸಿದರು.

ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ರಾಣಿ ಚನ್ನಮ್ಮನ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಜ್ಯೋತಿ ಮೆರವಣಿಗೆಗೆ ಚಾಲನೆ ನೀಡಿದರು.

‘ನಮ್ಮ ಭೂಮಿ ನಮ್ಮ ಹಕ್ಕು. ಅದನ್ನು ಪಡೆದೇ ತೀರುತ್ತೇವೆ. ಸಂವಿಧಾನ ರಕ್ಷಿಸಲು ನಾವು ಬದ್ಧರಾಗಿದ್ದೇವೆ. ನಮ್ಮ ಸ್ವಾತಂತ್ರ್ಯ ಹಕ್ಕು ರಕ್ಷಿಸಿಕೊಳ್ಳಲು ಬದ್ಧ-ರಾಗಿದ್ದೇವೆ. ನಿರಂಕುಶಮತಿಯಾದ ಬಂಡವಾಳಶಾಹಿ ಆಡಳಿತದ ವಿರುದ್ಧ ನಿಂತು ನ್ಯಾಯ- ಸಮಾನತೆ ಕೇಳುತ್ತೇವೆ’ ಎಂಬ ನಾಮಫಲಕ ಹಿಡಿದು ಘೋಷಣೆ ಕೂಗಿದರು.

ದೇಶಕ್ಕಾಗಿ ಹೋರಾಡಿದ ಮಹಿಳೆಯರ ಭಾವಚಿತ್ರ ಹೊಂದಿದ ಭಿತ್ತಿಚಿತ್ರಗಳ ಪ್ರದರ್ಶನವನ್ನು ಸಾಹಿತಿ ಮಾಲತಿ ಪಟ್ಟಣಶೆಟ್ಟಿ ಉದ್ಘಾಟಿಸಿದರು. ಮಹಾರಾಷ್ಟ್ರದ ಮೇಘಾ ಪನ್ಸಾರೆ, ಆನಿರಾಜಾ, ಅಖಿಲ ಭಾರತ ದಲಿತ ಮಹಿಳಾ ಅಧಿಕಾರ ಮಂಚ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿರಾಮಿ ಜ್ಯೋತಿ, ಸಾಮಾಜಿಕ ಕಾರ್ಯಕರ್ತೆ ದೆಹಲಿಯ ಶಬ್ನಮ್ ಹಶ್ಮಿ, ಸಾಮಾಜಿಕ ಕಾರ್ಯಕರ್ತೆಯರಾದ ಲೀನಾ ಡಬಿರು, ರುತ್ ಮನೋರಮಾ, ತೆಲಂಗಾಣದ ಮೀರಾ ಸಂಘಮಿತ್ರ, ರಾಜಸ್ಥಾನದ ನಿಶಾ ಸಿದ್ದು, ಡಾ.ಎಚ್.ಎಸ್. ಅನುಪಮಾ, ಬಾನು ಮುಷ್ತಾಕ್, ಸಬಿಹಾ ಭೂಮಿಗೌಡ, ಮೀನಾಕ್ಷಿ ಬಾಳಿ, ಸಬಿತಾ ಬನ್ನಾಡಿ, ಅಖಿಲಾ ವಿದ್ಯಾಸಂದ್ರ, ಸುಶೀಲಾ, ಶೈಲಜಾ ಹಿರೇಮಠ ಶಾಂತಲಾ ದಾಮ್ಲೆ, ರೋಹಿಣಿ ಪಾಟೀಲ ಸೇರಿದಂತೆ ಹಲವರು ನೇತೃತ್ವ ವಹಿಸಿದ್ದರು.

ರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿ ಗಳಿಸಿದ ಜಯಕ್ಕೆ ಈಗ 200 ವರ್ಷ ತುಂಬಿದ ಹಿನ್ನೆಲೆಯಲ್ಲಿ ಈ ಸಮಾವೇಶ ನಡೆಯಿತು. 3,000ಕ್ಕೂ ಹೆಚ್ಚು ಮಹಿಳೆಯರು ಸೇರಿದ್ದರು.



ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನಲ್ಲಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರ ಚಿತ್ರ ಪ್ರದರ್ಶನವನ್ನು ಸಾಹಿತಿ ಮಾಲತಿ ಪಟ್ಟಣಶೆಟ್ಟಿ ಉದ್ಘಾಟಿಸಿದರು. ಸಾಮಾಜಿಕ ಹೋರಾಟಗಾರ ಎಸ್‌ ಆರ್‌ ಹಿರೇಮಠ, ಬಿ.ಎಲ್‌ ಪಾಟೀಲ ಪಾಲ್ಗೊಂಡಿದ್ದರು

8 ನಿರ್ಣಯಗಳ ಅಂಗೀಕಾರ

- ನಮ್ಮ ದೇಶ, ಜನರನ್ನು ಪುನರ್ ಸಂಘಟಿಸುವ ಪ್ರತಿಜ್ಞೆ
- ಭೂಮಿ, ಜನ, ಘನತೆ, ಜೀವನ ಮಾರ್ಗ ರಕ್ಷಣೆಗೆ ಪಣ
- ಸಂವಿಧಾನದ ಎಲ್ಲ ಹಕ್ಕು ಎಲ್ಲರಿಗೂ ದೊರಕಿಸಲು ಜೀವನ ಮುಡಿಪು
- ನ್ಯಾಯ, ಸ್ವಾತಂತ್ರ್ಯ ಸಮಾನತೆ, ಸಹೋದರತ್ವಕ್ಕೆ ಹೋರಾಡಲು ಪಣ
- ಸಾಮಾಜಿಕ ಬಾಂಧವ್ಯ, ಸೌಹಾರ್ದವನ್ನು ಕಾಯ್ದು ಕೊಳ್ಳಲು ಆದ್ಯತೆ
- ನಿರಂಕುಶ, ಬಂಡವಾಳಶಾಹಿ ನೀತಿ ವಿರುದ್ಧ ಅಭಿಯಾನ
- ಸಂವಿಧಾನದ ಆಶಯದಂತೆ ಎಲ್ಲರನ್ನೂ ಒಳಗೊಂಡ ಭಾರತದ ಪುನರುಜ್ಜೀವನಕ್ಕೆ ಒತ್ತು



ಅಳವಂಡಿ ಉತ್ಸವ

ರಥೋತ್ಸವ ಸಂಭ್ರಮ... ಕೊಪ್ಪಳ ತಾಲ್ಲೂಕಿನ ಅಳವಂಡಿ ಗ್ರಾಮದ ಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವ ಅಂಗವಾಗಿ ಬುಧವಾರ ನಡೆದ ಮಹಾರಥೋತ್ಸವ ಕಣ್ತುಂಬಿಕೊಳ್ಳಲು ಸೇರಿದ್ದ ಭಕ್ತರ ದಂಡು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಎಎಸ್‌ಐ ಅಮಾನತು

ಬೀದರ್: ವ್ಯಕ್ತಿಯೊಂದಿಗೆ ಅನುಚಿತವಾಗಿ ವರ್ತಿಸಿ, ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ ಹುಲಸೂರ ಪೊಲೀಸ್ ಠಾಣೆ ಎಎಸ್‌ಐ ಶಾವುರಾಜ್ ಅವರನ್ನು ಬುಧವಾರ ಕೆಲಸದಿಂದ ಅಮಾನತಗೊಳಿಸಲಾಗಿದೆ.

‘ಹುಲಸೂರ ತಾಲ್ಲೂಕಿನ ಬೇಲೂರು ಗ್ರಾಮದ ವ್ಯಕ್ತಿಯೊಬ್ಬರು ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಕಬ್ಬು ಸುಟ್ಟು ಹೋಗಿರುವ ಬಗ್ಗೆ ದೂರು ಕೊಡಲು ಠಾಣೆಗೆ ಹೋಗಿದ್ದರು. ಎಎಸ್‌ಐ ಶಾವುರಾಜ್ ಅವರು ಸ್ಥಳಕ್ಕೆ ತೆರಳಿದ್ದಾಗ ದೂರುದಾರರೊಂದಿಗೆ ಅನುಚಿತವಾಗಿ ವರ್ತಿಸಿ, ಹಣಕ್ಕೆ ಬೇಡಿಕೆ ಇಟ್ಟಿರುವುದು ಪ್ರಾಥಮಿಕ ವಿಚಾರಣೆಯಿಂದ ಗೊತ್ತಾಗಿದೆ. ಈ ಕುರಿತ ವಿಡಿಯೊ ತುಣುಕುಗಳಿಂದ ಇದು ಸಾಬೀತಾಗಿದೆ. ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ’ ಎಂದು ಎಸ್ಪಿ ಚನ್ನಬಸವಣ್ಣ ಎಸ್.ಎಲ್. ತಿಳಿಸಿದ್ದಾರೆ.

ಮಗನನ್ನು ಸರಪಳಿಯಿಂದ ಕಟ್ಟಿ ಹಾಕಿದ ದಂಪತಿ

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ): ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ಅಸ್ಸಾಂನ ಕಾರ್ಮಿಕ ದಂಪತಿ, 11 ವರ್ಷದ ಮಗನನ್ನು ಸರಪಳಿಯಿಂದ ಕಟ್ಟಿ ಮನೆಯೊಳಗೆ ಕೂಡಿ ಹಾಕುತ್ತಿದ್ದ ಘಟನೆಯು ತಾಲ್ಲೂಕಿನ ಕ್ಯಾನಹಳ್ಳಿಯಲ್ಲಿ ಬುಧವಾರ ಬೆಳಕಿಗೆ ಬಂದಿದೆ.

ಗ್ರಾಮದ ಮಲ್ಲೇಶ್ ಎಂಬುವವರ ಕಾಫಿ ತೋಟದಲ್ಲಿ ಕಾಫಿ ಹಣ್ಣು ಕೊಯ್ಲಿಗಾಗಿ ಬಂದಿದ್ದ ಅಮೀರ್ ಹುಸೇನ್– ಹಸೀನಾಬಾನು ದಂಪತಿ, ತಮ್ಮ ಪುತ್ರನನ್ನು ಕೂಡಿ ಹಾಕಿದ್ದರು.

ಮುಖ್ಯಾಂಶಗಳು

- ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ಅಸ್ಸಾಂನ ಕಾರ್ಮಿಕ ದಂಪತಿ
- ಆಸ್ಪತ್ರೆಗೆ ಕರೆದೊಯ್ದು ಬಾಲಕನಿಗೆ ಚಿಕಿತ್ಸೆ
- ವರದಿ ಆಧರಿಸಿ ಕ್ರಮ– ಡಿವೈಎಸ್ಪಿ

ದಂಪತಿಗೆ 7 ಮಕ್ಕಳಿದ್ದು, ಈ ಬಾಲಕ ಮಾನಸಿಕ ಅಸ್ವಸ್ಥ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ, ಗ್ರಾಮಾಂತರ ಠಾಣೆ ಪಿಎಸ್‌ಐ ಖತೀಜಾ ಹಾಗೂ ಸಿಬ್ಬಂದಿ ತೋಟಕ್ಕೆ ತೆರಳಿ ಬಾಲಕನನ್ನು ಪಟ್ಟಣದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು.

‘ನಾವು ಕೆಲಸಕ್ಕೆ ಹೋದ ಬಳಿಕ ಮಗ ಮನೆಯಲ್ಲಿರದೇ ಓಡಿಹೋಗುತ್ತಿದ್ದ. ದಿನವೂ ಹುಡುಕಾಡಬೇಕಿತ್ತು. ಅವನಿಗೆ ಏನೂ ತಿಳಿಯುವುದಿಲ್ಲ. ಆತನನ್ನು ಆಸ್ಪತ್ರೆಗೆ ದಾಖಲಿಸಲು ಹಣವಿಲ್ಲ. ನಮ್ಮಿಂದ ದೂರವಾಗುತ್ತಾನೆಂಬ ಭಯದಿಂದ ಕಟ್ಟಿ ಹಾಕಿದ್ದೆವು, ಆದರೆ ಹಿಂಸಿಸಿಲ್ಲ. ತೋಟದ ಮಾಲೀಕರೂ ನಮಗೆ ಎಚ್ಚರಿಕೆ ನೀಡಿದ್ದರು’ ಎಂದು ಅಮೀರ್ ಹುಸೇನ್ ತಿಳಿಸಿದರು.

‘ದಂಪತಿಯು ಐದು ತಿಂಗಳಿಂದ ತೋಟದ ಲೈನ್ ಮನೆಯಲ್ಲಿ ವಾಸವಿದ್ದಾರೆ. ಪ್ರಕರಣವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗಮನಕ್ಕೆ ತರಲಾಗಿದ್ದು, ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಡಿವೈಎಸ್ಪಿ ಪ್ರಮೋದ್‌ಕುಮಾರ್ ತಿಳಿಸಿದ್ದಾರೆ.

ಮಹಾಮಸ್ತಕಾಭಿಷೇಕ ಸಿದ್ಧತೆ ಪೂರ್ಣ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ವೇಣೂರು ಭಗವಾನ್ ಬಾಹುಬಲಿ ಮಹಾಮಸ್ತಕಾಭಿಷೇಕ ಇದೇ 22ರಿಂದ ಮಾರ್ಚ್ 1ರ ವರೆಗೆ ನಡೆಯಲಿದ್ದು, ಸಿದ್ಧತೆಪೂರ್ಣಗೊಂಡಿವೆ.

ಸಾನ್ನಿಧ್ಯ ವಹಿಸಲಿರುವ ಅಮೋಘ ಕೀರ್ತಿ ಮುನಿಮಹಾರಾಜರು ಮತ್ತು ಅಮರ ಕೀರ್ತಿ ಮುನಿಮಹಾರಾಜರು ಬುಧವಾರ ವೇಣೂರಿಗೆ ಆಗಮಿಸಿದ್ದಾರೆ. 22ರಂದು ಬೆಳಿಗ್ಗೆ 10ರಿಂದ ಧಾರ್ಮಿಕ ವಿಧಿ-ವಿಧಾನ ಆರಂಭಗೊಳ್ಳಲಿವೆ. ಮಧ್ಯಾಹ್ನ 3ಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಹಾಮಸ್ತಕಾಭಿಷೇಕ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸ್ಮರಣಸಂಚಿಕೆ ಬಿಡುಗಡೆಗೊಳಿಸುವರು. ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆ ವಹಿಸುವರು. ಮಾ.1ರ ಕಾರ್ಯಕ್ರ-ಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪಾಲ್ಗೊಳ್ಳುವರು. ಒಂಬತ್ತು ದಿನ ಬೆಳಿಗ್ಗೆ ಪೂಜಾ ವಿಧಿವಿಧಾನಗಳು, ಜಿನಭಜನೆ, ಮಧ್ಯಾಹ್ನ 3ರಿಂದ ಸಭಾ ಕಾರ್ಯಕ್ರಮ, ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಸಂಜೆ 5.30ರಿಂದ ರಾತ್ರಿ 10ಗಂಟೆಯ ವರೆಗೆ ಮಸ್ತಕಾಭಿಷೇಕ ನಡೆಯುತ್ತದೆ.

ಸ್ವರ್ಣವಲ್ಲಿ: ಶಿಷ್ಯ ಸ್ವೀಕಾರ ಇಂದು

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): ಸ್ವರ್ಣವಲ್ಲಿ ಮಹಾ ಸಂಸ್ಥಾನವು ನೂತನ ಉತ್ತರಾಧಿಕಾರಿ ಮತ್ತು ಶಿಷ್ಯ ಸ್ವೀಕಾರ ಮಹೋತ್ಸವದ ಸಂಭ್ರಮಕ್ಕೆ ಗುರುವಾರ ಸಾಕ್ಷಿಯಾಗಲಿದೆ.

ಯಲ್ಲಾಪುರ ತಾಲ್ಲೂಕಿನ ಗಂಗೆಮನೆಯ ನಾಗರಾಜ ಭಟ್ ಅವರು ಸ್ವರ್ಣವಲ್ಲಿ ಸಂಸ್ಥಾನದ ನೂತನ ಶಿಷ್ಯರಾ-ಗಿದ್ದಾರೆ. ಶಿಷ್ಯ ಸ್ವೀಕಾರಕ್ಕೆ ಪೂರಕವಾಗಿ ಫೆಬ್ರುವರಿ 18ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದಿವೆ.

ಶಿಷ್ಯ ಸ್ವೀಕಾರದ ನಂತರ ನಡೆಯುವ ಧರ್ಮಸಭೆಯಲ್ಲಿ ಯೋಗವಾಸಿಷ್ಠ ಪ್ರಥಮ ಸಂಪುಟ ಲೋಕಾರ್ಪಣೆ ಆಗಲಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾಗವಹಿಸುವರು. ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. 35 ಸಾವಿರಕ್ಕೂ ಹೆಚ್ಚು ಭಕ್ತರು ಪಾಲ್ಗೊ-ಳ್ಳಬಹುದು.

ಮೈಸೂರಿನ ಯೋಗಾನಂದೇಶ್ವರ ಸರಸ್ವತಿ ಮಠದ ಶಂಕರ ಭಾರತಿ ಸ್ವಾಮೀಜಿ, ಹರಿಹರಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಕೂಡ್ಲಿ ಶೃಂಗೇರಿಮಠದ ವಿದ್ಯಾವಿಶ್ವೇಶ್ವರ ಸ್ವಾಮೀಜಿ, ಹೊಳೆನ-ರಸಿಪುರದ ಅಧ್ಯಾತ್ಮ ಪ್ರಕಾಶದ ಪ್ರಕಾ-ಶಾನಂದೇಂದ್ರ ಸರಸ್ವತೀ ಸ್ವಾಮೀಜಿ, ಎಡನೀರು ಮಠದ ಸಚ್ಚಿದಾನಂದ ಭಾರತಿ ಸ್ವಾಮೀಜಿ, ನೆಲೆಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ, ತುರವೆಕೆರೆಯ ಪ್ರಣವಾನಂದ ತೀರ್ಥ ಸ್ವಾಮೀಜಿ, ಕಾಂಚಿಪುರಂನ ಆತ್ಮಬೋಧ ತೀರ್ಥ ಸ್ವಾಮೀಜಿ, ಸಹಜಾನಂದ ತೀರ್ಥ ಸ್ವಾಮೀಜಿ, ಅಂಜನಾನಂದತೀರ್ಥ ಸ್ವಾಮೀಜಿ ಮತ್ತಿತರರು ಪಾಲ್ಗೊಳ್ಳುವರು.

ಪ್ರೀತಿ ನಿರಾಕರಣೆ: ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಹಾರೋಕೊಪ್ಪ ಗ್ರಾಮದಲ್ಲಿ ಬುಧವಾರ ಯುವಕನೊಬ್ಬ ಪ್ರೀತಿಸಿದ ಹುಡುಗಿ ತನ್ನನ್ನು ನಿರಾಕರಿಸಿದಳು ಎಂದು ಮನನೊಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.



ಅರುಣ್ ಕುಮಾರ್

ಹಾರೋಕೊಪ್ಪ ಗ್ರಾಮದ ಅರುಣ್ ಕುಮಾರ್ ರಾಜಶೇಖರ್ (24) ಆತ್ಮಹತ್ಯೆ ಮಾಡಿಕೊಂಡ ಯುವಕ.

'ವೆಲ್ಡಿಂಗ್ ಕೆಲಸ ಮಾಡುತ್ತಿದ್ದ ಅರುಣ್ ಕುಮಾರ್ ತನ್ನದೇ ಸಮುದಾಯದ ಚನ್ನಪಟ್ಟಣದ ಯುವತಿಯನ್ನು ಮೂರು ವರ್ಷಗಳಿಂದ ಪ್ರೀತಿಸುತ್ತಿದ್ದ. ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದ ವಿಷಯ ಯುವತಿ ಮನೆಯವರಿಗೆ ತಿಳಿಯಿತು. ಪೋಷಕರು ವಿರೋಧ ವ್ಯಕ್ತಪಡಿಸಿದ್ದರಿಂದ ಯುವತಿ ಈತನಿಂದ ದೂರವಾಗಿದ್ದಳು' ಎಂದು ಪೊಲೀಸರು ತಿಳಿಸಿದ್ದಾರೆ.

'ನನ್ನ ಮಗ ಆತ್ಮಹತ್ಯೆ ಮಾಡಿಕೊಳ್ಳಲು ಯುವತಿಯ ಪೋಷಕರು ಕಾರಣ' ಎಂದು ಯುವಕನ ತಂದೆ ತಾಲ್ಲೂಕಿನ ಅಕ್ಕೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಹಣ ವರ್ಗಾವಣೆಗೆ ಖಾತೆಗಳ ಬಳಕೆ • ಗ್ರೂಪ್ ನಿಷ್ಕ್ರಿಯಗೊಳಿಸಲು ಸಿಐಡಿ ಪ್ರಯತ್ನ

ಟೆಲಿಗ್ರಾಂ: ಬ್ಯಾಂಕ್ ಖಾತೆ ಮಾರಾಟ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಜನರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು 'ಟೆಲಿಗ್ರಾಂ' ಗ್ರೂಪ್ ಮೂಲಕ ಮಾರುತ್ತಿರುವ ಜಾಲವನ್ನು ಸಿಐಡಿ ಪೊಲೀಸರು ಪತ್ತೆ ಮಾಡಿದ್ದು, ಅನುಮಾನಾಸ್ಪದ ಗ್ರೂಪ್‌ಗಳನ್ನು ನಿಷ್ಕ್ರಿಯಗೊಳಿಸಲು ಕಾರ್ಯಾಚರಣೆ ಆರಂಭಿಸಿದ್ದಾರೆ.

ದೇಶದಲ್ಲಿ ಸೈಬರ್ ವಂಚನೆ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಜನರಿಂದ ದೋಚಿದ ಹಣವನ್ನು ವರ್ಗಾಯಿಸಿಕೊಳ್ಳಲು ವಂಚಕರು, ಅಮಾಯಕ ಜನರ ಬ್ಯಾಂಕ್ ಖಾತೆಗಳನ್ನು ಬಳಸುತ್ತಿದ್ದಾರೆ. ಇಂಥ ಖಾತೆಗಳ ವಿವರಗಳನ್ನು ವಂಚಕರು, ಸಾಮಾಜಿಕ ಮಾಧ್ಯಮ ಟೆಲಿಗ್ರಾಂ ಗ್ರೂಪ್ ಮೂಲಕ ಖರೀದಿ ಮಾಡುತ್ತಿರುವ ಸಂಗತಿ ವಿಚಾರಣೆಯಿಂದ ಗೊತ್ತಾಗಿದೆ.

'ಫೆಡೆಕ್ಸ್ ಕೊರಿಯರ್, ಸಾಲದ ಆ್ಯಪ್, ಬೆತ್ತಲೆ ವಿಡಿಯೊ ಕರೆ ಮಾಡಿ ಬ್ಲ್ಯಾಕ್‌ಮೇಲ್, ಉಡುಗೊರೆ ಆಮಿಷ, ಮನೆಯಿಂದ ಕೆಲಸ ಸೇರಿ ವಿವಿಧ ಪ್ರಕಾರದ ಸೈಬರ್ ವಂಚನೆಗಳು ವರದಿಯಾಗುತ್ತಿವೆ. ಈ ಎಲ್ಲ ವಂಚನೆಗಳಿಗೂ ಅಮಾಯಕ ಜನರ ಬ್ಯಾಂಕ್ ಖಾತೆಗಳು ಬಳಕೆಯಾಗುತ್ತಿವೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಬ್ಯಾಂಕ್ ಖಾತೆ ವಹಿವಾಟು ಸ್ಥಗಿತ'

'ಜನರಿಂದ ದೂರುಗಳು ಬಂದಾಗ, ಸೈಬರ್ ವಂಚನೆಗೆ ಬಳಕೆಯಾಗುವ ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತಗೊಳಿಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಜನರು ತಮ್ಮ ಹೆಸರಿನಲ್ಲಿ ಯಾವುದಾದರೂ ಅನುಮಾನಾಸ್ಪದ ಖಾತೆ ಇದ್ದರೆ ಹಾಗೂ ಅದರ ಮೂಲಕ ವಹಿವಾಟು ನಡೆಯುತ್ತಿದ್ದರೆ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಜೊತೆಗೆ, ಪೊಲೀಸ್ ಠಾಣೆಗೆ ದೂರು ನೀಡಬಹುದು' ಎಂದು ಹೇಳಿವೆ.

'ಸಿಮ್‌ಕಾರ್ಡ್ ಮಾರಾಟಕ್ಕೂ ಏಜೆಂಟರು'

'ನಕಲಿ ದಾಖಲೆ ಬಳಸಿ ಸಿಮ್ ಖರೀದಿಸಿ ಸೈಬರ್ ವಂಚಕರಿಗೆ ಮಾರುವ ಏಜೆಂಟರಿದ್ದಾರೆ. ಜೆರಾಕ್ಸ್ ಮಳಿಗೆ ಹಾಗೂ ಇತರೆಡೆ ಜನರ ದಾಖಲೆ ಸಂಗ್ರಹಿಸಲಾಗುತ್ತಿದೆ. ಜೊತೆಗೆ, ಗೂಗಲ್‌ನಲ್ಲಿ ಹುಡುಕಾಡಿ ಡೌನ್‌ಲೋಡ್ ಮಾಡಿಕೊಳ್ಳಲಾಗುತ್ತಿದೆ. ಇದೇ ದಾಖಲೆಗಳನ್ನು ಮೊಬೈಲ್ ಸೇವಾ ಕಂಪನಿಗಳಿಗೆ ನೀಡಿ ಹೊಸ ಸಿಮ್ ಪಡೆಯಲಾಗುತ್ತಿದೆ. ಇಂಥ ಸಿಮ್‌ಗಳನ್ನು ಸೈಬರ್ ವಂಚನೆಗೆ ಬಳಸಲಾಗುತ್ತಿದೆ. ಸಿಮ್ ಸುಳಿವು ಆಧರಿಸಿ ತನಿಖೆ ನಡೆಸಿದಾಗ, ಅಮಾಯಕರು ಸಿಕ್ಕಿಬೀಳುತ್ತಿದ್ದಾರೆ' ಎಂದು ' ಎಂದು ಸಿಐಡಿ ಮೂಲಗಳು ಹೇಳಿವೆ.

> **ಜನರು ತಮ್ಮ ಆಧಾರ್ ಹಾಗೂ ಇತರೆ ವೈಯಕ್ತಿಕ ದಾಖಲೆಗಳನ್ನು ಅಪರಿಚಿತರಿಗೆ ನೀಡುವ ಮುನ್ನ ಬಹಳ ಎಚ್ಚರಿಕೆ ವಹಿಸಬೇಕು**
> **–ಸಿಐಡಿ ಅಧಿಕಾರಿ**

'ಸೈಬರ್ ವಂಚನೆ ಪ್ರಕರಣವೊಂದರ ತನಿಖೆ ನಡೆಸುವಾಗ, ಹಣ ವರ್ಗಾವಣೆ ಆಗಿದ್ದ ಖಾತೆಗಳ ವಿವರ ಸಂಗ್ರಹಿಸಲಾಗಿತ್ತು. ಖಾತೆದಾರರನ್ನು ಸಂಪರ್ಕಿಸಿ, ವಿಚಾರಣೆಗೆ ಒಳಪಡಿಸಲಾಗಿತ್ತು. ಅವರು ಯಾವುದೇ ಖಾತೆ ತೆರೆದಿರಲಿಲ್ಲ ಹಾಗೂ ಯಾವುದೇ ವಹಿವಾಟು ನಡೆಸಿರಲಿಲ್ಲ ಎಂಬುದು ಗೊತ್ತಾಯಿತು. ಅವಾಗಲೇ, ಬ್ಯಾಂಕ್ ಖಾತೆಗಳನ್ನು ತೆರೆದು ಮಾರಾಟ ಮಾಡುತ್ತಿರುವ ಜಾಲದ ಸುಳಿವು ಲಭ್ಯವಾಯಿತು' ಎಂದು ಮೂಲಗಳು ತಿಳಿಸಿವೆ.

'ರಾಜಸ್ಥಾನ, ಜಾರ್ಖಂಡ್, ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಇರುವ ವಂಚಕರು, ಸೈಬರ್ ಅಪರಾಧಗಳಲ್ಲಿ ಭಾಗಿಯಾಗುತ್ತಿದ್ದಾರೆ. ಇವರಿಗೆ ಬ್ಯಾಂಕ್ ಖಾತೆಗಳನ್ನು ಪೂರೈಕೆ ಮಾಡುವ ದೊಡ್ಡ ಜಾಲವೇ ದೇಶದಾದ್ಯಂತ ಕೆಲಸ ಮಾಡುತ್ತಿದೆ. ಜಾಲದ ಪೈಕಿ ಹಲವರು ಈಗಾಗಲೇ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ' ಎಂದು ಹೇಳಿವೆ.

ಸಮೀಕ್ಷೆ ಹೆಸರಿನಲ್ಲಿ ದಾಖಲೆ ಸಂಗ್ರಹ: 'ಗ್ರಾಮೀಣ ಪ್ರದೇಶ, ನಗರದ ಕೊಳೆಗೇರಿ ಪ್ರದೇಶ ಹಾಗೂ ಬಡವರು ಹೆಚ್ಚಿರುವ ಪ್ರದೇಶಗಳಲ್ಲಿ ಸುತ್ತಾಡುವ ಆರೋಪಿಗಳು, ಸಮೀಕ್ಷೆ ಹೆಸರಿನಲ್ಲಿ ಜನರಿಂದ ದಾಖಲೆಗಳನ್ನು ಸಂಗ್ರಹಿಸುತ್ತಿದ್ದಾರೆ. ಕೆಲವೆಡೆ ಜನರಿಗೆ ಹಣ ನೀಡಿ ದಾಖಲೆಗಳನ್ನು ಪಡೆಯುತ್ತಿದ್ದಾರೆ. ಕೆಲವರು, ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ದಾಖಲೆಗಳನ್ನು ಗೂಗಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಜನರ ದಾಖಲೆಗಳನ್ನು ಸಂಗ್ರಹಿಸುವ ಆರೋಪಿಗಳು, ಅದೇ ದಾಖಲೆ ಬಳಸಿಕೊಂಡು ಆನ್‌ಲೈನ್ ಮೂಲಕ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯುತ್ತಿದ್ದಾರೆ. ಜೊತೆಗೆ, ನಕಲಿ ದಾಖಲೆ ಬಳಸಿ ಖರೀದಿಸುವ ಮೊಬೈಲ್ ಸಂಖ್ಯೆಯನ್ನು ಖಾತೆಗೆ ಜೋಡಣೆ ಮಾಡುತ್ತಿದ್ದಾರೆ. ಖಾತೆ ವಹಿವಾಟು ಅದೇ ಮೊಬೈಲ್ ಸಂಖ್ಯೆ ಮೂಲಕ ನಡೆಯುತ್ತಿದೆ. ಖಾತೆ ತೆರೆಯಲೆಂದೇ ಪ್ರತ್ಯೇಕ ಏಜೆಂಟರು ಕೆಲಸ ಮಾಡುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

ಒಂದು ಖಾತೆಗೆ ₹ 10 ಸಾವಿರ-₹ 25 ಸಾವಿರ: 'ಬ್ಯಾಂಕ್ ಖಾತೆಗಳನ್ನು ತೆರೆಯುತ್ತಿರುವ ಆರೋಪಿಗಳು, ಟೆಲಿಗ್ರಾಂ ಆ್ಯಪ್‌ನಲ್ಲಿ ತಮ್ಮದೇ ಗ್ರೂಪ್ ಸೃಷ್ಟಿಸಿದ್ದಾರೆ. 'ಖಾತೆಗಳು ಮಾರಾಟಕ್ಕಿವೆ' ಎಂಬುದಾಗಿ ಜಾಹೀರಾತು ನೀಡುತ್ತಿದ್ದಾರೆ. ಒಂದು ಖಾತೆ ವಿವರವನ್ನು ₹ 10 ಸಾವಿರದಿಂದ ₹ 25 ಸಾವಿರಕ್ಕೆ ಮಾರುತ್ತಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಖಾತೆಗಳನ್ನು ಮಾರಾಟ ಮಾಡುವ 25ಕ್ಕೂ ಹೆಚ್ಚು ಗ್ರೂಪ್‌ಗಳನ್ನು ಪತ್ತೆ ಮಾಡಲಾಗಿದೆ. ಇಂಥ ಗ್ರೂಪ್‌ಗಳನ್ನು ನಿಷ್ಕ್ರಿಯಗೊಳಿಸುವಂತೆ ಟೆಲಿಗ್ರಾಂ ಕಂಪನಿಗೆ ಸೂಚನೆ ನೀಡಲಾಗಿದೆ. ಈಗಾಗಲೇ ಕೆಲ ಗ್ರೂಪ್‌ಗಳನ್ನು ನಿಷ್ಕ್ರಿಯಗೊಂಡಿವೆ' ಎಂದು ಹೇಳಿವೆ.

ಸುದ್ದಿ 2 ನಿಮಿಷ

ನಿಸ್ವಾರ್ಥ ಚಿಂತನೆಯ ಒಕ್ಕೂಟಕ್ಕೆ ಬೆಂಬಲ: ಕಮಲ್ ಹಾಸನ್


ಚೆನ್ನೈ (ಪಿಟಿಐ): ರಾಷ್ಟ್ರಕ್ಕಾಗಿ ನಿಸ್ವಾರ್ಥ ಚಿಂತನೆ ಹೊಂದಿರುವ ಒಕ್ಕೂಟಕ್ಕೆ 'ಮಕ್ಕಳ್ ನೀಧಿ ಮಯ್ಯಂ' (ಎಂಎನ್‌ಎಂ) ಪಕ್ಷವು ಬೆಂಬಲ ಸೂಚಿಸಲಿದೆ ಎಂದು ಪಕ್ಷದ ಮುಖ್ಯಸ್ಥ ಹಾಗೂ ನಟ ಕಮಲ್ ಹಾಸನ್ ಅವರು ಬುಧವಾರ ತಿಳಿಸಿದರು.

ಎಂಎನ್‌ಎಂನ 7ನೇ ವರ್ಷಾಚರಣೆಯಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಅವರು, ತಮಿಳು ನಟ ವಿಜಯ್ ರಾಜಕೀಯಕ್ಕೆ ಪ್ರವೇಶಿಸಿರುವುದನ್ನು ಸ್ವಾಗತಿಸಿದರು.

ಊಳಿಗಮಾನ್ಯ ರಾಜಕೀಯ ಮಾಡುವ ಪಕ್ಷಗಳ ಜೊತೆ ಕೈಜೋಡಿಸುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

'ಇಂಡಿಯಾ' ಒಕ್ಕೂಟಕ್ಕೆ ಸೇರಿದ್ದಿರಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆ ಉತ್ತರಿಸಿದ ಅವರು, ಇದುವರೆಗೆ ಸೇರಿಲ್ಲ ಎಂದು ಹೇಳಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಜೊತೆಗೆ ಎಂಎನ್‌ಎಂ ಮೈತ್ರಿ ಮಾಡಿಕೊಳ್ಳಲಿದೆ ಎಂಬ ವದಂತಿಗಳ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕಮಲ್ ಹಾಸನ್, 'ಚರ್ಚೆ ನಡೆಯುತ್ತಿದೆ. ಶುಭಸುದ್ದಿ ಇದ್ದರೆ ತಿಳಿಸುತ್ತೇನೆ' ಎಂದರು.



'ಚವಾಣ್ ಕಾಂಗ್ರೆಸ್ ಬಿಡಲು ಆದರ್ಶ ಹಗರಣ ಪ್ರಸ್ತಾಪ ಕಾರಣ'

ಕೊಲ್ಹಾಪುರ (ಪಿಟಿಐ): ಸಂಸತ್ತಿನಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರ ಮಂಡಿಸಿದ ಶ್ವೇತಪತ್ರದಲ್ಲಿ ಆದರ್ಶ ಹೌಸಿಂಗ್ ಸೊಸೈಟಿ ಹಗರಣದ ಪ್ರಸ್ತಾಪ ಇದ್ದಿದ್ದಕ್ಕೆ ಹೆದರಿ, ಮಾಜಿ ಮುಖ್ಯಮಂತ್ರಿ ಅಶೋಕ್ ಚವಾಣ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಶರದ್ ಪವಾರ್ ಹೇಳಿದರು.

ಕಳೆದ ವಾರವಷ್ಟೇ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಚವಾಣ್ ಅವರು ಈ ಕುರಿತ ಆರೋಪಗಳನ್ನು ಅಲ್ಲಗಳೆದಿದ್ದರು.

ಅಶೋಕ್ ಅವರು ಆದರ್ಶ ಹೌಸಿಂಗ್ ಸೊಸೈಟಿ ಹಗರಣದ ಆರೋಪಿಯಾಗಿದ್ದಾರೆ. ದಕ್ಷಿಣ ಮುಂಬೈನಲ್ಲಿ ರಕ್ಷಣಾ ಸಚಿವಾಲಯ ಒಡೆತನದ ಭೂಮಿಯಲ್ಲಿ ಅಗತ್ಯ ಅನುಮತಿಗಳನ್ನು ಪಡೆಯದೆ 31 ಅಂತಸ್ತಿನ ಐಷಾರಾಮಿ ಕಟ್ಟಡ ನಿರ್ಮಿಸಲಾಗಿದೆ ಎಂಬ ಆರೋಪ ಇದೆ. ಈ ಹಗರಣದ ಕಾರಣ ಚವಾಣ್ ಅವರು 2010ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು.

'ನಾವು, ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಕಾಂಗ್ರೆಸ್ ಒಟ್ಟಿಗೇ ಇದ್ದೇವೆ; ಪ್ರತ್ಯೇಕವಾಗಿಲ್ಲ. ಹೆಚ್ಚಿನ ಸಮಯ ಒಟ್ಟಿಗೆ ಚರ್ಚಿಸುತ್ತೇವೆ. ಆದರೆ ವಿಲೀನ ಅವಶ್ಯವಿಲ್ಲ' ಎಂದು ಪವಾರ್ ಹೇಳಿದರು.




ಕುಂಬಾರನ ಕೊಡ...

ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯಲ್ಲಿ ಮಣ್ಣಿನ ಮಡಕೆಗಳ ಖರೀದಿಯಲ್ಲಿ ತೊಡಗಿರುವ ಮಹಿಳೆಯರು. ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಬೈಕ್ ಕಳವು: ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವೈಟ್‌ಫೀಲ್ಡ್ ವಿಭಾಗದ ವಿವಿಧ ಬಡಾವಣೆಗಳಲ್ಲಿ ಮನೆ ಎದುರು ಹಾಗೂ ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆ ಮಾಡಿದ್ದ ಬೈಕ್‌ಗಳನ್ನು ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಕಾರ್ಯಾಚರಣೆ ನಡೆಸಿದ ಮಾರತ್ತಹಳ್ಳಿ ಠಾಣೆ ಪೊಲೀಸರು, ಆಂಧ್ರಪ್ರದೇಶದ ಆನಂದ್(32) ಮತ್ತು ಸೇಠ್ ಮಿಲ್ ವಾಲಿ(35) ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ.

'ಆರೋಪಿಗಳಿಂದ ₹35 ಲಕ್ಷ ಮೌಲ್ಯದ 40 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಆರೋಪಿಗಳ ಬಂಧನದಿಂದ ಮಾರತ್ತಹಳ್ಳಿ 3, ಮಹದೇವಪುರ ಠಾಣೆಯಲ್ಲಿ ದಾಖಲಾಗಿದ್ದ 1 ಪ್ರಕರಣ ಪತ್ತೆಯಾಗಿದೆ. ಕಳವು ಮಾಡಿದ ಬೈಕ್‌ಗಳನ್ನು ಕಡಿಮೆ ಮೊತ್ತಕ್ಕೆ ಮಾರಾಟ ಮಾಡಿ ಬಂದ ಹಣದಲ್ಲಿ ಮೋಜಿನ ಜೀವನ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಮತ್ತೊಂದು ಪ್ರಕರಣದಲ್ಲಿ ಮನೆ ಮುಂದೆ ನಿಲುಗಡೆ ಮಾಡಿದ್ದ ಬೈಕ್ ಕಳವು ಮಾಡುತ್ತಿದ್ದ ಆರೋಪಿಯನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡಿನ ಶರತ್ ಬಾಬು(40) ಬಂಧಿತ ಆರೋಪಿ.

'ಆರೋಪಿಯಿಂದ ₹8 ಲಕ್ಷ ಮೌಲ್ಯದ 19 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ. ಈತನ ಬಂಧನದಿಂದ ಕಾಡುಗೋಡಿಯಲ್ಲಿ 6, ವೈಟ್‌ಫೀಲ್ಡ್ ನಲ್ಲಿನ 1 ಮತ್ತು ಸರ್ಜಾಪುರ ಠಾಣೆಯಲ್ಲಿ ದಾಖಲಾಗಿದ್ದ 1 ಪ್ರಕರಣ ಪತ್ತೆಯಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಡ್ರಗ್ಸ್ ಪೆಡ್ಲರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕವಸ್ತು ಮಾರಾಟ ದಂಧೆಯಲ್ಲಿ ತೊಡಗಿದ್ದ ಡ್ರಗ್ಸ್ ಪೆಡ್ಲರ್‌ನನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಮೀರ್ ಖಾನ್

ರಿಚ್ಮಂಡ್ ಟೌನ್ ನಿವಾಸಿ ಅಮೀರ್ ಖಾನ್ (35) ಬಂಧಿತ ಆರೋಪಿ.

'ಈತನ ವಿರುದ್ಧ ಮಾದಕ ವಸ್ತುಗಳ ಅಕ್ರಮ ಸಾಗಾಣೆ ತಡೆ ಕಾಯ್ದೆ (ಪಿಐಟಿ-ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಮೂರು ವರ್ಷಗಳಿಂದ ಕೇರಳ, ಆಂಧ್ರಪ್ರದೇಶದಿಂದ ಗಾಂಜಾ ಮತ್ತು ಇತರೆ ಪಾರ್ಟಿ ಡ್ರಗ್ಸ್‌ಗಳನ್ನು ತಂದು ನಗರದಲ್ಲಿ ನಿರ್ದಿಷ್ಟ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ. ಈ ಹಿಂದೆ ಸಹ ಸಿಸಿಬಿ ಪೊಲೀಸರು ಆರೋಪಿಯನ್ನು ಮೂರು ಬಾರಿ ಮಾದಕ ವಸ್ತುಗಳ ಸಹಿತ ಬಂಧಿಸಿದ್ದರು.

'ಈತನ ವಿರುದ್ಧ ಅಶೋಕನಗರ, ಪರಪ್ಪನ ಅಗ್ರಹಾರ, ಬೇಗೂರು, ಗೋವಿಂದಪುರ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿದ್ದರು. ಜಾಮೀನು ಪಡೆದು ಹೊರಗೆ ಬಂದ ಬಳಿಕವೂ ಆರೋಪಿ ಮತ್ತೆ ಅದೇ ದಂಧೆಯಲ್ಲಿ ತೊಡಗುತ್ತಿದ್ದ. ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

ಇತ್ತೀಚೆಗೆ ಅಮೃತಹಳ್ಳಿ ಠಾಣೆ ಪೊಲೀಸರು ಆರೋಪಿ ಅಮೀರ್ ಖಾನ್‌ನನ್ನು ಬಂಧಿಸಿದ್ದರು. ಈ ವೇಳೆ ಆತ ಪದೇ ಪದೇ ಮಾದಕ ವಸ್ತು ಮಾರಾಟ ದಂಧೆಯಲ್ಲಿ ತೊಡಗುತ್ತಿರುವುದು ಪತ್ತೆಯಾಗಿತ್ತು. ಹೀಗಾಗಿ ಈತನ ವಿರುದ್ಧ ಪಿಐಟಿ- ಎನ್‌ಡಿಪಿಎಸ್ ಕಾಯ್ದೆ ಅಡಿ ಬಂಧನದಲ್ಲಿರಿಸಲು ಪೂರಕ ದಾಖಲೆಗಳೊಂದಿಗೆ ಪೊಲೀಸ್ ಕಮಿಷನರ್‌ಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಕಮಿಷನರ್ ಆದೇಶದ ಮೇರೆಗೆ ಅಮೃತಹಳ್ಳಿ ಠಾಣೆ ಪೊಲೀಸರು ಫೆಬ್ರುವರಿ 19ರಿಂದ ಅನ್ವಯವಾಗುವಂತೆ ಪಿಐಟಿ-ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರತಿಬಂಧಕ ಬಂಧನ ಜಾರಿಗೊಳಿಸಿದ್ದಾರೆ.

ಪದೇ ಪದೇ ಮಾದಕ ವಸ್ತುಗಳ ಮಾರಾಟ ದಂಧೆಯಲ್ಲಿ ತೊಡಗುವ ಡ್ರಗ್ಸ್ ಪೆಡ್ಲರ್‌ಗಳನ್ನು ನಿಯಂತ್ರಿಸಲು ಪೊಲೀಸರು ಪಿಐಟಿ-ಎನ್‌ಡಿಪಿಎಸ್ ಪ್ರಯೋಗಿಸುತ್ತಾರೆ. ಈ ಕಾಯ್ದೆ ಅಡಿ ಬಂಧಿಸಿ ಜೈಲಿಗೆ ಕಳುಹಿಸಿದರೆ ಆರೋಪಿಗೆ ಕನಿಷ್ಠ 1 ವರ್ಷ ಜಾಮೀನು ಸಿಗುವುದಿಲ್ಲ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಜಿಂಕೆ ಕೊಂಬು ಮಾರಾಟ: ಬಂಧನ

ಬೆಂಗಳೂರು: ಜಿಂಕೆಯ ಕೊಂಬುಗಳ ಮಾರಾಟಕ್ಕೆ ಯತ್ನಿಸಿದ್ದ ಆಂಧ್ರಪ್ರದೇಶದ ಇಬ್ಬರು ಆರೋಪಿಗಳನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ವಿಜಯವಾಡದ ಶೇಕ್‌ರೆಹಮತ್ ಉಲ್ಲಾ (54) ಮತ್ತು ರಾಜಮಂಡ್ರಿಯ ಫಣೀಂದ್ರ ಚಾರಿ (44) ಬಂಧಿತ ಆರೋಪಿಗಳು.

ಬಂಧಿತ ಆರೋಪಿಗಳಿಂದ ಜಿಂಕೆಯ ತಲೆಬುರುಡೆ ಸಹಿತವಿರುವ ಆರು ಜಿಂಕೆಯ ಕೊಂಬುಗಳು ಮತ್ತು ತಲೆಬುರುಡೆ ರಹಿತವಿರುವ 33 ಜಿಂಕೆ ಕೊಂಬುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಆಂಧ್ರಪ್ರದೇಶದ ಗುಂಟೂರು ಅರಣ್ಯ ಪ್ರದೇಶದಲ್ಲಿ ವ್ಯಕ್ತಿಯೊಬ್ಬರಿಂದ ಜಿಂಕೆ ಕೊಂಬುಗಳನ್ನು ತಂದಿದ್ದ ಇಬ್ಬರು ಆರೋಪಿಗಳು, ಕಾಡುಗೋಡಿಯ ಬಸ್ ನಿಲ್ದಾಣದ ಬಳಿ ಮಾರಾಟಕ್ಕೆ ಮುಂದಾಗಿದ್ದರು. ಆಂಧ್ರಪ್ರದೇಶದಿಂದ ಬಸ್‌ನಲ್ಲಿ ಜಿಂಕೆ ಕೊಂಬುಗಳನ್ನು ನಗರಕ್ಕೆ ತರುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಜಿಂಕೆ ಕೊಂಬುಗಳ ಖರೀದಿ ಹಾಗೂ ಆರೋಪಿಗಳಿಗೆ ಮಾರಾಟ ಮಾಡಿದ್ದ ಆರೋಪಿಯ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಆರೋಪಿಗಳು ಬೆಂಗಳೂರು ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಲ್ಲೂ ಜಿಂಕೆ ಕೊಂಬು ಮಾರಾಟ ಮಾಡಿರುವ ಶಂಕೆಯಿದ್ದು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸುವರ್ಣ ಮಹೋತ್ಸವ: ಓಟದ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯು, ಸುವರ್ಣ ಮಹೋತ್ಸವದ ಅಂಗವಾಗಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಹಯೋಗದಲ್ಲಿ 5 ಹಾಗೂ 10 ಕಿ.ಮೀ ಓಟದ ಸ್ಪರ್ಧೆ ಆಯೋಜಿಸಲಾಗಿದೆ.

'ಫಿಟ್‌ನೆಸ್ ಫಾರ್ ಆಲ್' ಶೀರ್ಷಿಕೆ ಅಡಿ ಓಟದ ಸ್ಪರ್ಧೆ ಆಯೋಜನೆ ಮಾಡಲಾಗಿದೆ. ಈ ಓಟದ ಮೂಲಕ ಮಾದಕ ವಸ್ತು ಮುಕ್ತ ಕರ್ನಾಟಕ ಪ್ರಚಾರ ಪಡಿಸಲು ಉದ್ದೇಶಿಸಲಾಗಿದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆ ತಿಳಿಸಿದೆ.

ಸ್ಪರ್ಧೆಗೆ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದ್ದು, ಬೆಂಗಳೂರು ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಿಂದ ಎಲ್ಲ ವಯೋಮಾನದ ಸುಮಾರು 10 ಸಾವಿರ ಸ್ಪರ್ಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ವಿಧಾನಸೌಧದ ಮುಂಭಾಗದಿಂದ ಓಟ ಆರಂಭಗೊಂಡು ಕಬ್ಬನ್ ಉದ್ಯಾನದ ಮೂಲಕ ಹಾದು ಹೋಗಲಿದೆ. ಈ ಓಟವು ಹಸಿರು ಬೆಂಗಳೂರು, ಮಾದಕ ವಸ್ತು ಮುಕ್ತ ಕರ್ನಾಟಕ ಹಾಗೂ ಸೈಬರ್ ಅಪರಾಧ ಪ್ರಕರಣಗಳ ಬಗ್ಗೆ ಜಾಗೃತಿ ಮೂಡಿಸಲಿದೆ. ಓಟ ನಡೆಯುವ ಆಯ್ದ ಸ್ಥಳಗಳಲ್ಲಿ ಪೊಲೀಸ್ ಬ್ಯಾಂಡ್ ತಂಡವು ಪ್ರದರ್ಶನ ನೀಡಲಿದೆ ಎಂದು ಮಾಹಿತಿ ನೀಡಿದೆ.

5 ಹಾಗೂ 10 ಕಿ.ಮೀ ಓಟದಲ್ಲಿ ಮೂರು ಪ್ರತ್ಯೇಕ (ಸುಮಾರು ₹ 18 ಲಕ್ಷ) ಬಹುಮಾನ ನೀಡಲಾಗುವುದು. ಹಿರಿಯ ನಾಗಕರಿಕರು, ಹವ್ಯಾಸಿ ಹಾಗೂ ವೃತ್ತಿಪರ ಓಟಗಾರರು ಪಾಲ್ಗೊಳ್ಳಬಹುದು. ಸ್ಪರ್ಧಿಗಳಿಗೆ ಟೀ-ಶರ್ಟ್, ಪದಕ ಹಾಗೂ ಉಪಾಹಾರದ ವ್ಯವಸ್ಥೆಯಿದೆ. ಆಸಕ್ತರು ವೆಬ್‌ಸೈಟ್: www.click2race.com ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ಕೋರಿದೆ.



ಪ್ರತಿಭಟನೆ

ಗುತ್ತಿಗೆ ಪದ್ಧತಿ ರದ್ದು ಸೇರಿ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಎನ್‌ಎಚ್‌ಎಂ ಗುತ್ತಿಗೆ ನೌಕರರು ಬುಧವಾರ ಪ್ರತಿಭಟಿಸಿದರು.

ಗೌರವಧನ ಹೆಚ್ಚಳಕ್ಕೆ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗೌರವಧನ (6ನೇ ಗ್ಯಾರಂಟಿ) ಹೆಚ್ಚಿಸುವಂತೆ ಆಗ್ರಹಿಸಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಬುಧವಾರ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

6ನೇ ಗ್ಯಾರಂಟಿ ರೂಪದಲ್ಲಿ ಗೌರವಧನ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕಳೆದ ವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ಕೆಲವು ಜನಪರ ಯೋಜನೆ ಘೋಷಿಸಲಾಗಿದೆ. ಆದರೆ, ಮಹಿಳಾ ಸಮುದಾಯವನ್ನು ಸಬಲೀಕರಣ ಮಾಡುವ ವಿಚಾರದಲ್ಲಿ ನಿರ್ಲಕ್ಷ್ಯ ತೋರಲಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಚುನಾವಣೆಗೂ ಮೊದಲು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರೇ 6ನೇ ಗ್ಯಾರಂಟಿಯಾಗಿ ಗೌರವಧನ ಹೆಚ್ಚಿಸುವ ಭರವಸೆ ನೀಡಿದ್ದರು. ಆದರೆ ಮಾತು ತಪ್ಪಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ತಿಂಗಳಿಗೆ ₹15 ಸಾವಿರ, ಸಹಾಯಕಿಯರಿಗೆ ₹10 ಸಾವಿರ ಗೌರವಧನ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು.

ಸೇವೆ ಸಲ್ಲಿಸಿ ನಿವೃತ್ತರಾಗುವವರಿಗೆ ₹3 ಲಕ್ಷ ಇಡುಗಂಟು ನೀಡುವ ಭರವಸೆಯೂ ಈಡೇರಿಲ್ಲ ಎಂದು ಅವರು ದೂರಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ಬೆಂಕಿ ಅವಘಡ: ಗಾಯಗೊಂಡಿದ್ದ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ರಾಮಸಂದ್ರದ ಗುಜರಿ ಮಳಿಗೆಯೊಂದರಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ 15 ವರ್ಷದ ಸಾಜಿತ್ ಪಾಷಾ ಬುಧವಾರ ಮೃತಪಟ್ಟಿದ್ದಾನೆ.

ಶೇ 35ರಷ್ಟು ಸುಟ್ಟ ಗಾಯದಿಂದ ಬಾಲಕನ ಆರೋಗ್ಯ ಸ್ಥಿತಿ ಚಿಂತಾಜನಕವಾಗಿತ್ತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿತ್ತು.

ಈ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ಭಾನುವಾರ ಸಂಜೆ ಸಂಭವಿಸಿದ್ದ ಅವಘಡದಲ್ಲಿ ಗುಜರಿ ಮಳಿಗೆ ಮಾಲೀಕ ಚಿಕ್ಕಬಸ್ತಿಯ ಸಲೀಂ (32), ಮೆಹಬೂಬ್ ಪಾಷಾ (32) ಸೇರಿದಂತೆ ಮೂವರು ಸಜೀವ ದಹನವಾಗಿದ್ದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗಾಯಗೊಂಡ ಇನ್ನೂ ಇಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ. ಅದರಲ್ಲಿ ಒಬ್ಬರಿಗೆ ಶೇ 60ರಷ್ಟು ಸುಟ್ಟಗಾಯವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಐದಾರು ತಿಂಗಳಿನಿಂದ ವಿವಿಧ ಬಡಾವಣೆಗಳಲ್ಲಿ ತೊಂದರೆ

ತೀವ್ರಗೊಂಡ ನೀರಿನ ಸಮಸ್ಯೆ: ಟ್ಯಾಂಕರ್ ಮೊರೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ಜನರು ಕುಡಿಯುವ ನೀರಿಗೆ ಟ್ಯಾಂಕರ್ ಮೊರೆ ಹೋಗಿದ್ದಾರೆ.

ಕಳೆದ ವರ್ಷ ಮುಂಗಾರು ಅವಧಿಯಲ್ಲಿ ಮಳೆ ಕೈಕೊಟ್ಟ ಪರಿಣಾಮ, ಕಳೆದ ಐದು ತಿಂಗಳಿಂದಲೂ ವಿವಿಧ ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಕಾಡುತ್ತಿದೆ.

ಜಲಮಂಡಳಿಯಿಂದ ವಾರದಲ್ಲಿ ಎರಡು ಬಾರಿ ಕಾವೇರಿ ನೀರು ಪೂರೈಕೆ ಆಗುತ್ತಿತ್ತು. ಆದರೆ, ಈಗ ಒಂದುವಾರ ಕಳೆದರೂ ನೀರು ಬರುತ್ತಿಲ್ಲ. ಎಂಜಿನಿಯರ್‌ಗಳು ತಮ್ಮ ಸಮಸ್ಯೆಯನ್ನೂ ಆಲಿಸುತ್ತಿಲ್ಲ ಎಂದು ಜನರು ಅಳಲು ತೋಡಿಕೊಂಡಿದ್ದಾರೆ.

ಗಣಪತಿ ನಗರ, ಗೆಳೆಯರ ಬಳಗ, ಕಿರ್ಲೋಸ್ಕರ್ ಬಡಾವಣೆ, ಮಂಜುನಾಥ ನಗರ, ಶೆಟ್ಟಿಹಳ್ಳಿ, ಮಲ್ಲಸಂದ್ರ ಚೊಕ್ಕಸಂದ್ರ ಹೆಗ್ಗನಹಳ್ಳಿ, ರಾಜಗೋಪಾಲನಗರ, ಪೀಣ್ಯ ಕೈಗಾರಿಕಾ ಪ್ರದೇಶ ಸೇರಿದಂತೆ ಹಲವು ಕಡೆ ನೀರಿನ ಸಮಸ್ಯೆಯಿದೆ.



ಟ್ಯಾಂಕರ್ ನೀರು ಅವಲಂಬಿಸಿರುವ ಸ್ಥಳೀಯರು

ಕೊಳವೆಬಾವಿಯಲ್ಲಿ ಬತ್ತಿದ ನೀರು: ಕ್ಷೇತ್ರದ ಕೆಲವು ಭಾಗಗಳಲ್ಲಿ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು ಬಹಳಷ್ಟು ಕೊಳವೆ ಬಾವಿಗಳು ಬತ್ತಿವೆ. ಇನ್ನು ಕೆಲವೇ ಕೆಲವು ಕೊಳವೆ ಬಾವಿಗಳು ಕಾರ್ಯ ನಿರ್ವಹಿಸುತ್ತಿದ್ದು ಅದರ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಸಾಕಷ್ಟು ಬಡಾವಣೆಗಳಲ್ಲಿ ಟ್ಯಾಂಕರ್ ನೀರನ್ನು ಜನರು ಅವಲಂಬಿಸಿದ್ದಾರೆ. ಈ ಭಾಗದ ಹೋಟೆಲ್ ಮಾಲೀಕರು, ಟ್ಯಾಂಕರ್‌ನಲ್ಲಿ ನೀರು ತರಿಸಿಕೊಳ್ಳುತ್ತಿದ್ದಾರೆ.

'ನಮ್ಮ ಕ್ಷೇತ್ರದ ಅನೇಕ ಕಡೆ ನೀರಿನ ಅಭಾವವಿದೆ. ಕೊಳವೆಬಾವಿಗಳು ಬತ್ತಿವೆ. ಇಲ್ಲಿ ಬಡವರು ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಈಗಾಗಲೇ ಕೆಲವು ಕಡೆ ಕೊಳವೆಬಾವಿ ಕೊರೆಸಿ ನೀರು ಪೂರೈಸಿದ್ದೇವೆ. ಜುಲೈ ಒಳಗೆ ಕಾವೇರಿ ನೀರು ಬರುತ್ತದೆ. ಅಲ್ಲಿಯವರೆಗೂ ನೀರನ್ನು ಮಿತವಾಗಿ ಬಳಸಬೇಕು. ಕ್ಷೇತ್ರದ 110 ಹಳ್ಳಿಗಳಿಗೆ ಸೇರುವ ಗ್ರಾಮಗಳಿಗೆ ನೂತನವಾಗಿ 25 ಕೊಳವೆಬಾವಿ ಕೊರೆಸಲಾಗುತ್ತಿದೆ' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.



ರಸ್ತೆ ಅಗೆದು ಕಾವೇರಿ ನೀರಿನ ಪೈಪ್ ಅಳವಡಿಸಿದ್ದಾರೆ. ಆದರೆ, ನೀರೇ ಬರುತ್ತಿಲ್ಲ. ಸುತ್ತಮುತ್ತಲ ಪ್ರದೇಶದ ಜನರು ಟ್ಯಾಂಕರ್ ಮೂಲಕ ನೀರು ಪಡೆಯುತ್ತಿದ್ದೇವೆ.
ಕಿರಣ್, ಚಿಕ್ಕಸಂದ್ರ



ನಮಗೆ ಕಾವೇರಿ ನೀರು ಬರುತ್ತಿಲ್ಲ. ವಾರಕ್ಕೊಮ್ಮೆ ಕೊಳವೆಬಾವಿ ನೀರು ಬಿಡುತ್ತಾರೆ. ಅದು ಸರಿಯಾಗಿ ಬರುವುದಿಲ್ಲ.
ಸಂಪೂರ್ಣ, ಮಲ್ಲಸಂದ್ರ ನಿವಾಸಿ

ಜಾಗೃತಿ ಸಮಾವೇಶ: ವಾಹನ ನಿಲುಗಡೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದ ಕೃಷ್ಣ ವಿಹಾರ್‌ನಲ್ಲಿ ಫೆಬ್ರುವರಿ 25ರಂದು ರಾಜ್ಯ ಸರ್ಕಾರದಿಂದ ಸಂವಿಧಾನ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಅಂದು ಮೈದಾನದ ಸುತ್ತಮುತ್ತಲ ಕೆಲವು ಮಾರ್ಗದಲ್ಲಿ ವಾಹನ ಸಂಚಾರ ಬದಲಾವಣೆ ಹಾಗೂ ವಾಹನ ನಿಲುಗಡೆ ನಿಷೇಧ ಮಾಡಲಾಗಿದೆ.

ಸಮಾವೇಶಕ್ಕೆ ಅಂದಾಜು ಒಂದು ಲಕ್ಷ ಜನರು ಸೇರುವ ನಿರೀಕ್ಷೆಯಿದ್ದು, ಸುಗಮ ಸಂಚಾರಕ್ಕೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಬಳ್ಳಾರಿ ರಸ್ತೆಯ ಹೆಬ್ಬಾಳದಿಂದ ಮೇಖ್ರಿ ವೃತ್ತದವರೆಗೆ, ಮೇಖ್ರಿ ವೃತ್ತದಿಂದ ಜಯಮಹಲ್ ರಸ್ತೆ ಹಾಗೂ ಕಂಟೋನ್‌ಮೆಂಟ್ ರಸ್ತೆವರೆಗೆ, ಯಶವಂತಪುರ–ಟಾಟಾ ವಿಜ್ಞಾನ ಸಂಸ್ಥೆ–ಮೇಖ್ರಿ ವೃತ್ತದವರೆಗೆ ಕಾರ್ಯಕ್ರಮಕ್ಕೆ ತೆರಳುವ ವಾಹನಗಳನ್ನು ಹೊರತುಪಡಿಸಿ ಬೇರೆಡೆಗೆ ತೆರಳುವ ವಾಹನಗಳು ಪರ್ಯಾಯ ಮಾರ್ಗವನ್ನು ಬಳಸಬೇಕು ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

ಅಂದು ಜಯಮಹಲ್ ರಸ್ತೆ, ತರಳಬಾಳು ರಸ್ತೆ, ನಂದಿದುರ್ಗ ರಸ್ತೆ, ಬಳ್ಳಾರಿ ರಸ್ತೆ, ಮೇಖ್ರಿ ವೃತ್ತದಿಂದ ಯಶವಂತಪುರದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

ಅಲ್ಲದೇ, ಹೆಬ್ಬಾಳ ಜಂಕ್ಷನ್, ಯಶವಂತಪುರದ ಗೋವರ್ಧನ್ ಬಳಿ, ಸಿಎಂಟಿಐ ಜಂಕ್ಷನ್, ನೈಸ್ ರಸ್ತೆ ಜಂಕ್ಷನ್ ಬಳಿ ಭಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ ಎಂದು ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ನಿಯಮ ಉಲ್ಲಂಘನೆ: 338 ಪ್ರಕರಣ

ಬೆಂಗಳೂರು: ಶಾಲಾ ವಾಹನಗಳ ಚಾಲಕರ ವಿರುದ್ಧ ಸಂಚಾರ ಪೊಲೀಸರು ಬುಧವಾರ ವಿಶೇಷ ಕಾರ್ಯಾಚರಣೆ ನಡೆಸಿ, ಸಂಚಾರ ನಿಯಮ ಉಲ್ಲಂಘಿಸಿದ 338 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬುಧವಾರ ಬೆಳಿಗ್ಗೆ 7.30ರಿಂದ 9.30ರವರೆಗೆ ಕಾರ್ಯಾಚರಣೆ ನಡೆಸಲಾಗಿದೆ.

2,059 ವಾಹನಗಳನ್ನು ತಪಾಸಣೆ ಮಾಡಲಾಗಿದ್ದು, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ 7 ಹಾಗೂ ಹೆಚ್ಚುವರಿ ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ 331 ಚಾಲಕರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.



ಸಾಂಕೇತಿಕ ಚಿತ್ರ


ಬಿಎಂಟಿಸಿ: ಗುಜರಿಗೆ ಹೋಗಬೇಕಾಗಿದ್ದ ಬಸ್‌ಗಳಿಗೆ ಮರುಜೀವ ನೀಡಿದ ತಾಂತ್ರಿಕ ಸಿಬ್ಬಂದಿ

ಡಿಪೊಗಳಿಗೆ ಬರಲಿದೆ 'ಭೋಜನ ಬಂಡಿ'

• ಬಾಲಕೃಷ್ಣ ಪಿ.ಎಚ್.



ಕಾರ್ಯಾಚರಣೆ ನಿಲ್ಲಿಸಿರುವ ಬಿಎಂಟಿಸಿ ಬಸ್ ಅನ್ನು ಕ್ಯಾಂಟೀನ್ ಆಗಿ ಪರಿವರ್ತಿಸಿರುವುದು.


ಬಿಎಂಟಿಸಿ ಬಸ್ ಅನ್ನು ಪರಿವರ್ತಿಸಿ ನಿರ್ಮಿಸಿರುವ 'ಭೋಜನ ಬಂಡಿ'ಯನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಅವರು ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ.ಪ್ರಭಾಕರ್, ತಾಂತ್ರಿಕ ಸಿಬ್ಬಂದಿಯೊಂದಿಗೆ ವೀಕ್ಷಿಸಿದರು

ಬೆಂಗಳೂರು: ಹಳೇ ಬಸ್‌ಗಳನ್ನು 'ಭೋಜನ ಬಂಡಿ' ಹೆಸರಿನ ಕ್ಯಾಂಟೀನ್‌ಗಳನ್ನಾಗಿ ಪರಿವರ್ತಿಸಿ, ಕ್ಯಾಂಟೀನ್‌ಗಳಿಲ್ಲದ ಡಿಪೊಗಳಲ್ಲಿ ಅಳವಡಿಸಲು ಬಿಎಂಟಿಸಿ ನಿರ್ಧರಿಸಿದೆ. ಈಗಾಗಲೇ ಒಂದು 'ಭೋಜನ ಬಂಡಿ' ತಯಾರಾಗಿದ್ದು, ಯಶವಂತಪುರ ಅಥವಾ ಪೀಣ್ಯ ಡಿಪೊದಲ್ಲಿ ಅನುಷ್ಠಾನಗೊಳ್ಳಲಿದೆ.

ಬಿಎಂಟಿಸಿ ಉತ್ತರ ವಲಯದ 10 ಲಕ್ಷ ಕಿಲೋಮೀಟರ್ ಸಂಚರಿಸಿ, ಕಾರ್ಯ ಸ್ಥಗಿತಗೊಳಿಸಿರುವ ಬಸ್ ಅನ್ನು ಕಾರ್ಯಾಗಾರ-4ರ ಸಹಾಯಕ ತಾಂತ್ರಿಕ ಎಂಜಿನಿಯರ್ ಆರ್. ಆನಂದಕುಮಾರ್ ಮತ್ತು ತಾಂತ್ರಿಕ ಸಹಾಯಕರು ತಮ್ಮ ಕೈಚಳಕದಿಂದ ಕ್ಯಾಂಟೀನ್ ಆಗಿ ಪರಿವರ್ತಿಸಿದ್ದಾರೆ.

'ವ್ಯವಸ್ಥಾಪಕ ನಿರ್ದೇಶಕರು, ಕೇಂದ್ರ ಕಚೇರಿಯ ಮುಖ್ಯ ತಾಂತ್ರಿಕ ಎಂಜಿನಿಯರ್, ಕೇಂದ್ರೀಯ ಕಾರ್ಯಾಗಾರದ ಕಾರ್ಯ ವ್ಯವಸ್ಥಾಪಕರ ಮಾರ್ಗದರ್ಶನದಲ್ಲಿ ಬಸ್ ಕ್ಯಾಂಟೀನ್ ಮಾಡಲು ಸಾಧ್ಯವಾಯಿತು' ಎಂದು ಆನಂದಕುಮಾರ್ ಪ್ರತಿಕ್ರಿಯಿಸಿದರು.

ಈ ಕ್ಯಾಂಟೀನ್ ಬಸ್‌ಗೆ 'ಭೋಜನ ಬಂಡಿ' ಎಂದು ಹೆಸರಿಡಲಾಗಿದೆ. ಬಸ್‌ನ ಎರಡೂ ಬದಿಯಲ್ಲಿ 'ಭೋಜನ ಬಂಡಿ... ಬನ್ನಿ ಕುಳಿತು ಊಟ ಮಾಡೋಣ' ಎಂಬ ಘೋಷವಾಕ್ಯಗಳಿವೆ.

ಬಸ್ ಒಳಗಿನ ಸೀಟ್‌ಗಳನ್ನು ತೆಗೆದು ಟೇಬಲ್ ಮತ್ತು ಆಸನಗಳನ್ನು ಜೋಡಿಸಲಾಗಿದೆ. ಕೈತೊಳೆಯುವ ಬೇಸಿನ್, ಕುಡಿಯುವ ನೀರಿನ ವ್ಯವಸ್ಥೆ, ಫ್ಯಾನ್‌ಗಳ ವ್ಯವಸ್ಥೆ ಇದೆ. ಬೆಳಕಿಗಾಗಿ ಚಾವಣಿಯಲ್ಲಿ ಗಾಜಿನ ಕಿಟಕಿ ಇದೆ. ಗಾಳಿ, ಬೆಳಕಿಗಾಗಿ ಬಸ್ಸಿನ ಎರಡೂ ಬದಿಗಳಲ್ಲಿ ಕಿಟಕಿಗಳನ್ನು ಇಡಲಾಗಿದೆ. ಬಸ್ ಚಾವಣಿಯ ಮೇಲೆ ನೀರಿನ ಟ್ಯಾಂಕ್ ಜೋಡಿಸಲಾಗಿದೆ. ಹೋಟೆಲ್‌ಗಳಲ್ಲಿ ಇರುವ ಎಲ್ಲ ಸೌಲಭ್ಯಗಳೂ 'ಭೋಜನ ಬಂಡಿ'ಯಲ್ಲಿವೆ.

17 ಡಿಪೊಗಳಿಗೆ 'ಬಂಡಿ': ನಗರದಲ್ಲಿ 49 ಬಿಎಂಟಿಸಿ ಡಿಪೊಗಳು ಕಾರ್ಯ ನಿರ್ವಹಿಸುತ್ತಿವೆ. ಕೆಲವು ಕಡೆಗಳಲ್ಲಿ ಕ್ಯಾಂಟೀನ್‌ಗಳಿವೆ. ಹಲವು ಕಡೆಗಳಲ್ಲಿ ಇಲ್ಲ. ಕಾರ್ಯಾಚರಣೆ ನಿಲ್ಲಿಸಿರುವ ಬಸ್‌ಗಳನ್ನು ಕ್ಯಾಂಟೀನ್ ಗಳನ್ನಾಗಿ ಪರಿವರ್ತಿಸಿ 17 ಡಿಪೊಗಳಲ್ಲಿ ಅಳವಡಿಸುವ ಯೋಜನೆ ಇದೆ. ಸದ್ಯ ಒಂದು ಕ್ಯಾಂಟೀನ್ ತಯಾರಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಬಿಎಂಟಿಸಿ ಸಿಬ್ಬಂದಿಗೆ ಅತಿ ಕಡಿಮೆ ಬೆಲೆಯಲ್ಲಿ ಊಟ, ತಿಂಡಿ ನೀಡಲು ಈ ಕ್ಯಾಂಟೀನ್‌ಗಳು ಬಳಕೆಯಾಗಲಿವೆ. ಕ್ಯಾಂಟೀನ್ ಅನ್ನು ಬಿಎಂಟಿಸಿ ವತಿಯಿಂದಲೇ ನಡೆಸುವ ಅಥವಾ ಹೊರಗೆ ಗುತ್ತಿಗೆ ನೀಡುವ ಬಗ್ಗೆ ಶೀಘ್ರ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

'ಅತ್ಯುತ್ತಮ ಕ್ಯಾಂಟೀನ್'

ಬಿಎಂಟಿಸಿ ತಾಂತ್ರಿಕ ಎಂಜಿನಿಯರ್‌ಗಳು ಸಂಚಾರ ನಿಲ್ಲಿಸಿರುವ ಬಸ್ ಸಹಿತ ನಮ್ಮಲ್ಲಿರುವ ಸಂಪನ್ಮೂಲವನ್ನೇ ಬಳಸಿಕೊಂಡು ಅತ್ಯುತ್ತಮ ಕ್ಯಾಂಟೀನ್ ನಿರ್ಮಾಣ ಮಾಡಿದ್ದಾರೆ. ಈ ವಿನೂತನ 'ಭೋಜನ ಬಂಡಿ'ಯನ್ನು ಅಗತ್ಯ ಇರುವಲ್ಲಿ ಅಳವಡಿಸಲಾಗುವುದು ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ತಿಳಿಸಿದರು.

ಅರಣ್ಯಾಧಿಕಾರಿ ಖುದ್ದು ಹಾಜರಿಗೆ ಹೈಕೋರ್ಟ್ ಆದೇಶ

ಬೆಂಗಳೂರು: ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ಮಾನ್ಯ ಮಾಡದೆ, ಅರಣ್ಯ ಒತ್ತುವರಿ ಆರೋಪದಡಿ ಸಾಗುವಳಿ ಚೀಟಿ ಹೊಂದಿದ ರೈತರ ಮಾವಿನ ತೋಪುಗಳನ್ನು ತೆರವುಗೊಳಿಸಿದ ಆರೋಪಕ್ಕೆ ಗುರಿಯಾಗಿರುವ ಅರಣ್ಯಾಧಿಕಾರಿಗಳ ನಡೆಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ಉಪ್ಪಾರಪಲ್ಲಿಯ ಗುಲ್ಜಾರ್ ಪಾಷ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಮುಖ್ಯ ನ್ಯಾ. ಪಿ.ಎಸ್.ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್, 'ರೈತರ ಮಾವಿನ ತೋಪಿನಲ್ಲಿನ ಮರಗಳನ್ನು ಕತ್ತರಿಸದಂತೆ ಹೈಕೋರ್ಟ್ ಮಧ್ಯಂತರ ತಡೆ ನೀಡಿತ್ತು. ಆದರೂ, ಅರಣ್ಯಾಧಿಕಾರಿಗಳು ಒತ್ತುವರಿ ಆರೋಪದಡಿ 1 ಲಕ್ಷ 30 ಸಾವಿರಕ್ಕೂ ಹೆಚ್ಚಿನ ಮರಗಳನ್ನು ಕಡಿಯಲು ಕಾರಣವಾಗಿದ್ದಾರೆ' ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು ಅರ್ಜಿದಾರರ ಪರ ಆಕ್ಷೇಪಣೆಯನ್ನು ಬಲವಾಗಿ ಅಲ್ಲಗಳೆದರು. 'ಕರ್ನಾಟಕ ಅರಣ್ಯ ಕಾಯ್ದೆ ಅನುಸಾರ ಅರ್ಜಿದಾರರಿಗೆ ನೋಟಿಸ್ ನೀಡಿ ತೆರವಿಗೆ ಸೂಚಿಸಲಾಗಿದೆ. ಈ ಕುರಿತು 2015ರಲ್ಲೇ ತೆರವು ಆದೇಶ ಪ್ರಕಟಿಸಲಾಗಿದೆ. ಅರ್ಜಿದಾರರು ಈ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ. ಅಂತೆಯೇ, ಅರಣ್ಯ ಪ್ರದೇಶದಲ್ಲಿ ಮಾವಿನ ತೋಪು ಬೆಳೆಸಲು ಅವಕಾಶವಿಲ್ಲ. ಭಾವನಾತ್ಮಕವಾಗಿ ಮರ ಕತ್ತರಿಸಿದ್ದಾರೆ ಎಂಬುದಕ್ಕಿಂತಲೂ ಅರಣ್ಯ ಸಂಪತ್ತು ರಕ್ಷಣೆಯ ಬಗ್ಗೆಯೂ ನ್ಯಾಯಪೀಠ ಗಮನಿಸಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಪೀಠ, 'ಅರಣ್ಯ ಭೂಮಿ ಒತ್ತುವರಿಯಾಗಿದ್ದರೆ, ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಿತ್ತು. ಅದು ಬಿಟ್ಟು ಪ್ರಕರಣದ ವಿಚಾರಣೆ ಬಾಕಿಯಿರುವ ಸಂದರ್ಭದಲ್ಲಿ ಅನುಮತಿ ಪಡೆಯದೇ ಸಾವಿರಾರು ಮರಗಳನ್ನು ಏಕೆ ಕತ್ತರಿಸಲಾಗಿದೆ? ಎಂದು ಪ್ರಶ್ನಿಸಿತಲ್ಲದೆ, ಪ್ರತಿವಾದಿಗಳಾದ ಕೋಲಾರ ಜಿಲ್ಲೆ ಅರಣ್ಯ ಉಪ ಸಂರಕ್ಷಣಾಧಿಕಾರಿ ಏಡುಕೊಂಡಲ ಮತ್ತು ವಲಯ ಅರಣ್ಯಾಧಿಕಾರಿ ಖುದ್ದು ಹಾಜರಿಗೆ ಆದೇಶಿಸಿ ವಿಚಾರಣೆ ಮುಂದೂಡಿತು.

ಪಿಎಸ್‌ಐ ಅಮಾನತು: ಸದನದಲ್ಲಿ ಗೃಹ ಸಚಿವ ಪರಮೇಶ್ವರ ಹೇಳಿಕೆ

ರಾಮನಗರ: ವಕೀಲರ ಹೋರಾಟಕ್ಕೆ ತೆರೆ

ಪ್ರಜಾವಾಣಿ ವಾರ್ತೆ


ತನ್ವೀರ್ ಹುಸೇನ್


ಚಾನ್ ಪಾಷಾ

ರಾಮನಗರ: ವಕೀಲರ ವಿರುದ್ಧ ಪ್ರಕರಣ ದಾಖಲಿಸಿದ ಆರೋಪದ ಮೇಲೆ ಇಲ್ಲಿನ ಐಜೂರು ಪೊಲೀಸ್ ಠಾಣೆ ಪಿಎಸ್‌ಐ ಆರ್. ಸಯ್ಯದ್ ತನ್ವೀರ್ ಹುಸೇನ್ ಅವರನ್ನು ಬುಧವಾರ ಅಮಾನತುಗೊಳಿಸಲಾಗಿದೆ.

ಇದರೊಂದಿಗೆ ಪಿಎಸ್‌ಐ ಹುಸೇನ್ ಅಮಾನತಿಗೆ ಆಗ್ರಹಿಸಿ ರಾಮನಗರ ವಕೀಲರು ಒಂಬತ್ತು ದಿನಗಳಿಂದ ನಡೆಸುತ್ತಿದ್ದ ಹೋರಾಟಕ್ಕೆ ತೆರೆ ಬಿದ್ದಿದೆ.

ಬುಧವಾರ ಬೆಳಿಗ್ಗೆ ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಗೃಹ ಸಚಿವ ಜಿ. ಪರಮೇಶ್ವರ ಅವರು ಐಜೂರು ಠಾಣೆಯ ಪಿಎಸ್‌ಐ ಅಮಾನತು ವಿಷಯವನ್ನು ಸದನದಲ್ಲಿ ಪ್ರಕಟಿಸಿದರು.

ಸಚಿವರ ಹೇಳಿಕೆ ಬೆನ್ನಲ್ಲೇ ಕೇಂದ್ರ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಅವರು ಅಮಾನತುಗೊಳಿಸಿ ಆದೇಶ ಹೊರಡಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಧರಣಿನಿರತ ವಕೀಲರು, ಜಿಲ್ಲಾಧಿಕಾರಿ ಕಚೇರಿ ಬಳಿ ಸಂಭ್ರಮಾಚರಣೆ ಮಾಡಿದರು.

'ಚನ್ನಪಟ್ಟಣ ಡಿವೈಎಸ್‌ಪಿ ಇಡೀ ಘಟನೆಯ ವಿಚಾರಣೆ ನಡೆಸಿ, ವರದಿ ನೀಡಲಿದ್ದಾರೆ. ವಿಚಾರಣೆಗೆ ಸಹಾಯವಾಗುವ ನಿಟ್ಟಿನಲ್ಲಿ ಪಿಎಸ್‌ಐ ಅಮಾನತು ಮಾಡಲಾಗಿದೆ' ಎಂದು ಪರಮೇಶ್ವರ ತಿಳಿಸಿದರು.

'ಪಿಎಸ್‌ಐ ಅಮಾನತಿಗೆ ಒತ್ತಾಯಿಸಿ ವಕೀಲರು ಶುಕ್ರವಾರ ವಿಧಾನಸೌಧ ಚಲೊ ಮತ್ತು ಬೆಂಗಳೂರಿನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಪ್ರಕರಣದ ಮಾಹಿತಿ ಪಡೆದ ಸರ್ಕಾರ ಅಮಾನತು ನಿರ್ಧಾರ ಕೈಗೊಂಡಿದೆ. ಇಡೀ ಘಟನೆಗೆ ಕಾರಣವಾದ ವಕೀಲ ಚಾನ್ ಪಾಷಾ ಅಪರಾಧ ಹಿನ್ನೆಲೆ ಹೊಂದಿದ್ದು, ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದರು.

'ವಕೀಲರ ಧರಣಿಗೆ ಎಚ್‌ಡಿಕೆ ಕಾರಣ'

ಕನಕಪುರ: ರಾಮನಗರದಲ್ಲಿ ವಕೀಲರಿಂದ ಧರಣಿ ಮಾಡಿಸಿದ್ದೇ ಜೆಡಿಎಸ್. ಧರಣಿಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್. ಡಿ. ಕುಮಾರಸ್ವಾಮಿ ಕಾರಣ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪ ಮಾಡಿದರು.

'ರಾಮನಗರದಲ್ಲಿ ಡಿ.ಕೆ. ಸಹೋದರರಿಂದ ಅಶಾಂತಿ ಸೃಷ್ಟಿಯಾಗಿದೆ' ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತು ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ವಕೀಲರ ವಿಷಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ರಾಜಕೀಯ ಮಾಡುತ್ತಿವೆ. ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಬಿಟ್ಟರೆ ಅವರಿಗೆ ಬೇರೆ ಕೆಲಸವಿಲ್ಲ ಎಂದರು.

'ಅಶಾಂತಿ ಸೃಷ್ಟಿಸುವುದೇ ಬಿಜೆಪಿಯವರ ಕೆಲಸ. ಅವರು ಯಾವಾಗಲೂ ಕೋಮು ರಾಜಕೀಯ ಮಾಡುತ್ತಾರೆ. ಅವರಿಗೆ ಅಲ್ಪಸಂಖ್ಯಾತರನ್ನು ಕಂಡರೆ ಆಗುವುದಿಲ್ಲ. ರಾಮನಗರದ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮತ್ತು ಪಿಎಸ್‌ಐ ಸಯ್ಯದ್ ತನ್ವೀರ್ ಹುಸೇನ್ ಅಲ್ಪಸಂಖ್ಯಾತರಾಗಿದ್ದರಿಂದ ವಕೀಲರನ್ನು ಮುಂದಿಟ್ಟುಕೊಂಡು ಬಿಜೆಪಿ ರಾಜಕೀಯ ಮಾಡಿದೆ. ಅಲ್ಪಸಂಖ್ಯಾತ ಸಮುದಾಯದ ಅಧಿಕಾರಿ ಬೇಡ ಎಂದು ನಿನ್ನೆ ಅಧಿವೇಶನದಲ್ಲಿ ಸಹ ಒತ್ತಾಯಿಸಿದ್ದರು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಕೀಲನ 'ಪೋಸ್ಟ್' ಅವಾಂತರ

ವಾರಾಣಸಿಯ ಗ್ಯಾನವಾಪಿ ಮಸೀದಿಯಲ್ಲಿ ಹಿಂದೂಗಳಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಿದ ನ್ಯಾಯಾಲಯ ಆದೇಶದ ವಿರುದ್ಧ ರಾಮನಗರ ವಕೀಲ ಚಾನ್ ಪಾಷಾ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು.

ಫೆ.3ರಂದು ಬಿಜೆಪಿಯ ಶಿವಾನಂದ ದೂರಿನ ಮೇರೆಗೆ ಪಾಷಾ ವಿರುದ್ಧ ಪ್ರಕರಣ ದಾಖಲಾಗಿತ್ತು. ಜಿಲ್ಲಾ ವಕೀಲರ ಸಂಘ ಪಾಷಾ ವಿರುದ್ಧ ಕ್ರಮ ಕೈಗೊಳ್ಳಲು ಫೆ.6ರಂದು ಸಭೆ ಕರೆಯಿತು. ಸೌಹಾರ್ದವಾಗಿ ಪ್ರಕರಣ ಬಗೆಹರಿಸಿಕೊಳ್ಳಿ ಎಂದು ಮನವಿ ಸಲ್ಲಿಸಲು ದಲಿತರು, ಪ್ರಗತಿಪರರು ಸಭೆಗೆ ತೆರಳಿದ್ದರು. ಆಗ ಗಲಾಟೆ ನಡೆದಿತ್ತು.

ವಕೀಲರ ಸಂಘದ ಅಧ್ಯಕ್ಷ ಬಿ.ಎಂ. ಶ್ರೀವತ್ಸ ಅಂದು ರಾತ್ರಿ ಪಾಷಾ ಮತ್ತು 40 ಮುಖಂಡರ ವಿರುದ್ಧ ನೀಡಿದ್ದ ದೂರಿನ ಮೇರೆಗೆ ಐಜೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದಕ್ಕೆ ಪ್ರತಿಯಾಗಿ ಫೆ.7ರಂದು ರಫೀಕ್ ಖಾನ್ ದೂರಿನ ಮೇರೆಗೆ 40 ವಕೀಲರ ವಿರುದ್ಧ ಪ್ರಕರಣ ದಾಖಲಿಸಿದ್ದ ಐಜೂರು ಪಿಎಸ್‌ಐ ಅಮಾನತಿಗೆ ಆಗ್ರಹಿಸಿ ವಕೀಲರು ಧರಣಿ ಆರಂಭಿಸಿದ್ದರು.

ವಕೀಲರ ಹೋರಾಟಕ್ಕೆ ಸಂಬಂಧಿಸಿ, ಪಿಎಸ್‌ಐ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ನಾನು ಮತ್ತು ಸ್ಥಳೀಯ ಶಾಸಕರು ಅಧಿಕಾರಿಗಳಿಗೆ ಸೂಚಿಸಿದ್ದೆವು

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ


ಪೊಲೀಸ್ ಕರ್ತವ್ಯ ಕೂಟ

ಉತ್ತರಪ್ರದೇಶದ ಲಖನೌದಲ್ಲಿ ಇತ್ತೀಚೆಗೆ ಮುಕ್ತಾಯವಾದ 67ನೇ ಅಖಿಲ ಭಾರತ ಪೊಲೀಸ್ ಕರ್ತವ್ಯಕೂಟದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ತಂಡವು ಪಾಲ್ಗೊಂಡು, ವಿವಿಧ ವಿಭಾಗದಲ್ಲಿ ಪದಕ ಹಾಗೂ ಟ್ರೋಫಿಗಳನ್ನು ಪಡೆದಿದೆ. ವಿಜೇತರಾದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ರಾಜ್ಯ ಅಪರಾಧ ದಾಖಲೆಗಳ ವಿಭಾಗದ(ಎಸ್‌ಸಿಆರ್‌ಬಿ) ಎಡಿಜಿಪಿ ಪ್ರಣಬ್ ಮೊಹಂತಿ, ಎಸ್‌ಸಿಆರ್‌ಬಿ ಎಸ್.ಪಿ ಲಕ್ಷ್ಮಣ ನಿಂಬರಗಿ ಉಪಸ್ಥಿತರಿದ್ದರು.

ಚಂದಾಪುರ ಕೆರೆ: ಎಸ್‌ಟಿಪಿ ನಿರ್ಮಿಸಲು ಈಶ್ವರ ಖಂಡ್ರೆ ಆದೇಶ

ಪ್ರಜಾವಾಣಿ ವಾರ್ತೆ


ಈಶ್ವರ ಖಂಡ್ರೆ

ಬೆಂಗಳೂರು: ಚಂದಾಪುರ ಕೆರೆಗೆ ನೇರವಾಗಿ ತ್ಯಾಜ್ಯ ನೀರು ಸೇರದಂತೆ, ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಎಸ್‌ಟಿಪಿಗಳನ್ನು ನಿರ್ಮಿಸಲು ತುರ್ತು ಕ್ರಮಕೈಗೊಳ್ಳುವಂತೆ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಆದೇಶಿಸಿದರು.

ಚಂದಾಪುರ ಕೆರೆ ಸಂರಕ್ಷಣೆ ಕುರಿತಂತೆ ಕ್ರಿಯಾಯೋಜನೆ ಅನುಷ್ಠಾನ ನಿಗಾ ಸಮಿತಿಯ ಸಭೆಯಲ್ಲಿ ಬುಧವಾರ ಮಾತನಾಡಿದ ಅವರು, ಎನ್.ಜಿ.ಟಿ. ಆದೇಶದ ಮೇರೆಗೆ ಸರ್ಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಠೇವಣಿ ಇಟ್ಟಿರುವ ₹500 ಕೋಟಿಯಲ್ಲಿ ₹340 ಕೋಟಿ ಬಳಸಿಕೊಂಡು ನಾಲ್ಕು ಎಸ್‌ಟಿಪಿ ನಿರ್ಮಿಸಲು ಸೂಚಿಸಿದರು.

'ಚಂದಾಪುರ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಸುಮಾರು 9,839 ಹೆಕ್ಟೇರ್ ಪ್ರದೇಶವಿದೆ. ಇಲ್ಲಿರುವ ಸುಮಾರು 543 ಕೈಗಾರಿಕೆಗಳಲ್ಲಿ 206 ಕೈಗಾರಿಕೆಗಳು ದ್ರವ ತ್ಯಾಜ್ಯ ಉತ್ಪತ್ತಿ ಮಾಡುತ್ತಿವೆ. ಈ ಪೈಕಿ 54 ಕಂಪನಿಗಳು ಅಪಾಯಕಾರಿ ತ್ಯಾಜ್ಯ ಹೊರಹಾಕುತ್ತಿದ್ದು, ಇವುಗಳಿಗೆ ನೋಟಿಸ್ ನೀಡಲಾಗಿದೆ. ಇದರಲ್ಲಿ 12 ಕೈಗಾರಿಕಾ ಘಟಕಗಳನ್ನು ಮುಚ್ಚಲಾಗಿದೆ. ಈ ಘಟಕಗಳಿಂದ ₹ 141 ಕೋಟಿ ಪರಿಹಾರ ಬರಬೇಕಿದೆ' ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

'ಈ ಎಲ್ಲ ಕೈಗಾರಿಕೆಗಳನ್ನು ಮೂರನೇ ಸಂಸ್ಥೆಯಿಂದ ತಪಾಸಣೆ ಮಾಡಿಸಿ, ಪರಿಹಾರ ಪಡೆದುಕೊಳ್ಳಬೇಕು. ಹಣ ಪಾವತಿಸದ ಕೈಗಾರಿಕೆಗಳ ಬ್ಯಾಂಕ್ ಖಾತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ವಹಿಸಬೇಕು' ಎಂದು ಸಚಿವರು ಸೂಚಿಸಿದರು.

ದ್ರವ ತ್ಯಾಜ್ಯವನ್ನು ಸಂಸ್ಕರಿಸದೇ ರಾಜಕಾಲುವೆ ಮತ್ತು ಕೆರೆಗಳಿಗೆ ನೇರವಾಗಿ ಹರಿಯ ಬಿಡುತ್ತಿರುವ ಬಹುಮಹಡಿ ಕಟ್ಟಡಗಳು, ಕೈಗಾರಿಕಾ ಘಟಕಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಸ್‌ಟಿಪಿಗಳನ್ನು ನಿರ್ಮಿಸಿ, ತ್ಯಾಜ್ಯ ತಡೆಗಟ್ಟಲು ಭೂಮಿಯನ್ನು ಗುರುತಿಸಲಾಗಿದೆ. ಜಿಗಣಿ, ಬೊಮ್ಮಸಂದ್ರ, ಹೆಬ್ಬಗೋಡಿ ಮತ್ತು ಚಂದಾಪುರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ಗುರುತಿಸಲಾಗಿರುವ 9.36 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ತ್ವರಿತಗೊಳಿಸಿ, ನಿಯಮಾನುಸಾರ ಅವರಿಗೆ ಸೂಕ್ತ ಪರಿಹಾರ ಪಾವತಿಸಲು ಸೂಚಿಸಿದರು.

ಬಿಡಿಎಗೆ ನೋಟಿಸ್

ಬೆಳ್ಳಂದೂರು ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿಎಸ್‌ಟಿಪಿಗಳ ಕಾಮಗಾರಿಯನ್ನು ಪೂರ್ಣಗೊಳಿಸದ ಬಿಡಿಎಗೆ ನೋಟಿಸ್ ನೀಡಲು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಸೂಚಿಸಿದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸೂಚನೆಯಂತೆ, ಡಿಸೆಂಬರ್‌ನಲ್ಲೇ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ ಈವರೆಗೆ ಹೂಳು ತೆಗೆಯುವ ಕಾರ್ಯವೇ ಮುಗಿದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಬಿಡಿಎಗೆ ನೋಟಿಸ್ ನೀಡಲು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಆದೇಶಿಸಿದರು.

ಪರಿಷತ್‌ನಲ್ಲಿ ಲೋಕಸಭಾ ಚುನಾವಣೆ ಚರ್ಚೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಕುರಿತು ವಿಧಾನ ಪರಿಷತ್‌ನಲ್ಲಿ ಬುಧವಾರ ಸ್ವಾರಸ್ಯಕರ ಚರ್ಚೆ ನಡೆಯಿತು.

ಕಲಾಪ ಆರಂಭವಾಗುತ್ತಿದಂತೆ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಪಡೆದ ಪುಟ್ಟಣ್ಣ ಅವರು ಪ್ರಮಾಣವಚನ ಸ್ವೀಕರಿಸಿದರು. ಆ ಸಮಯದಲ್ಲಿ ಉಪಸ್ಥಿತರಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ-ಜೆಡಿಎಸ್ ಮೈತ್ರಿಗೆ ಮೊದಲ ಪ್ರಯತ್ನದಲ್ಲೇ ಸೋಲಾಗಿದೆ. ಪುಟ್ಟಣ್ಣ ಗೆಲುವು ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿ ಎಂದರು.

'ಮೈತ್ರಿಯ ಸೋಲು ಇದೇ ಕೊನೆ. ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಪಕ್ಷಗಳು 28ಕ್ಕೆ 28 ಸ್ಥಾನವನ್ನೂ ಗೆಲ್ಲಲಿವೆ' ಎಂದು ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

'ಸಾಧ್ಯವೇ ಇಲ್ಲ. ಸ್ವಲ್ಪವಾದರೂ ಸತ್ಯಕ್ಕೆ ಹತ್ತಿರವಾದ ಮಾತು ಹೇಳಿ. ಕಾಂಗ್ರೆಸ್ ಈ ಬಾರಿ 20 ಸ್ಥಾನಗಳಲ್ಲಿ ಗೆಲುವು ಪಡೆಯಲಿದೆ' ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು. 'ನಿಮ್ಮ ದೃಷ್ಟಿ ಬೀಳದ ಆ ಎಂಟು ಕ್ಷೇತ್ರಗಳು ಯಾವುವು ಹೇಳಿ' ಎಂದು ಬಿಜೆಪಿಯ ತೇಜಸ್ವಿನಿ ಗೌಡ ಕೋರಿದರು.

'ಅದೆಲ್ಲ ಬಿಡಿ, ನಾನು ಸತ್ಯಕ್ಕೆ ಹತ್ತಿರವಾದ ಮಾತು ಹೇಳಿರುವೆ. ಚುನಾವಣೆಯ ಫಲಿತಾಂಶ ಬಂದ ನಂತರ ಗೊತ್ತಾಗುತ್ತದೆ. ಪುಟ್ಟಣ್ಣ ಐದನೇ ಬಾರಿ ಗೆದ್ದಿದ್ದಾರೆ. ಇನ್ನಷ್ಟು ಅವಧಿ ಗೆದ್ದು ಸಭಾಪತಿ ಬಸವರಾಜ ಹೊರಟ್ಟಿ ಅವರ ದಾಖಲೆ ಸರಿಗಟ್ಟಲಿ' ಎಂದು ಸಿದ್ದರಾಮಯ್ಯ ಹಾರೈಸಿದರು.

ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, 'ಹೊರಟ್ಟಿ ಅವರು ಬಿಜೆಪಿಯಿಂದ ಸ್ಪರ್ಧಿಸಿ ಇನ್ನೂ ಎರಡು ಅವಧಿಗೆ ಗೆಲುವು ಪಡೆಯಲಿ' ಎಂದರು. ಅದಕ್ಕೆ ಸಿದ್ದರಾಮಯ್ಯ, 'ಹೊರಟ್ಟಿ ಅವರು ಯಾವ ಪಕ್ಷದಿಂದ ಗೆದ್ದರೂ, ಪಕ್ಷಾತೀತವಾಗಿದ್ದಾರೆ. ಸಭಾಪತಿ ಸ್ಥಾನಕ್ಕೆ ಗೌರವ ತಂದಿದ್ದಾರೆ. ಅವರ ದಾಖಲೆ ಮುರಿಯಲು ಸದ್ಯಕ್ಕೆ ಯಾರಿಗೂ ಸಾಧ್ಯವಿಲ್ಲ' ಎಂದರು.

ಮುಖ್ಯಾಂಶಗಳು

- ಪುಟ್ಟಣ್ಣ ಗೆಲುವು ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿ ಎಂದ ಸಿ.ಎಂ
- ಮೈತ್ರಿಯ ಸೋಲು ಇದೇ ಕೊನೆ ಎಂದ ಕೋಟ ಶ್ರೀನಿವಾಸ ಪೂಜಾರಿ
- ಪುಟ್ಟಣ್ಣ ಅವರು ಸಭಾಪತಿ ಹೊರಟ್ಟಿ ದಾಖಲೆ ಸರಿಗಟ್ಟಲಿ – ಸಿದ್ದರಾಮಯ್ಯ

ನೂತನ ಸದಸ್ಯ ಪುಟ್ಟಣ್ಣ ಮಾತನಾಡಿ, 'ಉಪ ಚುನಾವಣೆ ಫಲಿತಾಂಶ ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿ ಎಂದು ಮೈತ್ರಿ ಪಕ್ಷಗಳೇ ಹೇಳಿದ್ದವು. ಬಿಜೆಪಿ ಸದಸ್ಯನಾಗಿದ್ದಾಗ ನಮ್ಮದೇ ಪಕ್ಷ ಇದ್ದರೂ, ಅನುದಾನಿತ ಶಾಲಾ ಶಿಕ್ಷಕರ ಸಮಸ್ಯೆಗಳ ಕುರಿತು ಒಂದು ಸಭೆ ಆಯೋಜಿಸಲು ಸಾಧ್ಯವಾಗಲಿಲ್ಲ. ಇದರಿಂದ ಬೇಸರಗೊಂಡು ಪಕ್ಷ ತ್ಯಜಿಸಿದೆ' ಎಂದು ಪಕ್ಷಾಂತರಕ್ಕೆ ಸಮರ್ಥನೆ ನೀಡಿದರು.


ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ ಕಾಂಗ್ರೆಸ್‌ನ ಪುಟ್ಟಣ್ಣ ಅವರನ್ನು ಸಭಾಪತಿ ಬಸವರಾಜ ಹೊರಟ್ಟಿ ಅಭಿನಂದಿಸಿದರು —ಪ್ರಜಾವಾಣಿ ಚಿತ್ರ


ಸರ್ಕಾರಿ ಆಸ್ಪತ್ರೆಗಳಲ್ಲಿ ತಂತ್ರಜ್ಞಾನಗಳ ಅಳವಡಿಕೆಗೆ ಸಂಬಂಧಿಸಿದಂತೆ ದಿನೇಶ್ ಗುಂಡೂರಾವ್ ಒಪ್ಪಂದಕ್ಕೆ ಸಹಿ ಹಾಕಿದರು. ಇಲಾಖೆ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಆಯುಕ್ತ ಡಿ. ರಂದೀಪ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ನವೀನ್ ಭಟ್ ಪಾಲ್ಗೊಂಡಿದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಅಭಿಮತ

'ಡಿಜಿಟಲ್ ಕ್ರಾಂತಿಯಿಂದ ಎಲ್ಲರಿಗೂ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿಜಿಟಲ್ ತಂತ್ರಜ್ಞಾನದ ನೆರವಿನಿಂದಾಗಿ ಶೈಕ್ಷಣಿಕ ಕ್ರಾಂತಿ ಸಾಕಾರವಾಗಿದ್ದು, ಎಲ್ಲರಿಗೂ ಉನ್ನತ ಶಿಕ್ಷಣ ದೊರೆಯುತ್ತಿದೆ' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ತಿಳಿಸಿದರು.

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ (ಇಗ್ನೊ) ಬೆಂಗಳೂರು ಪ್ರಾದೇಶಿಕ ಕೇಂದ್ರದ 37ನೇ ಘಟಕೋತ್ಸವ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಶೈಕ್ಷಣಿಕ ಪ್ರಯಾಣದಲ್ಲಿ ಪದವಿ ಪ್ರಮುಖ ಮೈಲಿಗಲ್ಲು. ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನ, ಕೌಶಲ, ಬದ್ಧತೆ ಮುಖ್ಯ. ಮುಂದಿನ ದಶಕದಲ್ಲಿ ಜಗತ್ತಿನಲ್ಲಿಯೇ ಅಧಿಕ ಯುವಜನರನ್ನು ಹೊಂದಿದ ದೇಶ ಭಾರತವಾಗಲಿದೆ. ಶೇ 50 ರಷ್ಟು ಜನರು 35 ವರ್ಷದೊಳಗಿನವರಾಗಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾಲಯಗಳು ಗುಣಮಟ್ಟದ ಶಿಕ್ಷಣ ಒದಗಿಸಬೇಕು. ಯುವಜನರು ಕೂಡ ಯಾವುದೇ ವೃತ್ತಿಯಲ್ಲಿ ಯಶಸ್ಸು ಸಾಧಿಸಲು ಅಡ್ಡ ಮಾರ್ಗ ಹಿಡಿಯದೆ, ನಿರಂತರ ಪರಿಶ್ರಮ ಪಡಬೇಕು. ಜ್ಞಾನವನ್ನು ಎಲ್ಲ ಮೂಲಗಳಿಂದ ಪಡೆದು, ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು' ಎಂದು ಹೇಳಿದರು.

'ಕೈಗಾರಿಕೋದ್ಯಮ ಸೇರಿ ವಿವಿಧ ವೃತ್ತಿಯಲ್ಲಿ ಇರುವವರಿಗೂ ಉನ್ನತ ಶಿಕ್ಷಣದ ಕನಸನ್ನು ದೂರಶಿಕ್ಷಣ ಸಾಕಾರಗೊಳಿಸುತ್ತಿದೆ. ಈ ವ್ಯವಸ್ಥೆಯಿಂದ ಕುಟುಂಬಕ್ಕೆ ನೆರವಾಗುವ ಜತೆಗೆ ಶೈಕ್ಷಣಿಕ ಪ್ರಗತಿಯೂ ಸಾಧ್ಯವಾಗುತ್ತಿದೆ. ವಿಶ್ವದ ಅತಿ ದೊಡ್ಡ ಮುಕ್ತ ವಿಶ್ವವಿದ್ಯಾಲಯವಾಗಿರುವ ಇಗ್ನೊ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಗುಣಮಟ್ಟದ ಶಿಕ್ಷಣ ಒದಗಿಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಗ್ನೊ ಬೆಂಗಳೂರು ಪ್ರಾದೇಶಿಕ ಕೇಂದ್ರದ ಹಿರಿಯ ಪ್ರಾದೇಶಿಕ ನಿರ್ದೇಶಕಿ ಎಸ್. ರಾಧಾ, 'ವಿಶ್ವವಿದ್ಯಾಲಯವು ಡಿಪ್ಲೊಮಾ, ಸರ್ಟಿಫಿಕೇಟ್ ಸೇರಿ 318 ಕೋರ್ಸ್‌ಗಳನ್ನು ನಡೆಸುತ್ತಿದೆ. 2020ರಿಂದ 2023ರ ಅವಧಿಯಲ್ಲಿ ವಿವಿಧ ಕೋರ್ಸ್‌ಗಳಿಗೆ 13.33 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. 45 ಆನ್‌ಲೈನ್ ಕೋರ್ಸ್‌ಗಳನ್ನೂ ನಡೆಸಲಾಗುತ್ತಿದೆ. ಫ್ರೆಂಚ್, ಸ್ಪ್ಯಾನಿಷ್ ಸೇರಿ ವಿವಿಧ ಭಾಷೆಗಳ ಕೋರ್ಸ್‌ಗಳನ್ನೂ ನಡೆಸಲಾಗುತ್ತಿದ್ದು, ಇದರಿಂದ ಜಾಗತಿಕ ಮಟ್ಟದಲ್ಲಿ ಅವಕಾಶಗಳು ದೊರೆಯುತ್ತಿವೆ. ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ 2020ರಿಂದ 2023ರ ಅವಧಿಯಲ್ಲಿ 19,447 ಅಭ್ಯರ್ಥಿಗಳು ನೋಂದಣಿಯಾಗಿದ್ದಾರೆ. ಒಟ್ಟಾರೆ ನೋಂದಣಿ ಶೇ 7ರಷ್ಟು ಪ್ರಗತಿ ಕಂಡರೆ, ಆನ್‌ಲೈನ್ ನೋಂದಣಿ ಶೇ 95ರಷ್ಟು ಹೆಚ್ಚಳವಾಗಿದೆ' ಎಂದರು.



ಘಟಿಕೋತ್ಸವ ಸಮಾರಂಭದಲ್ಲಿ ಕಾರ್ತಿಕ್ ಕೆ. ಮತ್ತು ಅರ್ಪಣಾ ಪಟವರ್ಧನ್ ಚಿನ್ನದ ಪದಕ ಪಡೆದರು —ಪ್ರಜಾವಾಣಿ ಚಿತ್ರ

ಆರು ಮಂದಿಗೆ ಬಂಗಾರ ಪದಕ

'37ನೇ ಘಟಿಕೋತ್ಸವದಲ್ಲಿ ಬೆಂಗಳೂರು ಕೇಂದ್ರದಿಂದ 3,670 ಮಂದಿ ಪದವಿ ಪಡೆಯಲು ಅರ್ಹತೆ ಪಡೆದರೆ, ಅಪರ್ಣಾ ಪಟವರ್ಧನ್, ಶ್ವೇತಾ ಕುಮಾರಿ, ಭರತ್ ಕುಮಾರ್, ಕಾರ್ತಿಕ್ ಕೆ., ಶುಭಯನ್ ಘೋಷ್ ಹಾಗೂ ದಿವ್ಯಾ ರಾಘವನ್ ರಾಷ್ಟ್ರೀಯ ಮಟ್ಟದ ಬಂಗಾರ ಪದಕಕ್ಕೆ ಭಾಜನರಾಗಿದ್ದಾರೆ' ಎಂದು ಎಸ್. ರಾಧಾ ಹೇಳಿದರು.

ಸಮಾರಂಭದಲ್ಲಿ 563 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಬಂಗಾರ ಪದಕಕ್ಕೆ ಭಾಜನರಾದವರಲ್ಲಿ ಅಪರ್ಣಾ ಪಟವರ್ಧನ್ ಹಾಗೂ ಕಾರ್ತಿಕ್ ಕೆ. ಉಪಸ್ಥಿತರಿದ್ದರು. ಇನ್ನುಳಿದವರು ನವದೆಹಲಿಯಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಪದಕ ಸ್ವೀಕರಿಸಿದರು.

'ಮಂಡ್ಯದಲ್ಲಿ ಬಿಜೆಪಿ ಅಭ್ಯರ್ಥಿಯೇ ಸ್ಪರ್ಧಿಸಲಿ'

ಮಂಡ್ಯ: 'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಉತ್ತಮ ಮತ ಬಂದಿದ್ದು, ಜಿಲ್ಲೆಯಾದ್ಯಂತ ಪಕ್ಷ ಸಂಘಟನೆಯಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯೇ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು' ಎಂದು ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿ, 'ನನಗೇ ಟಿಕೆಟ್ ಕೊಡಬೇಕೆಂದು ಲಾಬಿ ಮಾಡುತ್ತಿಲ್ಲ. ಆದರೆ, ನಾನು ಮಂಡ್ಯದಿಂದಲೇ ಸ್ಪರ್ಧಿಸುವುದಾಗಿ ಪಕ್ಷದ ವರಿಷ್ಠರಿಗೆ ತಿಳಿಸಿದ್ದೇನೆ' ಎಂದರು.

'ಬಿಜೆಪಿಗೆ ಅಧಿಕೃತವಾಗಿ ಸೇರ್ಪಡೆಯಾಗಲು ತಾಂತ್ರಿಕ ಅಡ್ಡಿ ಇರುವ ಬಗ್ಗೆ ಕೇಂದ್ರ ನಾಯಕರು ನನ್ನೊಂದಿಗೆ ಚರ್ಚಿಸಿದ್ದಾರೆ. ಹೀಗಾಗಿ ಬಾಹ್ಯ ಬೆಂಬಲ ಕೊಟ್ಟಿದ್ದೇನೆ. ಸಂಸದೆಯಾಗಿ ಜನರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ, ಪರಿಹಾರಕ್ಕೆ ಕೈಲಾದ ಪ್ರಯತ್ನ ಮಾಡಿದ್ದೇನೆ. ನನ್ನ ಸ್ಪರ್ಧೆಯ ಬಗ್ಗೆ ಊಹಾಪೋಹ ಸೃಷ್ಟಿಸಲಾಗುತ್ತಿದೆ. ನಾನಂತೂ ನನ್ನ ಕ್ಷೇತ್ರಕ್ಕೆ ಅಂಟಿಕೊಂಡಿದ್ದೇನೆ, ಬೇರೆಲ್ಲಿಗೂ ಹೋಗುವುದಿಲ್ಲ' ಎಂದರು.

'ಬಿಜೆಪಿಯ ಸ್ಥಳೀಯ ಮುಖಂಡರ ಜೊತೆ ಸಂಪರ್ಕದಲ್ಲಿಲ್ಲ' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, 'ನಾನು ಬಿಜೆಪಿ ಸೇರುವವರೆಗೂ ಪಕ್ಷದ ಸಭೆಗಳಿಗೆ ಹೋಗಲಾಗದು. ಆಹ್ವಾನಿಸಿದ ಸಭೆಗಳಿಗೆ ಹೋಗಿದ್ದೇನೆ. ಸ್ಥಳೀಯ ನಾಯಕರು ನನ್ನ ಸಂಪರ್ಕದಲ್ಲಿದ್ದಾರೆ' ಎಂದರು.

'ತಾಯಿ–ಮಗುವಿನ ಆರೋಗ್ಯ ರಕ್ಷಣೆಗೆ ತಂತ್ರಜ್ಞಾನ ಅಳವಡಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ ಮಕ್ಕಳ ಆರೋಗ್ಯ ರಕ್ಷಣೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ತಂತ್ರಜ್ಞಾನಗಳ ಅಳವಡಿಕೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ಇನ್ಫೊಸಿಸ್ ಫೌಂಡೇಶನ್ ಹಾಗೂ ಸಿ. ಕ್ಯಾಂಪ್ ಜತೆಗೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಪ್ಪಂದದ ಭಾಗವಾಗಿ ಧಾರವಾಡ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಜಿಲ್ಲಾಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಭ್ರೂಣ ನಿಗಾ ತಂತ್ರಜ್ಞಾನ ಮತ್ತು ಸಿಪಿಎಪಿ ತಂತ್ರಜ್ಞಾನಗಳನ್ನು ಅಳವಡಿಸಲಾಗುತ್ತಿದೆ.

'ಪ್ರಾಯೋಗಿಕವಾಗಿ ಮೂರು ಜಿಲ್ಲೆಗಳಲ್ಲಿ ತಂತ್ರಜ್ಞಾನ ಅಳವಡಿಕೆ ಕಾರ್ಯ ಆರಂಭವಾಗಿದೆ. ಹಂತ ಹಂತವಾಗಿ ನಾಲ್ಕು ವರ್ಷಗಳಲ್ಲಿ ಒಟ್ಟು ಎಂಟು ಜಿಲ್ಲೆಗಳ ಜಿಲ್ಲಾಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಂತ್ರಜ್ಞಾನ ಅಳವಡಿಕೆ ಕಾರ್ಯ ನಡೆಯಲಿದೆ. ಎರಡೂ ತಂತ್ರಜ್ಞಾನಗಳು ತಾಯಿ–ಮಕ್ಕಳ ಆರೋಗ್ಯದ ಜತೆಗೆ ನವಜಾತ ಶಿಶುಗಳ ಆರೋಗ್ಯ ರಕ್ಷಣೆಗೆ ಸಹಕಾರಿಯಾಗಲಿವೆ' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

'ಭ್ರೂಣ ನಿಗಾ ತಂತ್ರಜ್ಞಾನವು ಗರ್ಭಿಣಿಯರ ಆರೋಗ್ಯ ಮೇಲ್ವಿಚಾರಣೆಗೆ ಹೆಚ್ಚು ಸಹಕಾರಿಯಾಗಿದೆ. ಸಿಪಿಎಪಿ ತಂತ್ರಜ್ಞಾನವು ಉಸಿರಾಟದ ಸಮಸ್ಯೆ ಹೊಂದಿರುವ ನವಜಾತ ಶಿಶುಗಳ ಆರೈಕೆಗೆ ಅನುಕೂಲ ಕಲ್ಪಿಸಲಿದೆ' ಎಂದರು.

'ಶಿಶು ಮರಣ ಪ್ರಮಾಣವನ್ನು ಕಡಿಮೆಗೊಳಿಸುವುದು ನಮ್ಮ ಗುರಿಯಾಗಿದೆ. ಹೀಗಾಗಿ, ಹೊಸ ಹೊಸ ತಂತ್ರಜ್ಞಾನಗಳನ್ನ ಆರೋಗ್ಯ ಇಲಾಖೆಯು ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಅಳವಡಿಸುತ್ತಿದೆ. ಈ ತಂತ್ರಜ್ಞಾನವು ಒಂದು ಲಕ್ಷಕ್ಕೂ ಹೆಚ್ಚು ಗರ್ಭಿಣಿಯರ ಆರೋಗ್ಯ ಮೇಲ್ವಿಚಾರಣೆಗೆ ಅನುಕೂಲವಾಗಲಿದ್ದು, ಸಾವಿರಾರು ನವಜಾಥಾ ಶಿಶುಗಳ ಆರೋಗ್ಯ ಆರೈಕೆಗೆ ಸಹಕಾರಿಯಾಗಲಿದೆ' ಎಂದು ಹೇಳಿದರು.

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-13022024-252045
CG-DL-E-13022024-252045
असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 593] नई दिल्ली, सोमवार, फरवरी 12, 2024/माघ 23, 1945
No. 593] NEW DELHI, MONDAY, FEBRUARY 12, 2024/MAGHA 23, 1945

ಭಾರತ ಸರ್ಕಾರ

ವಿಶೇಷ ಭೂ–ಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ ರವರ ಕಾರ್ಯಾಲಯ

ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು–560 001.

ನಂ.

ಸಾರ್ವಜನಿಕ ತಿಳುವಳಿಕೆ

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಮತ್ತು ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳ ಅನುಗುಣವಾಗಿ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ (ಇನ್ನು ಮುಂದೆ ಉಲ್ಲೇಖಿತ ಕಾಯ್ದೆ ಎಂದು ನಮೂದಿಸಲಾಗಿದೆ) ಭಾರತ ಸರಕಾರವು ತನ್ನ ಗೆಜೆಟ್ ಅಧಿಸೂಚನೆ ನಂ.1223(ಇ) ದಿನಾಂಕ:14 ಮಾರ್ಚ್ 2023ರಲ್ಲಿ ಈ ಕೆಳಗೆ ಪ್ರಕಟಿಸಿರುವ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಅಸ್ತಿತ್ವದಲ್ಲಿರುವ ಕಿ.ಮೀ.25.15 ರಿಂದ ಕಿ.ಮೀ.60.00 (ವಿನ್ಯಾಸಗೊಳಿಸಲಾಗಿದೆ ಕಿ.ಮೀ. 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ. 52.70 ರಿಂದ ಕಿ.ಮೀ 53.50 ಹೊರತುಪಡಿಸಿ) (ನೆಲ್ಲಿಸರ ಶಿಬಿರ ದಿಂದ ತೀರ್ಥಹಳ್ಳಿ ಸೆಕ್ಷನ್)ವರೆಗಿನ ರಸ್ತೆ (ಅಗಲೀಕರಣ/ದ್ವಿಪಥ ಪೇವ್ಡ್ ಶೋಲ್ಡರ್/ಚತುಷ್ಪಥ ಲೇನಿಂಗ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಕಲಂ 3ಜಿ ಉಪಕಲಂ(1) (2) (3) ಮತ್ತು (4) ಹಾಗೂ 1997 ರ ತಿದ್ದುಪಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುದಾರರಿಗೆ ಹಾಗೂ ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರಕಾರವು ವಶಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿರ್ಧರಿಸಿ ಪಾವತಿಸಲು ಸದರಿ ಜಮೀನಿನ ಬಗ್ಗೆ ಅವರ ಹಿತಾಸಕ್ತಿ ವಿವರಣೆಯ ಸಂಭಂದಪಟ್ಟ ಅಧಿಕೃತ ದಾಖಲೆಗಳನ್ನು ಅಂದರೆ, (1) ಮೂಲ ದಾಖಲೆ ಪತ್ರ (2) ಕ್ರಯ/ವಿಭಾಗ/ಹಕ್ಕು ದಾಖಲೆಗೆ ಸಂಭಂಧಿಸಿದ ಇತರೇ ಯಾವುದೇ ದಾಖಲೆ ಪತ್ರಗಳು (3) ಚಾಲ್ತಿ ಸಾಲಿನ ಆರ್.ಟಿ.ಸಿ (4) ಮ್ಯುಟೇಶನ್ ಪ್ರತಿ 5) ಋಣಭಾರ ರಾಹಿತ್ಯ ಧೃಡಪತ್ರ (6) ಕಂದಾಯ ಪಾವತಿಸಿದ ರಶೀದಿಯೊಂದಿಗೆ ಈ ಪ್ರಕಟಣೆಯಲ್ಲಿ ನಮೂದಿಸಿರುವ ವೇಳೆ ಹಾಗೂ ದಿನಾಂಕದಂದು ಸ್ವತಃ ನೀವಾಗಲಿ ಅಥವಾ ನಿಮ್ಮ ಅಧಿಕೃತ ಪ್ರತಿನಿಧಿಯಾಗಲಿ ಅಥವಾ ನಿಮ್ಮ ಪರ ನ್ಯಾಯವಾದಿಗಳ ಮೂಲಕವಾಗಲಿ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ ಬೆಂಗಳೂರು, ಇವರ ಮುಂದೆ ಖುದ್ದಾಗಿ ಹಾಜರುಪಡಿಸತಕ್ಕದ್ದು.

ತಾಲೂಕಿನ ಹೆಸರು	ಗ್ರಾಮದ ಹೆಸರು	ದಿನಾಂಕ ಮತ್ತು ಸಮಯ ಮತ್ತು ಸ್ಥಳ
ತೀರ್ಥಹಳ್ಳಿ	1)ಕುಡುಮಲ್ಲಿಗೆ 2)ಬಿಳುವೆ 3)ಒಡಲಮನೆ 4)ಭಾರತಿಪುರ 5)ತೀರ್ಥಹಳ್ಳಿ ಟೌನ್ 6)ಜಂಬವಳ್ಳಿ 7)ಬೇಗುವಳ್ಳಿ 8) ತುಡೂರು 9)ಕುಡಿಗೆ (ಗಬಡಿ) 10) ಮಾಲೂರು	ದಿನಾಂಕ:01.03.2024 ಬೆಳಿಗ್ಗೆ 11:00 ಘಂಟೆಯಿಂದ 1:00 ಘಂಟೆವರೆಗೆ ಪಿ.ಡಬ್ಲ್ಯೂ.ಡಿ, ಐ.ಬಿ, ತೀರ್ಥಹಳ್ಳಿ

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ಅಧಿಸೂಚನೆ

ನವದೆಹಲಿ, 12ನೇ ಫೆಬ್ರವರಿ 2024

ಎಸ್.ಓ.624(ಇ).– ಕೇಂದ್ರ ಸರಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಅಸ್ತಿತ್ವದಲ್ಲಿರುವ ಕಿ.ಮೀ.25.15 ರಿಂದ ಕಿ.ಮೀ.60.00 (ವಿನ್ಯಾಸಗೊಳಿಸಲಾಗಿದೆ ಕಿ.ಮೀ. 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ. 52.70 ರಿಂದ ಕಿ.ಮೀ 53.50 ಹೊರತುಪಡಿಸಿ) (ನೆಲ್ಲಿಸರ ಶಿಬಿರ ದಿಂದ ತೀರ್ಥಹಳ್ಳಿ ಸೆಕ್ಷನ್) ವರೆಗಿನ ರಸ್ತೆ (ಅಗಲೀಕರಣ/ ದ್ವಿಪಥ ಪೇವ್ಡ್ ಶೋಲ್ಡರ್/ಚತುಷ್ಪಥ ಲೇನಿಂಗ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುವುದು ಕಂಡುಬಂದಿರುತ್ತದೆ. ಆದಕಾರಣ ಕೇಂದ್ರ ಸರಕಾರದ ಅಧಿಸೂಚನೆಯ ಮೂಲಕ, 1233(ಇ) ದಿನಾಂಕ: 14.03.2023, ಭಾರತದ ಗೆಜೆಟ್, ಎಕ್ಸ್‌ಟ್ರಾಆರ್ಡಿನರಿ, ಭಾಗ II, ವಿಭಾಗ 3, ಉಪ ವಿಭಾಗ(II) ರಲ್ಲಿ ಪ್ರಕಟಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956(1956ರ 48) ಸೆಕ್ಷನ್ 3ಎ ನ ಉಪ–ವಿಭಾಗ (1) ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿ(ಶೆಡ್ಯೂಲ್)ಯಂತೆ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಅಧಿಸೂಚನೆಯನ್ನು ಕನ್ನಡ ದಿನಪತ್ರಿಕೆ **ಪ್ರಜಾವಾಣಿ** ಮತ್ತು ಆಂಗ್ಲ ದಿನಪತ್ರಿಕೆ **ಟೈಮ್ಸ್ ಆಫ್ ಇಂಡಿಯಾ ದಿನಾಂಕ: 27–10–2023** ರಂದು ರಾಷ್ಟ್ರೀಯ ಹೆದ್ದಾರಿ ಉಪ ಕಾಯ್ದೆ 3 ಕಾಯ್ದೆ 3(ಎ)ರ ಪ್ರಕಾರ ಪ್ರಚಾರಪಡಿಸಿ ಆಕ್ಷೇಪಣೆ ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಸೂಕ್ತ ಆದೇಶ ಹೊರಡಿಸಿರುತ್ತಾರೆ, ಮತ್ತು ಸಕ್ಷಮ ಪ್ರಾಧಿಕಾರ ಸೆಕ್ಷನ್ 3ರ ಸಬ್ ಸೆಕ್ಷನ್ 3(ಡಿ)1 ರ ಅನುಸಾರ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿರುವರು.

ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ)ರ ಸಬ್ ಸೆಕ್ಷನ್ (1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶೆಡ್ಯೂಲ್‌ನಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೇಂದ್ರ ಸರಕಾರವು ಘೋಷಿಸಿದೆ.

ಮತ್ತು ಈಗ ಸೆಕ್ಷನ್ 3(ಡಿ)ರ ಸಬ್ ಸೆಕ್ಷನ್(2)ರ ಅನುಸಾರ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಗೊಂಡ ಮೇಲೆ ಶೆಡ್ಯೂಲ್‌ನಲ್ಲಿ ವಿವರಿಸಿರುವ ಭೂಮಿಯ ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರಕಾರವು ಘೋಷಿಸಿರುತ್ತದೆ.

ಅನುಸೂಚಿ

ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಅಸ್ತಿತ್ವದಲ್ಲಿರುವ ಕಿ.ಮೀ.25.15 ರಿಂದ ಕಿ.ಮೀ.60.00 (ವಿನ್ಯಾಸಗೊಳಿಸಲಾಗಿದೆ ಕಿ.ಮೀ. 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ. 52.70 ರಿಂದ ಕಿ.ಮೀ 53.50 ಹೊರತುಪಡಿಸಿ) (ನೆಲ್ಲಿಸರ ಶಿಬಿರ ದಿಂದ ತೀರ್ಥಹಳ್ಳಿ ಸೆಕ್ಷನ್) ವರೆಗಿನ ಭೂಸ್ವಾಧೀನಗೊಳ್ಳಲಿರುವ ಕಟ್ಟಡ ಅಥವಾ ಕಟ್ಟಡ ರಹಿತ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ : ಕರ್ನಾಟಕ ಜಿಲ್ಲೆಯ ಹೆಸರು: ಶಿವಮೊಗ್ಗ

ಕ್ರ.ಸಂ	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)	ಭೂಮಾಲೀಕರು/ ಹಿತಾಸಕ್ತಿದಾರರ ಹೆಸರು
ತಾಲ್ಲೂಕು : ತೀರ್ಥಹಳ್ಳಿ					
ಗ್ರಾಮ: ಕೂಡುಮಲ್ಲಿಗೆ					
1	3	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.1212	ಕೆ.ಆರ್.ಯೋಗೇಂದ್ರ ಅಲಿಯಾಸ್ ಯೋಗೀಶ್ ನಾಯಕ್, ಮನೆಡಲ, ಸೊಪ್ಪಿನ ಬೆಟ್ಟ
2	73	ಖಾಸಗಿ	ತರಿ	0.0404	ಎಸ್.ಪಿ ವಿಜಯಲಕ್ಷ್ಮಿ W/o ಪುಟ್ಟಸ್ವಾಮಿ, ಕೆ ಪಿ ವರುಣ್, ಕೆ ಪಿ ಚಿನ್ಮಯಿ, ಪ್ರಭಾ ದೇವದಾಸ್ W/o ಕೆ ಸಿ ದೇವದಾಸ್, ತಾರನಾಥ ಕೆ ಸಿ S/o ಚಿನ್ನಪ್ಪ ಗೌಡ. 73/2, 73/3
3	79	ಸರ್ಕಾರಿ	ತರಿ	0.3808	ಸೊಪ್ಪಿನ ಬೆಟ್ಟ
4	80	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.909	ಸರ್ಕಾರಿ, ಕೆ ಜಿ ಸುಧಾಕರ S/o ಲೇಟ್ ಗುರಪ್ಪ ಗೌಡ, ಕೆ ಆರ್ ಆದರ್ಶ, ದಾನಮ್ಮ, ಮಾಲತಿ, ಸಂದೇಶ್ 80/1
ಗ್ರಾಮ : ಬಿಳುವೆ					
5	100	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.544	ಸರ್ಕಾರಿ ಕಾನು, ಬಲಗಾರು ಮಠ ಶ್ರೀ ನರಸಿಂಹ ದೇವರು
6	60	ಖಾಸಗಿ	ಖುಷ್ಕಿ	0.1303	ವನಿತ W/o ಕೃಷ್ಣಮೂರ್ತಿ
7	61	ಖಾಸಗಿ	ಖುಷ್ಕಿ	0.2606	ಶಾಮಶೆಟ್ಟಿ S/o ಮೇನಕ ಶೆಟ್ಟಿ
8	62	ಖಾಸಗಿ	ತರಿ	0.1155	ಶ್ರೀಧರ್ S/o ಶೀನಶೆಟ್ಟಿ, ಸರೋಜ W/o ಭಾಸ್ಕರ ಶೆಟ್ಟಿ
9	63	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.2076	ಸರ್ಕಾರಿ, ಹೆಚ್ ಸಿ ಮಂಜುನಾಥ S/o ಹೆಚ್‌ಎಂ ಚಿನ್ನಯ್ಯ ಗೌಡ 63/1, 63/2
10	64	ಖಾಸಗಿ	ತರಿ	0.2725	ಹೆಚ್ ಸಿ ರಘುನಾಥ S/o ಹೆಚ್ ಎಂ ಚಿನ್ನಯ್ಯ ಗೌಡ, ಶ್ರೀನಿವಾಸ್, ಹೆಚ್ ಚಂದ್ರಯ್ಯ ಗೌಡ, ಹೆಚ್ ಹೆಚ್ ಮಹೇಶ್, ಹೆಚ್ ಸಿ ಮಂಜುನಾಥ್ 64/1, 64/2, 64/3, 64/8, 64/9, 64/10
11	72	ಖಾಸಗಿ	ತರಿ	0.3606	ಚಿನ್ನಮ್ಮ W/o ಧರ್ಮಯ್ಯ ಗೌಡ, ಸುಜಾತ W/o ಮಂಜುನಾಥ 72/3, 72/4
12	73	ಖಾಸಗಿ	ತರಿ	0.8808	ಭಾಸ್ಕರ S/o ಕೃಷ್ಣಮೂರ್ತಯ್ಯ, ರಾಮಯ್ಯ S/o ಹಿರಿಯಣ್ಣ ಗೌಡ, ಮಂಜಪ್ಪ S/o ಹಿರಿಯಣ್ಣ ಗೌಡ, ನಾಗೇಶ್ S/o ಹಿರಿಯಣ್ಣ ಗೌಡ, ರಾಮದಾಸ S/o ಬ್ರಹ್ಮಯ್ಯ ಗೌಡ, ಹೆಚ್ ಟಿ ಕೃಷ್ಣಯ್ಯ ಚಂದ್ರಶೇಖರ್
13	85	ಖಾಸಗಿ	ತರಿ	0.0101	ಹೆಚ್ ಟಿ ಕೃಷ್ಣಯ್ಯ S/o ತಿಮ್ಮಯ್ಯ ಮತ್ತು ಇತರರು 85/2
14	94	ಖಾಸಗಿ	ತರಿ	0.0425	ಬಾಳಗಾರು ಮಠ ಶ್ರೀ ನರಸಿಂಹ ದೇವರು ಗಾಯತ್ರಿ W/o ರಾಘವೇಂದ್ರ ಆಚಾರ್, ಕೃಷ್ಣಾಚಾರ್ S/o ಮಾಧವಚಾರ್, ನಾರಾಯಣಮೂರ್ತಿ 94/1, 94/2, 94/3, 94/4
15	ಮಜಾರೆ ಹುಲಗವಳ್ಳಿ	ಸರ್ಕಾರಿ	ಭಾಗಾಯ್ತು	0.0018	ಮಜಾರೆ
ಗ್ರಾಮ : ಒಡಲಮನೆ					
16	11	ಸರ್ಕಾರಿ	ತರಿ	0.6996	ದನಗಳ ಸೊಪ್ಪಿನ ಬೆಟ್ಟ ಮುಫತ್ತು
17	3	ಖಾಸಗಿ	ತರಿ	0.0355	ಕೆ. ವೆಂಕಟಗಿರಿಯಪ್ಪ S/o ಕೇಶವಯ್ಯ
18	4	ಖಾಸಗಿ	ತರಿ	0.1029	ಎಂ ಬಿ ಕೃಷ್ಣಮೂರ್ತಿ S/o ಬೊಮ್ಮ ನಾಯ್ಕ, ಕೆ ಎನ್ ಮಂಜುನಾಥ, ಗೀತ, ನೂತನ್ ಎಂ ಎಂ S/o ಎಂ ಬಿ ಮಂಜಪ್ಪ
19	5	ಖಾಸಗಿ	ತರಿ	0.1625	ಕೆ ಮಂಜುನಾಥ S/o ನಾಗಪ್ಪಯ್ಯ 5/2
ಗ್ರಾಮ : ಭಾರತಿಪುರ					
20	121	ಖಾಸಗಿ	ತರಿ	0.1225	ಅನ್ನಪೂರ್ಣ W/o ಕೆ ಎಸ್ ವಿಶ್ವನಾಥ, ನಾಗರಾಜ ಅಡಿಗ, ಕೆ ಎಸ್ ಜಯರಾಮ, ಜ್ಯೋತಿ W/o ನಾಗರಾಜ ಕೆ
21	135	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.0404	ಅನಂತಚಾರ್, ರಾಮಚಂದ್ರನ್, ಲಕ್ಷ್ಮಮ್ಮ, ಸರ್ಕಾರಿ, ಕೆಎಂ ಆಕಾಶ್, ಕೆ ಎಂ ಸತ್ಯ, ಕೆ ಡಿ ಸುಧಾಕರ, ಕೆ ಡಿ ಸುನಂದ, ಸರೋಜ, ಗೀತ, ಪೂರ್ಣೇಶ್ ಮತ್ತು ಇತರರು
22	150	ಖಾಸಗಿ	ತರಿ	0.0075	ಲಕ್ಷ್ಮಮ್ಮ W/o ತಿಮ್ಮಪ್ಪ ಗೌಡ
23	151	ಖಾಸಗಿ	ತರಿ	0.0303	ಕೆ ಎಂ ಸತ್ಯ S/o ಮಂಜಪ್ಪ ಗೌಡ, ಕೆ ಎಂ ಆಕಾಶ್, ಮಂಜಪ್ಪ ಗೌಡ 151/1, 151/2, 151/3
24	152	ಖಾಸಗಿ	ತರಿ	0.0404	ಕೆ ಎಂ ಸತ್ಯ S/o ಮಂಜಪ್ಪ ಗೌಡ
25	167	ಖಾಸಗಿ	ತರಿ	0.1101	ಕೃಷ್ಣಚಾರ್, ಅನಂತಚಾರ್, ಲಕ್ಷ್ಮಮ್ಮ, ಕೆ ಸುಬ್ಬಯ್ಯಗೌಡ, ಕೆ ಎಂ ಸತ್ಯ, ಸರೋಜ, ಕೆ ಡಿ ಸುಧಾಕರ, ಕೆ ಡಿ ಸುನಂದ, ಹೆಚ್ ಕೆ ಸುಜಾತ, ಹೆಚ್ ಕೆ ಸುಮಿತ್ರ ಮತ್ತು ಇತರರು
26	169	ಖಾಸಗಿ	ತರಿ	0.075	ಅನ್ನಪೂರ್ಣ & ಶಶಿಕಲಾ D/o ನಾಗಪ್ಪಚಾರ್
27	173	ಖಾಸಗಿ	ತರಿ	0.453	ಶೇಶಗಿರಿ S/o ಶಶಯ್ಯ, ಕೆ ಕೆ ಶಶಿಧರ ಭಟ್ S/o ಕೋಟೇಶ್ವರ ಭಟ್ 173/1, 173/2, 173/3
ಗ್ರಾಮ : ತೀರ್ಥಹಳ್ಳಿ ಟೌನ್					
28	51	ಖಾಸಗಿ	ತರಿ	0.0355	ಡಿ ಎಸ್ ನಾಗರಾಜು S/o ಶ್ರೀನಿವಾಸ ಮೂರ್ತಿ, ಶ್ರೀ ಕಲಾ ಎ ಎಸ್ W/o ಶ್ರೀಧರ್, ಜಿ ಎಸ್ ರೂಪ W/o ಸಚಿನ್, ಸಂಗೀತಾ ಬೊನಗೇರಿ W/o ಗೌರಿ ಶಂಕರ, ಸಂಪತ್ ಡಿ ಎನ್
29	52	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.1202	ಸರ್ಕಾರಿ, ಶ್ರೀಕಾಂತ್ ಭಟ್ S/o ವಾಸುದೇವ ಭಟ್
30	53	ಖಾಸಗಿ	ತರಿ	0.2455	ಎಸ್ ವಿಠೋಬ ಭಟ್ S/o ನಾರಾಯಣ ಭಟ್, ಶಾಂತರಾಂ ಭಟ್ S/o ವಾಸುದೇವ ಭಟ್, ಎಸ್ ಶ್ರೀಕಾಂತ ಭಟ್, ಎಸ್ ಕೃಷ್ಣಮೂರ್ತಿ ಭಟ್ 53/1, 53/2, 53/3
31	55	ಖಾಸಗಿ	ತರಿ	0.1404	ಬಿ ಎಸ್ ವೆಂಕಟಯ್ಯ S/o ಶ್ರೀನಿವಾಸ ಕೆ ದಸ್ತಗಿರಿ S/o ಅಬ್ದುಲ್ ಕರೀಮ್, ಬಿ ಎನ್ ಶ್ರೀನಿವಾಸ ಮೂರ್ತಿ S/o ಜಿ ಬಿ ನಾಗಬೂಶಣಯ್ಯ
32	56	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.5606	ಸರ್ಕಾರಿ, ನಾಗರಾಜ ಉಡುಪ S/o ಶ್ಯಾಮ್ ಉಡುಪ, ಮಂಜಪ್ಪ, ಸರ್ಕಾರಿ, ದಸ್ತಗಿರಿ S/o ಅಬ್ದುಲ್ ಕರೀಮ್ ಸಾಹೇಬ್, ವೆಂಕಟೇಶ್ ಉಡುಪ S/o ಅಣ್ಣಪ್ಪ ಉಡುಪ, ಫೆಲಿಕ್ಸ್ ಬಜಿಲ್ ಲೊಬೊ, ಬಿ ಎನ್ ಶ್ರೀನಿವಾಸ್ ಮೂರ್ತಿ, ಪ್ರಗತಿ, ವೆಂಕಟೇಶ್, ಕುಮಾರ್, ಅಜಿತ್ ಪ್ರಸಾದ್, ವೀಣಾ, ಮಣಿರಾಜ್, ಸವಿತ ಚಂದ್ರಮೋಹನ್
33	58	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.0855	ಅಂಜಲಿನ ಅರೋಜ W/o ಜಾನ್ ಅರೋಜ, ಸರ್ಕಾರಿ 58/4, 58/9
34	65	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.2022	ಎಇಇ ಪಿಡಬ್ಲ್ಯುಡಿ ತೀರ್ಥಹಳ್ಳಿ, ನಾಸಿರ್ ಖಾನ್ ಎಸ್ ಎ ಕಾಸಿಮ್ ಖಾನ್ NAK 65/1, 65//2
35	ಊರು	ಸಾಮಾನ್ಯ (ಖಾಸಗಿ/ಸರ್ಕಾರಿ)	ಸೆಟಲ್‌ಮೆಂಟ್	0.6606	ಸೆಟಲ್‌ಮೆಂಟ್
ಗ್ರಾಮ : ಜಂಬವಳ್ಳಿ					
36	15	ಖಾಸಗಿ	ತರಿ	0.7808	ಕೆ ವಿಠ್ಠಲಶೆಟ್ಟಿ, ಸುಹಾಸಿನಿ ಡಿ ಹೆಗ್ಡೆ, ಎಂ ಕೆ ಚಂದ್ರಶೇಖರ್ ಶೆಟ್ಟಿ, ಎಂ ಕೆ ವಿಶ್ವನಾಥ ಶೆಟ್ಟಿ, ಹೇಮ ವಾಸುದೇವ
37	16	ಖಾಸಗಿ	ತರಿ	0.1625	ಕೆ ವಿಠ್ಠಲ ಶೆಟ್ಟಿ, ಸುಹಾಸಿನಿ ಡಿ ಹೆಗ್ಡೆ ಎಂ ಕೆ ಪ್ರೇಮನಾಥ ಶೆಟ್ಟಿ 16/1
38	54	ಖಾಸಗಿ	ತರಿ	0.0625	ಕೆ ವಿಠ್ಠಲ ಶೆಟ್ಟಿ, ಸುಹಾಸಿನಿ ಡಿ ಹೆಗ್ಡೆ, ಎಂ ಕೆ ಚಂದ್ರಶೇಖರ್ ಶೆಟ್ಟಿ, ಎಂ ಕೆ ವಿಶ್ವನಾಥ ಶೆಟ್ಟಿ, ಪ್ರೇಮನಾಥ್ ಶೆಟ್ಟಿ, ಹೇಮಾ ವಾಸುದೇವ
39	55	ಖಾಸಗಿ	ತರಿ	0.0707	ಇ ವೆಂಕಟೇಶ್ S/o ಈರಯ್ಯ 55/3
ಗ್ರಾಮ : ಬೇಗುವಳ್ಳಿ					
40	1	ಖಾಸಗಿ	ತರಿ	0.2606	ಜಗನ್ನಾಥಚಾರಿ S/o ಮಂಜಪ್ಪಚಾರ್, ತಾರಮ್ಮ W/o ನಾರಾಯಣಚಾರ್, ಗುರುಮೂರ್ತಿ S/o ರುಕ್ಮಚಾರ್ 1/1, 1/2, 1/3
41	106	ಖಾಸಗಿ	ತರಿ	0.1505	ಗಿರಿಜಮ್ಮ W/o ಬಿ ಡಿ ರಾಮಚಾರಿ
42	107	ಖಾಸಗಿ	ತರಿ	0.1255	ಟಿ ಆರ್ ಮೋಹನ್ S/o ಹೆಚ್ ರಾಮಚಂದ್ರ ಭಟ್
43	109	ಖಾಸಗಿ	ತರಿ	0.0202	ಟಿ ಕೆ ಮೂರ್ತಿ S/o ಟಿ ಹೆಚ್ ಕೃಷ್ಣಪ್ಪ ಗೌಡ
44	110	ಖಾಸಗಿ	ಭಾಗಾಯ್ತು	0.1255	ಜಯಂತ ಹೆಚ್ ಆರ್ S/o ರಾಮಯ್ಯ
45	191	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.1755	ಕರ್ನಾಟಕ ಸರ್ಕಾರ, ಸತ್ಯವತಿ W/o ಟಿ ಡಿ ಆರ್ ರಾಮಯ್ಯ 191/1, 191/2
46	192	ಖಾಸಗಿ	ತರಿ	0.0875	ಬಿ ಎಂ ಜಗನ್ನಾಥ S/o ಮಮಂಜಪ್ಪಚಾರಿ 192/1
47	193	ಖಾಸಗಿ	ತರಿ	0.0808	ಎಂ ವಿ ಮಂಜುನಾಥ
48	195	ಖಾಸಗಿ	ತರಿ	0.0202	ಕೆ ಎಂ ಪ್ರಭಾಕರ
49	196	ಖಾಸಗಿ	ತರಿ	0.0101	ಕೆ ಎಂ ಪ್ರಭಾಕರ S/o ಮಂಜಪ್ಪಯ್ಯ
50	206	ಖಾಸಗಿ	ತರಿ	0.1707	ಕೆ ಸಿ ಚೂಡಾಮಣಿ W/o ಲೇಟ್ ದೇವರಾಜ್ @ ದೇವರಾಜೇಗೌಡ
51	21	ಖಾಸಗಿ	ತರಿ	0.0707	ಟಿ ವಿ ಪ್ರಕಾಶ S/o ವಾಸಪ್ಪ ಶೆಟ್ಟಿ ಮತ್ತು ಇತರರು 21/1, 21/2
52	22	ಖಾಸಗಿ	ತರಿ	0.0051	ಹೆಚ್ ಎಂ ಶ್ರೀಧರ S/o ಲೇಟ್ ಮಂಜಪ್ಪ ಗೌಡ
53	23	ಸರ್ಕಾರಿ	ತರಿ	0.1707	ವಿದ್ಯಾದನ ಬುದ್ಧನ ಬೆಗವಳ್ಳಿ ಪ್ರೈಮರಿ ಸ್ಕೂಲ್
54	24	ಖಾಸಗಿ	ತರಿ	0.1155	ಚಂದ್ರಮ್ಮ W/o ಬಿ ಡಿ ಪರಮೇಶ್ವರಚಾರ್
55	25	ಖಾಸಗಿ	ತರಿ	0.202	ಲಲಿತ W/o ಗಂಗಾಧರ ಬಿ ಎಂ
56	3	ಖಾಸಗಿ	ತರಿ	0.101	ಕೆ ಎಂ ಪ್ರಭಾಕರ S/o ಕೆ ಮಂಜಪ್ಪಯ್ಯ
57	6	ಖಾಸಗಿ	ತರಿ	0.0155	ಡಿ ಚಂದ್ರವತಿ, ಎಂ ಡಿ ಸತೀಶ್, ಎಂ ಡಿ ಅರವಿಂದ 6/1
ಗ್ರಾಮ : ತೂದುರು					
58	1	ಖಾಸಗಿ	ತರಿ	0.2955	ಎ ಲಕ್ಷ್ಮಣ ಹೆಗ್ಡೆ S/o ಗೋವಿಂದ ಹೆಗ್ಡೆ, ಟಿ ಎಂ ಪ್ರಕಾಶ್ S/o ಮಂಜುನಾಥ್, ಟಿ ಎಂ ಸುರೇಶ, ಟಿ ಎಂ ಶ್ರೀನಿವಾಸ ಯಾನೆ, ಶ್ರೀನಿವಾಸ ಎಂ ಹೆಗ್ಡೆ, ಟಿ ಎಂ ಜಗದೀಶ್, ಟಿ ಬಿ ವೆಂಕಟೇಶ 1/1, 1/2
59	10	ಖಾಸಗಿ	ತರಿ	0.055	ಟಿ ಆರ್ ರಾಮಸ್ವಾಮಿ ಎಂ, ಆರ್ ಮಾನಸ, ಎಂ ಆರ್ ಮಲ್ಲಿಕ
60	102	ಖಾಸಗಿ	ತರಿ	0.2707	ಟಿ ಡಿ ರತ್ನಾಕರ S/o ತಿಮ್ಮಯ್ಯ ಗೌಡ, ಡಿ ಟಿ ಪ್ರಭಾಕರ, ಡಿ ಪಿ ಉಮೇಶ್ 102/3, 102/4, 102/5, 102/6, 102/7
61	103	ಖಾಸಗಿ	ತರಿ	0.0475	ಟಿ ಡಿ ರತ್ನಾಕರ S/o ತಿಮ್ಮೇಗೌಡ
62	12	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.0575	ಸರ್ಕಾರಿ, ಕಮಲಮ್ಮ, ಡಿ ವಿ ಗುರುಪ್ರಸಾದ್, ಯುಡಿ ಲಕ್ಷ್ಮೀದೇವಿ, ಶ್ರೀಲತಾ ಟಿ ಉದಯ್ ಕುಮಾರ್ S/o ತಿಮ್ಮಯ್ಯ ಗೌಡ, ಟಿ ಎಸ್ ಭಾಸ್ಕರ್, ಚಂದ್ರಶೇಖರ್, ಅಂಬಿಕ, ಮಲ್ಲಿಕ ಮತ್ತು ಇತರರು 12/6, 12/7, 12/8, 12/9, 12/10, 12/11
63	13	ಖಾಸಗಿ	ತರಿ	0.0505	ಟಿ ಡಿ ವೆಂಕಟೇಶ್ S/o ಟಿಡಿಎಲ್ ದಾಸನ ಗೌಡ
64	18	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.1808	ಟಿ ಸಿ ವಾಸುದೇವ S/o ಚಂದ್ರಯ್ಯ ಹೆಗ್ಡೆ, ಪುಟ್ಟ ಬಂಡಾರಿ ಮನೆದಲ, ರಂಗನಾಥಯ್ಯ ಮನೆದಲ, ಟಿ ಎಂ ನಾಗೇಶ ಚಾರ್ ಮನೆದಲ, ಟಿ ಸೀನಪ್ಪ ಶೆಟ್ಟಿ ಮನೆದಲ, ಕರ್ನಾಟಕ ಸರ್ಕಾರ
65	21	ಖಾಸಗಿ	ತರಿ	0.0808	ಟಿ ಎಂ ಪ್ರಸನ್ನ S/o ಮಂಜಪ್ಪಯ್ಯ, ಟಿ ಸಿ ವಾಸುದೇವ, ಕೆ ಎಸ್ ಜಯಲಕ್ಷ್ಮಿ ಮತ್ತು ಇತರರು
66	85	ಖಾಸಗಿ	ತರಿ	0.0202	ಟಿ ಜಿ ರಾಮಪ್ಪ S/o ಗೋವಿಂದನಾಯ್ಕ 85/3
67	86	ಖಾಸಗಿ	ತರಿ	0.0875	ಟಿ ಆರ್ ಅವಿನಾಶ್, ಟಿ ಆರ್ ಶಂಕರ ನಾರಾಯಣ, ಟಿ ಆರ್ ಅರುಣ್ ಕುಮಾರ್, ಟಿ ಆರ್ ವೀಣಾ ಕುಮಾರಿ, ಟಿ ಆರ್ ಆಶಾ ತುಳಸಿ ದಾಸ್, ಸರಳ, ಪ್ರಮೀಳ, ರವೀಂದ್ರ, ರತ್ನ, ಸುರೇಶ್ ಬಾಬು, ವಿನೋದ್ ಬಾಬು 86/1, 86/2
68	87	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.0326	ಟಿ ಹಿರಿಯಣ್ಣಾಚಾರಿ S/o ಪುಟ್ಟಾಚಾರಿ 87/1
69	88	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.3381	ಟಿ ಹಿರಿಯಣ್ಣಾಚಾರಿ, ಟಿ ಎಸ್ ಶ್ರೀನಿವಾಸನಾಯ್ಕ, ಪುಟ್ಟಯ್ಯಚಾರ್, ಮಂಜುನಾಥ ಬಿ S/o ಬುರುದನ ಮತ್ತು ಇತರರು 88/1, 88/2, 88/5
70	9	ಖಾಸಗಿ	ತರಿ	0.1212	ಟಿ ಡಿ ರತ್ನಾಕರ S/o ತಿಮ್ಮಯ್ಯ ಗೌಡ, ಡಿ ಪಿ ಉಮೇಶ್ 9/2, 9/3
ಗ್ರಾಮ : ಕುಡಿಗೆ (ಗಬಡಿ)					
71	100	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.4707	ವರಿಜಾಕ್ಷಿ W/o ಗಿಡ್ಡಯ್ಯ, ಸೀತಮ್ಮ W/o ರಾಮಯ್ಯ ಗೌಡ, ಶಂಕರಪ್ಪ, ಸತ್ಯನಾರಾಯಣ, ರಾಮಯ್ಯ ಗೌಡ, S/o ಸಣ್ಣಯ್ಯ ಗೌಡ, ಧರ್ಮಮ್ಮ W/o ಸಣ್ಣಯ್ಯ ಗೌಡ, ಸರ್ಕಾರಿ, ಗೋಪಾಲ S/o ಮಹಾಬಲ ಶೆಟ್ಟಿ, ಚಂದ್ರಶೇಖರ ಶೆಟ್ಟಿ, ಸುಂದರ್
72	104	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.2755	ಹೇಮಾವತಿ, ಟಿ ಟಿ ಕೃಷ್ಣಮೂರ್ತಿ, ಟಿ ಟಿ ರಾಮಪ್ಪ, ಟಿ ಟಿ ಈಶ್ವರ್, ವರಿಜಾಕ್ಷಿ, ಸರ್ಕಾರಿ, ಹೇಮಾವತಿ, ಗಿಡ್ಡಯ್ಯ ಗೌಡ, ಸೀತಮ್ಮ, ಗೋಪಾಲ, ಚಂದ್ರಶೇಖರ ಶೆಟ್ಟಿ, ಸುಂದರ್ 104/1A, 104/1B, 104/2
73	106	ಖಾಸಗಿ	ತರಿ	0.2035	ಹೆಚ್ ಆರ್ ಸುಧೀರ್ S/o ಹೆಚ್ ವಿ ರಾಜಗೋಪಾಲ್ NAK
74	107	ಖಾಸಗಿ	ತರಿ	0.0808	ಹೆಚ್ ಆರ್ ಸುಧೀರ್ S/o ಹೆಚ್ ವಿ ರಾಜಗೋಪಾಲ್
75	95	ಖಾಸಗಿ	ತರಿ	0.3574	ಶಂಕರಪ್ಪ, ಸತ್ಯನಾರಾಯಣ, ಜಿ ಎಸ್ ರಾಮಯ್ಯ S/o ಸಣ್ಣಯ್ಯ ಗೌಡ, ವನಜಾಕ್ಷಿ 95/1B, 95/9, 95/10
76	99	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.8055	ಬಿ ಮಂಜುನಾಥ S/o ಲೇಟ್ ಬಿ ಶಂಕರಪ್ಪ, ಶೋಭಮ್ಮ W/o ಜಿ ಕೆ ಗೋಪಾಲ ಗೌಡ, ಬಿ ಮಂಜುನಾಥ, ವರಿಜಾಕ್ಷಿ W/o ಗಿಡ್ಡಯ್ಯ ಗೌಡ ಚಂದ್ರಶೇಖರ ಶೆಟ್ಟಿ, ಸುಂದರ ಗೋಪಾಲ 99/3, 99/4, 99/6, 99/7, 99/9, 99/10, 99/11, 99/13, 99/15, 99/16, 99/17
ಗ್ರಾಮ : ಮಾಳೂರು					
77	69	ಸರ್ಕಾರಿ	ತರಿ	0.2371	ದನಗಳ ಮುಫತ್ತು
78	71	ಖಾಸಗಿ	ತರಿ	0.0275	ಮಂಜುನಾಥ ಹೆಚ್ ಎನ್ S/o ನಾರಾಯಣ ಗೌಡ, NAK
79	72	ಖಾಸಗಿ	ತರಿ	0.1055	ರವಿಚಂದ್ರನ್ ಆರ್ S/o ರಾಮಸ್ವಾಮಿ, ನವೀನ್ ಪಿ S/o ಪೆರಿಯ ಸ್ವಾಮಿ, ಜಯಕೋಡಿ ಪಿ 72/1, 72/3, 72/4
80	ಮಜಾರೆ ಸಕಲಕೊಪ್ಪ	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	0.2202	ಗ್ರಾಮಠಾಣ
			Total	15.6136	

[F. No. RW/NH/169/KNT/2022/3D2]

ಅಭಯ್ ಜೈನ್, ಉಪ ಕಾರ್ಯದರ್ಶಿ

ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ 79ನೇ ಜನ್ಮ ದಿನೋತ್ಸವ

‘ಪ್ರಾಥಮಿಕ ಶಾಲಾ ಸಮಯ ಬದಲಾಗಲಿ’

ಪ್ರಜಾವಾಣಿ ವಾರ್ತೆ



ಮಂಡ್ಯ ನಗರದಲ್ಲಿ ಆಯೋಜಿಸಿದ್ದ ಪಟ್ಟಾಭಿಷೇಕದ ದಶಮಾನೋತ್ಸವದ ಅಂಗವಾಗಿ ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಯನ್ನು ಸನ್ಮಾನಿಸಲಾಯಿತು.

ಮಂಡ್ಯ: ‘ಮಕ್ಕಳ ಶಿಕ್ಷಣವು ಮಹಿಳೆಯರ ಮೇಲೆ ಹೆಚ್ಚಿನ ಒತ್ತಡ ಹೇರುತ್ತಿರುವುದರಿಂದ ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಒಂದನೇ ತರಗತಿಯ ಶಾಲೆ ವೇಳೆಯನ್ನು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12.30ಕ್ಕೆ ಬದಲಾಯಿಸಬೇಕು’ ಎಂದು ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಇಲ್ಲಿ ಪ್ರತಿಪಾದಿಸಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘ, ಒಕ್ಕಲಿಗರ ಸೇವಾ ಟ್ರಸ್ಟ್ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಆದಿಚುಂಚನಗಿರಿ ಮಠದ ಡಾ.ಬಾಲಗಂಗಾಧರನಾಥಸ್ವಾಮಿ 79ನೇ ಜನ್ಮ ದಿನೋತ್ಸವ, ಪಟ್ಟಾಭಿಷೇಕದ ಸುವರ್ಣ ಮಹೋತ್ಸವ, ನಿರ್ಮಲಾನಂದನಾಥ ಸ್ವಾಮಿ ಪಟ್ಟಾಭಿಷೇಕದ ದಶಮಾನೋತ್ಸವ, ಸಂಕ್ರಾಂತಿ ಸುಗ್ಗಿ ಸಂಭ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

‘ಸತ್ಯಕ್ಕೆ ಸಾಕ್ಷಿ ಕೇಳುವ ಕಾಲಘಟ್ಟದಲ್ಲಿ ನಾವು ಬದುಕುತ್ತಿದ್ದೇವೆ. ಜೀವನದಲ್ಲಿ ಕಣ್ಣೀರು ಮತ್ತು ಬೆವರಿಗೆ ಹೆಚ್ಚಿನ ಮಹತ್ವವಿದೆ. ಕಣ್ಣೀರಿನಲ್ಲಿ ನೋವಿದ್ದರೆ, ಬೆವರಿನಲ್ಲಿ ಶ್ರಮವಿರುತ್ತದೆ. ದೇಹ ಐಸ್ ಕ್ರೀಮ್ ಇದ್ದಂತೆ. ಒಳ್ಳೆಯದನ್ನು ಮಾಡಿದರೂ ಕರಗುತ್ತದೆ, ಮಾಡದಿದ್ದರೂ ಕರಗುತ್ತದೆ’ ಎಂದರು.

ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ಎಷ್ಟೇ ವಿಚಾರವು ಗೊತ್ತಿದ್ದರೂ ಅಥವಾ ದೇಹ ಚೆನ್ನಾಗಿದ್ದರೂ ಅದಕ್ಕೆ ಒಂದು ಕಳೆ ಬರುವುದು ಮನಸಿನ ಕೊಳೆ ಹೋದಾಗ ಮಾತ್ರ. ಅದಕ್ಕೆ ಗುರುಸ್ಮರಣೆ ಮುಖ್ಯ’ ಎಂದರು.

ಚುಂಚಶ್ರೀ ನಾಮಕರಣ: ‘ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ಹೆಸರನ್ನು ಮಂಡ್ಯ ನಗರದ ವೃತ್ತಕ್ಕೆ ಇಡಲಾಗುವುದು. ಪ್ರತಿಮೆ ನಿರ್ಮಿಸಲಾಗುವುದು’ ಎಂದು ಶಾಸಕ ಪಿ.ರವಿಕುಮಾರಗೌಡ ಗಣಿಗ ಹೇಳಿದರು.

ಸಂಸದೆ ಸುಮಲತಾ ಅಂಬರೀಷ್ ಮಾತನಾಡಿದರು. ಕೊಮ್ಮೇರಹಳ್ಳಿ ಶಾಖಾ ಮಠದ ಪುರುಷೋತ್ತಮಾನಂದನಾಥ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಸ್ಟಾರ್ ಚಂದ್ರು, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಎಲ್. ನಾಗರಾಜು, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಗಂಗಾಧರಗೌಡ, ಒಕ್ಕಲಿಗರ ಸಂಘದ ನಿರ್ದೇಶಕರಾದ ಅಶೋಕ್ ಜಯರಾಮ್, ಮೂಡ್ಯ ಚಂದ್ರು, ರಾಘವೇಂದ್ರ ಬಸರಾಳು, ನೆಲ್ಲಿಗೆರೆ ಬಾಲು, ಜಯದೇವ ಆಸ್ಪತ್ರೆಯ ಡಾ.ಸದಾನಂದಗೌಡ, ಒಕ್ಕಲಿಗರ ಸೇವಾ ಟ್ರಸ್ಟ್‌ನ ಟಿ.ಟಿ.ಅನುಸೂಯ, ಕೃಷ್ಣೇಗೌಡ ಬಸರಾಳು, ಕುಮಾರ್ ನಂದೀಪುರ, ಎನ್.ಕೃಷ್ಣ, ಸುಜಾತ ಕೃಷ್ಣ, ಕೆ.ಸಿ.ರವೀಂದ್ರ ಭಾಗವಹಿಸಿದ್ದರು.

ಸಂಸದೆ ಶೋಭಾ ವಿರುದ್ಧ ಪತ್ರ ಚಳವಳಿ

ಪ್ರಜಾವಾಣಿ



ಶೋಭಾ ಕರಂದ್ಲಾಜೆ

ಚಿಕ್ಕಮಗಳೂರು: ಲೋಕಸಭೆ ಚುನಾವಣೆ ಹತ್ತಿರವಾಗುತ್ತಿರುವ ಬೆನ್ನಲ್ಲೇ ಸಂಸದೆ ಶೋಭಾ ಕರಂದ್ಲಾಜೆ ವಿರುದ್ಧ ಸ್ವಪಕ್ಷದವರೇ ಪತ್ರ ಚಳವಳಿ ಆರಂಭಿಸಿದ್ದಾರೆ.

‘ಉಡುಪಿ - ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಶೋಭಾ ಕರಂದ್ಲಾಜೆ ಅವರಿಗೆ ಟಿಕೆಟ್ ನೀಡಬಾರದು, ಹೊಸಬರಿಗೆ ಅವಕಾಶ ನೀಡಬೇಕು’ ಎಂದು ಬರೆದಿರುವ ಪತ್ರಗಳನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರಿಗೆ ಪೋಸ್ಟ್ ಮಾಡಿದರು.

ನಗರದ ಅಂಚೆ ಕಚೇರಿಗೆ ಬಂದ ಕಾರ್ಯಕರ್ತರು ನೂರಾರು ಪತ್ರಗಳನ್ನು ಅಂಚೆ ಪೆಟ್ಟಿಗೆಗೆ ಹಾಕಿದರು. ಮುಂದಿನ ದಿನಗಳಲ್ಲಿ ರಾಜ್ಯ ಘಟಕದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

‘ಪತ್ರ ಚಳವಳಿ ನಡೆಸಿದವರು ಬಿಜೆಪಿ ಯಾವುದೇ ಜವಾಬ್ದಾರಿ ಸ್ಥಾನದಲ್ಲಿ ಇಲ್ಲ. ಬಿಜೆಪಿಯ ಯಾರೇ ಅಭ್ಯರ್ಥಿಯಾದರೂ ಗೆಲ್ಲುವುದು ಕಷ್ಟ ಎಂದು ಎದುರಾಳಿ ಪಕ್ಷದವರಿಗೆ ಗೊತ್ತಿದೆ. ಆದ್ದರಿಂದ ಈ ರೀತಿ ಪಿತೂರಿ ನಡೆಸಿರುವ ಅನುಮಾನ ಇದೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ದೇವರಾಜ್ ಶೆಟ್ಟಿ ಸ್ಪಷ್ಟಪಡಿಸಿದರು.

‘ಆರ್.ಅಶೋಕ ಅಲ್ಲ, ಅಡ್ಜಸ್ಟ್‌ಮೆಂಟ್ ಅಶೋಕ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಗೃಹಸಚಿವನಾಗಿದ್ದಾಗ ಬಜರಂಗ ದಳದವರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಂಡಿದ್ದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ನೀಡಿರುವ ಹೇಳಿಕೆಗೆ ಬಜರಂಗದಳ ಕಿಡಿಕಾರಿದೆ.

‘ನೀವು ಆರ್ ಅಶೋಕ ಅಲ್ಲ. ನಿಮ್ಮ ಹೆಸರನ್ನು ಎ. ಅಶೋಕ ಅಂತ ಬದಲಾಯಿಸಿ ಬಿಡಿ ಅಡ್ಜಸ್ಟ್ ಮೆಂಟ್ ಅಶೋಕ್ ಅವರೇ’ ಎಂದು ಬಜರಂಗದಳದ ವಿಭಾಗ ಸಹ ಸಂಯೋಜಕ ಪುನೀತ್ ಅತ್ತಾವರ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡುವಾಗ ಆರ್.ಅಶೋಕ ಅವರು, ‘ಮಂಗಳೂರಿನ ಪಬ್‌ನಲ್ಲಿ ಬಜರಂಗದಳ ಕಾರ್ಯಕರ್ತರು ನುಗ್ಗಿ ಹೆಣ್ಣುಮಕ್ಕಳಿಗೆ ಹೊಡೆದರು ಎಂದು ಇದೇ ಸದನದಲ್ಲಿ ಧರಣಿ ನಡೆದಿತ್ತು. ಆಗ ನಾನು ಗೃಹಸಚಿವ. ನನ್ನ ಮೇಲೆ ಬಹಳ ಒತ್ತಡ ಇತ್ತು. ಫೋನ್ ಕರೆಗಳು ಬಂದಿದ್ದವು. ಆದರೆ, ನಾನು ಹಿಂದೆ ಮುಂದೆ ನೋಡಿಲ್ಲ. ನಾನು ಅವರ ವಿರುದ್ಧ ಗೂಂಡಾ ಕಾಯ್ದೆ ಹಾಕಿಸಿದೆ’ ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಆ ವಿಡಿಯೊ ತುಣುಕನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿರುವ ಪುನೀತ್ ಅತ್ತಾವರ, ‘ನಿಮ್ಮ ನಾಲಗೆಯನ್ನು, ನಾಲಗೆ ರೀತಿ ಬಳಸಿ. ಬೇರೆ ರೀತಿ ಬಳಸಿಕೊಳ್ಳಬೇಡಿ. ಅಡ್ಜಸ್ಟ್ ಮೆಂಟ್ ರಾಜಕಾರಣ ಎಂಬ ಗೊಚ್ಚೆ(ಕೊಚ್ಚೆ)ಯಲ್ಲಿ ಹೊರಳಾಡುತ್ತಿರುವ ನಿಮಗೆ ಬಜರಂಗದಳದ ಕಾರ್ಯಕರ್ತರ ಹೆಸರು ಎತ್ತಲೂ ಯೋಗ್ಯತೆಯಿಲ್ಲ. ಸಿದ್ಧಾಂತಕ್ಕಾಗಿ ಹೋರಾಡುವ ಬಜರಂಗದಳ ಕಾರ್ಯಕರ್ತರ ಮೇಲೆ ಗೂಂಡಾ ಕಾಯ್ದೆ ಹಾಕಿ ಅವರನ್ನು ಸುಮ್ಮನಿರಿಸುವಷ್ಟು ದೊಡ್ಡವರು ನೀವಾಗಿಲ್ಲ. ಬಜರಂಗದಳ ಕಾರ್ಯಕರ್ತರು ಹೋರಾಡುವುದು ನಿಮ್ಮ ಹಾಗೆ ವೈಯಕ್ತಿಕ ಲಾಭದ ಆಸೆಗಾಗಿ ಅಲ್ಲ. ನಿಮ್ಮ ರಾಜಕೀಯ ತೆವಲಿಗಾಗಿ ಬಜರಂಗದಳ ಕಾರ್ಯಕರ್ತರ ಬಗ್ಗೆ ಆಡಿದ ಮಾತನ್ನು ಹಿಂದೆಗೆದುಕೊಳ್ಳಬೇಕು’ ಎಂದು ಹೇಳಿದ್ದಾರೆ.

‘ಪ್ರತಿಪಕ್ಷ ನಾಯಕನಾಗಿರುವ ನೀವು ಒಂದಲ್ಲ ಒಂದು ದಿನ ಮಂಗಳೂರಿಗೆ ಬಂದೇ ಬರುತ್ತೀರಿ ಎಂಬ ಮಾತು ನೆನಪಿರಲಿ. ಹಿಂದೂ ವಿರೋಧಿ ಕೃತ್ಯಕ್ಕೆ ಪ್ರತಿರೋಧ ಒಡ್ಡಿ ಹೋರಾಡುವ ನಮಗೆ ನೀವೊಬ್ಬರು ಹೆಚ್ಚಾಗುವುದಿಲ್ಲ. ಬಜರಂಗದಳದ ಕಾರ್ಯಕರ್ತರ ಬಗ್ಗೆ ಆಡಿದ ಮಾತುಗಳನ್ನು ಹಿಂದೆ ಪಡೆಯಿರಿ ಇಲ್ಲದಿದ್ದರೆ ಬಜರಂಗದಳದ ಕಾರ್ಯಕರ್ತರ ಪ್ರತಿರೋಧವನ್ನು ಎದುರಿಸಲು ಸಿದ್ಧರಾಗಿ’ ಎಂದು ಎಚ್ಚರಿಕೆಯನ್ನೂ ನೀಡಿದ್ದಾರೆ

ಮುದ್ದಹನುಮೇಗೌಡ ಮರಳಿ ಕಾಂಗ್ರೆಸ್‌ಗೆ

ತುಮಕೂರು: ಬಿಜೆಪಿ ತೊರೆದಿದ್ದ ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಗುರುವಾರ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಅಧಿಕೃತವಾಗಿ ಕಾಂಗ್ರೆಸ್ ಸೇರ್ಪಡೆ ಆಗಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಮರಳಲಿದ್ದಾರೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್- ಜೆಡಿಎಸ್ ಮೈತ್ರಿಯಿಂದಾಗಿ ತುಮಕೂರು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಾಗಿತ್ತು. ಹಾಲಿ ಸಂಸದರಾಗಿದ್ದ ಮುದ್ದಹನುಮೇಗೌಡ ಸ್ಪರ್ಧಿಸಲು ಸಾಧ್ಯವಾಗಿರಲಿಲ್ಲ. ನಂತರವೂ ಪಕ್ಷದಲ್ಲಿ ಯಾವುದೇ ಸ್ಥಾನಮಾನ ಸಿಕ್ಕಿರಲಿಲ್ಲ.

ವಿಧಾನಸಭೆ ಚುನಾವಣೆ ಸಮಯದಲ್ಲಿ ಕುಣಿಗಲ್ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಬಯಸಿದ್ದರು. ಟಿಕೆಟ್ ಸಿಗುವುದಿಲ್ಲ ಎಂಬುದು ಖಚಿತ ಆಗುತ್ತಿದ್ದಂತೆ ಬಿಜೆಪಿ ಸೇರಿದ್ದರು. ಆ ಪಕ್ಷದಲ್ಲೂ ಕುಣಿಗಲ್ ಕ್ಷೇತ್ರದಿಂದ ಕಣಕ್ಕಿಳಿಯಲು ಟಿಕೆಟ್ ಸಿಗಲಿಲ್ಲ. ಲೋಕಸಭೆಗೆ ಬಿಜೆಪಿಯಿಂದ ಟಿಕೆಟ್ ಸಿಗಬಹುದು ಎಂಬ ಆಶಾಭಾವನೆಯಲ್ಲಿ ಇದ್ದರು.

ಬದಲಾದ ರಾಜಕೀಯ ಲೆಕ್ಕಾಚಾರದಲ್ಲಿ ಟಿಕೆಟ್ ಸಿಗುವುದು ಖಾತರಿಯಾಗದೆ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದರು. ನಂತರ ಕಾಂಗ್ರೆಸ್ ನಾಯಕರನ್ನು ಭೇಟಿಯಾಗಿ ಪಕ್ಷ ಸೇರುವ ಇಂಗಿತ ವ್ಯಕ್ತಪಡಿಸಿದ್ದರು.

‘ವೇತನ ಪಡೆಯುವವರಿಂದ ಸಂಘಟನೆ ಅಸಾಧ್ಯ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಆಮ್ ಆದ್ಮಿ ಪಾರ್ಟಿಯ ಸಂಸ್ಥಾಪಕ ಅರವಿಂದ ಕೇಜ್ರಿವಾಲ್ ಅವರ ಹೋರಾಟ, ಪಕ್ಷದ ತತ್ವಗಳನ್ನು ಈಗಲೂ ಮೆಚ್ಚುತ್ತೇನೆ. ಆದರೆ, ವೇತನ ಪಡೆಯುವ ರಾಜ್ಯ ಪದಾಧಿಕಾರಿಗಳಿಂದ ಸಂಘಟನೆ ಸಾಧ್ಯವಿಲ್ಲ’ ಎಂದು ಎಎಪಿ ಮಾಜಿ ರಾಜ್ಯ ಜಂಟಿ ಕಾರ್ಯದರ್ಶಿ ರಮೇಶ ಬದ್ನೂರ ಟೀಕಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ₹2 ಲಕ್ಷ ಸಂಬಳ ಪಡೆಯುತ್ತಾರೆ. ಕಾರ್ಯದರ್ಶಿ ಮತ್ತಿತರ ಕೆಲ ಮುಖಂಡರಿಗೆ ತಿಂಗಳಿಗೆ ₹70 ಸಾವಿರ ನೀಡಲಾಗುತ್ತದೆ. ಪಕ್ಷ ಸಂಘಟನೆಯಾಗಲಿ ಅಥವಾ ಬಿಡಲಿ. ನಮಗೆ ವೇತನ ಬರುತ್ತದೆ ಸಾಕು ಎಂಬ ಮನೋಸ್ಥಿತಿಯಲ್ಲಿ ಇದ್ದಾರೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

रजिस्ट्री सं.डी.एल - 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 17022024-252205
CG-DL-E-17022024-252205

असाधारण
EXTRAORDINARY

भाग- II - खण्ड- 3 - उप खण्ड- (ii)
PART II - Section -3 - Sub section (ii)

प्राधिकार से प्रकाशित
PUBLISHED BY AUTHORITY

सं. - 694] नई दिल्ली, शुक्रवार, फरवरी 16, 2024/माघ 27, 1945
No. 694] NEW DELHI, FRIDAY, FEBRUARY 16, 2024/MAGHA 27, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 16ನೇ ಫೆಬ್ರವರಿ, 2024

ಎಸ್.ಓ. ನಂ. 730(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ. 69 ರಲ್ಲಿ stretch of land from (Design Ch.0.00 (Existing Ch. Km. 428.880) to Design Ch.15.400 (Existing Ch.444.010) (ಚಿಂತಾಮಣಿ ಇಂದ ಆಂಧ್ರಪ್ರದೇಶ ಬಾರ್ಡರ್ ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ** (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು-69, ಪಿ.ಡಬ್ಲ್ಯುಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು-01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.69 ರಲ್ಲಿ stretch of land from (Design Ch.0.00 (Existing Ch. Km. 428.880) to Design Ch.15.400 (Existing Ch.444.010) (ಚಿಂತಾಮಣಿ ಇಂದ ಆಂಧ್ರಪ್ರದೇಶ ಬಾರ್ಡರ್ ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಿಕ್ಕಬಳ್ಳಾಪುರ

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು : ಚಿಂತಾಮಣಿ					
ಗ್ರಾಮ : ಮುಂಗನಹಳ್ಳಿ					
1	15/2	ಖಾಸಗಿ	ಖುಷ್ಕಿ	25	0.0025
2	15/5	ಖಾಸಗಿ	ಖುಷ್ಕಿ	25	0.0025
3	15/6	ಖಾಸಗಿ	ಖುಷ್ಕಿ	55	0.0055
4	25/1	ಖಾಸಗಿ	ಖುಷ್ಕಿ	303	0.0303
5	25/2	ಖಾಸಗಿ	ಖುಷ್ಕಿ	255	0.0255
6	25/3	ಖಾಸಗಿ	ಖುಷ್ಕಿ	25	0.0025
7	25/6	ಖಾಸಗಿ	ಖುಷ್ಕಿ	202	0.0202
8	28	ಖಾಸಗಿ	ಖುಷ್ಕಿ	955	0.0955
9	29/1	ಖಾಸಗಿ	ಖುಷ್ಕಿ	475	0.0475
10	29/3	ಖಾಸಗಿ	ಖುಷ್ಕಿ	275	0.0275
11	36/1	ಖಾಸಗಿ	ಖುಷ್ಕಿ	505	0.0505
12	36/2	ಖಾಸಗಿ	ಖುಷ್ಕಿ	155	0.0155
13	36/3	ಖಾಸಗಿ	ಖುಷ್ಕಿ	175	0.0175
14	37/1	ಖಾಸಗಿ	ಖುಷ್ಕಿ	75	0.0075
15	37/2	ಖಾಸಗಿ	ಖುಷ್ಕಿ	55	0.0055
16	37/3	ಖಾಸಗಿ	ಖುಷ್ಕಿ	75	0.0075
17	38/1	ಖಾಸಗಿ	ಖುಷ್ಕಿ	275	0.0275
18	38/2	ಖಾಸಗಿ	ಖುಷ್ಕಿ	255	0.0255
19	38/3	ಖಾಸಗಿ	ಖುಷ್ಕಿ	155	0.0155
20	39	ಖಾಸಗಿ	ಖುಷ್ಕಿ	2202	0.2202
21	62/1	ಖಾಸಗಿ	ಖುಷ್ಕಿ	55	0.0055
22	63/1	ಖಾಸಗಿ	ಖುಷ್ಕಿ	2825	0.2825
ಗ್ರಾಮ : ದೊಡ್ಡಿಹಳ್ಳಿ					
23	41	ಖಾಸಗಿ	ಖುಷ್ಕಿ	1111	0.1111
24	42	ಖಾಸಗಿ	ಖುಷ್ಕಿ	755	0.0755
25	52	ಖಾಸಗಿ	ಖುಷ್ಕಿ	1202	0.1202
26	64	ಖಾಸಗಿ	ಖುಷ್ಕಿ	25	0.0025
27	65	ಖಾಸಗಿ	ಖುಷ್ಕಿ	1825	0.1825
28	75	ಖಾಸಗಿ	ಖುಷ್ಕಿ	1202	0.1202
ಗ್ರಾಮ : ತಿನಕಲ್ಲು					
29	104	ಖಾಸಗಿ	ಖುಷ್ಕಿ	550	0.055
30	106/2	ಖಾಸಗಿ	ಖುಷ್ಕಿ	75	0.0075
31	107	ಖಾಸಗಿ	ಖುಷ್ಕಿ	1069	0.1069
32	113/1	ಸಾಮಾನ್ಯ(ಸರ್ಕಾರಿ/ಖಾಸಗಿ)	ಖುಷ್ಕಿ	455	0.0455
33	114/2	ಸಾಮಾನ್ಯ(ಸರ್ಕಾರಿ/ಖಾಸಗಿ)	ಖುಷ್ಕಿ	51	0.0051
ಗ್ರಾಮ : ಬೊಮ್ಮೆಕಲ್ಲು					
34	161	ಖಾಸಗಿ	ಖುಷ್ಕಿ	202	0.0202
ಗ್ರಾಮ : ಕೆಂಪದೇನಹಳ್ಳಿ					
35	107	ಖಾಸಗಿ	ಖುಷ್ಕಿ	755	0.0755
36	117	ಖಾಸಗಿ	ಖುಷ್ಕಿ	405	0.0405
ಗ್ರಾಮ : ದೊಡ್ಡಕೊಂಡ್ರಹಳ್ಳಿ					
37	57/1	ಖಾಸಗಿ	ಖುಷ್ಕಿ	55	0.0055
38	65	ಸಾಮಾನ್ಯ(ಖಾಸಗಿ/ಸರ್ಕಾರಿ)	ಖುಷ್ಕಿ/ಖರಾಬು	21425	2.1425
39	72	ಖಾಸಗಿ	ಖುಷ್ಕಿ	747	0.0747
40	73	ಖಾಸಗಿ	ಖುಷ್ಕಿ	475	0.0475
41	84/7	ಖಾಸಗಿ	ಖುಷ್ಕಿ	26	0.0026
42	92	ಖಾಸಗಿ	ಖುಷ್ಕಿ	1082	0.1082
43	96/2	ಖಾಸಗಿ	ಖುಷ್ಕಿ	265	0.0265
ಗ್ರಾಮ : ಗುಟ್ಟಹಳ್ಳಿ					
44	21/2	ಖಾಸಗಿ	ತರಿ	77	0.0077
45	22	ಖಾಸಗಿ	ತರಿ	768	0.0768
46	25	ಖಾಸಗಿ	ಖುಷ್ಕಿ	166	0.0166
47	35	ಖಾಸಗಿ	ಖುಷ್ಕಿ	3556	0.3556
48	55/1	ಖಾಸಗಿ	ಖುಷ್ಕಿ	2475	0.2475
49	55/2	ಖಾಸಗಿ	ಖುಷ್ಕಿ	2805	0.2805
ಗ್ರಾಮ : ಉಳವಕಾಯಲಹಳ್ಳಿ					
50	12	ಖಾಸಗಿ	ಖುಷ್ಕಿ	1055	0.1055
51	15	ಖಾಸಗಿ	ಖುಷ್ಕಿ	202	0.0202
52	41	ಖಾಸಗಿ	ಖುಷ್ಕಿ	224	0.0224
53	43	ಖಾಸಗಿ	Garden	375	0.0375
ಗ್ರಾಮ : ವಡ್ಡಹಳ್ಳಿ					
54	48	ಖಾಸಗಿ	ಖುಷ್ಕಿ	25	0.0025
55	51	ಸಾಮಾನ್ಯ(ಖಾಸಗಿ/ಸರ್ಕಾರಿ)	ಖುಷ್ಕಿ/ಖರಾಬು	2787	0.2787
56	53/2ಃ	ಖಾಸಗಿ	ಖುಷ್ಕಿ	325	0.0325
ಗ್ರಾಮ : ಮೈಲಾಪುರ					
57	37/1	ಖಾಸಗಿ	ಖುಷ್ಕಿ	267	0.0267
58	41	ಖಾಸಗಿ	ಖುಷ್ಕಿ	2125	0.2125
59	43/3	ಖಾಸಗಿ	ಖುಷ್ಕಿ	325	0.0325
60	46	ಖಾಸಗಿ	ಖುಷ್ಕಿ	256	0.0256
ಗ್ರಾಮ : ನಾಗದೇನಹಳ್ಳಿ					
61	72	ಸರ್ಕಾರಿ	ಟ್ಯಾಂಕ್	2055	0.2055
62	90	ಖಾಸಗಿ	ಖುಷ್ಕಿ	76	0.0076
63	91/1	ಖಾಸಗಿ	ಖುಷ್ಕಿ	177	0.0177
ಗ್ರಾಮ : ಮಾದಿಕೆರೆ					
64	190	ಖಾಸಗಿ	ಖುಷ್ಕಿ	556	0.0556
65	191	ಸರ್ಕಾರಿ	ಖರಾಬು	125	0.0125
66	205	ಖಾಸಗಿ	ಖುಷ್ಕಿ	125	0.0125
67	208	ಖಾಸಗಿ	ಖುಷ್ಕಿ	101	0.0101
68	209	ಖಾಸಗಿ	ಖುಷ್ಕಿ	2556	0.2556
69	212	ಖಾಸಗಿ	ಖುಷ್ಕಿ	75	0.0075
70	228	ಖಾಸಗಿ	Garden/NAK	607	0.0607
ಗ್ರಾಮ : ಚಟ್ಲಪಲ್ಲಿಗಡ್ಡ					
71	11	ಖಾಸಗಿ	ಖುಷ್ಕಿ	506	0.0506
72	38	ಖಾಸಗಿ	ಖುಷ್ಕಿ/NAK	220	0.022
73	39	ಖಾಸಗಿ	ಖುಷ್ಕಿ/NAK	955	0.0955
74	9	ಖಾಸಗಿ	ಖುಷ್ಕಿ	175	0.0175
ಗ್ರಾಮ : ಕಲ್ಲಹಳ್ಳಿ					
75	52	ಸಾಮಾನ್ಯ(ಖಾಸಗಿ/ಸರ್ಕಾರಿ)	ಖುಷ್ಕಿ/ಬಿಲ್ಟಪ್ ಪ್ರದೇಶ	202	0.0202
76	53	ಖಾಸಗಿ	ಖುಷ್ಕಿ	404	0.0404
ಗ್ರಾಮ : ಕಟಮಾಚನಹಳ್ಳಿ					
77	18	ಸಾಮಾನ್ಯ(ಖಾಸಗಿ/ಸರ್ಕಾರಿ)	ಖುಷ್ಕಿ/ಬಿಲ್ಟಪ್ ಪ್ರದೇಶ/ಖರಾಬು	1111	0.1111
78	4	ಖಾಸಗಿ	ಖುಷ್ಕಿ	1062	0.1062
79	5	ಖಾಸಗಿ	ಖುಷ್ಕಿ	1012	0.1012
80	6	ಖಾಸಗಿ	ಖುಷ್ಕಿ	55	0.0055
ಗ್ರಾಮ : ಚಿನ್ನಸಂದ್ರ					
81	100	ಸರ್ಕಾರಿ	ಖರಾಬು	75	0.0075
82	101	ಖಾಸಗಿ	ಖುಷ್ಕಿ	101	0.0101
83	131	ಖಾಸಗಿ	ಖುಷ್ಕಿ	455	0.0455
84	2	ಖಾಸಗಿ	ಖುಷ್ಕಿ	707	0.0707
85	4	ಖಾಸಗಿ	ಖುಷ್ಕಿ/NAK	606	0.0606
86	95	ಖಾಸಗಿ	ಖುಷ್ಕಿ	3202	0.3202
87	99/1, 99/2, 99/4, 99/5	ಖಾಸಗಿ	ಖುಷ್ಕಿ/ ಬಿಲ್ಟಪ್ ಪ್ರದೇಶ	2055	0.2055
88	ರಸ್ತೆ	ಸರ್ಕಾರಿ	ಖರಾಬು	1575	0.1575
				ಒಟ್ಟು	8.1903

[F.No.RW/NH-69/Km0.00toKm15.58/22-23/3A]

ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ಸಿದ್ದರಾಮಯ್ಯ ವಿರುದ್ಧ ಬಿಜೆಪಿ– ಜೆಡಿಎಸ್ ಸದಸ್ಯರ ಆಕ್ರೋಶ • ಕಾಂಗ್ರೆಸ್ ಸದಸ್ಯರಿಂದ ಕೇಂದ್ರದ ವಿರುದ್ಧ ಧಿಕ್ಕಾರ

ವಿಪಕ್ಷಗಳ ಅಡ್ಡಿ: ಸಿ.ಎಂ ಮಾತು ಮೊಟಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷಗಳ ನಿರಂತರ ಅಡಚಣೆಯಿಂದ ಅಸಮಾಧಾನಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ನೀಡಬೇಕಿದ್ದ ಉತ್ತರವನ್ನು ಅರ್ಧಕ್ಕೆ ಮೊಟಕುಗೊಳಿಸಿದರು.

‘ತಾವು ಆಡಿದ ಕೆಲ ಮಾತುಗಳಿಗೆ ಸ್ಪಷ್ಟೀಕರಣ ನೀಡಬೇಕು. ತಮ್ಮ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದು ವಿಧಾನ ಪರಿಷತ್‌ನಲ್ಲಿ ಬುಧವಾರ ಬಿಜೆಪಿ–ಜೆಡಿಎಸ್ ಸದಸ್ಯರು ಪಟ್ಟುಹಿಡಿದರು. ಅವರ ಮಾತಿಗೆ ಯಾವುದೇ ಪ್ರತಿಕ್ರಿಯೆ ನೀಡದ ಸಿದ್ದರಾಮಯ್ಯ ಮೌನಕ್ಕೆ ಶರಣರಾದರು. ಇದರಿಂದ ಕೆರಳಿದ ವಿರೋಧ ಪಕ್ಷಗಳ ಸದಸ್ಯರು ಕಾಂಗ್ರೆಸ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರು ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ‘ನಮ್ಮ ತೆರಿಗೆ ನಮ್ಮ ಹಕ್ಕು’ ಎಂದು ಘೋಷಣೆ ಮೊಳಗಿಸಿದರು. ಗದ್ದಲದ ಮಧ್ಯೆಯೇ ವಂದನಾ ನಿರ್ಣಯವನ್ನು ಸಭಾಪತಿ ಬಸವರಾಜ ಹೊರಟ್ಟಿ ಮತಕ್ಕೆ ಹಾಕಿದರು. ಇದರಿಂದ ಆಕ್ರೋಶಗೊಂಡ ಜೆಡಿಎಸ್–ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.





ಪರಿಷತ್ತಿನ ಬುಧವಾರದ ಕಲಾಪದ ವೇಳೆ ರಾಜ್ಯಪಾಲರ ಭಾಷಣದ ಕುರಿತು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವರದಿ ಮತ್ತು ಸಂಪಾದಕೀಯವನ್ನು ಓದಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ಸಭಾನಾಯಕ ಎನ್‌.ಎಸ್‌. ಬೋಸರಾಜು ಉಪಸ್ಥಿತರಿದ್ದರು (ಎಡಚಿತ್ರ) ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ಕೇಂದ್ರ ಸಚಿವ ನಿರ್ಮಲಾ ಸೀತಾರಾಮನ್ ಸಂದರ್ಶನ ಓದಿದರು –ಪ್ರಜಾವಾಣಿ ಚಿತ್ರ

ಬೆಳಿಗ್ಗೆ ಕಲಾಪ ಆರಂಭವಾಗುತ್ತಿದಂತೆ ಮಾತು ಆರಂಭಿಸಿದ ಸಿದ್ದರಾಮಯ್ಯ, ಬಿಜೆಪಿಯೇತರ ರಾಜ್ಯಗಳ ರಾಜ್ಯಪಾಲರ ಕಾರ್ಯ ವೈಖರಿ ಖಂಡಿಸುತ್ತಾ, ಕರ್ನಾಟಕದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ನಡೆಯನ್ನು ಶ್ಲಾಘಿಸಿದರು. ರಾಜ್ಯದ ಮುಖ್ಯಸ್ಥರಾಗಿ ಗೆಹಲೋತ್ ಅವರು ಸಂವಿಧಾನಿಕ ಸ್ಥಾನ ಮಾನಕ್ಕೆ ಚ್ಯುತಿ ಬಾರದಂತೆ ನಡೆದುಕೊಂಡಿದ್ದಾರೆ. ಇತಿಹಾಸದಲ್ಲಿ ಅವರ ನಡವಳಿಕೆ ಮಾದರಿಯಾಗಿ ಉಳಿಯಲಿದೆ ಎಂದರು.

‘ಜೆಡಿಎಸ್‌ನ ಭೋಜೇಗೌಡ ಜಾತ್ಯತೀತ ಮನೋಭಾವದವರು. ಬಿಜೆಪಿ ಜತೆ ಸೇರಿ ಕೋಮುವಾದಿಯಾಗುತ್ತಿದ್ದಾರೆ. ಜೆಡಿಎಸ್ ಈಗ ಜೆಡಿಸಿ (ಕಮ್ಯೂನಲ್) ಆಗಿದೆ. ಸುಮ್ಮನೆ ಇತ್ತ ಬನ್ನಿ ನಿಮಗೆ ಆ ಜಾಗ (ವಿರೋಧ ಪಕ್ಷದ ಆಸನಗಳು) ಸರಿಹೋಗುವುದಿಲ್ಲ’ ಎಂದು ಆಹ್ವಾನಿಸಿದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿಗರು ಕೋಮುವಾದಿಗಳಲ್ಲ, ರಾಷ್ಟ್ರಪ್ರೇಮಿಗಳು ಎಂದರು. ‘ನಾವೇನು ರಾಷ್ಟ್ರಪ್ರೇಮಿಗಳಲ್ಲವಾ? ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟ ಮಾಡಿಲ್ಲವಾ? ನಿಮ್ಮ ಆರ್‌ಎಸ್‌ಎಸ್, ವಾಜಪೇಯಿ, ಅಡ್ವಾಣಿ, ಮೋದಿ ಸ್ವಾತಂತ್ರ್ಯ ಹೋರಾಟ ಮಾಡಿದ್ದಾರಾ? ಮಹಾತ್ಮ ಗಾಂಧಿ ಸೇರಿದಂತೆ ಸಾವಿರಾರು ತ್ಯಾಗಿಗಳ ನೇತೃತ್ವದಲ್ಲಿ ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದೆ. ನಾವೇ ನಿಜವಾದ ರಾಷ್ಟ್ರಪ್ರೇಮಿಗಳು’ ಎಂದು ಸಿದ್ದರಾಮಯ್ಯ ಹೇಳಿದರು.

‘ಬಿಜೆಪಿಯ ಶಾಸಕರು, ಸಂಸದರು ರಾಜ್ಯದ ಪಾಲಿಗಾಗಿ ಧ್ವನಿ ಎತ್ತಬೇಕು. ರಾಜ್ಯದ ಪಾಲು ಕೊಡಿಸಲು ಸಹಕರಿಸಬೇಕು. ಕನ್ನಡಿಗರ ಪರ ನಿಂತರೆ ಅಂಥವರಿಗೆ 100 ಕೋಟಿ ನಮಸ್ಕಾರ ಮಾಡುವೆ. ಕೇಂದ್ರದ ನೆರವು ವಿಳಂಬವಾದರೂ, ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದಲ್ಲಿ ಬರಗಾಲದ ತೀವ್ರತೆ ಕಡಿಮೆಯಾಗಿದೆ. ಬಡವರು, ರೈತರು, ಶೋಷಿತರ ಬದುಕು ಸುಧಾರಿಸಿದೆ’ ಎಂದರು.

ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಮುಖ್ಯ ಸಚೇತಕ ಎನ್.ರವಿಕುಮಾರ್, ಬಿಜೆಪಿಯ ತೇಜಸ್ವಿನಿ ಗೌಡ, ಭಾರತಿ ಶೆಟ್ಟಿ ಮತ್ತಿತರರು ಮೋದಿ, ನಿರ್ಮಲಾ ಸೀತಾರಾಮನ್ ಹಾಗೂ ಕೇಂದ್ರ ಸರ್ಕಾರ ಟೀಕಿಸುವುದಕ್ಕೆ ಮುಖ್ಯಮಂತ್ರಿ ರಾಜ್ಯಪಾಲರ ಭಾಷಣ ಬಳಸಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಒಕ್ಕೂಟ ವ್ಯವಸ್ಥೆಗೆ ಮೋದಿ ಅಪಾಯ’

ನ್ಯಾಯಯುತವಾಗಿ ನೀಡಬೇಕಾದ ರಾಜ್ಯದ ಪಾಲು ನೀಡದೇ ನಿರ್ಲಕ್ಷ್ಯ ಮಾಡುತ್ತಿರುವ ಪ್ರಧಾನಿ ಮೋದಿ ಅವರೇ ಒಕ್ಕೂಟ ವ್ಯವಸ್ಥೆಗೆ ಅಪಾಯ ಎಂದು ಸಿದ್ದರಾಮಯ್ಯ ಟೀಕಿಸಿದರು.

ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲು, ಹಣಕಾಸು ಆಯೋಗದ ಅನುದಾನ, ಬರ ಪರಿಹಾರದ ನೆರವು ನೀಡಲು ಕೇಂದ್ರ ಸರ್ಕಾರ ಸತಾಯಿಸುತ್ತಿದೆ. ರಾಜ್ಯದಿಂದ ಪ್ರತಿ ವರ್ಷ ಕೇಂದ್ರಕ್ಕೆ ತೆರಿಗೆ ರೂಪದಲ್ಲಿ ₹4.30 ಲಕ್ಷ ಕೋಟಿ ಸಂದಾಯವಾಗುತ್ತಿದೆ. ರಾಜ್ಯಕ್ಕೆ ಮರಳಿ ಸಿಗುತ್ತಿರುವುದು ಕೇವಲ ಶೇ 13ರಷ್ಟು ಮಾತ್ರ. ಇಂತಹ ಅನ್ಯಾಯ ಪ್ರಶ್ನಿಸಿದರೆ ಪ್ರಧಾನಿ ಮೋದಿ ಅವರು ದೇಶ ವಿಭಜನೆಯ ಮಾತಾಡುತ್ತಾರೆ ಎಂದು ಟೀಕೆ ಮಾಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನರೇಂದ್ರ ಮೋದಿ ಅವರು ಒಕ್ಕೂಟ ವ್ಯವಸ್ಥೆಯ ಸಹಕಾರದ ಬಗ್ಗೆ ಮಾತನಾಡುತ್ತಾರೆ. ಆದರೆ, ಅದು ಅವರ ನಡವಳಿಕೆಯಲ್ಲಿ ಕಾಣುತ್ತಿಲ್ಲ. ಅವರೇ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ‘ಕೇಂದ್ರ ನಮಗೆ ಭಿಕ್ಷೆ ನೀಡುತ್ತಿಲ್ಲ. ರಾಜ್ಯದ ಪಾಲು ಕೊಡಲು ಸಾಧ್ಯವಾಗದಿದ್ದರೆ ಗುಜರಾತ್‌ನಿಂದ ತೆರಿಗೆಯನ್ನೇ ಸಂಗ್ರಹಿಸಬೇಡಿ. ನಮ್ಮ ತೆರಿಗೆ ನಮಗೇ ಬಿಡಿ’ ಎಂದಿದ್ದರು. ಅಂದು ಲಕ್ನೋದಲ್ಲಿ ನಡೆದಿದ್ದ ಬಿಜೆಪಿ ಕಾರ್ಯಕಾರಣಿ ಸಭೆಯಲ್ಲಿ ಮಾತನಾಡಿದ್ದ ಅವರು ಯುಪಿಎ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ಬೆದರಿಕೆ ಎಂದು ಹೇಳಿಕೆ ನೀಡಿದ್ದರು. ಈಗ ಕರ್ನಾಟಕ ತನ್ನ ಪಾಲು ಕೇಳುವುದೇ ಒಕ್ಕೂಟ ವ್ಯವಸ್ಥೆ ಅಪಾಯ ಎನ್ನುತ್ತಾರೆ ಎಂದು ದೂರಿದರು.

ಸುದ್ದಿ 2 ನಿಮಿಷ

‘ಪರಿಶಿಷ್ಟರ ನಿಧಿ: ಶೇ 40ರಷ್ಟು ಇಲಾಖೆ ಮೂಲಕ ವೆಚ್ಚ’

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ (ಟಿಎಸ್‌ಪಿ) ನಿಗದಿಪಡಿಸಿರುವ ₹ 39,121 ಕೋಟಿಯಲ್ಲಿ ಶೇಕಡ 40ರಷ್ಟನ್ನು ಸಮಾಜ ಕಲ್ಯಾಣ ಇಲಾಖೆಯ ಏಕಗವಾಕ್ಷಿ ಮೂಲಕ ನೇರವಾಗಿ ವೆಚ್ಚ ಮಾಡಲು ಅನುಮತಿ ಕೋರಿ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ತಿಳಿಸಿದರು.

ಕಾಂಗ್ರೆಸ್‌ನ ರೂಪಕಲಾ ಎಂ. ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಬುಧವಾರ ಉತ್ತರಿಸಿದ ಸಚಿವರು, ‘ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಒದಗಿಸಿರುವ ಮೊತ್ತ 36 ಇಲಾಖೆಗಳಿಗೆ ಹಂಚಿಕೆಯಾಗುತ್ತದೆ. ನೇರವಾಗಿ ಪರಿಶಿಷ್ಟರ ಅಭಿವೃದ್ಧಿಗೆ ಅನುದಾನ ಸಿಗುತ್ತಿಲ್ಲ’ ಎಂದರು.



‘ಎಸ್‌ಸಿಪಿ, ಟಿಎಸ್‌ಪಿ ಅನುದಾನದಲ್ಲಿ ಶೇ 60ರಷ್ಟನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿ, ಶೇ 40ರಷ್ಟನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ವೆಚ್ಚ ಮಾಡಲು ಅನುಮತಿ ಕೋರಿ ಮುಖ್ಯಮಂತ್ರಿಯವರಿಗೆ ಪ್ರಸ್ತಾವ ಸಲ್ಲಿಸಿದ್ದೇವೆ. ಅನುಮತಿ ಸಿಕ್ಕರೆ, ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ, ಏಕಗವಾಕ್ಷಿ ಮೂಲಕ ಅನುಷ್ಠಾನಕ್ಕೆ ತರುತ್ತೇವೆ.’ ಎಂದರು.

‘ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಸಲು 2019–20 ಮತ್ತು 2020–21ನೇ ಸಾಲಿನಲ್ಲಿ ಆಯ್ಕೆಮಾಡಿದ್ದ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಇನ್ನೂ ಸಾಧ್ಯವಾಗಿಲ್ಲ. ನಂತರ ಆಯ್ಕೆಯಾದ ಫಲಾನುಭವಿಗಳ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಲಾಗಿದೆ’ ಎಂದು ರೂಪಕಲಾ ಅಸಮಾಧಾನ ವ್ಯಕ್ತಪಡಿಸಿದರು.

ಬಿಸಿಯೂಟ ನಿವೃತ್ತ ನೌಕರರಿಗೆ ಘೋಷಣೆಯಾಗದ ಇಡುಗಂಟು

ಬೆಂಗಳೂರು: 60 ವರ್ಷ ದಾಟಿದ ಕಾರಣಕ್ಕೆ ವಜಾ ಆಗಿರುವ ಬಿಸಿಯೂಟ ನೌಕರರಿಗೆ ಇಡುಗಂಟು ನೀಡುವುದಾಗಿ ಸರ್ಕಾರ ಒಪ್ಪಿದ್ದರೂ ಬಜೆಟ್‌ನಲ್ಲಿ ಸೇರಿಸಿಲ್ಲ ಎಂದು ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ ಅಸಮಾಧಾನ ವ್ಯಕ್ತಪಡಿಸಿದೆ.

ವಯಸ್ಸು ಮೀರಿದೆ ಎಂದು ಯಾವುದೇ ಸೌಲಭ್ಯ ಒದಗಿಸದೇ ಹಿಂದಿನ ಸರ್ಕಾರ 10,500 ನೌಕರರನ್ನು ಕೆಲಸದಿಂದ ತೆಗೆದು ಹಾಕಿತ್ತು. ನಿವೃತ್ತಿಯ ಸೌಲಭ್ಯವನ್ನು ನೀಡದೇ ಅಮಾನವೀಯವಾಗಿ ನಡೆದುಕೊಂಡಿತ್ತು. ಇದರ ವಿರುದ್ಧ ಸಂಘವು ಹೋರಾಟ ಮಾಡಿದ ಮೇಲೆ ಅಧಿಕಾರಿಗಳು ಮತ್ತು ಸಚಿವರು ಜಂಟಿ ಸಭೆ ಕರೆದು ಚರ್ಚಿಸಿದ್ದರು. ಇಡುಗಂಟು ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು 2022ರ ಅಕ್ಟೋಬರ್ 10ರಂದು ಶಿಫಾರಸು ಮಾಡಿದ್ದರು.

ಹೋರಾಟ ನಿಲ್ಲಿಸಿದ ಬಿಸಿಯೂಟ ನೌಕರರು ತಮ್ಮ ತಮ್ಮ ಊರಿಗೆ ತೆರಳಿದ ಬಳಿಕ ಈ ಶಿಫಾರಸನ್ನು ಇಲಾಖೆ ತಿರಸ್ಕರಿಸಿತ್ತು. ಈಗಿನ ಸರ್ಕಾರವು ಬಿಸಿಯೂಟ ನೌಕರರ ಪರ ಇರುವುದಾಗಿ ತಿಳಿಸಿತ್ತು. ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿತ್ತು. ಆದರೆ, ಇತ್ತೀಚೆಗೆ ಮುಖ್ಯಮಂತ್ರಿ ಮಂಡಿಸಿದ ಬಜೆಟ್‌ನಲ್ಲಿ ಅನುದಾನ ಒದಗಿಸಿಲ್ಲ ಎಂದು ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮೀ ಆಗ್ರಹಿಸಿದರು.

ಅಂಗನವಾಡಿ ನೌಕರರು ಗ್ರಾಚ್ಯುಟಿ ಪಡೆಯಲು ಅರ್ಹರು ಎಂದು ಸುಪ್ರೀಂ ಕೋರ್ಟ್ 2022ರ ಏಪ್ರಿಲ್‌ನಲ್ಲಿ ತೀರ್ಪು ನೀಡಿತ್ತು. ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ 2023–24ರ ಸಾಲಿನಿಂದ ಜಾರಿಗೆ ಬರುವಂತೆ ಉಪಧನ ನೀಡಲು ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮತಿ ನೀಡಿದೆ. ಆದರೆ ಅನುದಾನ ಒದಗಿಸಿಲ್ಲ ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳ ಕನಿಷ್ಠ ಸೇವಾವಧಿ 2 ವರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್‌ಗಳಿಂದ ಎಸ್‌ಪಿವರೆಗಿನ ಅಧಿಕಾರಗಳ ಕನಿಷ್ಠ ಸೇವಾವಧಿಯನ್ನು ಎರಡು ವರ್ಷಗಳಿಗೆ ಹೆಚ್ಚಿಸುವ ‘ಕರ್ನಾಟಕ ಪೊಲೀಸು (ತಿದ್ದುಪಡಿ) ಮಸೂದೆ–2024’ಕ್ಕೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಕರ್ನಾಟಕ ಪೊಲೀಸ್ ಕಾಯ್ದೆ–1963ಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಇನ್‌ಸ್ಪೆಕ್ಟರ್, ಡಿವೈಎಸ್‌ಪಿ, ಹೆಚ್ಚುವರಿ ಎಸ್‌ಪಿ ಮತ್ತು ಎಸ್‌ಪಿಗಳನ್ನು ಎರಡು ವರ್ಷಕ್ಕಿಂತ ಮೊದಲು ವರ್ಗಾವಣೆ ಮಾಡುವುದನ್ನು ಈ ತಿದ್ದುಪಡಿ ನಿರ್ಬಂಧಿಸಲಿದೆ.

‘ಈಗ ಒಂದು ವರ್ಷ ಕನಿಷ್ಠ ಸೇವಾವಧಿ ಇದೆ. ಅವಧಿಗಿಂತ ಮೊದಲೇ ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಒತ್ತಡ ಹೆಚ್ಚಿರುತ್ತದೆ. ಕೆಲವು ಅಧಿಕಾರಿಗಳು ವರ್ಗಾವಣೆ ಆದೇಶ ಹಿಡಿದು ಬರುತ್ತಾರೆ. ಇದರಿಂದ ಉಳಿದ ಅಧಿಕಾರಿಗಳಿಗೆ ತೊಂದರೆಯಾಗುತ್ತದೆ. ಪೊಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಸಮಸ್ಯೆ, ಸಂಗತಿಗಳನ್ನು ಅರಿತುಕೊಂಡು ಕೆಲಸ ಮಾಡುವುದಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ ಎರಡು ವರ್ಷಗಳ ಕನಿಷ್ಠ ಸೇವಾವಧಿಯನ್ನು ನಿಗದಿಪಡಿಸಲಾಗುತ್ತಿದೆ’ ಎಂದು ಮಸೂದೆ ಮಂಡಿಸಿದ ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

‘ಹಿಂದೆ ಎರಡು ವರ್ಷ ಕನಿಷ್ಠ ಸೇವಾವಧಿ ಇತ್ತು. ಕಾಂಗ್ರೆಸ್ ನೇತೃತ್ವದ ಹಿಂದಿನ ಸರ್ಕಾರದಲ್ಲಿ ಕೆ.ಜೆ. ಜಾರ್ಜ್ ಅವರು ಗೃಹ ಸಚಿವರಾಗಿದ್ದ ಅವಧಿಯಲ್ಲಿ ಒಂದು ವರ್ಷಕ್ಕೆ ಇಳಿಸಲಾಗಿತ್ತು. ಅದನ್ನು ಪುನಃ ಎರಡು ವರ್ಷಕ್ಕೆ ಹೆಚ್ಚಿಸಲು ಬಿಜೆಪಿ ನೇತೃತ್ವದ ಸರ್ಕಾರ ಮುಂದಾಗಿತ್ತು. ಆ ತಿದ್ದುಪಡಿಯನ್ನು ಈಗ ತರಲಾಗಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಎಂಜಿನಿಯರ್‌ಗಳ ಪರಿಷತ್ತಿಗೆ ಮಸೂದೆ: ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ನೋಂದಣಿಗಾಗಿ ಪ್ರತ್ಯೇಕ ಪರಿಷತ್ ಅನ್ನು ಅಸ್ತಿತ್ವಕ್ಕೆ ತರುವ ಹಾಗೂ ಎಂಜಿನಿಯರ್‌ಗಳಿಗೆ ನೈತಿಕತೆ, ನೀತಿ ಸಂಹಿತೆ ನಿಯಮಗಳನ್ನು ರೂಪಿಸಿ, ಜಾರಿಗೊಳಿಸುವುದಕ್ಕೆ ಅವಕಾಶ ಕಲ್ಪಿಸುವ ‘ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ಮಸೂದೆ–2024’ಕ್ಕೆ ವಿಧಾನಸಭೆ ಒಪ್ಪಿಗೆ ನೀಡಿತು.

ಅಂತರ್ ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯಕ್ಕೆ ಸಹ ಕುಲಪತಿ ನೇಮಕಕ್ಕೆ ಅವಕಾಶ ಕಲ್ಪಿಸುವ (ತಿದ್ದುಪಡಿ) ಮಸೂದೆ, ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ‘ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿ’ ರಚಿಸಲು ಅವಕಾಶ ಕಲ್ಪಿಸುವ ‘ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆ– 2024’ಕ್ಕೂ ಸದನವು ಅಂಗೀಕಾರ ನೀಡಿತು.

30 ಕಾಯ್ದೆಗಳ ರದ್ದತಿ: ಬ್ರಿಟಿಷ್ ಆಡಳಿತ ಕಾಲದಿಂದ 2014ರವರೆಗಿನ ಅವಧಿಯಲ್ಲಿ ಜಾರಿಯಾಗಿದ್ದ 30 ಕಾಯ್ದೆಗಳನ್ನು ರದ್ದುಗೊಳಿಸುವ ‘ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ಮಸೂದೆ–2024’ಕ್ಕೂ ವಿಧಾನಸಭೆ ಒಪ್ಪಿಗೆ ನೀಡಿತು.

4 ಪ್ರಾಧಿಕಾರ ರಚನೆ ಮಸೂದೆಗೆ ಒಪ್ಪಿಗೆ

ಮಸೂದೆಗೆ ಒಪ್ಪಿಗೆ

ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಬೆಟ್ಟದ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ‘ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ–2024’, ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಪ್ರಾಧಿಕಾರ ರಚಿಸಲು ‘ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ–2024’ಕ್ಕೂ ವಿಧಾನಸಭೆ ಬುಧವಾರ ಒಪ್ಪಿಗೆ ನೀಡಿತು. ಹುಲಿಗೆಮ್ಮ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ಮಸೂದೆಗಳಿಗೂ ಅಂಗೀಕಾರ ನೀಡಿತು.

ಹುಕ್ಕಾ ಬಾರ್ ತೆರೆದರೆ ಜೈಲು

ಹುಕ್ಕಾ ಬಾರ್ ತೆರೆಯುವವರು, ನಡೆಸುವವರಿಗೆ ಒಂದರಿಂದ ಮೂರು ವರ್ಷದವರೆಗೆ ಜೈಲು ಶಿಕ್ಷೆ ಮತ್ತು ₹ 50,000ದಿಂದ ₹ 1 ಲಕ್ಷದವರೆಗೆ ದಂಡ ವಿಧಿಸುವುದಕ್ಕೆ ಅವಕಾಶ ಕಲ್ಪಿಸುವ ‘ಕೋಟ್ಪಾ ತಿದ್ದುಪಡಿ ಮಸೂದೆ–2024’ಕ್ಕೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ‘ಸಿಗರೇಟುಗಳು ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) (ಕೋಟ್ಪಾ) ತಿದ್ದುಪಡಿ ಮಸೂದೆ–2024’ ಅನ್ನು ಮಂಡಿಸಿದರು. ಎಲ್ಲ ಪಕ್ಷಗಳ ಸದಸ್ಯರು ಒಕ್ಕೊರಲಿನಿಂದ ಮಸೂದೆಯನ್ನು ಬೆಂಬಲಿಸಿದರು.

21 ವರ್ಷದೊಳಗಿನ ವಯಸ್ಸಿನವರಿಗೆ ಸಿಗರೇಟು ಮತ್ತು ತಂಬಾಕು ಉತ್ಪನ್ನ ಮಾರುವಂತಿಲ್ಲ. ಶಿಕ್ಷಣ ಸಂಸ್ಥೆಯ ನೂರು ಮೀಟರ್ ಸುತ್ತಳತೆಯೊಳಗಿನ ಪ್ರದೇಶದೊಳಗೆ ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನ ಮಾರಾಟ ಮಾಡುವಂತಿಲ್ಲ ಎಂಬ ತಿದ್ದುಪಡಿಗಳೂ ಇವೆ. ಈ ನಿರ್ಬಂಧ ಉಲ್ಲಂಘಿಸುವವರಿಗೆ ವಿಧಿಸುವ ದಂಡದ ಮೊತ್ತವನ್ನು ₹ 200ರಿಂದ ₹ 1,000ಕ್ಕೆ ಹೆಚ್ಚಳ ಮಾಡಲಾಗುತ್ತಿದೆ.

30 ಅಥವಾ ಅದಕ್ಕಿಂತ ಹೆಚ್ಚಿನ ಕೊಠಡಿಗಳನ್ನು ಹೊಂದಿರುವ ಹೋಟೆಲ್ ಹಾಗೂ 30 ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳಿಗೆ ಆಸನ ಸಾಮರ್ಥ್ಯ ಹೊಂದಿರುವ ರೆಸ್ಟೋರೆಂಟ್, ವಿಮಾನ ನಿಲ್ದಾಣಗಳಲ್ಲಿ ಪ್ರತ್ಯೇಕವಾದ ಧೂಮಪಾನ ಸ್ಥಳ ಒದಗಿಸುವುದನ್ನು ಕಡ್ಡಾಯಗೊಳಿಸುವ ತಿದ್ದುಪಡಿಯೂ ಮಸೂದೆಯಲ್ಲಿದೆ.


ನಗರ ಆಸ್ತಿ ನೋಂದಣಿ: ಇ–ಖಾತೆ ಕಡ್ಡಾಯ

ಒಂದನೇ ಪುಟದಿಂದ...

‘ಗ್ರಾಮೀಣ ಪ್ರದೇಶಗಳ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ನೋಂದಣಿ ಪ್ರಕ್ರಿಯೆಯಲ್ಲಿ ಇ-ಸ್ವತ್ತು ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ನಗರ ಪ್ರದೇಶಗಳಲ್ಲಿ ಭೌತಿಕ ಕಡತದ (ಕಾಗದದ) ಖಾತೆ ಆಧಾರದಲ್ಲಿ ಈಗಲೂ ನೋಂದಣಿ ನಡೆಯುತ್ತಿದೆ. ಇದರಿಂದ ಅಕ್ರಮವಾಗಿ ಸ್ವತ್ತುಗಳ ನೋಂದಣಿ, ವಂಚನೆ ನಡೆಯುತ್ತಿದೆ. ಅದನ್ನು ತಪ್ಪಿಸಲು ಇ-ಖಾತೆ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸದನಕ್ಕೆ ತಿಳಿಸಿದರು.

‘ಈ ತಿದ್ದುಪಡಿ ಜಾರಿಯಾದ ಬಳಿಕ ನಗರ ಪ್ರದೇಶಗಳ ಆಸ್ತಿಗಳ ನೋಂದಣಿ ಇ-ಖಾತೆ ಇದ್ದರೆ ಮಾತ್ರ ಸಾಧ್ಯ. ಬಿಬಿಎಂಪಿ, ಬಿಡಿಎ, ಕೆಐಎಡಿಬಿ ವ್ಯಾಪ್ತಿಯ ಸ್ವತ್ತುಗಳು ಮತ್ತು ಇತರ ಎಲ್ಲ ನಗರ ಪ್ರದೇಶಗಳ ಸ್ವತ್ತುಗಳಿಗೂ ಇದು ಅನ್ವಯವಾಗುತ್ತದೆ’ ಎಂದರು.

‘ನೋಂದಣಿ ಇಲಾಖೆಯಲ್ಲಿಯಲ್ಲಿರುವ ಹಳೆ ಕರಾರು, ಕ್ರಯಪತ್ರಗಳನ್ನು ಸ್ಕ್ಯಾನಿಂಗ್ ಮಾಡಿ, ಡಿಜಿಟಲೀಕರಣಗೊಳಿಸಲಾಗುವುದು. ಮುಂದೆ ಪ್ರಮಾಣೀಕೃತ ಪ್ರತಿಯನ್ನೂ ಡಿಜಿಟಲ್ ರೂಪದಲ್ಲೇ ಒದಗಿಸಲಾಗುವುದು’ ಎಂದು ತಿಳಿಸಿದರು.



ವಿಧಾನಸಭೆ ಕಲಾಪದಲ್ಲಿ ಸಚಿವ ಕೃಷ್ಣ ಬೈರೇಗೌಡ ಮಾತನಾಡಿದರು

ಇ-ಪಾವತಿ ಕಡ್ಡಾಯ: ಯಾವುದೇ ಕಾಗದಪತ್ರಗಳ ನೋಂದಣಿ ಸಂದರ್ಭದಲ್ಲಿ ಡಿಮಾಂಡ್ ಡ್ರಾಫ್ಟ್ ಅಥವಾ ಪೇ ಆರ್ಡರ್ ಮೂಲಕ ಮುದ್ರಾಂಕ ಶುಲ್ಕ ಪಾವತಿಸುವುದನ್ನು ನಿಷೇಧಿಸುವ ‘ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ–2024’ಕ್ಕೂ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಈ ತಿದ್ದುಪಡಿ ಜಾರಿಯಾದ ಬಳಿಕ, ಇ-ಪಾವತಿ ಮೂಲಕವೇ ಮುದ್ರಾಂಕ ಶುಲ್ಕ ಪಾವತಿಸುವುದು ಕಡ್ಡಾಯವಾಗಲಿದೆ.

‘ಆದಾಯವಿಲ್ಲದೆ ‘ಗ್ಯಾರಂಟಿ’; ಕುಖ್ಯಾತಿಗೆ ದಾರಿ’

ರಾಜ್ಯ ಸರ್ಕಾರ ತಂತಿ ಮೇಲೆ ನಡೆಯುವ ಪರಿಸ್ಥಿತಿ ಇದೆ: ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ಯಾರಂಟಿ ಯೋಜನೆಗಳಿಗೆ ಸಂಪನ್ಮೂಲ ಕ್ರೋಡೀಕರಣ ಮಾಡದೇ ಇದ್ದರೆ ರಾಜ್ಯದ ಆರ್ಥಿಕ ಸ್ಥಿತಿ ಹದಗೆಡಲಿದೆ. ಸುಳ್ಳು ಹೇಳುವುದನ್ನು ಬಿಟ್ಟು ಹಣಕಾಸಿನ ನಿರ್ವಹಣೆಗೆ ಆದ್ಯತೆ ನೀಡಬೇಕು. ಇಲ್ಲದೇ ಇದ್ದರೆ ಹಣಕಾಸು ನಿರ್ವಹಣೆ ವೈಫಲ್ಯದ ಕುಖ್ಯಾತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯ ಸರ್ಕಾರ ಗುರಿಯಾಗಬೇಕಾದೀತು’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಬುಧವಾರ ಮಾತನಾಡಿದ ಅವರು, ‘ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ರಾಜ್ಯ ಸರ್ಕಾರ ತಂತಿ ಮೇಲೆ ನಡೆಯುವ ಪರಿಸ್ಥಿತಿ ಇದೆ. ಗ್ಯಾರಂಟಿಗಳಿಗೆ ಹೆಚ್ಚಿನ ಆದಾಯ ತರುವ ಕೆಲಸ ಮಾಡಬೇಕು. ರಾಜ್ಯದಲ್ಲಿ ಅಭಿವೃದ್ಧಿಗೆ ಆದ್ಯತೆ ನೀಡದೇ ಗ್ಯಾರಂಟಿ ಹೆಸರಿನಲ್ಲಿ ಕೇವಲ ಕಲ್ಯಾಣ ಕಾರ್ಯಗಳಿಗೆ ಹಣ ಖರ್ಚು ಮಾಡಲಾಗುತ್ತಿದೆ. ಕಾಯಕವಿಲ್ಲದೇ ದಾಸೋಹ ಮಾಡುವುದರಿಂದ ಅಭಿವೃದ್ಧಿ ಸಾಧ್ಯವಿಲ್ಲ’ ಎಂದು ಅವರು ತಿಳಿಸಿದರು.

> **7ನೇ ವೇತನ ಆಯೋಗದ ವರದಿ ಜಾರಿಯಾದರೆ ಇನ್ನೂ ₹ 20 ಸಾವಿರ ಕೋಟಿ ಬೇಕಾಗುತ್ತದೆ. ಬಜೆಟ್‌ನಲ್ಲಿ ಅದಕ್ಕೆ ಹಣ ಇಟ್ಟಿಲ್ಲ. ಇದೇ ರೀತಿ ‘ಗ್ಯಾರಂಟಿ’ಗಳಿಗೆ ಹಣ ನೀಡಿದರೆ ಅಭಿವೃದ್ಧಿಗೆ ಹಣ ಎಲ್ಲಿಂದ ಬರುತ್ತದೆ**
> **ಬಸವರಾಜ ಬೊಮ್ಮಾಯಿ,** ಬಿಜೆಪಿ ಶಾಸಕ

‘ಸಿದ್ದರಾಮಯ್ಯ 1 ಮತ್ತು ಸಿದ್ದರಾಮಯ್ಯ 2 ನಡುವೆ ಬಹಳ ವ್ಯತ್ಯಾಸವಿದೆ. 1994ರಲ್ಲಿ ಸಿದ್ದರಾಮಯ್ಯ ಹಣಕಾಸು ಸಚಿವರಾಗಿದ್ದರು. ಆಗ ಕೊರತೆ ಬಜೆಟ್ ಇತ್ತು. ಅವರು ಯೋಜನಾ ಗಾತ್ರ ಕಡಿಮೆ ಮಾಡಿ, ಬಜೆಟ್ ಮಂಡಿಸಿ ಆರ್ಥಿಕ ಶಿಸ್ತು ತಂದರು. ಆದರೆ, ಸಿದ್ದರಾಮಯ್ಯ 2 ಅವಧಿಯಲ್ಲಿ ಬಡವರ ಕಾರ್ಯಕ್ರಮ ಮಾಡಲು ಆದಾಯ ಕೂಡಿಸಿಕೊಂಡು ಬಂಡವಾಳ ವೆಚ್ಚಕ್ಕೆ ತೊಂದರೆ ಆಗದಂತೆ ಗ್ಯಾರಂಟಿಗಳನ್ನು ಜಾರಿ ಮಾಡಿದ್ದರೆ ತೊಂದರೆ ಇರುತ್ತಿರಲಿಲ್ಲ. ಅವರ ಬಜೆಟ್ ಪ್ರಕಾರ ಯೋಜನೆ ಮತ್ತು ಯೋಜನೇತರ ಬದ್ಧತಾ ವೆಚ್ಚ ಶೇ 103ರಷ್ಟಿದೆ. ಅಭಿವೃದ್ಧಿಗೆ ಬಂಡವಾಳ ಎಲ್ಲಿದೆ’ ಎಂದು ಬೊಮ್ಮಾಯಿ ಪ್ರಶ್ನಿಸಿದರು.



ವಿಧಾನಸಭೆ ಕಲಾಪದಲ್ಲಿ ಬಿಜೆಪಿಯ ಬಸವರಾಜ ಬೊಮ್ಮಾಯಿ ಮಾತನಾಡಿದರು. ವಿರೋಧ ಪಕ್ಷದ ನಾಯಕ ಆರ್‌ ಅಶೋಕ, ಬಿಜೆಪಿ ಶಾಸಕ ಸಿ.ಸಿ. ಪಾಟೀಲ ಇದ್ದರು

‘ಆದಾಯದ ಶೇ 61ರಷ್ಟು ಯೋಜನೇತರ ಬದ್ಧತಾ ವೆಚ್ಚವಾಗಲಿದೆ. ಸಾಲ ತೆಗೆದುಕೊಂಡು ಸಾಲ ತೀರಿಸಲು ಹೆಚ್ಚು ಹಣ ಹೋಗುತ್ತಿರುವುದರಿಂದ ಬಂಡವಾಳವೆಚ್ಚಕ್ಕೆ ₹ 55 ಸಾವಿರ ಕೋಟಿ ಮಾತ್ರ ಸಿಗಲಿದೆ. ಈ ವರ್ಷ ₹ 1.05 ಲಕ್ಷ ಕೋಟಿ ಸಾಲ ಮಾಡಿದರೂ ಆದರೆ, ಅದರಲ್ಲಿ ಬಂಡವಾಳ ವೆಚ್ಚಕ್ಕೆ ಕೇವಲ ₹ 1 ಸಾವಿರ ಕೋಟಿ ಹೋಗುತ್ತದೆ. ಇದರಿಂದ ಅಭಿವೃದ್ಧಿಗೆ ಅನುಕೂಲವಾಗುವುದಿಲ್ಲ’ ಎಂದು ವಿವರಿಸಿದರು.

ಶೇ 54ರಷ್ಟು ಮಾತ್ರ ಖರ್ಚು: ‘ಕಳೆದ ಬಜೆಟ್‌ನಲ್ಲಿ ಘೋಷಿಸಿದ ಅನುದಾನದಲ್ಲಿ ಶೇ 54ರಷ್ಟು ಮಾತ್ರ ಖರ್ಚಾಗಿದೆ. ಅಲ್ಪ ಸಂಖ್ಯಾತ ಇಲಾಖೆ, ಹಿಂದುಳಿದ ವರ್ಗ ಇಲಾಖೆಗಳಲ್ಲಿ ಶೇ 48, ಎಸ್‌ಸಿಎಸ್‌ಪಿ, ಟಿಎಸ್‌ಪಿಯಲ್ಲಿ ಶೇ 50, ಕೃಷಿ ಶೇ 55, ಆರೋಗ್ಯ ಶೇ 59, ಉನ್ನತ ಶಿಕ್ಷಣ ಶೇ 65, ಬೃಹತ್ ಕೈಗಾರಿಕೆ ಶೇ 69, ಲೋಕೋಪಯೋಗಿ ಇಲಾಖೆ ಶೇ 59ರಷ್ಟು ಮಾತ್ರ ವೆಚ್ಚವಾಗಿದೆ’ ಎಂದು ತಿಳಿಸಿದರು.

‘ಹಣಕಾಸಿನ ನಿರ್ವಹಣೆಯಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಸಾಮಾಜಿಕ ನ್ಯಾಯವನ್ನು ಕೊಡಲು ಸರ್ಕಾರದಿಂದ ಸಾಧ್ಯವಾಗಿಲ್ಲ. ರಾಜ್ಯ ಸರ್ಕಾರಿ ನೌಕರರ ಪಿಂಚಣಿ ವಿಚಾರದಲ್ಲಿ ಎನ್‌ಪಿಎಸ್ ಬದಲಿಸಿ, ಒಪಿಎಸ್ ಮಾಡುವ ವಿಚಾರದಲ್ಲಿ ಸ್ಪಷ್ಟತೆ ತೋರಿಸಲಿ, ಒಪಿಎಸ್ ಜಾರಿ ಮಾಡಲು ಮುಖ್ಯಮಂತ್ರಿ ಸಿದ್ಧರಿದ್ದಾರಾ’ ಎಂದೂ ಅವರು ಪ್ರಶ್ನಿಸಿದರು.

ಚರ್ಚೆಗೆ ಗ್ರಾಸವಾದ ಲೆಕ್ಕ ಶೀರ್ಷಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದಿನ ಮೂವರು ಮುಖ್ಯಮಂತ್ರಿಗಳ ಅವಧಿಯಲ್ಲಿ ಮುಖ್ಯಮಂತ್ರಿ ವಿವೇಚನಾ ಕೋಟಾ ಎಂಬ ಹೊಸ ಲೆಕ್ಕ ಶೀರ್ಷಿಕೆ ಆರಂಭಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಲೋಕೋಪಯೋಗಿ, ಸಣ್ಣ ನೀರಾವರಿ, ಬೃಹತ್ ನೀರಾವರಿ ಸೇರಿದಂತೆ ಕೆಲವು ಇಲಾಖೆಗಳಲ್ಲಿ ಸಾವಿರಾರು ಕೋಟಿ ರೂಪಾಯಿಯ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಆರ್ಥಿಕ ಶಿಸ್ತು ಹಾಳುಗೆಡವಿದ್ದಾರೆ’ ಎಂದು ವಿಧಾನಸಭೆಯಲ್ಲಿ ಬಜೆಟ್ ಚರ್ಚೆಯ ವೇಳೆ ಬಿಜೆಪಿಯ ಬಸವರಾಜ ಬೊಮ್ಮಾಯಿ ಆರೋಪಿಸಿದಾಗ ಮಧ್ಯಪ್ರವೇಶಿಸಿದ ಪ್ರಿಯಾಂಕ್, ‘ಮಾಜಿ ಮುಖ್ಯಮಂತ್ರಿ ನೀಡುತ್ತಿರುವ ಅಂಕಿ ಅಂಶಗಳ ಬಗ್ಗೆ ನನ್ನ ತಕರಾರಿಲ್ಲ. ಆದರೆ, ಮುಖ್ಯಮಂತ್ರಿ ವಿವೇಚನಾ ಕೋಟಾದ ಲೆಕ್ಕ ಶೀರ್ಷಿಕೆಯಡಿ ನನ್ನ ಇಲಾಖೆಯೊಂದರಲ್ಲೇ ಏಳೆಂಟು ಸಾವಿರ ಕೋಟಿ ರೂಪಾಯಿಯ ಬಿಲ್ ಬಾಕಿ ಉಳಿದಿತ್ತು. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಇರಿಸಲಾಗಿದ್ದ ₹ 1 ಸಾವಿರ ಕೋಟಿಯ ಠೇವಣಿ ತೆಗೆದು ಈ ಕೋಟಾದಲ್ಲಿ ಬಳಕೆ ಮಾಡಿಕೊಳ್ಳಲಾಗಿದೆ. ಇದು ಯಾವ ಆರ್ಥಿಕ ಶಿಸ್ತು’ ಎಂದು ಪ್ರಶ್ನಿಸಿದರು.

‘ಎಲ್ಲ ಕಾಲದಲ್ಲೂ ಮುಖ್ಯಮಂತ್ರಿ ವಿವೇಚನಾ ಕೋಟಾ ಚಾಲ್ತಿಯಲ್ಲಿದ್ದು, ನಾವು ಆರ್ಥಿಕ ಇಲಾಖೆಯ ಪೂರ್ವಾನುಮತಿ ಪಡೆದೇ ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದೇವೆ’ ಎಂದು ಬೊಮ್ಮಾಯಿ ಸಮರ್ಥಿಸಿದಾಗ, ‘ಈ ರೀತಿ ಕಾಮಗಾರಿ ಹಂಚಿಕೆ ಬೇಡ ಎಂದು ಆರ್ಥಿಕ ಇಲಾಖೆ ತಿರಸ್ಕರಿಸಿರುವ ದಾಖಲೆಯಿದೆ. ನೀವು ಸಾಲ ಮಾಡಿ ತುಪ್ಪ ತಿಂದಿದ್ದೀರಾ. ನಾವು ಅದಕ್ಕೆ ಬಡ್ಡಿ ಕಟ್ಟುವಂತಾಗಿದೆ’ ಎಂದು ಆರೋಪಿಸಿದರು.

ಆಗ ಬೊಮ್ಮಾಯಿ, ‘ರಾಜ್ಯದ ಆದಾಯದಲ್ಲಿ ಶೇ 19ರಷ್ಟು ಸಾಲ ಮತ್ತು ಬಡ್ಡಿಗೆ ಹೋಗುತ್ತಿದೆ. 2013ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಮಾಡಿದ್ದ ಸಾಲದ ಇಡುಗಂಟು 11 ವರ್ಷಗಳ ಬಳಿಕ ಒಮ್ಮೆಲೇ ತೀರುವಳಿ ಮಾಡಬೇಕು ಎಂಬ ಸನ್ನಿವೇಶ ಎದುರಾಯಿತು. 2023ರಲ್ಲಿ ನಾವು ಪಾವತಿಸಿದ್ದೇವೆ’ ಎಂದರು. ಆಗ ಪ್ರಿಯಾಂಕ್, ‘ಸರ್ಕಾರಗಳು ನಿರಂತರ. ಯಾರೇ ಅಧಿಕಾರಕ್ಕೆ ಬರಲಿ ಹಿಂದಿನ ಸರ್ಕಾರಗಳು ಮಾಡಿದ ಸಾಲವನ್ನು ಆಡಳಿತ ನಡೆಸುವವರು ತೀರಿಸುವುದು ಅನಿವಾರ್ಯ. ಇಲ್ಲಿ ಮೂಲ ಪ್ರಶ್ನೆ ಇರುವುದು ಮುಖ್ಯಮಂತ್ರಿ ವಿವೇಚನಾ ಕೋಟಾ ಎಂಬ ಲೆಕ್ಕ ಶೀರ್ಷಿಕೆ’ ಎಂದರು.



ಅನಿವಾಸಿ ಕನ್ನಡಿಗರ ನಿಯೋಗ ಅಧಿವೇಶದಲ್ಲಿ ಕಲಾಪ ವೀಕ್ಷಣೆ ಮಾಡಿದರು

‘ರಾಜ್ಯದಲ್ಲಿ ಎನ್‌ಆರ್‌ಐ ಸಚಿವಾಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿಯೂ ಕೇರಳದ ಮಾದರಿ ಅನಿವಾಸಿ ಭಾರತೀಯರ (ಎನ್‌ಆರ್‌ಐ) ಸಚಿವಾಲಯ ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆ ಆರತಿ ಕೃಷ್ಣ ನೇತೃತ್ವದಲ್ಲಿ ವಿವಿಧ ರಾಷ್ಟ್ರಗಳ 15ಕ್ಕೂ ಹೆಚ್ಚು ಅನಿವಾಸಿ ಭಾರತೀಯರು ಹಾಗೂ ಕನ್ನಡಿಗರು ಸದನದ ಕಾರ್ಯಕಲಾಪಗಳನ್ನು ವಿಧಾನಸಭಾಧ್ಯಕ್ಷರ ಗ್ಯಾಲರಿಯಲ್ಲಿ ಬುಧವಾರ ವೀಕ್ಷಿಸುತ್ತಿದ್ದ ಸಂದರ್ಭದಲ್ಲಿ ಪರಮೇಶ್ವರ ಮಾತನಾಡಿದರು.

‘ಅನಿವಾಸಿ ಭಾರತೀಯರ ಸಚಿವಾಲಯ ಸ್ಥಾಪಿಸುವ ವಿಚಾರವನ್ನು ಚುನಾವಣಾ ಪ್ರಣಾಳಿಕೆಯಲ್ಲಿಯೇ ಸೇರಿಸಿದ್ದೆವು’ ಎಂದರು.

‘ಬೇರೆ ಬೇರೆ ದೇಶಗಳಿಗೆ ತೆರಳಿ ಜೀವನ ಕಟ್ಟಿಕೊಂಡ ಅನೇಕರು ಉದ್ಯಮಿಗಳಾಗಿ ಯಶಸ್ವಿಯಾಗಿದ್ದಾರೆ. ಶೇ 60ರಿಂದ 80ರಷ್ಟು ಅನಿವಾಸಿ ಭಾರತೀಯರು ಹೊರ ರಾಷ್ಟ್ರಗಳಲ್ಲಿ ಗಳಿಸಿದ ಆದಾಯವನ್ನು ಭಾರತಕ್ಕೆ ಮರಳಿ ತರುವ ಮನಸ್ಸು ಮಾಡಿದ್ದಾರೆ. ಹೊರ ದೇಶಕ್ಕೆ ಹೋದರೆ ಮರಳಿ ಬರುವುದಿಲ್ಲ ಎಂಬ ಪರಿಸ್ಥಿತಿ ಈಗಿಲ್ಲ. ತಮ್ಮ ಸಿಎಸ್‌ಆರ್ ನಿಧಿಯನ್ನು ಅಭಿವೃದ್ಧಿಗೆ ಕೊಡುತ್ತಿದ್ದಾರೆ’ ಎಂದರು.

ಅದಕ್ಕೂ ಮೊದಲು ಮಾತನಾಡಿದ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ‘ವಿಧಾನಸಭೆಯ ಕಾರ್ಯಕಲಾಪವನ್ನು ನಮ್ಮ ವಿಶೇಷ ಅತಿಥಿಗಳಾಗಿ ವಿವಿಧ ರಾಷ್ಟ್ರಗಳ ಅನಿವಾಸಿ ಕನ್ನಡಿಗರು ವೀಕ್ಷಣೆ ಮಾಡುತ್ತಿದ್ದಾರೆ. ವ್ಯಾಪಾರ, ಉದ್ಯೋಗ ಸೇರಿದಂತೆ ವಿವಿಧ ಕಾರಣಗಳಿಗೆ ವಿದೇಶಕ್ಕೆ ತೆರಳಿ ಅಲ್ಲಿ ನೆಲೆಸಿರುವ ಕನ್ನಡಿಗರು, ನಮ್ಮ ಸಂಸ್ಕೃತಿ, ಆಚಾರ, ವಿಚಾರವನ್ನು ಮರೆಯದೆ, ಆಯಾ ರಾಷ್ಟ್ರಗಳಲ್ಲಿ ಗಳಿಸಿದ ಆದಾಯದ ಒಂದು ಪಾಲನ್ನು ನಮ್ಮ ಸಮಾಜದ ಅಭಿವೃದ್ಧಿಗೆ ಕೊಡುಗೆಯಾಗಿ ನೀಡುತ್ತಿದ್ದಾರೆ. ಯುವಕರಿಗೆ ಉದ್ಯೋಗ ನೀಡುವಲ್ಲಿ ಹಾಗೂ ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಅವರು ಪರೋಕ್ಷವಾಗಿ ಕೊಡುಗೆ ನೀಡುತ್ತಿದ್ದಾರೆ’ ಎಂದು ಹೇಳಿದರು.

ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆಗೆ ಸೋಲು

ಪರಿಷತ್ತಿನಲ್ಲಿ ಸರ್ಕಾರಕ್ಕೆ ಮುಖಭಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಅಂಗೀಕಾರ ಪಡೆದ ‘ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆ’ಗೆ ಮೇಲ್ಮನೆಯಲ್ಲಿ ಸೋಲುಂಟಾಗಿದ್ದು, ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸುವ ಸಂಬಂಧ ನಡೆದ ಮತದಾನದಲ್ಲಿ ವಿರೋಧ ಪಕ್ಷಗಳು ಮೇಲುಗೈ ಸಾಧಿಸಿವೆ.

‘ಮಸೂದೆಯಲ್ಲಿನ ಕೆಲವು ಅಂಶಗಳ ಬಗ್ಗೆ ಹೆಚ್ಚಿನ ವಿವರಣೆಯ ಅಗತ್ಯವಿದೆ. ತರಾತುರಿಯಲ್ಲಿ ಒಪ್ಪಿಗೆ ನೀಡುವ ಅಗತ್ಯವಿಲ್ಲ. ಆದ್ದರಿಂದ, ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಲೇಬೇಕು’ ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಪಟ್ಟು ಹಿಡಿದರು. ಇದಕ್ಕೆ ಸರ್ಕಾರ ಮಣಿಯದೇ ಇದ್ದಾಗ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಪ್ರಸ್ತಾವನೆಯನ್ನು ವಿಭಜನಾ ಮತಕ್ಕೆ ಹಾಕಿದರು.

ಪರಿಶೀಲನಾ ಸಮಿತಿಗೆ ಒಪ್ಪಿಸುವುದರ ಪರವಾಗಿ 33 ಮತಗಳು ಚಲಾವಣೆಗೊಂಡರೆ, ವಿರುದ್ಧವಾಗಿ 21 ಮತಗಳ ಚಲಾವಣೆಗೊಂಡವು. ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು ಎಂಬುದರ ಪರ ಸಭೆ ಒಪ್ಪಿಗೆ ನೀಡಿದೆ ಎಂದು ಪ್ರಾಣೇಶ್ ಪ್ರಕಟಿಸಿದರು.

‘ಸರ್ಕಾರ ನಾಮ ನಿರ್ದೇಶನದ ಮೂಲಕ ಸಹಕಾರಿ ಕ್ಷೇತ್ರವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಹೊರಟಿದೆ. ಈ ಮೂಲಕ ಸಂಸ್ಥೆ ಕಟ್ಟಿ ಬೆಳೆಸಿದವರನ್ನು ಮೂಲೆ ಗುಂಪು ಮಾಡಿ ಆಡಳಿತದ ಮೇಲೆ ನಿಯಂತ್ರಣ ಸಾಧಿಸುವುದೇ ಸರ್ಕಾರದ ಉದ್ದೇಶ. ಚುನಾವಣಾ ಪ್ರಾಧಿಕಾರ ರದ್ದು ಮಾಡಿ ಪ್ರತ್ಯೇಕ ಚುನಾವಣಾ ವಿಭಾಗ ಸೃಷ್ಟಿಸಲು ಮುಂದಾಗಿರುವುದರಿಂದ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆಸುವ ಸಾಧ್ಯತೆ ಇದ್ದೇ ಇದೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸಪೂಜಾರಿ ಹೇಳಿದರು.

ಸಮಜಾಯಿಷಿ ನೀಡಿದ ಸಹಕಾರ ಸಚಿವ ಕೆ.ಎನ್.ರಾಜಣ್ಣ, ‘ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಈಗಾಗಲೇ ಮೀಸಲಾತಿ ಇದೆ. ಅದನ್ನು ಇನ್ನಷ್ಟು ವಿಸ್ತರಿಸಲು ಉದ್ದೇಶಿಸಲಾಗಿದೆ. ಇಲ್ಲಿಯವರೆಗೆ ಯಾವ ವರ್ಗಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲವೋ ಅವರಿಗೆ ಪ್ರಾತಿನಿಧ್ಯ ನೀಡಲಾಗುವುದು. ಸಹಕಾರಿ ಬ್ಯಾಂಕ್‌ಗಳ ಸದಸ್ಯರಲ್ಲಿರುವ ಆ ವರ್ಗದವರನ್ನೇ ನಾಮನಿರ್ದೇಶನಕ್ಕೆ ಅವಕಾಶ ನೀಡಲಾಗುವುದು. ಅವರಿಗೆ ಮತದಾನದ ಹಕ್ಕು ನೀಡಲಾಗುವುದು’ ಎಂದರು.

ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್ , ‘ಸರ್ಕಾರವು ಸಹಕಾರ ಕ್ಷೇತ್ರವನ್ನು ಸರ್ಕಾರೀಕರಣ ಮಾಡಲು ಹೊರಟಿದೆ. ಇದು ಸಹಕಾರ ಕ್ಷೇತ್ರದ ಬೆಳವಣಿಗೆಯನ್ನು ಮೊಟಕುಗೊಳಿಸುತ್ತದೆ. ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು’ ಎಂದು ಆಗ್ರಹಿಸಿದರು.

ಮತದಾನದ ವೇಳೆ ವಿಶ್ವನಾಥ್ ತಟಸ್ಥ

ಮಸೂದೆಯನ್ನು ಕೊಂಡಾಡಿದ ಬಿಜೆಪಿಯ ಎಚ್.ವಿಶ್ವನಾಥ್, ಮತದಾನದ ಸಂದರ್ಭದಲ್ಲಿ ತಟಸ್ಥರಾಗಿ ಉಳಿದರು. ಪರಿಶೀಲನೆ ಸಮಿತಿ ಪರ ಇರುವವರು ಎದ್ದು ನಿಲ್ಲಿ ಎಂದಾಗಲೂ ನಿಲ್ಲಲಿಲ್ಲ. ಸಮಿತಿ ವಿರುದ್ಧ ಇರುವವರ ಎದ್ದು ನಿಲ್ಲಿ ಎಂದಾಗಲೂ ಆಸನ ಬಿಟ್ಟು ಕದಲಲಿಲ್ಲ. ‘ಈ ಮಸೂದೆಯನ್ನು ನಾನು ಬೆಂಬಲಿಸುತ್ತೇನೆ. ಧ್ವನಿ ಇಲ್ಲದ ವರ್ಗಕ್ಕೆ ಧ್ವನಿ ನೀಡಿದಂತಾಗಿದೆ’ ಎಂದು ಹೇಳಿದರು.

ಕೆಲವೇ ಜಾತಿಗಳ ಹಿಡಿತದಲ್ಲಿ ಬ್ಯಾಂಕ್‌ಗಳು

ಸಹಕಾರ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ, ವರ್ಗ, ಅಲ್ಪಸಂಖ್ಯಾತರು ಮತ್ತು ಹಿಂದುಳಿದವರಿಗೆ ಸರಿಯಾದ ಪ್ರಾತಿನಿಧ್ಯವೇ ಇಲ್ಲ, ಸಹಕಾರ ಬ್ಯಾಂಕ್‌ಗಳು ₹15 ಸಾವಿರದಿಂದ ₹20 ಸಾವಿರ ಕೋಟಿ ಸಾಲ ನೀಡುತ್ತವೆ. ಆದರೆ, ತಳ ಸಮುದಾಯಕ್ಕೆ ಎಷ್ಟು ಸಾಲ ಸಿಗುತ್ತಿದೆ. ಸಹಕಾರ ಬ್ಯಾಂಕ್‌ಗಳು ಕೆಲವೇ ಜಾತಿಗಳ ಹಿಡಿತದಲ್ಲಿವೆ ಎಂದು ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಹೇಳಿದರು.

ಕಾಂಗ್ರೆಸ್‌ನ ಎಸ್.ರವಿ ಮಾತನಾಡಿ, ನಾಮನಿರ್ದೇಶನಗೊಂಡವರಿಗೆ ಪದಾಧಿಕಾರಿಗಳಾಗುವ ಅಧಿಕಾರ ನೀಡಿದರೆ, ಅಧ್ಯಕ್ಷ ಸ್ಥಾನಕ್ಕೆ ಏರಿ ಚುನಾಯಿತರಾಗಿ ಬಂದವರನ್ನೇ ಮೂಲೆಗುಂಪು ಮಾಡುವ ಸಾಧ್ಯತೆ ಇದೆ. ಬಿಜೆಪಿ ಅವಧಿಯಲ್ಲಿ ಮಂಡ್ಯದಲ್ಲಿ ಇದೇ ರೀತಿ ಆಗಿತ್ತು ಎಂದು ಹೇಳಿದರು.

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-13022024-252040
CG-DL-E-13022024-252040

असाधारण
EXTRAORDINARY

भाग II—खण्ड 3—उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 592] नई दिल्ली, सोमवार, फरवरी 12, 2024/माघ 23, 1945
No. 592] NEW DELHI, MONDAY, FEBRUARY 12, 2024/MAGHA 23, 1945

ಭಾರತ ಸರ್ಕಾರ

ವಿಶೇಷ ಭೂ–ಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ ರವರ ಕಾರ್ಯಾಲಯ ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು–560 001.

ನಂ.

ಸಾರ್ವಜನಿಕ ತಿಳುವಳಿಕೆ

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಮತ್ತು ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳ ಅನುಗುಣವಾಗಿ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ (ಇನ್ನು ಮುಂದೆ ಉಲ್ಲೇಖಿತ ಕಾಯ್ದೆ ಎಂದು ನಮೂದಿಸಲಾಗಿದೆ) ಭಾರತ ಸರಕಾರವು ತನ್ನ ಗೆಜೆಟ್ ಅಧಿಸೂಚನೆ ನಂ.4426(ಇ) ದಿನಾಂಕ:10 ಅಕ್ಟೋಬರ್ 2023ರಲ್ಲಿ ಈ ಕೆಳಗೆ ಪ್ರಕಟಿಸಿರುವ ಕರ್ನಾಟಕ ರಾಜ್ಯ ಶಿವಮೊಗ್ಗ ಜಿಲ್ಲೆಯ ಹೆದ್ದಾರಿ 169ರ ಅಸ್ತಿತ್ವದಲ್ಲಿರುವ ಕಿ.ಮೀ.25.15 ರಿಂದ ಕಿ.ಮೀ.60.00 (ವಿನ್ಯಾಸಗೊಳಿಸಲಾಗಿದೆ ಕಿ.ಮೀ. 25.15 ರಿಂದ ಕಿ.ಮೀ 56.70) ವಿನ್ಯಾಸಗೊಳಿಸಿದ ಕಿ.ಮೀ. 52.70 ರಿಂದ ಕಿ.ಮೀ 53.50) (ನೆಲ್ಲಿಸರ ಶಿಬಿರ ದಿಂದ ತೀರ್ಥಹಳ್ಳಿ ಸೆಕ್ಷನ್) ವರೆಗಿನ ರಸ್ತೆ (ಅಗಲೀಕರಣ/ದ್ವಿಪಥ ಪೇವ್ಡ್ ಶೋಲ್ಡರ್/ಚತುಷ್ಪಥ ಲೇನಿಂಗ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಕಲಂ 3ಜಿ ಉಪಕಲಂ(1) (2) (3) ಮತ್ತು (4) ಹಾಗೂ 1997 ರ ತಿದ್ದುಪಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುದಾರರಿಗೆ ಹಾಗೂ ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರಕಾರವು ವಶಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿರ್ಧರಿಸಿ ಪಾವತಿಸಲು ಸದರಿ ಜಮೀನಿನ ಬಗ್ಗೆ ಅವರ ಹಿತಾಸಕ್ತಿ ವಿವರಣೆಯ ಸಂಭಂದಪಟ್ಟ ಅಧಿಕೃತ ದಾಖಲೆಗಳನ್ನು ಅಂದರೆ, (1) ಮೂಲ ದಾಖಲೆ ಪತ್ರ (2) ಕ್ರಯ/ವಿಭಾಗ/ಹಕ್ಕು ದಾಖಲೆಗೆ ಸಂಭಂಧಿಸಿದ ಇತರೇ ಯಾವುದೇ ದಾಖಲೆ ಪತ್ರಗಳು (3) ಚಾಲ್ತಿ ಸಾಲಿನ ಆರ್.ಟಿ.ಸಿ (4) ಮ್ಯುಟೇಶನ್ ಪ್ರತಿ 5) ಋಣಭಾರ ರಾಹಿತ್ಯ ಧೃಡಪತ್ರ (6) ಕಂದಾಯ ಪಾವತಿಸಿದ ರಶೀದಿಯೊಂದಿಗೆ ಈ ಪ್ರಕಟಣೆಯಲ್ಲಿ ನಮೂದಿಸಿರುವ ವೇಳೆ ಹಾಗೂ ದಿನಾಂಕದಂದು ಸ್ವತಃ ನೀವಾಗಲಿ ಅಥವಾ ನಿಮ್ಮ ಅಧಿಕೃತ ಪ್ರತಿನಿಧಿಯಾಗಲಿ ಅಥವಾ ನಿಮ್ಮ ಪರ ನ್ಯಾಯವಾದಿಗಳ ಮೂಲಕವಾಗಲಿ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ ಬೆಂಗಳೂರು, ಇವರ ಮುಂದೆ ಖುದ್ದಾಗಿ ಹಾಜರುಪಡಿಸತಕ್ಕದ್ದು.

ತಾಲೂಕಿನ ಹೆಸರು	ಗ್ರಾಮದ ಹೆಸರು	ದಿನಾಂಕ ಮತ್ತು ಸಮಯ ಮತ್ತು ಸ್ಥಳ
ತೀರ್ಥಹಳ್ಳಿ	1) ಲಿಂಗಾಪುರ 2) ಭಾರತಿಪುರ 3) ಚಿಕ್ಕ ಕಂಚಿಗುಡ್ಡೆ	ದಿನಾಂಕ:01.03.2024 ಬೆಳಿಗ್ಗೆ 11:00 ಘಂಟೆಯಿಂದ 1:00 ಘಂಟೆವರೆಗೆ ಪಿ.ಡಬ್ಲ್ಯೂ.ಡಿ ಐ.ಬಿ, ತೀರ್ಥಹಳ್ಳಿ

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್
ಬೆಂಗಳೂರು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 12ನೇ ಫೆಬ್ರವರಿ 2024

ಎಸ್.ಓ.623(ಇ).– ಕೇಂದ್ರ ಸರಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಹೆದ್ದಾರಿ 169ರ ಅಸ್ತಿತ್ವದಲ್ಲಿರುವ ಕಿ.ಮೀ.25.15 ರಿಂದ ಕಿ.ಮೀ.60.00 (ವಿನ್ಯಾಸಗೊಳಿಸಲಾಗಿದೆ ಕಿ.ಮೀ. 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ. 52.70 ರಿಂದ ಕಿ.ಮೀ 53.50 ಹೊರತುಪಡಿಸಿ) (ನೆಲ್ಲಿಸರ ಶಿಬಿರ ದಿಂದ ತೀರ್ಥಹಳ್ಳಿ ಸೆಕ್ಷನ್) ವರೆಗಿನ ರಸ್ತೆ (ಅಗಲೀಕರಣ/ ದ್ವಿಪಥ ಪೇವ್ಡ್ ಶೋಲ್ಡರ್/ಚತುಷ್ಪಥ ಲೇನಿಂಗ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುವುದು ಕಂಡುಬಂದಿರುತ್ತದೆ. ಆದಕಾರಣ ಕೇಂದ್ರ ಸರಕಾರದ ಅಧಿಸೂಚನೆಯ **4426(ಇ)** ಮೂಲಕ **ದಿನಾಂಕ: 10.10.2023,** ಭಾರತದ ಗೆಜೆಟ್, ಎಕ್ಸ್ಟ್ರಾಆರ್ಡಿನರಿ, ಭಾಗ II, ವಿಭಾಗ 3, ಉಪ ವಿಭಾಗ(II) ರಲ್ಲಿ ಪ್ರಕಟಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956(1956ರ 48) ಸೆಕ್ಷನ್ 3ಎ ನ ಉಪ–ವಿಭಾಗ (1) ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿ(ಶೆಡ್ಯೂಲ್)ಯಂತೆ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಅಧಿಸೂಚನೆಯನ್ನು ಕನ್ನಡ ದಿನಪತ್ರಿಕೆ **"ಪ್ರಜಾವಾಣಿ"** ಮತ್ತು ಆಂಗ್ಲ ದಿನಪತ್ರಿಕೆ **"ಡೆಕ್ಕನ್ ಹೆರಾಲ್ಡ್" ದಿನಾಂಕ: 27–10–2023** ರಂದು ರಾಷ್ಟ್ರೀಯ ಹೆದ್ದಾರಿ ಉಪ ಕಾಯ್ದೆ 3 ಕಾಯ್ದೆ 3(ಎ)ರ ಪ್ರಕಾರ ಪ್ರಚಾರಪಡಿಸಿ ಆಕ್ಷೇಪಣೆ ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಸೂಕ್ತ ಆದೇಶ ಹೊರಡಿಸಿರುತ್ತಾರೆ, ಮತ್ತು ಸಕ್ಷಮ ಪ್ರಾಧಿಕಾರ ಸೆಕ್ಷನ್ 3–ಸಿ ಸಬ್ ಸೆಕ್ಷನ್ 3(ಡಿ)1 ರ ಅನುಸಾರ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿರುವರು.

ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ)ರ ಸಬ್ ಸೆಕ್ಷನ್ (1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶೆಡ್ಯೂಲ್‌ನಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೇಂದ್ರ ಸರಕಾರವು ಘೋಷಿಸಿದೆ.

ಮತ್ತು ಈಗ ಸೆಕ್ಷನ್ 3(ಡಿ)ರ ಸಬ್ ಸೆಕ್ಷನ್(2)ರ ಅನುಸಾರ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಗೊಂಡ ಮೇಲೆ ಶೆಡ್ಯೂಲ್‌ನಲ್ಲಿ ವಿವರಿಸಿರುವ ಭೂಮಿಯ ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರಕಾರವು ಘೋಷಿಸಿರುತ್ತದೆ.

ಅನುಸೂಚಿ

ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಅಸ್ತಿತ್ವದಲ್ಲಿರುವ ಕಿ.ಮೀ.25.15 ರಿಂದ ಕಿ.ಮೀ.60.00 (ವಿನ್ಯಾಸಗೊಳಿಸಲಾಗಿದೆ ಕಿ.ಮೀ. 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ. 52.70 ರಿಂದ ಕಿ.ಮೀ 53.50 ಹೊರತುಪಡಿಸಿ) (ನೆಲ್ಲಿಸರ ಶಿಬಿರ ದಿಂದ ತೀರ್ಥಹಳ್ಳಿ ಸೆಕ್ಷನ್) ವರೆಗಿನ ಭೂಸ್ವಾಧೀನಗೊಳ್ಳಲಿರುವ ಕಟ್ಟಡ ಅಥವಾ ಕಟ್ಟಡ ರಹಿತ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ : ಕರ್ನಾಟಕ ಜಿಲ್ಲೆಯ ಹೆಸರು: ಶಿವಮೊಗ್ಗ

ಕ್ರ.ಸಂ	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)	ಭೂಮಾಲೀಕರು/ ಹಿತಾಸಕ್ತಿದಾರರ ಹೆಸರು
ತಾಲ್ಲೂಕು : ತೀರ್ಥಹಳ್ಳಿ					
ಗ್ರಾಮ: ಲಿಂಗಾಪುರ					
1	100	ಸರ್ಕಾರಿ	ತರಿ	0.1223	ಖಬರ್‌ಸ್ತಾನ ಸ್ಮಶಾನ
2	101	ಖಾಸಗಿ	ತರಿ	0.0404	ಹೆಚ್ ಜಿ ಶಾಕುಂತಲ W/o ಎ ಯು ಸುಧಾಕರ
3	102	ಖಾಸಗಿ	ತರಿ	0.0404	ಪರ್ವೀನ್ ಬಾನು S/o ಅಯೂಬ್ ಖಾನ್, ಲತೀಪ್ ಖಾನ್ S/o ಯಾಕುಬ್ ಖಾನ್ 102/2, 102/3
4	108	ಖಾಸಗಿ	ತರಿ	0.2525	ರಿಯಾಜ್ ಅಹಮದ್ ಖಾನ್ ಎಂ ಆರ್ ಯಾನೆ ರಿಯಾಜ್ ಅಹಮದ್ ಖಾನ್ S/o ಲೇಟ್ ರಶೀದ್ ಖಾನ್
5	111	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.1707	ಅಬ್ದುಲ್ ಅಜೀಜ್, ಅರ್ಷದ್ ಮತ್ತು ಇತರರು
6	112	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.3404	ಕರ್ನಾಟಕ ಸರ್ಕಾರ, ಕರ್ನಾಟಕ ನೀರಾವರಿ ನಿಗಮ ನಿ., ತುಂಗ ಮೇಲ್ದಂಡೆ ಯೋಜನೆ–ಶಿವಮೊಗ್ಗ
7	129	ಖಾಸಗಿ	ತರಿ	0.1606	ಗ್ಲೋರಿಯಾ ಬಾಲಕೃಷ್ಣ, ಡಿ ಬಾಲಸಿಂಹ, ವಿ ಕೃಷ್ಣಪ್ರಸಾದ್, ಡಿ ಜಯಲಕ್ಷ್ಮಿ, ಡಿ ವಿಜಯಲಕ್ಷ್ಮಿ, ಡಿ ಪದ್ಮಿನಿ, ಕೃಷ್ಣಮೂರ್ತಿ
8	130	ಸರ್ಕಾರಿ	ತರಿ	0.0191	ಕರ್ನಾಟಕ ನೀರಾವರಿ ನಿಗಮ ನಿ., ತುಂಗ ಮೇಲ್ದಂಡೆ ಯೋಜನೆ–ಶಿವಮೊಗ್ಗ
9	132	ಸಾಮನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ/ತರಿ	0.2404	ತುಂಗ ಡ್ಯಾಮ್, ಜಾರ್ಜ್ ಮಟೋಟಮ್, ಸೈಯದ್ ಜಲೀಲ್ ಸಾಬ್, ಸಯ್ಯದ್ ಜಲೀಫ್ ಸಾಬ್, ಬಾಬ್ ಜಾನ್ S/o ಸಯದ್ ಜಲೀಲ್, ಬಿ ವಿ ವಸಂತಿ, ಗೌರಮ್ಮ, ಬಿ ಕೆ ವಾಸುದೇವ ಭಟ್, ಬಾಲಕೃಷ್ಣ ಶೆಟ್ಟಿ, ವಿಜಯಲಕ್ಷ್ಮಿ, ಇಂದಿರಾ, ಯಮುನ, ವೆಂಕಟೇಶ, ಕುಸುಮ, ನಾಗರಾಜ, ಆನಂದ ಶೆಟ್ಟಿ, ರುಕ್ಮಿಣಿ ಶೆಟ್ಟಿ, ಪುಟ್ಟಯ್ಯ ಶೆಟ್ಟಿ, ಸರ್ಕಾರಿ 132/1
10	2	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.101	ಕೆ ಎಂ ಬಾಬು S/o ಮೊಹಿದ್ದೀನ್, ಕರ್ನಾಟಕ ಸರ್ಕಾರ 2/2
11	56	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.0404	ಸಯ್ಯದ್ ಮುನೀರ್ S/o ಸಯ್ಯದ್ ಇನ್ನುಸ್, ಸಯ್ಯದ್ ಮೊಹಿದ್ದೀನ್, ಸಯ್ಯದ್ ಫೈರೋಜ್, ಖಾತಿಜಾ ಬಿ, ಅಬ್ದುಲ್ ಮಾತಿನ್, ಅಬ್ದುಲ್ ರಫಿಕ್, ಮಂಜೂರ್ S/o ಸಯ್ಯದ್ ಅಕ್ಬರ್
12	69	ಖಾಸಗಿ	ತರಿ	0.0121	ಎನ್ ಆರ್ ಶ್ರೀಕಂಠಯ್ಯ ಗೌಡ, ಟಿ ವಿ ಸುರೇಶ S/o ವಾಸಪ್ಪ ಶೆಟ್ಟಿ, ರತ್ನಮ್ಮ, ಮಹೇಶ, ಆಶಾ W/o ರಮೇಶ್, ಅನುಸೂಯ W/o ಸತೀಶ್, ರಮೇಶ್ S/o ಎನ್ ಆರ್ ಹಿರಿಯಣ್ಣ ಗೌಡ, ಎನ್ ಆರ್ ನಾಗಪ್ಪ ಗೌಡ 69/1, 69/2, 69/3, 69/4
13	70	ಖಾಸಗಿ	ತರಿ	0.067	ಜನ ಅಜಿತ್‌ಕುಮಾರ S/o ಸಿ ಪ್ರೇಮಚಂದ್ರ, ಎಂ ಡಿ ಹರಿಯಪ್ಪ ಗೌಡ S/o ದುಗ್ಗಪ್ಪ ಗೌಡ NAK 70/1, 70/2
14	77	ಖಾಸಗಿ	ತರಿ	0.1251	ಎಂ ಕೆ ಮಲ್ಲಿಕಾರ್ಜುನ S/o ಎಂ ಡಿ ಕುಮಾರ ಹೆಗ್ಡೆ, ಹೆಚ್ ಎಸ್ ದಾಕಪ್ಪ, ಪದ್ಮಾವತಿ, ರಾಮ W/o ಮಲ್ಲಿಕ ಹೆಗ್ಡೆ, ಮಲ್ಲಿಕ ಹೆಗ್ಡೆ S/o ಕುಮಾರ್ ಹೆಗ್ಡೆ
15	90	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.0808	ಟಿ ಎಂ ನಾಗವೇಣಿ W/o ಮುತ್ತಯ್ಯ ನಾಯ್ಕ, ಎನ್ ಸಿ ಶ್ರೀನಿವಾಸ S/o ಚಿನ್ನಯ್ಯ ಗೌಡ ಮತ್ತು ಇತರರು 90/1, 90/2, 90/6
16	92	ಖಾಸಗಿ	ತರಿ	0.0404	ಫಾತಿಮ ಉನ್ನಿಸ W/o ಲೇಟ್ ಸಯ್ಯದ್ ಮೀರ್ 92/1
17	93	ಖಾಸಗಿ	ತರಿ	0.1303	ಸಯ್ಯದ್ ಖಲೀಲ್ S/o ಸಯ್ಯದ್ ಖಾಸಿಮ್ ಸಾಬ್, ಬಿ ವಿ ಸ್ಮಿತಾ W/o ಡಿ ಆರ್ ಪ್ರದೀಪ್ 93/1, 93/2
18	95	ಸಾಮನ್ಯ (ಸರ್ಕಾರಿ/ಖಾಸಗಿ)	ಭಾಗಾಯ್ತು/ ತರಿ	0.0909	ಹುರ್ಮತ್ ಉನ್ನಿಸ D/o ಸಯ್ಯದ್ ಹುಸೇನ್, ಸಯ್ಯದ್ ಜಬೀವುಲ್ಲ, ಸಯ್ಯದ್ ಜಫುರುಲ್ಲ, ಅಸ್ಮತ್ ಉನ್ನಿಸ, ಸಯ್ಯದ್ ನರ್ಸುಲ್ಲ 95/1A
19	97	ಖಾಸಗಿ	ಖುಷ್ಕಿ/ತರಿ	0.404	ಮೊಹಮದ್ ಹುಸೇನ್, ಅಬ್ದುಲ್ ಜಲೀಲ್, ಅಬ್ದುಲ್ ಖಲೀಲ್
20	99	ಖಾಸಗಿ	ತರಿ	0.0325	ಕೌಸಲ್ಯಮ್ಮ W/o ಎ ಎಸ್ ನಾಗಪ್ಪ ಗೌಡ
21	ಮಜಾರೆ	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.1202	ಮಜಾರೆ
22	ಸೆಟಲ್‌ಮೆಂಟ್	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	1.3162	ಸೆಟಲ್‌ಮೆಂಟ್
23	ಸೆಟಲ್‌ಮೆಂಟ್	ಸಾಮನ್ಯ (ಸರ್ಕಾರಿ/ಖಾಸಗಿ)	ತರಿ	0.3808	ಸೆಟಲ್‌ಮೆಂಟ್
ಗ್ರಾಮ : ಭಾರತಿಪುರ					
24	140	ಖಾಸಗಿ	ಭಾಗಾಯ್ತು	0.0101	ಕೆ ಎಂ ಸತ್ಯ S/o ಮಂಜಪ್ಪ ಗೌಡ 140/2
25	147	ಖಾಸಗಿ	ಭಾಗಾಯ್ತು	0.1175	ಸರ್ಕಾರಿ, ನಾಗಮ್ಮ W/o ಚಂದುಶೇರಾಗರ್
26	65	ಖಾಸಗಿ	ಭಾಗಾಯ್ತು	0.0404	ಕೆ ರಾಘವೇಂದ್ರ S/o ಲೇಟ್ ಕೆ ತಿಮ್ಮಯ್ಯ
ಗ್ರಾಮ : ಚಿಕ್ಕ ಕಂಚಿಗುಡ್ಡೆ					
27	87	ಸರ್ಕಾರಿ	ತರಿ	0.13	ಮಹಮದಿಯ ಈದ್ಗ ಬಿಲ್ಡಿಂಗ್, ವೋಲ್ಕ್ ಪ್ರಾಪರ್ಟಿ, ಸರ್ಕಾರಿ
ಒಟ್ಟು				4.6265	

[F. No. RW/NH/169/KNT/2022/3D1]

ಅಭಯ್ ಜೈನ್, ಉಪ ಕಾರ್ಯದರ್ಶಿ

ಇದೇ 27ರಂದು ಮತದಾನ • ಕಾಂಗ್ರೆಸ್‌ಗೆ ಮೂವರನ್ನು ಗೆಲ್ಲಿಸಿಕೊಳ್ಳುವ ಸವಾಲು

ಕುಪೇಂದ್ರ ಗೆಲ್ಲಿಸಲು 'ಮೈತ್ರಿ' ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27 ರಂದು ನಡೆಯಲಿರುವ ಚುನಾವಣೆಯಲ್ಲಿ ಐದನೇ ಅಭ್ಯರ್ಥಿಯಾಗಿ ಕಣದಲ್ಲಿರುವ ಜೆಡಿಎಸ್‌ನ ಡಿ. ಕುಪೇಂದ್ರ ರೆಡ್ಡಿ ಅವರನ್ನು ಗೆಲ್ಲಿಸಿಕೊಳ್ಳಲು ಬಿಜೆಪಿ-ಜೆಡಿಎಸ್ ನಾಯಕರು ಇನ್ನಿಲ್ಲದ ಕಸರತ್ತು ಆರಂಭಿಸಿದ್ದಾರೆ.

ಕಾಂಗ್ರೆಸ್‌ನಿಂದ ಅಜಯ್ ಮಾಕನ್, ಸಯ್ಯದ್ ನಾಸಿರ್ ಹುಸೇನ್ ಮತ್ತು ಜಿ.ಸಿ. ಚಂದ್ರಶೇಖರ್, ಬಿಜೆಪಿಯಿಂದ ನಾರಾಯಣಸಾ ಭಾಂಡಗೆ ಕಣದಲ್ಲಿದ್ದಾರೆ. ಅಡ್ಡ ಮತದಾನ ಆಗದೇ ಇದ್ದರೆ ಈ ನಾಲ್ವರು ರಾಜ್ಯಸಭೆ ಪ್ರವೇಶಿಸಿರುವುದು ಖಚಿತ.

ಆದರೆ, ಈ ನಾಲ್ವರ ಮಧ್ಯೆ ಐದನೇ ಅಭ್ಯರ್ಥಿಯಾಗಿ ಅಖಾಡದಲ್ಲಿರುವ ಕುಪೇಂದ್ರ ರೆಡ್ಡಿ ಪರ ಮತ ಸೆಳೆಯಲು 'ಮೈತ್ರಿ' ನಾಯಕರು ತೆರೆಮರೆಯಲ್ಲಿ ಯತ್ನ ಆರಂಭಿಸಿದ್ದಾರೆ. ಇದರಲ್ಲಿ 'ಯಶಸ್ವಿ'ಯಾದರೆ ರಾಜ್ಯದಲ್ಲಿ ಮತ್ತೆ 'ಅಡ್ಡಮತದಾನ'ದ ಕೆಟ್ಟಪದ್ಧತಿ ಮುಂದುವರಿದಂತಾಗುತ್ತದೆ.

ವಿಧಾನಸಭೆ ಸಂಖ್ಯಾಬಲ	
ಕಾಂಗ್ರೆಸ್	135
ಬಿಜೆಪಿ	66
ಜೆಡಿಎಸ್	19
ಸರ್ವೋದಯ ಕರ್ನಾಟಕ	1
ಕೆಆರ್‌ಪಿಪಿ	1
ಪಕ್ಷೇತರ	2
ಒಟ್ಟು	224

ಕಾಂಗ್ರೆಸ್ ಮೂರು ಮತ್ತು ಬಿಜೆಪಿ ಒಂದು ಸ್ಥಾನ ಗೆಲ್ಲುವಷ್ಟು ಶಾಸಕರ ಬಲ ಹೊಂದಿದೆ. ಗೆಲ್ಲಲು ಅಗತ್ಯವಾದ ಶಾಸಕರ ಸಂಖ್ಯಾ ಬಲ ಇಲ್ಲದೇ ಇದ್ದರೂ ಅಖಾಡದಲ್ಲಿರುವ ಕುಪೇಂದ್ರ ರೆಡ್ಡಿ, ಬಿಜೆಪಿಯ ಬಳಿ ಹೆಚ್ಚುವರಿಯಾಗಿರುವ 21 ಮತ್ತು ಜೆಡಿಎಸ್‌ನ 19 ಶಾಸಕರ ಬೆಂಬಲ ಪಡೆದು ಕೊರತೆಯಾಗುವ ಮತಗಳನ್ನು ಅಡ್ಡ ಮತದಾನದ ಮೂಲಕ ಬುಟ್ಟಿಗೆ ಹಾಕಿಕೊಳ್ಳುವ ಯತ್ನ ನಡೆಸಿದ್ದಾರೆ. ಆ ಮೂಲಕ, ಕಾಂಗ್ರೆಸ್ ಅಭ್ಯರ್ಥಿಗೆ ಸೋಲುಣಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ.

ಕುಪೇಂದ್ರ ರೆಡ್ಡಿ ಅವರು ಮೊದಲ ಪ್ರಾಶಸ್ತ್ಯದ ಮತ ಪಡೆದು ಗೆಲ್ಲಬೇಕಾದರೆ 45 ಮತಗಳನ್ನು ಪಡೆಯಬೇಕು. ಮೈತ್ರಿಕೂಟದ ಬಳಿಕ ಹೆಚ್ಚುವರಿ 40 ಮತಗಳಿವೆ. ಐದು ಮತಗಳ ಕೊರತೆ ಇದೆ. ಕೆಆರ್‌ಪಿಪಿ ಶಾಸಕ ಜನಾರ್ದನ್ ರೆಡ್ಡಿ, ಸರ್ವೋದಯ ಕರ್ನಾಟಕ ಸಂಘದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ಪಕ್ಷೇತರರಾಗಿ ಗೆದ್ದು ಕಾಂಗ್ರೆಸ್ ಜತೆ ಗುರುತಿಸಿಕೊಂಡಿರುವಪುಟ್ಟಸ್ವಾಮಿಗೌಡ ಮತ್ತು ಲತಾ ಮಲ್ಲಿಕಾರ್ಜುನ್ ಅವರ ಮತಗಳನ್ನು ಸೆಳೆಯುವ ಯತ್ನವನ್ನು ಮೈತ್ರಿಕೂಟ ನಡೆಸಿದೆ. ಮೈತ್ರಿಕೂಟದ 'ಆಪರೇಷನ್'ಗೆ ವಿರುದ್ಧವಾಗಿ ಪ್ರತಿತಂತ್ರವನ್ನು ಕಾಂಗ್ರೆಸ್ ಹೆಣೆಯುತ್ತಿದೆ. ಅಲ್ಲದೇ, ಬಿಜೆಪಿ ಜತೆಗೆ ಅಂತರ ಕಾಯ್ದುಕೊಂಡು, ಕಾಂಗ್ರೆಸ್ ಕಡೆಗೆ ವಾಲಿರುವ ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ಒಲವು ಯಾರಿಗೆ ದಕ್ಕಲಿದೆ ಎಂಬುದು ಇನ್ನೂ ನಿಗೂಢವಾಗಿಯೇ ಇದೆ.

'ಈಗಾಗಲೇ ಪಕ್ಷೇತರ ಶಾಸಕರನ್ನು ಬಿಜೆಪಿ, ಜೆಡಿಎಸ್ ನಾಯಕರು ಸಂಪರ್ಕಿಸಿದ್ದಾರೆ. ಆದರೆ, ಪಕ್ಷೇತರ ಶಾಸಕರು ಇನ್ನೂ ಸ್ಪಷ್ಟ ನಿಲುವು ವ್ಯಕ್ತಪಡಿಸಿಲ್ಲ. ಈ ಮತಗಳ ಜೊತೆಗೆ ಕಾಂಗ್ರೆಸ್‌ನ ನಾಲ್ವರು ಶಾಸಕರ ಮತಗಳನ್ನು ಸೆಳೆಯುವುದು ಮೈತ್ರಿ ನಾಯಕರ ಗುರಿ' ಎಂದೂ ಗೊತ್ತಾಗಿದೆ.

'ಜನಾರ್ದನ ರೆಡ್ಡಿ ಅವರನ್ನು ಹೊರತುಪಡಿಸಿ ಪಕ್ಷೇತರ ಶಾಸಕರ ಜೊತೆ ಕಾಂಗ್ರೆಸ್ ನಾಯಕರು ನಿರಂತರ ಸಂಪರ್ಕದಲ್ಲಿದ್ದಾರೆ. ಜೊತೆಗೆ, ತಮ್ಮ ಪಕ್ಷದ ಶಾಸಕರ ಮತಗಳು ಚದುರದಂತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಹದ್ದಿನ ಕಣ್ಣಿಟ್ಟಿದ್ದಾರೆ. ಅಸಮಾಧಾನ ಹೊಂದಿರುವ ಶಾಸಕರ ಜೊತೆ ಖುದ್ದು ಮುಖ್ಯಮಂತ್ರಿ ಸಂಪರ್ಕದಲ್ಲಿದ್ದಾರೆ' ಎನ್ನಲಾಗುತ್ತಿದೆ.

'ಹೀಗಾಗಿ ಪಕ್ಷೇತರ ಹಾಗೂ ಕಾಂಗ್ರೆಸ್ ಶಾಸಕರ ಮತಗಳನ್ನು ಸೆಳೆಯಲು ಮೈತ್ರಿ ಪಕ್ಷಗಳಿಗೆ ಕಷ್ಟಸಾಧ್ಯ' ಎಂದೂ ಹೇಳಲಾಗುತ್ತಿದೆ.



ಎಸ್‌. ಸೋಮನಾಥ್ ಅವರಿಗೆ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಕರ್ ಎಂ.ಎಸ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಕರ ಎಸ್‌.ಎಂ. ಪಾಲ್ಗೊಂಡಿದ್ದರು.

ಇಸ್ರೊ ಅಧ್ಯಕ್ಷರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ವತಿಯಿಂದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಎಸ್. ಸೋಮನಾಥ್ ಅವರಿಗೆ ನೀಡಲಾಗಿದ್ದ ಗೌರವ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಿದರು.

ವಿಶ್ವವಿದ್ಯಾಲಯ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಸ್. ಸೋಮನಾಥ್ ಅವರ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಗೆಹಲೋತ್, 'ಸೋಮನಾಥ್ ಅವರ ನಾಯಕತ್ವದಲ್ಲಿ ಇಸ್ರೊ ಗಮನಾರ್ಹ ಸಾಧನೆಗಳನ್ನು ಮಾಡಿದೆ. ಚಂದ್ರಯಾನ-3 ಯೋಜನೆಯ ಹಿಂದಿನ ಪ್ರೇರಕ ಶಕ್ತಿಯಾಗಿ ಅವರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಅವರ ನಾಯಕತ್ವ ಮತ್ತು ದೂರದೃಷ್ಟಿಯಿಂದ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಅತ್ಯುನ್ನತ ಸಾಧನೆಗಳನ್ನು ಮಾಡುತ್ತಿದೆ' ಎಂದು ಹೇಳಿದರು.

'ಕರ್ನಾಟಕವು ಶಿಕ್ಷಣ, ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಇಲ್ಲಿ ಅನೇಕ ವಿಶ್ವ ದರ್ಜೆಯ ಸಂಶೋಧನಾ ಕೇಂದ್ರಗಳು ಮತ್ತು ಶಿಕ್ಷಣ ಸಂಸ್ಥೆಗಳಿವೆ. ಅದರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವೂ ಒಂದಾಗಿದೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವ ಸಮಾರಂಭದಲ್ಲಿ ಎಸ್. ಸೋಮನಾಥ್ ಅವರಿಗೆ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ.

ಯುವ ಕಾಂಗ್ರೆಸ್‌ಗೆ ಮಂಜುನಾಥ್ ಕಾರ್ಯಾಧ್ಯಕ್ಷ

ಪ್ರಜಾವಾಣಿ ವಾರ್ತೆ



ಎಚ್‌.ಎಸ್. ಮಂಜುನಾಥ್


ಬೆಂಗಳೂರು: ಯುವ ಕಾಂಗ್ರೆಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾಗಿ ಎಚ್.ಎಸ್. ಮಂಜುನಾಥ್ ಅವರನ್ನು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ನೇಮಿಸಿದ್ದಾರೆ. ಎರಡು ಬಾರಿ (ಒಟ್ಟು 7 ವರ್ಷ) ಕಾಂಗ್ರೆಸ್ ವಿದ್ಯಾರ್ಥಿ ಸಂಘಟನೆಯಾದ ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಮಂಜುನಾಥ್, 2018ರ ವಿಧಾನಸಭೆ ಚುನಾವಣೆಯಲ್ಲಿ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ದರ ಕುಸಿತ: 20 ಎಕರೆ ದ್ರಾಕ್ಷಿ ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಕೊಕಟನೂರು (ಬೆಳಗಾವಿ ಜಿಲ್ಲೆ): ದ್ರಾಕ್ಷಿಗೆ ಸಮರ್ಪಕವಾದ ದರ ಸಿಗುತ್ತಿಲ್ಲ ಎಂದು ನೊಂದು ಅಥಣಿ ತಾಲ್ಲೂಕಿನ ಅವರಕೋಡ ಗ್ರಾಮದ ರೈತ ಅಶೋಕ ಲಡಗಿ ಅವರು 20 ಎಕರೆ ದ್ರಾಕ್ಷಿ ಬೆಳೆ ನಾಶ ಪಡಿಸಿದರು. ಎರಡು ವಾರದ ಹಿಂದೆ ರೋಗಬಾಧೆಗೆ ತುತ್ತಾಗಿದ್ದ ಎಂಟು ಎಕರೆ ದ್ರಾಕ್ಷಿ ಬೆಳೆ ಕತ್ತರಿಸಿದ್ದರು.

'ನಗರದಲ್ಲಿ ಹಸಿ ದ್ರಾಕ್ಷಿ ಪ್ರತಿ ಕೆಜಿಗೆ ₹ 80ರಿಂದ ₹100 ದರ ಇದೆ. ಆದರೆ, ಸ್ಥಳೀಯ ವ್ಯಾಪಾರಿಗಳು ರೈತರಿಂದ ₹15ಕ್ಕೆ ಒಂದು ಕೆಜಿ ದ್ರಾಕ್ಷಿ ಖರೀದಿಸುತ್ತಾರೆ. ಒಣದ್ರಾಕ್ಷಿ ದರ ಮೂರು ವರ್ಷಗಳಿಂದ ಕುಸಿದಿದೆ. ಹಿಂದೆ 1 ಕೆಜಿ ದ್ರಾಕ್ಷಿ ₹ 250ಕ್ಕೆ ಮಾರಾಟವಾದರೆ, ಈಗ ₹80ಕ್ಕೆ ಮಾರಲಾಗುತ್ತಿದೆ. ಬೆಳೆಯನ್ನು ಮಾರುಕಟ್ಟೆಗೆ ಸಾಗಿಸಲು ಸಾಲ ಮಾಡಿದೆ. ಅದರಿಂದ ನಷ್ಟವಾಯಿತು. ಹೀಗಾಗಿ, ಯಂತ್ರ ಬಳಸಿ ಎಲ್ಲ ಬೆಳೆ ನಾಶ ಮಾಡಿದ್ದೇನೆ' ಎಂದು ಅಶೋಕ 'ಪ್ರಜಾವಾಣಿ'ಗೆ ತಿಳಿಸಿದರು



ಬೆಳಗಾವಿ ಜಿಲ್ಲೆಯ ಅವರಕೋಡ ಗ್ರಾಮದ ರೈತ ಅಶೋಕ ಲಡಗಿ ಅವರ ತೋಟದ ದ್ರಾಕ್ಷಿ ಬೆಳೆಯನ್ನು ಬಧವಾರ ನಾಶ ಮಾಡಲಾಯಿತು

ಅದಕ್ಕೆ ತಕ್ಕಂತೆ ಒಣದ್ರಾಕ್ಷಿ ದರ ಕುಸಿಯುತ್ತ ಬಂದಿದೆ. ಐದು ಕೆಜಿ ಹಸಿ ದ್ರಾಕ್ಷಿ ಬಳಸಿದರೆ ಒಂದು ಕೆಜಿ ಒಣದ್ರಾಕ್ಷಿ ಬರುತ್ತದೆ. ಲೆಕ್ಕದ ಪ್ರಕಾರ ₹80ಕ್ಕೆ ಐದು ಕೆಜಿ ಮಾರಿದಂತೆ ಎನ್ನುವುದು ಈ ಗ್ರಾಮದ ರೈತರ ಅಳಲು.

'ಯೂನಿಯನ್ ಬ್ಯಾಂಕಿನಿಂದ ನಾನು ₹1 ಕೋಟಿ ಸಾಲ ಪಡೆದಿರುವೆ. ಪ್ರತಿ ಎಕರೆಗೆ ₹5 ಲಕ್ಷದಂತೆ ಸಾಲ ನೀಡಿದ್ದಾರೆ. ಅದು ಬಡ್ಡಿ ಸೇರಿ ಈಗ ₹1.60 ಕೋಟಿ ಆಗಿದೆ. ಹಾಕಿದ ಬೆಳೆಯೂ ಕೈಗೆ ಬರಲಿಲ್ಲ. ಈಗ ಸಾಲ ತುಂಬುವಂತೆ ಬ್ಯಾಂಕಿನಿಂದ ನೋಟಿಸ್ ಜಾರಿ ಮಾಡಿದ್ದಾರೆ. ಹೊಲ ಮಾರುವ ಸ್ಥಿತಿಗೆ ಬಂದಿರುವೆ. ಸರ್ಕಾರ ನನ್ನ ಸಾಲ ಮನ್ನಾ ಮಾಡಬೇಕು ಅಥವಾ ಹಾಳಾದ ಬೆಳೆಗೆ ಪರಿಹಾರ ನೀಡಬೇಕು' ಎಂದು ಅವರು ತಿಳಿಸಿದರು.

ಟ್ಯಾಂಕರ್ ನೀರಿಗೆ ಕೃಷಿಕರ ಮೊರೆ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಬರಗಾಲದ ಬಿಸಿಲಿಗೆ ಕಾಫಿನಾಡು ತತ್ತರಿಸಿದ್ದು, ಅಡಿಕೆ ಬೆಳೆ ಉಳಿಸಿಕೊಳ್ಳುವುದೇ ರೈತರಿಗೆ ದೊಡ್ಡ ಸವಾಲಾಗಿದೆ. ಅಂತರ್ಜಲ ಪಾತಾಳ ಸೇರಿದ್ದು, 600-700 ಅಡಿ ಕೊರೆದರೂ ಕೊಳವೆ ಬಾವಿಗಳಲ್ಲಿ ನೀರು ಇಲ್ಲವಾಗಿದೆ. ದೂರದ ಊರುಗಳಿಂದ ನೀರು ಖರೀದಿಸಿ ಟ್ಯಾಂಕರ್ ಮೂಲಕ ತಂದು ಅಡಿಕೆ ತೋಟಕ್ಕೆ ನೀರುಣಿಸುತ್ತಿದ್ದಾರೆ.

ಜಿಲ್ಲೆಯ ಬಯಲು ಸೀಮೆಯ ತರೀಕೆರೆ, ಅಜ್ಜಂಪುರ ತಾಲ್ಲೂಕಿನಲ್ಲಿ ಅಡಿಕೆ ಬೆಳೆ ಈಗ ರೈತರ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಹೊಲ-ಗದ್ದೆಗಳೆಲ್ಲವೂ ಅಡಿಕೆ ತೋಟವಾಗಿ ಮಾರ್ಪಟ್ಟಿವೆ. ವಾಡಿಕೆಯಷ್ಟು ಮಳೆಯಾಗುತ್ತಿದ್ದಾಗ ಯಾವುದೇ ತೊಂದರೆ ಇಲ್ಲದೆ ತೋಟಗಳಿಗೆ ಬೇಸಿಗೆಯಲ್ಲೂ ನೀರು ಪೂರೈಕೆಯಾಗುತ್ತಿತ್ತು. ಆದರೆ, ಈ ವರ್ಷ ಮಳೆ ಕೊರತೆಯಾಗಿದ್ದು, ಅಂತರ್ಜಲ ಕುಸಿದಿದೆ.

ಅಜ್ಜಂಪುರ ತಾಲ್ಲೂಕಿನ ಶಿವನಿ, ಚೀರನಹಳ್ಳಿ, ಕಾರೇಹಳ್ಳಿ ಸುತ್ತಮುತ್ತಲ ಪ್ರದೇಶಕ್ಕೆ ಹೋದರೆ ಬರಗಾಲದಲ್ಲಿ ಜನ ಅನುಭವಿಸುತ್ತಿರುವ ಸಂಕಷ್ಟಗಳ ಸರಮಾಲೆ ತೆರೆದುಕೊಳ್ಳುತ್ತದೆ. ಬಿಸಿಲ ಬೇಗೆಗೆ ಅಡಿಕೆ ತೋಟಗಳು ಒಣಗುತ್ತಿದ್ದು, ನೀರಿಗಾಗಿ ರೈತರು ಊರೂರು ಸುತ್ತುತ್ತಿದ್ದಾರೆ.

ಟ್ರ್ಯಾಕ್ಟರ್‌ನಲ್ಲಿ ಟ್ಯಾಂಕರ್ ಮೂಲಕ ನೀರು ತರಿಸಿ ತೋಟಗಳಿಗೆ ಹರಿಸುತ್ತಿದ್ದಾರೆ. ಡೀಸೆಲ್ ಮತ್ತು ಪೆಟ್ರೋಲ್ ಸಾಗಿಸುವ ಹಳೆಯ ಟ್ಯಾಂಕರ್ ಲಾರಿಗಳೂ ಈಗ ರೈತರ ತೋಟಕ್ಕೆ ನೀರು ಪೂರೈಸುತ್ತಿವೆ. 20 ಸಾವಿರ ಲೀಟರ್ ನೀರಿಗೆ ₹8 ಸಾವಿರದಿಂದ ₹10 ಸಾವಿರ ತನಕ ಪಾವತಿಸುವ ಅನಿವಾರ್ಯತೆ ರೈತರಿಗೆ ಇದೆ.

ಒಂದು ಎಕರೆ ತೋಟ ಉಳಿಸಿಕೊಳ್ಳಲು ಟ್ಯಾಂಕರ್ ನೀರು ಖರೀದಿಸಲು ಕನಿಷ್ಠ ₹2.50 ಲಕ್ಷ ವೆಚ್ಚಾಗುತ್ತಿದೆ. ಎಷ್ಟೇ ಖರ್ಚಾದರೂ ತೋಟ ಉಳಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಇದೆ. ಇಲ್ಲದಿದ್ದರೆ ಇಷ್ಟು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ತೋಟ ನಾಶವಾಗುವ ಆತಂಕ ಕಾಡುತ್ತಿದೆ. ಸಾಲ ಮಾಡಿಯಾದರೂ ನೀರು ಖರೀದಿಸಿ ತೋಟ ಉಳಿಸಿಕೊಳ್ಳಲು ರೈತರು ಪರದಾಡುತ್ತಿದ್ದಾರೆ.



ಚೀರನಹಳ್ಳಿಯಲ್ಲಿ ಅಡಿಕೆ ತೋಟಕ್ಕೆ ಟ್ಯಾಂಕರ್ ಮೂಲಕ ನೀರು ತರಿಸಿ ಗಿಡಗಳಿಗೆ ಹರಿಸಲಾಗುತ್ತಿದೆ

ಮುಂದೇನು ಎಂಬುದೇ ಚಿಂತೆ

ಸುತ್ತಮುತ್ತಲ ಕೆರೆಗಳೆಲ್ಲವೂ ಖಾಲಿಯಾಗಿದ್ದು, ಬುಕ್ಕಾಂಬುದಿ ಕೆರೆಯಲ್ಲಿ ಅಲ್ಪ-ಸ್ವಲ್ಪ ನೀರಿದೆ. ಅದು ಖಾಲಿಯಾದರೆ ಮುಂದೇನು ಮಾಡಬೇಕು ಎಂಬುದೇ ಗೊತ್ತಿಲ್ಲ ಎಂದು ಚೀರನಹಳ್ಳಿ ರೈತ ಕಿರಣ್ ಹೇಳುತ್ತಾರೆ.

ಕೊಳವೆ ಬಾವಿ ಕೊರೆಸಿ ಕೈಸುಟ್ಟುಕೊಳ್ಳುವ ಬದಲು ನೀರು ಖರೀದಿಸುವುದು ಸೂಕ್ತ ಎಂಬ ನಿರ್ಧಾರಕ್ಕೆ ರೈತರು ಬಂದಿದ್ದಾರೆ. ಎಷ್ಟೇ ದೂರವಾದರೂ ನೀರು ತಂದು ತೋಟ ಉಳಿಸಿಕೊಳ್ಳುವುದು ಅನಿವಾರ್ಯವಾಗಿದೆ. ವರ್ಷದ ಫಸಲಿನಿಂದ ಬರುವ ಹಣ ಈ ವರ್ಷ ತೋಟ ಉಳಿಸಿಕೊಳ್ಳಲು ಖರ್ಚಾಗುತ್ತದೆ. ಏಪ್ರಿಲ್ ಕೊನೆ ವಾರದಲ್ಲಿ ಮಳೆ ಬರುವ ನಿರೀಕ್ಷೆ ಇದೆ. ಅಲ್ಲಿಯ ತನಕ ತೋಟ ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ ಎನ್ನುತ್ತಾರೆ ಅವರು.

ಕಾನೂನು ವಿವಿ: 2 ವರ್ಷಗಳಿಂದ ನಡೆದಿಲ್ಲ ಘಟಿಕೋತ್ಸವ

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿ (ಅಕಾಡೆಮಿಕ್ ಕೌನ್ಸಿಲ್) ರಚನೆ ವಿಳಂಬ ಆಗಿರುವ ಕಾರಣ ಎರಡು ವರ್ಷಗಳಿಂದ ವಿಶ್ವವಿದ್ಯಾಲಯದ ಘಟಿಕೋತ್ಸವ ನಡೆದಿಲ್ಲ.

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ರಾಜ್ಯದ 108 ಕಾನೂನು ಕಾಲೇಜುಗಳಿವೆ. 2021-22 ಮತ್ತು 2022-23ನೇ ಸಾಲಿನ ಘಟಿಕೋತ್ಸವ ಈವರೆಗೆ ನಡೆದಿಲ್ಲ. ಕಾನೂನು ಪದವಿ ಹಾಗೂ ಸ್ನಾತಕೋತ್ತರ ಪದವಿಯ 4 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಮಾಣ ಪತ್ರದ ನಿರೀಕ್ಷೆಯಲ್ಲಿದ್ದಾರೆ.

ರಚನೆಯಾಗದ ಮಂಡಳಿ:

'ಒಂದು ವರ್ಷಕ್ಕಿಂತ ಹೆಚ್ಚು ಸಮಯದಿಂದ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಮಂಡಳಿ ರಚನೆಯಾಗಿಲ್ಲ. ಮಂಡಳಿ ರಚಿಸಿ, ಅದರ ಒಪ್ಪಿಗೆ ಪಡೆದ ಬಳಿಕವೇ ಘಟಿಕೋತ್ಸವ ನಡೆಸಲು ಅವಕಾಶವಿದೆ. ಹೀಗಾಗಿ ಮಂಡಳಿಯನ್ನು ತ್ವರಿತವಾಗಿ ರಚಿಸಿ' ಎಂದು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ರಾಜ್ಯಪಾಲರಿಗೆ ಹಲವು ಬಾರಿ ಮನವಿ ಮಾಡಿದೆ.

'ಮಂಡಳಿ ಒಟ್ಟು 25 ಸದಸ್ಯರನ್ನು ಒಳಗೊಂಡಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರ ಐವರನ್ನು ಐವರನ್ನು ಸದಸ್ಯರನ್ನಾಗಿ ನೇಮಿಸುತ್ತದೆ. ಕಳೆದ ವರ್ಷವೇ ಸರ್ಕಾರ ಸದಸ್ಯರ ಪಟ್ಟಿ ಕಳುಹಿಸಿಕೊಟ್ಟಿತ್ತು. ಈ ಸದಸ್ಯರ ಬಗ್ಗೆ ರಾಜ್ಯಪಾಲರ ಕಚೇರಿ ಹೆಚ್ಚಿನ ವಿವರಣೆ ಬಯಸಿ, ಸರ್ಕಾರ ಮತ್ತು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಿತ್ತು. ಇದರಿಂದ ಮಂಡಳಿ ಇನ್ನೂ ರಚನೆಯಾಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವಿಶ್ವವಿದ್ಯಾಲಯದ ಹಳೆಯ ಶೈಕ್ಷಣಿಕ ಮಂಡಳಿ ಅವಧಿ ಒಂದೂವರೆ ವರ್ಷಗಳ ಹಿಂದೆಯೇ ಮುಗಿದಿದ್ದು, ಹೊಸ ಮಂಡಳಿ ರಚನೆ ಆಗಬೇಕಿದೆ. ಕಳೆದ ವರ್ಷ ವಿಧಾನಸಭೆ ಚುನಾವಣೆ ಮತ್ತು ಇನ್ನಿತರ ಕಾರಣಗಳಿಂದ ರಚಿಸಲು ವಿಳಂಬವಾಗಿದೆ. ಕೆಲ ಸ್ಪಷ್ಟನೆಗಳನ್ನು ರಾಜ್ಯಪಾಲರ ಕಚೇರಿ ಕೇಳಿತ್ತು. ಅವುಗಳನ್ನು ಕಳುಹಿಸಲಾಗಿದೆ. ಸದ್ಯದಲ್ಲೇ ಮಂಡಳಿ ರಚನೆ ಆಗಬಹುದು. ಇದಾದ ಕೂಡಲೇ ಘಟಿಕೋತ್ಸವದ ದಿನಾಂಕ ನಿಗದಿಪಡಿಸುತ್ತೇವೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ನಾಡಗೀತೆ: 'ತಿದ್ದುಪಡಿ'ಯ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಶಾಲೆಗಳಲ್ಲಿ ದೈನಂದಿನ ಚಟುವಟಿಕೆ ಆರಂಭವಾಗುವ ಮೊದಲು ನಾಡಗೀತೆ ಹಾಡಬೇಕು' ಎಂಬ ಸುತ್ತೋಲೆಯಲ್ಲಿದ್ದ 'ಎಲ್ಲ ಶಾಲೆಗಳಲ್ಲಿ' ಎನ್ನವುದನ್ನು 'ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳಲ್ಲಿ' ಎಂದು ತಿದ್ದುಪಡಿ ಮಾಡಿದ ವಿಚಾರ ವಿಧಾನಸಭೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ತೀವ್ರ ವಾಗ್ವಾದಕ್ಕೆ ಕಾರಣವಾಯಿತು.

ಈ ವಿವಾದ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡ ಸರ್ಕಾರ, ಪರಿಷ್ಕೃತ ಆದೇಶ ಹೊರಡಿಸುವ ಜೊತೆಗೆ, ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿತು. ಅಲ್ಲದೆ, ಕೆಲವೇ ನಿಮಿಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತಿದ್ದುಪಡಿ ಸುತ್ತೋಲೆಯನ್ನೂ ಹೊರಡಿಸಿತು.

'ಎಲ್ಲ ಶಾಲೆಗಳಲ್ಲಿ ನಾಡಗೀತೆಯನ್ನು ದೈನಂದಿನ ಚಟುವಟಿಕೆ ಆರಂಭವಾಗುವ ಮೊದಲು ಹಾಗೂ ಸರ್ಕಾರದ ಇಲಾಖೆಗಳು ಹಾಗೂ ನಿಗಮ, ಮಂಡಳಿ, ಪ್ರಾಧಿಕಾರ ಮುಂತಾದ ಅರೆ ಸರ್ಕಾರಿ ಸಂಸ್ಥೆಗಳು ಅಧಿಕೃತ ಕಾರ್ಯಕ್ರಮಗಳನ್ನು ಏರ್ಪಡಿಸುವ ಆರಂಭದಲ್ಲಿ ಹಾಡುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಫೆ. 1ರಂದು ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆಯಲ್ಲಿದ್ದ 'ಎಲ್ಲ ಶಾಲೆಗಳು' ಜಾಗದಲ್ಲಿ 'ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳಲ್ಲಿ' ಎಂದು ಬದಲಿಸಿ ಇಲಾಖೆಯು ಫೆ. 16ರಂದು ತಿದ್ದುಪಡಿ ಸುತ್ತೋಲೆ ಹೊರಡಿಸಿತ್ತು.

ಫೆ. 16ರ ಆದೇಶವನ್ನು ವಿಧಾನಸಭೆಯಲ್ಲಿ ಬುಧವಾರ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಎರಡು ದಿನಗಳ ಹಿಂದಷ್ಟೇ ವಸತಿ ಶಾಲೆಗಳ ಪ್ರವೇಶ ದ್ವಾರದ ಮೇಲೆ ಬರೆಯಲಾಗಿದ್ದ 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬನ್ನಿ' ಎಂಬ ಘೋಷ ವಾಕ್ಯವನ್ನು ಬದಲಿಸಲು ಸರ್ಕಾರ ಮುಂದಾಗಿತ್ತು. ಈ ಸರ್ಕಾರಕ್ಕೆ ಏನಾಗಿದೆ? ಈಗ ಖಾಸಗಿ ಶಾಲೆಗಳಲ್ಲಿ ನಾಡಗೀತೆ ಕಡ್ಡಾಯ ಅಲ್ಲ ಎನ್ನುವ ಮೂಲಕ ರಾಷ್ಟ್ರಕವಿ ಕುವೆಂಪು ಅವರಿಗೆ ಹಾಗೂ ಕನ್ನಡಾಂಬೆಗೆ ಅಪಮಾನ ಎಸಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಇದು ಒಂದು ರೀತಿ ಅಧಿಕಾರಿಗಳ ಹುಚ್ಚಾಟ. ಸರ್ಕಾರಕ್ಕೂ ಅಧಿಕಾರಿಗಳಿಗೂ ಸಂಬಂಧ ಇಲ್ಲದಂತಾಗಿದೆ. ನಾಡಗೀತೆಯನ್ನು ಖಾಸಗಿ ಶಾಲೆಗಳಲ್ಲಿ ಹಾಡುವುದು ಕಡ್ಡಾಯವಲ್ಲ ಎಂಬ ಆದೇಶ ಹೊರಡಿಸುವ ಮೂಲಕ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮತ್ತೊಮ್ಮೆ ತನ್ನ ಕನ್ನಡ ವಿರೋಧಿ ಧೋರಣೆ ತೋರಿದೆ' ಎಂದೂ ಟೀಕಿಸಿದರು. ಎಸ್. ಸುರೇಶ್‌ಕುಮಾರ್ ಸೇರಿದಂತೆ ಬಿಜೆಪಿಯ ಎಲ್ಲ ಸದಸ್ಯರೂ ಅವರಿಗೆ ದನಿಗೂಡಿಸಿದರು.

ಆಗ ಸ್ಪಷ್ಟನೆ ನೀಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, 'ತಿದ್ದುಪಡಿ ಮಾಡುವ ವೇಳೆ ಆಗಿರುವ ಪ್ರಮಾದದಿಂದ ಈ ರೀತಿ ಆಗಿದೆ' ಎಂದು ಹೇಳಿದರು. 'ಈ ತಪ್ಪಿಗೆ ಕಾರಣರಾದ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಇದು ನಾಡದ್ರೋಹ: ನಿರಂಜನಾರಾಧ್ಯ

ಸರ್ಕಾರ ಹೊರಡಿಸಿರುವ ಆದೇಶ ತಪ್ಪು. ನಾಡಗೀತೆ ಮತ್ತು ರಾಷ್ಟ್ರ ಗೀತೆ ಎಲ್ಲರಿಗೂ ಅನ್ವಯ. ನೆಲದ ನಿಯಮ ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಖಾಸಗಿ ಶಾಲೆಗಳಿಗೆ ವಿನಾಯಿತಿ ನೀಡುವುದು ಸರಿಯಲ್ಲ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಪ್ರತಿಕ್ರಿಯಿಸಿದ್ದಾರೆ.

ಇದು ನಾಡಗೀತೆಗೆ ಮಾತ್ರವಲ್ಲ, ಕನ್ನಡ ನಾಡಿನ ಜನತೆಗೆ ಮಾಡಿದ ಅವಮಾನ. ನಾಡಿನ ನೆಲ - ಜಲ ಬೇಕು. ನಾಡಗೀತೆ ಬೇಡವೆಂದರೆ, ಒಪ್ಪಲು ಸಾಧ್ಯವಿಲ್ಲ. ಇದು ನಾಡ ದ್ರೋಹ ಎಂದಿದ್ದಾರೆ.

ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಲಂಗುಲಗಾಮಿಲ್ಲ. ಈ ಪ್ರಮಾದಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವರು ರಾಜ್ಯದ ಜನರ ಕ್ಷಮೆಯಾಚಿಸಬೇಕು

ಬಿ.ವೈ. ವಿಜಯೇಂದ್ರ, ಬಿಜೆಪಿ ಶಾಸಕ

ಮೂಕಾಂಬಿಕಾ ದೇಗುಲ: ಜಮೀನು ಸ್ವಾಧೀನ ಯಥಾಸ್ಥಿತಿಗೆ ಆದೇಶ

ಬೆಂಗಳೂರು: 'ಉಡುಪಿ ಜಿಲ್ಲೆಯ ಪ್ರಸಿದ್ಧ ಕೊಲ್ಲೂರು ಮೂಕಾಂಬಿಕಾ ದೇವಾಲಯದ ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಕೈಗೊಂಡಿರುವ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ದೇವಾಲಯ ಸುತ್ತಲಿನ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು' ಎಂದು ಕೋರಿ ಸ್ಥಳೀಯ ನಿವಾಸಿ ಗುರುಪ್ರಸಾದ್ ಸಲ್ಲಿಸಿರುವ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ. ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ.ದಳವಾಯಿ ವಾದ ಮಂಡಿಸಿದರು.

ಪ್ರಕರಣವೇನು?: ಬೈಂದೂರು ತಾಲ್ಲೂಕಿನ ಪ್ರಸಿದ್ಧ ಕೊಲ್ಲೂರು ಮೂಕಾಂಬಿಕಾ ದೇವಾಲಯದ ಪಕ್ಕದಲ್ಲೇ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲು ದೇವಾಲಯದ ಸುತ್ತಲಿನ ಸರ್ವೆ ನಂಬರ್ 12ರಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಸಚಿವಾಲಯ 2023ರ ಅಕ್ಟೋಬರ್ 10 ರಂದು ಅಧಿಸೂಚನೆ ಹೊರಡಿಸಿದೆ. 'ದೇವಸ್ಥಾನದ ಸಮೀಪದಲ್ಲೇ ಹೆದ್ದಾರಿ ನಿರ್ಮಾಣವಾಗಲಿದೆ. ಈ ಮಾರ್ಗದಲ್ಲಿ ನಿತ್ಯ 15 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತವೆ. ಇದರಿಂದ ದೇವಸ್ಥಾನದ ಕಟ್ಟಡಕ್ಕೆ ಅಪಾಯ ಒದಗಲಿದೆ. ಗರ್ಭಗುಡಿ ಕಂಪಿಸಲಿದೆ. ಹಾಗೆಯೇ, ದೇವಸ್ಥಾನದ ಧಾರ್ಮಿಕ ರಥೋತ್ಸವ ನೇರವೇರಿಸಲು ಅಡ್ಡಿಯಾಗುತ್ತದೆ' ಎಂದು ಅರ್ಜಿದಾರರು ಅಧಿಸೂಚನೆಯನ್ನು ಆಕ್ಷೇಪಿಸಿದ್ದಾರೆ.

ನಾಡಗೀತೆ: ಸರ್ಕಾರದ ನಿರ್ಧಾರ ಬದಲು

ಒಂದನೇ ಪುಟದಿಂದ

ಖಾಸಗಿ ಶಾಲೆಗಳಲ್ಲಿ ಹಾಡುವ ಅಗತ್ಯವಿಲ್ಲ ಎಂದು ಸ್ಪಷ್ಟ ಉಲ್ಲೇಖ ಇರದಿದ್ದರೂ 'ಎಲ್ಲ ಶಾಲೆಗಳಲ್ಲಿ' ಎಂಬ ಪದಗಳನ್ನು ತೆಗೆಯುವ ಮೂಲಕ ಎಲ್ಲಿ ಹಾಡಬೇಕು ಎಂಬುದನ್ನು ನಿರ್ದಿಷ್ಟಗೊಳಿಸಲಾಗಿತ್ತು. ಹೀಗಾಗಿ, ಖಾಸಗಿ ಶಾಲೆಗಳು ನಾಡಗೀತೆ ಹಾಡಬೇಕಾದ ಅನಿವಾರ್ಯ ಇರಲಿಲ್ಲ. ಈ ಆದೇಶಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಸರ್ಕಾರ ಮುಜುಗರಕ್ಕೆ ಸಿಲುಕಿತು. 'ಕಣ್ತಪ್ಪಿನಿಂದ ಅದ ಪ್ರಮಾದ' ಎಂದು ಸಮಜಾಯಿಷಿ ಕೊಟ್ಟ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ವಿವಾದವನ್ನು ತಣ್ಣಗಾಗಿಸುವ ಯತ್ನ ಮಾಡಿದರು. ಕೆಲ ಹೊತ್ತಿನಲ್ಲೇ ಈ ಕುರಿತ ಆದೇಶ ಹೊರಬಿತ್ತು.

ಶೇ 10ರ ಮೀಸಲು: ಕೇಂದ್ರ, ರಾಜ್ಯ ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಆರ್ಥಿಕವಾಗಿ ದುರ್ಬಲವಾದ ಸಮುದಾಯಗಳ ಮೀಸಲಾತಿಗಾಗಿ ಸಂವಿಧಾನಕ್ಕೆ ತರಲಾದ 103ನೇ ತಿದ್ದುಪಡಿ ಅನುಸಾರ ಮೀಸಲಾತಿ ಜಾರಿಗೊಳಿಸಲು ಸರ್ಕಾರಗಳಿಗೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಎಂ.ಅರುಣ್ ಶ್ಯಾಮ್ ವಾದ ಆಲಿಸಿದ ನ್ಯಾಯಪೀಠ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಅಂತರ್ಜಲ ಪಾತಾಳಕ್ಕೆ ಕುಸಿದರೂ ಹೊಸ ಕೊಳವೆಬಾವಿಗೆ ಒಲವು

ನೀರಿಗಾಗಿ ನಿಯಮ ಉಲ್ಲಂಘಿಸಿ ಭೂಮಿಗೆ ಕನ್ನ

• ಸಿದ್ದಯ್ಯ ಹಿರೇಮಠ

ದಾವಣಗೆರೆ: ರಾಜ್ಯದಲ್ಲಿ ಭೀಕರ ಬರ ಆವರಿಸಿದ್ದು, ಕೆರೆಗಳು ಬರಿದಾಗಿವೆ. ಅಂತರ್ಜಲ ಮಟ್ಟ ಕುಸಿದಿದೆ. ಆದರೂ, ಜಿಲ್ಲೆಯ ವಿವಿಧೆಡೆ ರೈತರು ಅಡಿಕೆ ತೋಟಗಳ ರಕ್ಷಣೆಗಾಗಿ ಹೊಸದಾಗಿ ಕೊಳವೆಬಾವಿ ಕೊರೆಸುತ್ತ ಹಣ ಕಳೆದುಕೊಳ್ಳುತ್ತಿದ್ದಾರೆ.

ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ, ಹರಿಹರ, ದಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಈಗ ಕೊಳವೆಬಾವಿ ಕೊರೆಯುವ ಯಂತ್ರಗಳ ಆರ್ಭಟ ಇದೆ. ಆದರೆ, ಶೇ 5ರಷ್ಟು ಕೊಳವೆಬಾವಿಗಳಲ್ಲಿ ಮಾತ್ರ ಅಷ್ಟಿಷ್ಟು ಪ್ರಮಾಣದಲ್ಲಿ ನೀರು ದೊರೆತಿದೆ.

ಅಂತರ್ಜಲವನ್ನು ಅತಿಯಾಗಿ ಬಳಸಿದ ರಾಜ್ಯದ 15 ಜಿಲ್ಲೆಗಳ 45 ತಾಲ್ಲೂಕುಗಳನ್ನು 2020ರಲ್ಲೇ ಗುರುತಿಸಿರುವ ಸರ್ಕಾರ, ಮನಬಂದಂತೆ ಕೊಳವೆಬಾವಿ ಕೊರೆಯಿಸದಂತೆ ನಿರ್ಬಂಧ ಹೇರಿದೆ. ಕೊಳವೆಬಾವಿ ಕೊರೆಯಿಸಲು ಬಯಸುವವರು ಜಿಲ್ಲಾ ಅಂತರ್ಜಲ ನಿಯಂತ್ರಣ ಸಮಿತಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕೆಂಬ ನಿಯಮ ರೂಪಿಸಲಾಗಿದೆ. ಇದರಲ್ಲಿ ಜಿಲ್ಲೆಯ ಚನ್ನಗಿರಿ ಮತ್ತು ಜಗಳೂರು ತಾಲ್ಲೂಕುಗಳು ಇವೆ. ಆದರೆ, ಒಬ್ಬರೂ ಅರ್ಜಿ ಸಲ್ಲಿಸಿ ಅನುಮತಿ ಕೋರಿಲ್ಲ ಎಂದು ಅಂತರ್ಜಲ ಅಭಿವೃದ್ಧಿ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಜಿಲ್ಲೆಯಲ್ಲಿ ಅತಿಯಾಗಿ ಕೊಳವೆಬಾವಿ ಕೊರೆಸುತ್ತಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಜಗಳೂರು, ಚನ್ನಗಿರಿ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆಯಿಸಲು ಸಮಿತಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯುವುದು ಕಡ್ಡಾಯ. ಈವರೆಗೆ ಯಾರೂ ಅರ್ಜಿ ಸಲ್ಲಿಸಿಲ್ಲ' ಎಂದು ಅಂತರ್ಜಲ ಅಭಿವೃದ್ಧಿ ಇಲಾಖೆಯ ಹಿರಿಯ ಭೂವಿಜ್ಞಾನಿ ಆರ್. ಬಸವರಾಜು ಹೇಳಿದರು.

ಯಂತ್ರಗಳ ಆರ್ಭಟ: ಜಿಲ್ಲೆಯ ಜಗಳೂರು ತಾಲ್ಲೂಕಿನ ತಾರೀಹಳ್ಳಿ, ಪಲ್ಲಾಗಟ್ಟೆ, ದಿದ್ದಿಗೆ, ಕಲ್ಲೇನಹಳ್ಳಿ, ಗೋಡೆ, ಮಲೆಮಾಚೀಕೆರೆ, ಮರಿಕುಂಟೆ, ಉಚ್ಚಂಗಿಪುರ, ಉಜ್ಜಪ್ಪ ಒಡೆಯರಹಳ್ಳಿ, ಆಸಗೋಡು, ವಡ್ಡರಹಟ್ಟಿ, ಸೂರಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕಿನ ಬಿಳಿಚೋಡು, ಕಿತ್ತೂರು, ಅಣಜಿ, ಮಾಯಕೊಂಡ, ಹದಡಿ, ಹರಿಹರ ತಾಲ್ಲೂಕಿನ ಮಲೇಬೆನ್ನೂರು, ಚನ್ನಗಿರಿ, ಸಂತೇಬೆನ್ನೂರು ಸೇರಿದಂತೆ ಅನೇಕ ಕಡೆಗಳಲ್ಲಿ ನಿತ್ಯವೂ ಕೊಳವೆಬಾವಿ ಕೊರೆಯುವ ಯಂತ್ರಗಳ ಆರ್ಭಟ ಕೇಳಿಬರುತ್ತಿದೆ.

'ಕಳೆದ ಎರಡು ತಿಂಗಳಲ್ಲಿ ನಮ್ಮೂರಿನಲ್ಲೇ 100ಕ್ಕೂ ಅಧಿಕ ರೈತರು ಹೊಸ ಕೊಳವೆಬಾವಿ ಕೊರೆಸಿದ್ದು, ಹೆಚ್ಚೆಂದರೆ ಶೇ 5ರಷ್ಟು ಬಾವಿಗಳಲ್ಲಿ ಗರಿಷ್ಠ ಎರಡು ಇಂಚಿನಷ್ಟು ನೀರು ದೊರಕಿದೆ' ಎಂದು ಪಲ್ಲಾಗಟ್ಟೆ ಗ್ರಾಮದ ರೈತ ಜಯಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮೂರಿನಲ್ಲಿ 1,000 ಅಡಿ ಕೊರೆದರೂ ಕೆಲವು ಬೋರ್‌ವೆಲ್‌ಗಳಲ್ಲಿ ನೀರು ಬಿದ್ದಿಲ್ಲ. ನನ್ನ ಜಮೀನಿನಲ್ಲಿ ಮೂರು ತಿಂಗಳಲ್ಲಿ ಎರಡು ಕೊಳವೆಬಾವಿ ಕೊರೆಸಿದರೂ ನೀರು ಸಿಕ್ಕಿಲ್ಲ. ಬೋರ್ ಕೊರೆಯುವ ಲಾರಿ ಬರಬೇಕೆಂದರೆ ಕನಿಷ್ಠ 15 ದಿನ ಮೊದಲೇ ಮುಂಗಡ ಹಣ ಕೊಟ್ಟು ಬುಕ್ಕಿಂಗ್ ಮಾಡಬೇಕಿದೆ' ಎಂದು ತಾರೀಹಳ್ಳಿಯ ರೈತ ರಾಜೇಂದ್ರಪ್ರಸಾದ್ ವಿವರಿಸಿದರು.

'ಕೊಳವೆಬಾವಿ ಕೊರೆಯಲು 400 ಅಡಿವರೆಗೆ ಪ್ರತಿ ಅಡಿಗೆ ₹ 92 ದರ ಇದೆ. 400ರಿಂದ 600 ಅಡಿವರೆಗೆ ₹ 110 ಇದೆ. ನಂತರ 1,000 ಅಡಿವರೆಗೆ ಈ ದರ ಹೆಚ್ಚುತ್ತ ಹೋಗುತ್ತದೆ ಎಂದು ಕೊಳವೆಬಾವಿ ಕೊರೆಯುವ ಯಂತ್ರದ ವ್ಯವಸ್ಥಾಪಕ ಶಕ್ತಿವೇಲು ಹೇಳಿದರು.


ಜಗಳೂರು ಮತ್ತು ಚನ್ನಗಿರಿ ತಾಲ್ಲೂಕಿನ ಕೆಲವು ಗ್ರಾಮಗಳ ರೈತರು ₹ 1ರಿಂದ ₹ 2 ಕೋಟಿಯಷ್ಟು ಹಣವನ್ನು ಕೊಳವೆಬಾವಿ ಕೊರೆಯಿಸಲು ವ್ಯಯಿಸಿದ್ದಾರೆ. ಇನ್ನೂ ಕೆಲವೆಡೆ ರೈತರು ಕೊಳವೆಬಾವಿ ಕೊರೆಯುವ ಯಂತ್ರಗಳಿಗಾಗಿ ಏಜೆಂಟರಿಗೆ ಮುಂಗಡ ಹಣ ನೀಡಿ ಕಾಯುತ್ತಿದ್ದಾರೆ.

ಮಣ್ಣಿನ ಜೈವಿಕ ಶಕ್ತಿ ಅಭಿವೃದ್ಧಿಪಡಿಸುವಂತೆ ಸರ್ಕಾರ ಜಾಗೃತಿ ಮೂಡಿಸುತ್ತಿಲ್ಲ. ಕೊಳವೆಬಾವಿ ಕೊರೆಸಿ ರೈತರು ಸಾಲಗಾರರಾಗುವಂತಾಗಿದೆ

ಮಹದೇವಪ್ಪ ದಿದ್ದಿಗೆ, ಜಿಲ್ಲಾ ಸಂಚಾಲಕ, ಮೈಕ್ರೋಬಿ ಫೌಂಡೇಷನ್

ಜಮೀನಿನಲ್ಲಿದ್ದ ನಾಲ್ಕು ಬೋರ್‌ವೆಲ್‌ಗಳು ಬತ್ತಿವೆ. ಅಡಿಕೆ ತೋಟ ಉಳಿಸಿಕೊಳ್ಳಲು ಈಗ ಮತ್ತೊಂದನ್ನು ಕೊರೆಸುತ್ತಿದ್ದೇನೆ.

ಹನುಮಂತಪ್ಪ, ರೈತ, ತಾರೀಹಳ್ಳಿ



ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ತಾರೀಹಳ್ಳಿ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ಕೊಳವೆಬಾವಿ ಕೊರೆಸುತ್ತಿರುವುದು ಪ್ರಜಾವಾಣಿ ಚಿತ್ರ

ಕೊಳವೆಬಾವಿ ಕೊರೆಯಿಸಲು ನಿರ್ಬಂಧ ಹೇರಿರುವ ವಿವಿಧ ಜಿಲ್ಲೆಗಳ ತಾಲ್ಲೂಕುಗಳ ಪಟ್ಟಿ	
ಬಾಗಲಕೋಟೆ	ಬಾಗಲಕೋಟೆ, ಬಾದಾಮಿ
ಬೆಂಗಳೂರು. ಗ್ರಾ	ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ
ಬೆಂಗಳೂರು ನಗರ	ಆನೇಕಲ್, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ
ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಶಿಡ್ಲಘಟ್ಟ, ಬಾಗೇಪಲ್ಲಿ
ಬೆಳಗಾವಿ	ಅಥಣಿ, ರಾಮದುರ್ಗ, ಸವದತ್ತಿ
ವಿಜಯನಗರ	ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ
ಚಾಮರಾಜನಗರ	ಗುಂಡ್ಲುಪೇಟೆ
ಚಿಕ್ಕಮಗಳೂರು	ಕಡೂರು
ಚಿತ್ರದುರ್ಗ	ಚಿತ್ರದುರ್ಗ, ಹೊಳಲ್ಕೆರೆ, ಹಿರಿಯೂರು, ಹೊಸದುರ್ಗ, ಚಳ್ಳಕೆರೆ
ದಾವಣಗೆರೆ	ಜಗಳೂರು, ಚನ್ನಗಿರಿ
ಗದಗ	ಗದಗ, ರೋಣ
ಹಾಸನ	ಅರಸೀಕೆರೆ
ಕೋಲಾರ	ಕೋಲಾರ, ಬಂಗಾರಪೇಟೆ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ
ರಾಮನಗರ	ರಾಮನಗರ, ಕನಕಪುರ
ತುಮಕೂರು	ತುಮಕೂರು, ಚಿಕ್ಕನಾಯಕನಹಳ್ಳಿ, ಕೊರಟಗೆರೆ, ಮಧುಗಿರಿ, ತಿಪಟೂರು

ಬಿಟ್‌ಕಾಯಿನ್: ವಿಚಾರಣೆ

ಒಂದನೇ ಪುಟದಿಂದ

ಸಿಐಡಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಹಾಗೂ ಪ್ರಕರಣದ ಎಸ್‌ಐಟಿ ಮುಖ್ಯಸ್ಥ ಮನೀಶ್ ಕರ್ಬಿಕರ್ ಅವರ ನೇತೃತ್ವದಲ್ಲಿ ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗೆ ಸಂದೀಪ್ ಪಾಟೀಲ ಉತ್ತರಿಸಿದರು ಎಂದು ಗೊತ್ತಾಗಿದೆ.

ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣನ ಜೊತೆ ಸೇರಿ ಅಕ್ರಮ ಎಸಗಿದ್ದ ಹಾಗೂ ಸಾಕ್ಷ್ಯ ನಾಶಪಡಿಸಿರುವ ಆರೋಪದಡಿ ಸಿಸಿಬಿ ತಾಂತ್ರಿಕ ವಿಭಾಗದ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್‌ಬಾಬು ಹಾಗೂ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಜಿಸಿಐಡಿ ಟೆಕ್ನಾಲಜೀಸ್ ಕಂಪನಿಯ ಕಾರ್ಯ ನಿರ್ವಾಹಕ ಅಧಿಕಾರಿ ಸಂತೋಷ್‌ಕುಮಾರ್ ಅವರನ್ನು ಎಸ್‌ಐಟಿ ಅಧಿಕಾರಿಗಳು ಜನವರಿಯಲ್ಲಿ ಬಂಧಿಸಿ, ವಿಚಾರಣೆ ನಡೆಸಿದ್ದರು. ಬಂಧಿತರು ನೀಡಿದ ಮಾಹಿತಿ ಆಧರಿಸಿ, ಸಂದೀಪ್ ಪಾಟೀಲ ಸೇರಿದಂತೆ ಹಲವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿತ್ತು. ಬಿಟ್‌ಕಾಯಿನ್ ಅಕ್ರಮ ನಡೆದಾಗ ಸಂದೀಪ್ ಪಾಟೀಲ ಸಿಸಿಬಿ ಮುಖ್ಯಸ್ಥರಾಗಿದ್ದರು.

'ಕರ್ತವ್ಯ ಲೋಪದ ಮಾಹಿತಿ ಇರಲಿಲ್ಲ': 'ಬಿಟ್‌ಕಾಯಿನ್ ಪ್ರಕರಣದ ತನಿಖೆಯಲ್ಲಿ ಲೋಪದೋಷಗಳು ಆಗಿಲ್ಲ. ತಾಂತ್ರಿಕ ತೊಡಕೂ ಆಗಿಲ್ಲ. ಪ್ರಕರಣದ ಕಿಂಗ್‌ಪಿನ್ ಶ್ರೀಕಿ ಹೇಳಿಕೆ ಆಧರಿಸಿ ಬಿಟ್‌ಕಾಯಿನ್‌ಗಳನ್ನು ವಶಕ್ಕೆ ಪಡೆದುಕೊಂಡು, ಸರ್ಕಾರದ ಸುಪರ್ದಿಗೆ ಅಂದೇ ನೀಡಲಾಗಿತ್ತು. ಬಂಧಿತರಾದ ಪ್ರಶಾಂತ್ ಬಾಬು, ಸಂತೋಷ್ ಜತೆ ಸೇರಿ ಎಸಗಿರುವ ಕರ್ತವ್ಯಲೋಪದ ಬಗ್ಗೆ ಮಾಹಿತಿ ಇರಲಿಲ್ಲವೆಂದು ತನಿಖಾಧಿಕಾರಿಗಳಿಗೆ ಸಂದೀಪ್ ವಿವರಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

2020ರಲ್ಲಿ ಡ್ರಗ್ಸ್ ಪ್ರಕರಣದಲ್ಲಿ ಸುಜಯ್ ಎಂಬ ಆರೋಪಿಯನ್ನು ಕೆಂಪೇಗೌಡ ನಗರ ಪೊಲೀಸರು ಬಂಧಿಸಿದ್ದರು. ತನಿಖೆಯಲ್ಲಿ ಈತ ಡಾರ್ಕ್‌ನೆಟ್‌ನಲ್ಲಿ ಬಿಟ್‌ಕಾಯಿನ್ ಮೂಲಕ ಡ್ರಗ್ಸ್ ಖರೀದಿಸಿರುವುದು ಗೊತ್ತಾಗಿತ್ತು. ಪ್ರಕರಣದ ಮೂಲ ಪತ್ತೆ ಹಚ್ಚಲು ಹೋದಾಗ ಬಿಟ್ ಕಾಯಿನ್ ಹಗರಣದ ಸೂತ್ರಧಾರ ಶ್ರೀಕಿ ಸಿಕ್ಕಿ ಬಿದ್ದಿದ್ದ. ಶ್ರೀಕಿ ತನ್ನ ಸಹಚರರ ಜೊತೆ ಸೇರಿ ಸರ್ಕಾರಿ ವೆಬ್‌ಸೈಟ್ ಸೇರಿದಂತೆ ಆನ್‌ಲೈನ್ ಗೇಮಿಂಗ್ ಆ್ಯಪ್ ಹ್ಯಾಕ್ ಮಾಡಿ ಕೋಟ್ಯಂತರ ರೂಪಾಯಿ ದೋಚಿದ್ದು ತನಿಖೆಯಿಂದ ಗೊತ್ತಾಗಿತ್ತು. ಇದೇ ಪ್ರಕರಣದಲ್ಲಿ ಕಾಟನ್‌ಪೇಟೆ, ಅಶೋಕನಗರ ಹಾಗೂ ಬೆಂಗಳೂರು ಸೈಬರ್ ಕ್ರೈಂ ಠಾಣೆಯಲ್ಲಿ ಪ್ರತ್ಯೇಕವಾಗಿ ಮೂರು ಪ್ರಕರಣಗಳು ದಾಖಲಾಗಿದ್ದವು. ಪ್ರಕರಣವು ಸಾಕಷ್ಟು ತಿರುವು ಪಡೆದುಕೊಂಡ ಕಾರಣಕ್ಕೆ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿತ್ತು.

'ಇನ್ನೂ ಕೆಲವು ಹಿರಿಯ ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳು ಭಾಗಿಯಾಗಿರುವ ಅನುಮಾನವಿದೆ. ಬಂಧಿತರ ವಿಚಾರಣೆಯಲ್ಲಿ ಸಾಕ್ಷ್ಯಗಳು ಲಭಿಸಿದ್ದು, ಅವರಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗುವುದು ' ಎಂದು ಮೂಲಗಳು ಹೇಳಿವೆ.

ಧರೆಗುರುಳಿದ ಮತ್ತೊಂದು ಮರ

● ನ್ಯಾ. ಕೃಷ್ಣ ಎಸ್.ದೀಕ್ಷಿತ್



ಅಂತರರಾಷ್ಟ್ರೀಯ ಆರ್ಬಿಟ್ರೇಶನ್‌ಗಳಲ್ಲಿ ಹೆಸರುವಾಸಿಯಾಗಿದ್ದ ಭಾರತ ನ್ಯಾಯಾಂಗ ವ್ಯವಸ್ಥೆಯ ಧ್ರುವತಾರೆ, ಸಂವಿಧಾನ ತಜ್ಞ, ಪ್ರಖ್ಯಾತ ಹಿರಿಯ ವಕೀಲ ಫಾಲಿ ಎಸ್.ನರೀಮನ್ ಬುಧವಾರದಷ್ಟೇ ಶಿಶಿರ ಋತುವಿನ ಮುಂಜಾವಿನಲ್ಲಿ ಕೊನೆಯುಸಿರು ಎಳೆದಿದ್ದಾರೆ. ಕಾವೇರಿ ನದಿ ಮತ್ತು ಬೆಂಗಳೂರನ್ನು ಬಹುವಾಗಿ ಪ್ರೀತಿಸುತ್ತಿದ್ದ ಈ ಜೀವ ಪ್ರಸಿದ್ಧ ವಕೀಲ ಜಿಮ್‌ಕಾರ್ಬೆಟ್ ಕಾಂಗ ಗಡಿಯಲ್ಲಿ ಹೆಯಾಗಿದ್ದಾರೆ ಷಟು.

'ನರೀಮನ್' ಎಂದರೆ ಪರ್ಷಿಯನ್ ಭಾಷೆಯಲ್ಲಿ ನಂಬಿಕೆ, ಹೊಳಪು ಎಂದರ್ಥ. ಮ್ಯಾನ್ಮಾರ್‌ನ ರಾಜಧಾನಿ ರಂಗೂನ್‌ನಲ್ಲಿ 1919ರ ಜನವರಿ 10ರಂದು ಪಾರ್ಸಿ ಕುಟುಂಬದಲ್ಲಿ ಜನನ. ದೇಶದ ಬಹುತೇಕ ಹೈಕೋರ್ಟ್‌ಗಳಲ್ಲಿ ಪ್ರಬಲ ವಾದ ಮಂಡಿಸಿದ ಕೀರ್ತಿಪುರುಷ. ಗಂಗೆಯಲ್ಲಿ ಮಿಂದೆದ್ದು ಬಂದ ವಟುವಿನಂತಹ ವ್ಯಕ್ತಿತ್ವ. 'ಪದ್ಮಭೂಷಣ' ಮತ್ತು 'ಪದ್ಮವಿಭೂಷಣ' ಗರಿಮೆಗೆ ಭಾಜನರಾಗಿದ್ದವರು. ಬಾಂಬೆ ಹೈಕೋರ್ಟ್‌ನಲ್ಲಿ 1950ರಲ್ಲಿ ವಕೀಲಿಕೆ ಆರಂಭ. ಶಿಸ್ತಿನ ವ್ಯಕ್ತಿಯನ್ನು ಏಳು ದಶಕಕ್ಕೂ ಹೆಚ್ಚು ಕಾಲ ನಮ್ಮದೆಂದು ಹರಿಸಿದ ಪರಿ ಅನನ್ಯ.

ವೃತ್ತಿಯ ಕೇಂದ್ರವನ್ನು ಮುಂಬೈನಿಂದ ದೆಹಲಿಗೆ ಪಲ್ಲಟಗೊಳಿಸುವ ಮೂಲಕ ಪ್ರಮುಖ ಸಾಂವಿಧಾನಿಕ ಮೊಕದ್ದಮೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಬ್ಯಾಂಕ್ ರಾಷ್ಟ್ರೀಕರಣ, ಕೇಶವಾನಂದ ಭಾರತೀ ಪ್ರಕರಣ, ಎಲ್‌ಐಸಿ v/s ಎಸ್ಕಾರ್ಟ್ಸ್ ಲಿ., ಎಸ್‌ಪಿಎಸಿ (ಕೊಲಿಜಿಯಂ ಪದ್ಧತಿ) ಮುಂತಾದ ಪ್ರಮುಖ ಪ್ರಕರಣಗಳಲ್ಲಿ ಫಲ ವಾದ ಮಂಡನೆ. ಕೋಲಾಹಲಗಳಲ್ಲಿ ತಮ್ಮದೇ ಆದ ಧೀರಗಂಭೀರ ಗತಿ ಹೊಂದಿದ್ದವರು. ಚೊಕ್ಕವಾದ ಇಂಗ್ಲಿಷ್ ಭಾಷೆ, ಚುಚ್ಚು ವ್ಯಂಗ್ಯ, ದಿಟ್ಟ ಪ್ರತಿಪಾದನೆ. ದಾಕ್ಷಿಣ್ಯವಿಲ್ಲ, ಸಂಕೋಚವೂ ಇಲ್ಲ, ಹೇಳುವುದನ್ನು ಹೇಳಿಯೇ ತೀರುವ ಹುಟ್ಟುಹೋರಾಟಗಾರ ನರೀಮನ್.

ರಾಜನಾರಾಯಣ್ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ಅಂದಿನ ಪ್ರಧಾನಿ ಇಂದಿರಾ ಗಾಂಧಿ ವಿರುದ್ಧ ತೀರ್ಪು ನೀಡಿದಾಗ ಇವರ ಮೇಲ್ಮನವಿಯ ಡ್ರಾಫ್ಟ್ ಅನ್ನು ಇಂದಿರಾಜಿ ಖುದ್ದು ನರೀಮನ್ ಅವರಿಂದಲೇ ಸಿದ್ಧಪಡಿಸಿದ್ದರು. ಆದರೆ, 1975ರಲ್ಲಿ ದೇಶಕ್ಕೆ ಎರಗಿದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಮುಲಾಜಿಲ್ಲದೆ ತಮ್ಮ ಹೆಚ್ಚುವರಿ ಸಾಲಿಸಿಟರ್ ಜನರಲ್ ಹುದ್ದೆಗೆ ರಾಜೀನಾಮೆ ನೀಡಿದ್ದರು. ಈ ದುರ್ದಿನಗಳಲ್ಲಿ ಕರಿ ಕೋಟು ತೊಟ್ಟ ಉದ್ದಾಮರೆಲ್ಲರೂ ಬಾಲ ಮುದುರಿಕೊಂಡಿದ್ದಾಗ ನ್ಯಾಯಪಂಡಿತ ಉಪೇಂದ್ರ ಬಕ್ಷಿ ಸೇರಿದಂತೆ ಅನೇಕರನ್ನು ಕಟುವಾಗಿ ಟೀಕಿಸಿದ್ದರು. ಯೂನಿಯನ್ ಕಾರ್ಬೈಡ್ ಪ್ರಕರಣದಲ್ಲಿ ಕಂಪನಿ ಪರವಾಗಿ ವಾದ ಮಂಡಿಸಿ ಗೆಲುವಿನ ಬುತ್ತಿಯನ್ನು ಕಂಪನಿಯ ಕೈಗಿತ್ತಿದ್ದರು. ನಂತರದ ದಿನಗಳಲ್ಲಿ ಈ ಪ್ರಕರಣ ನಡೆಸಿದ್ದರ ಬಗ್ಗೆ ನೊಂದುಕೊಂಡಿದ್ದರು.

ಸಾಂವಿಧಾನಿಕ ಹಕ್ಕುಗಳು, ತಕರಾರುಗಳು, ಉಪದ್ವ್ಯಾಪಗಳು ತಲೆದೋರಿದ ಸಂದರ್ಭಗಳಲ್ಲೆಲ್ಲಾ ನರೀಮನ್ ನಾಗರಿಕರ ಹಕ್ಕು ಮತ್ತು ಕಲ್ಯಾಣಕ್ಕಾಗಿ ಸಿಡಿಲ ಮರಿಯಂತೆ ಅಬ್ಬರಿಸಿದವರು. ತುರ್ತುಪರಿಸ್ಥಿತಿಯಲ್ಲಿ ಹೇಳದೇ ಕೇಳದೇ ಯಾರನ್ನು ಬೇಕಾದರೂ ಬಂಧಿಸಬಹುದು ಎಂಬ ಸರ್ಕಾರದ ಅಸಾಂವಿಧಾನಿಕ ನಿಲುವಿಗೆ ಸಮ್ಮತಿಯ ಮುದ್ರೆಯೊತ್ತಿದ್ದ ಎಡಿಎಂ ಜಬಲ್‌ಪುರ ಮೊಕದ್ದಮೆಯಲ್ಲಿನ ಸಾಂವಿಧಾನಿಕ ಪೀಠದ ತೀರ್ಪನ್ನು ಖಡಾಖಡಿಯಾಗಿ ತರಾಟೆಗೆ ತೆಗೆದುಕೊಂಡಿದ್ದರು. ಈ ಪೀಠದಲ್ಲಿದ್ದ ನ್ಯಾಯಮೂರ್ತಿ ಎಚ್.ಆರ್.ಖನ್ನಾ ಅವರು ತಾಳಿದ್ದ ವಿರುದ್ಧ ನಿಲುವನ್ನು ಮನದುಂಬಿ ಸ್ವಾಗತಿಸಿದ್ದರು. 'ಸಂವಿಧಾನದ 9ನೇ ಷೆಡ್ಯೂಲ್‌ಗೆ ಟ್ಯೂಬೆಕ್ಟಮಿ (ಮಹಿಳೆಯರಿಗೆ ನಡೆಸುವ



ಫಾಲಿ ಎಸ್‌.ನರೀಮನ್

ನುಡಿ ನಮನ

ಗರ್ಭನಿರೋಧಕ ವಿಧಾನ) ಮಾಡಬೇಕಾದ ಅಗತ್ಯವಿದೆ' ಎಂದು ಕುಟುಕಿದ್ದರು.

ಕಂಚಿ ಕಾಮಕೋಟಿ ಪೀಠದ ಶಂಕರರಾಮನ್ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀ ಜಯೇಂದ್ರ ಸರಸ್ವತಿ ಸ್ವಾಮೀಜಿ ವಿರುದ್ಧದ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್‌ನಲ್ಲಿ ಸ್ವಾಮೀಜಿ ಪರ ವಾದ ಮಂಡಿಸಿದ್ದ ರಾಂ ಜೇಠ್ಮಲಾನಿ ಸೋಲುಂಡಿದ್ದರು. ಆದರೆ, ನರೀಮನ್ ಸುಪ್ರೀಂ ಕೋರ್ಟ್‌ನಲ್ಲಿ ಒಂದೇ ಒಂದು ರೂಪಾಯಿ ಶುಲ್ಕ ಪಡೆಯದೆ ವಾದ ಮಂಡಿಸಿ ವಿಜಯದ ಕಿರುನಗೆ ಬೀರಿದ್ದರು. 'ಇಂದಿರಾ ಗಾಂಧಿ ಆಡಳಿತದಲ್ಲಿ ಸಂವಿಧಾನದ 356 ಮತ್ತು 368ನೇ ವಿಧಿಗಳು ಅತ್ಯಂತ ದೌರ್ಜನ್ಯಕ್ಕೆ ಒಳಗಾದ ವಿಧಿಗಳು' ಎಂದು ಮೂದಲಿಸಿದ್ದರು. 'ಇವತ್ತಿನ ವ್ಯವಸ್ಥೆಯನ್ನು ನೋಡುತ್ತಿದ್ದರೆ ನ್ಯಾಯಾಲಯಗಳನ್ನೂ ಒಳಗೊಂಡಂತೆ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಶ್ರೀಸಾಮಾನ್ಯನಿಗೆ ನಂಬಿಕೆ ಬರಲು ಮತ್ತು ಇರಿಸಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ತನ್ನ ನಿರೀಕ್ಷೆಗಳನ್ನು ಕಳೆದುಕೊಂಡು ಕೊಸರಾಡುತ್ತಿದೆ' ಎಂದು ಹೀಗಳೆದಿದ್ದರು.

ಅದೊಮ್ಮೆ ನರೀಮನ್ ಇಂಗ್ಲೆಂಡ್ ಪ್ರವಾಸದಲ್ಲಿದ್ದರು. ಆಗವರು ಸುಪ್ರೀಂ ಕೋರ್ಟ್ ವಕೀಲರ ಸಂಘದ ಅಧ್ಯಕ್ಷ. ಅಂದು ಇಂಗ್ಲೆಂಡಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇವರನ್ನು ಪರಿಚಯಿಸಿದ ವ್ಯಕ್ತಿ; ಬ್ರಿಟನ್‌ಗೆ ಆ್ಯಂಗ್ಲೊ ಸ್ಯಾಕ್ಸನ್ನರು ಎಂದು ಕಾಲಿಟ್ಟರೋ ಅಂದಿನಿಂದಲೂ ನರೀಮನ್ ಭಾರತದ ಸುಪ್ರೀಂ ಕೋರ್ಟ್ ವಕೀಲರ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಸಭಿಕರಿಗೆ ಪರಿಚಯಿಸಿದ್ದರು. ಈ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿದ ನರೀಮನ್ ತಾವು ಇಷ್ಟೊಂದು ದೀರ್ಘಕಾಲ ಅಧ್ಯಕ್ಷನಾಗಿರುವುದು ಸಮುಚಿತವಲ್ಲ ಎಂಬ ಭಾವನೆಯೊಂದಿಗೆ ಅಂದೇ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಭಾರತದ ಸುಪ್ರೀಂ ಕೋರ್ಟ್‌ಗೆ ಐವತ್ತರ ಹರೆಯ ತುಂಬಿದ ಸಮಾರಂಭದಲ್ಲಿ, 'ನ್ಯಾಯಾಂಗದಲ್ಲಿ ಶೇ 20ರಷ್ಟು ಭ್ರಷ್ಟಾಚಾರ ಇದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್.ಪಿ.ಭರೂಚಾ ಹೇಳಿದಾಗ, ಅವರ ಬೆನ್ನಿಗೆ ನಿಂತವರು ನರೀಮನ್. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಆಗುವ ಮುನ್ನ ಸರ್ಕಾರ ರಚನೆಯಲ್ಲಿ ಸಾಂವಿಧಾನಿಕ ತೊಡಕು ಉಂಟಾದಾಗ ರಾಷ್ಟ್ರಪತಿ ಅಬ್ದುಲ್ ಕಲಾಂ ನರೀಮನ್ ಅವರನ್ನು ಕರೆಯಿಸಿಕೊಂಡು ಸಲಹೆ ಪಡೆದಿದ್ದರು.

ಪಾರ್ಸಿ ಧಾರ್ಮಿಕ ಪದವಿಯಲ್ಲಿದ್ದ ಮಗ ರೋಹಿಂಟನ್ ನರೀಮನ್ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿ ಆಗಿದ್ದಾಗ ಇವರೂ ಅಲ್ಲೇ ಪ್ರ್ಯಾಕ್ಟೀಸ್ ಮಾಡುತ್ತಿದ್ದರು. ಆದರೆ, 'ಸನ್ಯಾಸಿ ಯೋಗಿ ಆದಿತ್ಯನಾಥ ಅಂತಹವರು ಮುಖ್ಯಮಂತ್ರಿ ಆಗುವುದು ತರವಲ್ಲ' ಎಂಬ ಇಬ್ಬಗೆಯ ಧೋರಣೆ ಹೊಂದಿದ್ದರು. ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯರೂ ಆಗಿದ್ದ ನರೀಮನ್ ಅವರ ಆತ್ಮಕಥನ 'ಬಿಫೋರ್ ಮೆಮೊರಿ ಫೇಡ್ಸ್' ಅತ್ಯಂತ ಪ್ರಸಿದ್ಧ ಕೃತಿ. 'ದಿ ಸ್ಟೇಟ್ ಆಫ್ ನೇಷನ್', 'ಗಾಡ್ ಸೇವ್ ದಿ ಆನರಬಲ್ ಸುಪ್ರೀಂ ಕೋರ್ಟ್' ಅವರ ಪ್ರಮುಖ ಹೊತ್ತಗೆಗಳು. ಇಂಥವರು ನಮ್ಮಿಂದ ದೈಹಿಕವಾಗಿ ಕಣ್ಮರೆಯಾದರೂ ನಾಗರಿಕ ಸಮಾಜದಲ್ಲಿ ಅನಂತಕಾಲ ಬದುಕಿರುತ್ತಾರೆ. He was the last Mogul of constitutional Law.

ಲೇಖಕ: ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ

ನರೀಮನ್ ಸ್ಮಾರಕ ನಿರ್ಮಿಸಬೇಕು– ಬೊಮ್ಮಾಯಿ

ಬೆಂಗಳೂರು: 'ಸುಪ್ರೀಂ ಕೋರ್ಟ್ ಹಿರಿಯ ವಕೀಲ ಫಾಲಿ ಎಸ್. ನರೀಮನ್ ಅವರು ಕನ್ನಡ ನಾಡಿಗೆ ಸಲ್ಲಿಸಿರುವ ಸೇವೆ ಪರಿಗಣಿಸಿ ಸ್ಮಾರಕ ನಿರ್ಮಿಸಬೇಕು' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, 'ಕಾವೇರಿ, ಕೃಷ್ಣಾ ನದಿ ವಿವಾದ ಆರಂಭವಾದಂದಿನಿಂದ ಸುಮಾರು 40ರಿಂದ 45 ವರ್ಷಗಳ ಕಾಲ ಅವರು ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಸಂಕಷ್ಟದ ಸಂದರ್ಭದಲ್ಲಿ ರಾಜ್ಯವನ್ನು ಪಾರು ಮಾಡಿದ್ದಾರೆ. ಸರಳ ವ್ಯಕ್ತಿತ್ವದ ಅವರು ನ್ಯಾಯಮೂರ್ತಿಗಳನ್ನೂ ಮೀರಿಸಿದ ಕಾನೂನು ಪಂಡಿತರಾಗಿದ್ದರು. ರಾಜ್ಯದ ಹಿತಾಸಕ್ತಿಯನ್ನು ಅವರು ಎಂದಿಗೂ ಬಿಟ್ಟುಕೊಟ್ಟಿಲ್ಲ' ಎಂದು ಬಣ್ಣಿಸಿದರು.

ಗೃಹ ಸಚಿವ ಜಿ. ಪರಮೇಶ್ವರ, 'ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ 2018ರಲ್ಲಿ ಐತಿಹಾಸಿಕ ತೀರ್ಪು ಹೊರಬಿದ್ದಿತು. ಇದರಿಂದ ಕರ್ನಾಟಕಕ್ಕೆ 270 ಟಿಎಂಸಿ ಅಡಿ ನೀರು ಲಭಿಸಿತು. ಇದಕ್ಕೆ ನರೀಮನ್ ಅವರ ಸುದೀರ್ಘ ವಾದ ಮಂಡನೆಯೇ ಕಾರಣ. ನ್ಯಾಯಾಂಗ ಕ್ಷೇತ್ರದ ಪಂಡಿತರಾಗಿದ್ದ ಅವರು ಹಲವು ಸಂದರ್ಭಗಳಲ್ಲಿ ತಮ್ಮ ಪಾಂಡಿತ್ಯ ಪ್ರದರ್ಶಿಸಿದ್ದರು' ಎಂದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ನರೀಮನ್ ಅವರು ಮೇಧಾವಿಯಾಗಿದ್ದರು. ಜಲ ವಿವಾದಗಳಲ್ಲಿ ನಾಲ್ಕು ದಶಕಗಳ ಕಾಲ ರಾಜ್ಯದ ಪರವಾಗಿ ಸಮರ್ಥ ವಾದ ಮಂಡಿಸಿ ನ್ಯಾಯ ಕೊಡಿಸುವ ಕೆಲಸ ಮಾಡಿದ್ದರು. ಹೆಚ್ಚು ಶುಲ್ಕ ಪಡೆಯುತ್ತಿರುವ ಬಗ್ಗೆ ಟೀಕೆಗಳು ಕೇಳಿಬಂದಾಗ ನ್ಯಾಯಾಲಯದಲ್ಲಿ ರಾಜ್ಯದ ಪರವಾಗಿ ವಾದಿಸುವುದಿಲ್ಲವೆಂದು ಕೋಪಗೊಂಡಿದ್ದರು. ಆಗ ನಾನು ಅವರ ಮನೆಗೆ ಹೋಗಿ ಮಮನವೊಲಿಸಿದ್ದೆ. ಆ ನಂತರ ವಾದಿಸಲು ಒಪ್ಪಿಕೊಂಡಿದ್ದರು' ಎಂದು ನೆನಪಿಸಿಕೊಂಡರು.

ಕಾನೂನು ಸಚಿವ ಸಚಿವ ಎಚ್.ಕೆ. ಪಾಟೀಲ, ಬಿಜೆಪಿಯ ಎಸ್. ಸುರೇಶ್‌ಕುಮಾರ್, ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ ಅವರು ನರೀಮನ್ ಜೊತೆಗಿನ ಒಡನಾಟವನ್ನು ಸ್ಮರಿಸಿದರು.



ಬೆಂಗಳೂರಿನಲ್ಲಿ ನಡೆದಿದ್ದ ನ್ಯಾ. ಡಿ.ಎಂ.ಚಂದ್ರಶೇಖರ್ ನೆನಪಿನ ಸಂಪುಟಗಳ ಬಿಡುಗಡೆ ವೇಳೆ ನ್ಯಾ.ವಿ.ಎಸ್‌.ಮಳೀಮಠ್, ಫಾಲಿ ನರೀಮನ್, ಎಂ.ವಿ.ರಾಜಶೇಖರನ್, ನ್ಯಾ. ಎಂ. ರಾಮಾಜೋಯಿಸ್, ಕೋ. ಚೆನ್ನಬಸಪ್ಪ – ಪ್ರಜಾವಾಣಿ ಸಂಗ್ರಹ ಚಿತ್ರ

ನ್ಯಾಯಶಾಸ್ತ್ರಜ್ಞ ನರೀಮನ್ ವಿಧಿವಶ

ಒಂದನೇ ಪುಟದಿಂದ

ದೇಶದ ಶ್ರೇಷ್ಠ ಜಲವಿವಾದ ತಜ್ಞರಾಗಿದ್ದ ನರೀಮನ್ ಅವರು ಮೂರು ದಶಕಗಳ ಕಾಲ ಕರ್ನಾಟಕವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರತಿನಿಧಿಸಿದ್ದರು ಹಾಗೂ ರಾಜ್ಯದ ಪರವಾಗಿ ಸಮರ್ಥವಾಗಿ ವಾದ ಮಂಡಿಸಿ ಹಲವು ವ್ಯಾಜ್ಯಗಳಲ್ಲಿ ಜಯ ತಂದುಕೊಟ್ಟಿದ್ದರು.

1990ರಲ್ಲಿ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲ, ಕಾನೂನು ಸಚಿವರಾಗಿದ್ದ ಎಂ.ವೀರಪ್ಪ ಮೊಯಿಲಿ, ನೀರಾವರಿ ಸಚಿವರಾಗಿದ್ದ ಪುಟ್ಟಸ್ವಾಮಿಗೌಡ ಅವರು ನವದೆಹಲಿಯಲ್ಲಿ ಕಾವೇರಿ ಕೋಶ ಸ್ಥಾಪಿಸಿ ರಾಷ್ಟ್ರಮಟ್ಟದಲ್ಲಿ ಹೆಸರಾಗಿರುವ ವಕೀಲರೇ ರಾಜ್ಯದ ಪರ ವಾದ ಮಂಡಿಸಬೇಕು ಎಂಬ ಆಲೋಚನೆಯೊಂದಿಗೆ ನರೀಮನ್ ಅವರನ್ನು ಆಯ್ಕೆ ಮಾಡಿದ್ದರು. 1990ರಲ್ಲಿ ಕಾವೇರಿ ನ್ಯಾಯಮಂಡಳಿ ರೂಪುಗೊಂಡಾಗಿನಿಂದ ಅವರು ರಾಜ್ಯದ ಪರ ರಚನಾತ್ಮಕ ಮತ್ತು ಕ್ರಿಯಾತ್ಮಕ ವಾದ ಮಂಡಿಸಿದ್ದರು. ಕೃಷ್ಣಾ ಜಲವಿವಾದ ಮತ್ತು ಮಹದಾಯಿ ಪ್ರಕರಣಗಳಲ್ಲೂ ಅವರು ಸಮರ್ಥವಾಗಿ ವಾದ ಮಂಡಿಸಿ ರಾಜ್ಯಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ಕಾವೇರಿ ಜಲ ವಿವಾದ ಭುಗಿಲೆದ್ದಾಗ ನರೀಮನ್ ಅವರು ಕರ್ನಾಟಕದ ಹಕ್ಕನ್ನು ಸಮರ್ಥವಾಗಿ ಮಂಡಿಸಿದ್ದರಿಂದ ರಾಜ್ಯಕ್ಕೆ ಹೆಚ್ಚು ನೀರು ಸಿಕ್ಕಿತ್ತು.

2016ರಲ್ಲಿ ಆವರಿಸಿದ್ದ ಬರ ರಾಜ್ಯಕ್ಕೆ ಸವಾಲಿನದ್ದಾಗಿತ್ತು. ಪ್ರತಿ ವಾರ ಇಂತಿಷ್ಟು ನೀರು ಬಿಡಲೇಬೇಕು ಎಂಬ ಸುಪ್ರೀಂ ಕೋರ್ಟ್‌ನ ಆದೇಶಗಳಿಂದ ರಾಜ್ಯ ರೋಸಿ ಹೋಗಿತ್ತು. ಸೆಪ್ಟೆಂಬರ್ 21ರಿಂದ 27ರವರೆಗೆ ಪ್ರತಿದಿನ 6 ಸಾವಿರ ಕ್ಯೂಸೆಕ್ ನೀರು ಬಿಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಕಾವೇರಿ ನದಿಯಲ್ಲಿ ನೀರಿಲ್ಲದ ಕಾರಣ ಸುಪ್ರೀಂ ಕೋರ್ಟ್ ಆದೇಶ ಪಾಲನೆ ಅಸಾಧ್ಯ ಎಂದು ಕರ್ನಾಟಕ ವಿಧಾನಮಂಡಲದ ಅಧಿವೇಶನದಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು. ನ್ಯಾಯಪೀಠದ ಆದೇಶ ಪಾಲಿಸದ ಕಾರಣಕ್ಕೆ ಕರ್ನಾಟಕದ ಪರವಾಗಿ ವಾದಿಸಲು ನರೀಮನ್ ನಿರಾಕರಿಸಿದ್ದರು.

2016ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯಕ್ಕೆ ಹಿನ್ನಡೆಯಾದಾಗ ನರೀಮನ್ ವಿರುದ್ಧ ರಾಜಕಾರಣಿಗಳು ಟೀಕೆ ಮಾಡಿದ್ದರು. ನಿಂದನೆಗಳಿಂದ ಮನನೊಂದು ಕರ್ನಾಟಕದ ಗೊಡವೆ ಬೇಡವೆಂದು ನರೀಮನ್ ದೂರ ಸರಿದಿದ್ದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರು ಮನವೊಲಿಸಿದ್ದರು. 'ಕರ್ನಾಟಕವು ದಶಕಗಳಿಂದ ನನಗೆ ಹತ್ತಿರವಾಗಿರುವ ರಾಜ್ಯ. ನನ್ನ ಕರ್ನಾಟಕ ಪ್ರೀತಿಯನ್ನು ಯಾರೂ ಪ್ರಶ್ನಿಸಲಾಗದು. ರಾಜ್ಯದಿಂದ ನಾನು ಪಡೆಯುತ್ತಿರುವ ಶುಲ್ಕ ನಾನು ಇತರರಿಂದ ಪಡೆಯುವುದರ ಮೂರನೇ ಒಂದರಷ್ಟು ಮಾತ್ರ. ರಾಜ್ಯದ ಪ್ರಕರಣಗಳು ಇದ್ದಾಗ ಇತರೆ ಪ್ರಕರಣಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಈ ನಿರ್ಧಾರದಿಂದ ಉಂಟಾಗುವ ಹಣಕಾಸು ನಷ್ಟವನ್ನೂ ನಾನು ಲೆಕ್ಕಿಸಿಲ್ಲ. ನನ್ನ ಸೇವೆ ಕರ್ನಾಟಕಕ್ಕೆ ಬೇಡವೆಂದು ಸಜ್ಜನಿಕೆಯಿಂದ ಹೇಳಿದ್ದರೆ ಸಾಕಿತ್ತು. ದುಬಾರಿ ಶುಲ್ಕ, ಬೆನ್ನಿಗೆ ಚೂರಿ, ಮೋಸ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿ ಅವಹೇಳನ ಮಾಡುವ ಅಗತ್ಯ ಏನಿತ್ತು' ಎಂದು ಜಲಸಂಪನ್ಮೂಲ ಸಚಿವರಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಕಾವೇರಿ ಜಲವಿವಾದದ ಅಂತಿಮ ತೀರ್ಪನ್ನು 2018ರ ಫೆಬ್ರುವರಿ 16ರಂದು ಸುಪ್ರೀಂ ಕೋರ್ಟ್ ಪ್ರಕಟಿಸಿತ್ತು. ಈ ವೇಳೆ ನರೀಮನ್ ಅವರ ನಿಲುವಿಗೆ ನ್ಯಾಯಪೀಠ ಮೆಚ್ಚುಗೆ ವ್ಯಕ್ತಪಡಿಸಿತ್ತು. ಕಾವೇರಿ ನದಿಯಿಂದ ತಮಿಳುನಾಡಿಗೆ ಹರಿಸಬೇಕಿದ್ದ ವಾರ್ಷಿಕ 192 ಟಿಎಂಸಿ ಅಡಿ ನೀರಿನ ಪ್ರಮಾಣವನ್ನು 177.25 ಟಿಎಂಸಿ ಅಡಿಗೆ ಕಡಿತ ಮಾಡಿ ತೀರ್ಪು ನೀಡಿತ್ತು.

ಕಾವೇರಿ ನದಿ ನೀರಿನ ವಿಚಾರದಲ್ಲಿ ತಮಿಳುನಾಡು ಅವಾಸ್ತವಿಕವಾಗಿ ವಾದ ಮಂಡಿಸುತ್ತಿದೆ ಎಂದು ನರೀಮನ್ ಅವರು ನ್ಯಾಯಪೀಠದ ಗಮನಕ್ಕೆ ತಂದಿದ್ದರು. ಚೆನ್ನೈ ನಗರದ ಕುಡಿಯುವ ನೀರಿನ ಅಗತ್ಯಕ್ಕೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ತಮ್ಮ ಪಾಲಿನ ತಲಾ 5 ಟಿಎಂಸಿ ಅಡಿ ನೀರನ್ನು ಉದಾರವಾಗಿ ಬಿಟ್ಟುಕೊಟ್ಟಿರುವುದನ್ನು ತಿಳಿಸಿದ್ದರು. ಈ ಮೂಲಕ ಬೆಂಗಳೂರು ನಗರಕ್ಕೆ ಹೆಚ್ಚುವರಿಯಾಗಿ 4.75 ಟಿಎಂಸಿ ಅಡಿ ನೀರು ಸಿಗುವಂತೆ ಮಾಡಿದ್ದರು.

ತುರ್ತು ಪರಿಸ್ಥಿತಿ ವಿರೋಧಿಸಿದ್ದ ನರೀಮನ್: 1929ರ ಜನವರಿ 10 ರಂದು ಜನಿಸಿದ ಅವರು 1950ರಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ ಆರಂಭಿಸಿದರು. 1961ರಲ್ಲಿ ಹಿರಿಯ ವಕೀಲರಾಗಿ ನೇಮಕಗೊಂಡರು. ಹತ್ತು ವರ್ಷಗಳ ನಂತರ ಅವರು ದೆಹಲಿಗೆ ಸ್ಥಳಾಂತರಗೊಂಡರು. ಸುಪ್ರೀಂ ಕೋರ್ಟ್‌ನಲ್ಲಿ ವಕೀಲಿಕೆ ನಡೆಸಿದರು. ಕಾಂಗ್ರೆಸ್ ಸರ್ಕಾರವು ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ಅವರನ್ನು 1972ರಲ್ಲಿ ನೇಮಿಸಿತು. ದೇಶದಲ್ಲಿ 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಅವರು ದೇಶದ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿಗಳಾದ ಪದ್ಮಭೂಷಣ (1991) ಹಾಗೂ ಪದ್ಮವಿಭೂಷಣಕ್ಕೆ (2007) ಭಾಜನರಾಗಿದ್ದಾರೆ. ಅವರು 1999-2005 ರವರೆಗೆ ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯರಾಗಿದ್ದರು.

ಉತ್ತರ ಪ್ರದೇಶ: ಬಗೆಹರಿದ ಎಸ್‌ಪಿ–ಕಾಂಗ್ರೆಸ್ ಮೈತ್ರಿ ಕಗ್ಗಂಟು ● ಇಂದು ಅಥವಾ ನಾಳೆ ಅಧಿಕೃತ ಘೋಷಣೆ

17 ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಕಾಂಗ್ರೆಸ್ ಒಪ್ಪಿಗೆ

ಪ್ರಜಾವಾಣಿ ವಾರ್ತೆ



ಪ್ರಿಯಾಂಕಾ



ಅಖಿಲೇಶ್

ನವದೆಹಲಿ: ಲೋಕಸಭೆಗೆ 80 ಸಂಸದರನ್ನು ಆಯ್ಕೆ ಮಾಡಿ ಕಳುಹಿಸುವ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಕಾಂಗ್ರೆಸ್ ನಡುವಿನ ಮೈತ್ರಿ ಕಗ್ಗಂಟು ಬುಧವಾರ ಬಗೆಹರಿದಿದೆ. ದೆಹಲಿ, ಹರಿಯಾಣ ಹಾಗೂ ಗುಜರಾತ್‌ನಂತಹ ರಾಜ್ಯಗಳಲ್ಲಿ ಆಮ್ ಆದ್ಮಿ ಪಕ್ಷದೊಂದಿಗೆ 'ಕೈ' ಸೀಟು ಹಂಚಿಕೆ ಒಪ್ಪಂದ ಗುರುವಾರ ಅಥವಾ ಶುಕ್ರವಾರ ಅಂತಿಮಗೊಳ್ಳುವ ಸಂಭವವಿದೆ.

ರಾಜ್ಯದಲ್ಲಿ 17 ಸ್ಥಾನಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಒಪ್ಪದಿದ್ದರೆ ಮೈತ್ರಿಯಿಂದ ಹೊರನಡೆಯುವುದಾಗಿ ಎಸ್‌ಪಿ ಮಂಗಳವಾರ ಎಚ್ಚರಿಸಿತ್ತು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರೊಂದಿಗೆ ಬುಧವಾರ ಬೆಳಿಗ್ಗೆ ದೂರವಾಣಿಯಲ್ಲಿ ಮಾತನಾಡಿ ಮನವೊಲಿಸಿದರು. 17 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಒಪ್ಪಿಕೊಂಡಿದೆ. ಕಾಂಗ್ರೆಸ್ ಹಾಗೂ ಎಸ್‌ಪಿಯ ಹಿರಿಯ ನಾಯಕರು ಗುರುವಾರ ಪತ್ರಿಕಾಗೋಷ್ಠಿ ನಡೆಸಿ ಸೀಟು ಹಂಚಿಕೆಯ ಔಪಚಾರಿಕ ಘೋಷಣೆ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಸೀಟು ಹಂಚಿಕೆ ಅಂತಿಮಗೊಂಡ ಬಳಿಕವೇ ರಾಹುಲ್ ಗಾಂಧಿ ಅವರ ಭಾರತ ಜೋಡೋ ನ್ಯಾಯ ಯಾತ್ರೆಯಲ್ಲಿ ಪಾಲ್ಗೊಳ್ಳುವುದಾಗಿ ಅಖಿಲೇಶ್ ಯಾದವ್ ಸ್ಪಷ್ಟಪಡಿಸಿದ್ದರು. ಅಮೇಠಿಯಲ್ಲಿ ರಾಹುಲ್ ಗಾಂಧಿ ಜತೆಗೆ ಅಖಿಲೇಶ್ ಹೆಜ್ಜೆ ಹಾಕಲಿದ್ದಾರೆ ಎಂದು ಸುದ್ದಿಗಳು ಹಬ್ಬಿದ್ದವು. ಅವರು ಯಾತ್ರೆಯಲ್ಲಿ ಭಾಗಿಯಾಗಿರಲಿಲ್ಲ. ರಾಯ್‌ಬರೇಲಿಯಲ್ಲಿ ಮಂಗಳವಾರ ನಡೆದ ಯಾತ್ರೆಯಲ್ಲಿ ಅವರು ಇರಲಿಲ್ಲ.

ಅಮೇಠಿ, ರಾಯ್‌ಬರೇಲಿ, ಕಾನ್ಪುರ, ಝಾನ್ಸಿ, ಬಾರಾಬಂಕಿ, ಸೀತಾಪುರ, ಕೈಸರ್‌ಗಂಜ್, ವಾರಾಣಸಿ, ಅಮ್ರೋಹಾ, ಸಹರಾನ್‌ಪುರ, ಗೌತಮ್ ಬುದ್ಧ ನಗರ, ಘಾಜಿಯಾಬಾದ್, ಬುಲಂದ್‌ಶಹರ್, ಫತೇಪುರ್ ಸಿಕ್ರಿ, ಹಾಥರಸ್, ಮಹಾರಾಜ್‌ಗಂಜ್ ಹಾಗೂ ಬಾಗ್‌ಪತ್ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ಈ ಪೈಕಿ, ಕೆಲವು ಸ್ಥಾನಗಳ ಬದಲಾವಣೆಯಾಗುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಉಭಯ ಪಕ್ಷಗಳ ನಾಯಕರು ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಎಸ್ಪಿ 31 ಅಭ್ಯರ್ಥಿಗಳ ಮೂರು ಪಟ್ಟಿಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ಎಸ್‌ಪಿ ನಾಯಕರ ಪ್ರಕಾರ, ಎಸ್‌ಪಿ 62ರಲ್ಲಿ ಹಾಗೂ ಕಾಂಗ್ರೆಸ್ 17ರಲ್ಲಿ ಸ್ಪರ್ಧಿಸಲಿವೆ. ಒಂದು ಕ್ಷೇತ್ರವನ್ನು ದಲಿತ ನಾಯಕ ಚಂದ್ರಶೇಖರ್ ಅಜಾದ್ ಅಲಿಯಾಸ್ ರಾವಣ ಅವರ ಭೀಮ್ ಆರ್ಮಿ ಪಕ್ಷಕ್ಕೆ ಬಿಟ್ಟುಕೊಡಲಾಗುತ್ತದೆ. ಕಾಂಗ್ರೆಸ್ ಪಕ್ಷವು ಒಂದು ಕ್ಷೇತ್ರವನ್ನು ಸ್ವಾಮಿ ಪ್ರಸಾದ್ ಮೌರ್ಯ ಅವರಿಗೆ ಬಿಟ್ಟುಕೊಡುವ ಸಾಧ್ಯತೆ ಇದೆ.

ದೆಹಲಿಯಲ್ಲಿ 'ಕೈ'ಗೆ 2 ಸೀಟು?: ದೆಹಲಿಯಲ್ಲಿ ಕಾಂಗ್ರೆಸ್‌ಗೆ ಎಎಪಿಯು ಎರಡು ಸ್ಥಾನಗಳನ್ನು ಬಿಟ್ಟುಕೊಡುವ ಸಾಧ್ಯತೆ ದಟ್ಟವಾಗಿದೆ. ಉಭಯ ಪಕ್ಷಗಳ ನಡುವೆ ಸೀಟು ಹಂಚಿಕೆ ಮಾತುಕತೆ ಅಂತಿಮ ಹಂತಕ್ಕೆ ತಲುಪಿದೆ. ಇದು ದೆಹಲಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ಗೆ ಚಂಡೀಗಢ ಲೋಕಸಭಾ ಸ್ಥಾನ ಸಿಗುವ ಸಾಧ್ಯತೆಯಿದ್ದು, ಹರಿಯಾಣದಲ್ಲಿ ಒಂದು ಸ್ಥಾನ ಮತ್ತು ಗುಜರಾತ್‌ನಲ್ಲಿ 2-3 ಸ್ಥಾನಗಳನ್ನು ಆಪ್‌ಗೆ ಬಿಟ್ಟುಕೊಡಬಹುದು. ಗುಜರಾತ್‌ನ ಭರೂಚ್ ಸೀಟಿನ ಬಗ್ಗೆ ಉಭಯ ಪಕ್ಷಗಳು ಪಟ್ಟು ಹಿಡಿದಿದ್ದು, ಈ ಸೀಟಿನ ಅಂತಿಮ ನಿರ್ಧಾರ ಏನೆಂಬುದು ಗೊತ್ತಾಗಿಲ್ಲ.

ದೆಹಲಿಯಲ್ಲಿ ಏಳು ಸ್ಥಾನಗಳ ಪೈಕಿ ಎರಡಕ್ಕೆ ಕಾಂಗ್ರೆಸ್ ತೃಪ್ತಿಪಟ್ಟುಕೊಳ್ಳಬಹುದು ಎಂಬ ಊಹಾಪೋಹಗಳು ಹಬ್ಬಿವೆ. ಪಕ್ಷವು ಮೂರಕ್ಕಿಂತ ಕಡಿಮೆ ಸ್ಥಾನಗಳಿಗೆ ಒಪ್ಪಬಾರದು ಎಂದು ಪಕ್ಷದ ಒಂದು ವರ್ಗ ವಾದಿಸಿದೆ. ಗುರುವಾರ ಅಥವಾ ಶುಕ್ರವಾರ ಕಾಂಗ್ರೆಸ್-ಎಎಪಿ ಮೈತ್ರಿ ಕುರಿತು ಅಂತಿಮ ಘೋಷಣೆ ಹೊರಬೀಳಬಹುದು ಎಂದು ಮಾತುಕತೆಯಲ್ಲಿ ತೊಡಗಿರುವ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಲೋಕಸಭೆ, ವಿಧಾನಸಭೆ ಮತ್ತು ಪಾಲಿಕೆ ಚುನಾವಣೆಗಳಲ್ಲಿ ತನ್ನ ಚುನಾವಣಾ ಸಾಧನೆಯನ್ನು ಗಮನಿಸಿದಾಗ ದೆಹಲಿಯಲ್ಲಿ ಒಂದು ಸ್ಥಾನ ಪಡೆಯಲು ಕಾಂಗ್ರೆಸ್ ಅರ್ಹವಲ್ಲ ಎಂದು ಎಎಪಿ ಕಳೆದ ವಾರ ವಾಗ್ದಾಳಿ ನಡೆಸಿತ್ತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಜತೆಗೆ ಭಾನುವಾರ ಮೈತ್ರಿ ಮಾತುಕತೆ ನಡೆಸಿದ್ದರು.

ಪಟ್ನಾ ರ್‍ಯಾಲಿಗೆ ಮೊದಲು ಜಾರ್ಖಂಡ್ ಸೀಟು ಹಂಚಿಕೆ ಅಂತಿಮ ಸಾಧ್ಯತೆ

ರಾಹುಲ್ ಗಾಂಧಿ, ಲಾಲೂ ಪ್ರಸಾದ್, ಸೀತಾರಾಮ್ ಯೆಚೂರಿ, ಡಿ.ರಾಜಾ ಮತ್ತು ದೀಪಂಕರ್ ಭಟ್ಟಾಚಾರ್ಯ ಅವರು ಪಟ್ನಾದಲ್ಲಿ ಮಾರ್ಚ್ 3ರಂದು ಜಂಟಿ ರ್‍ಯಾಲಿ ನಡೆಸಲಿದ್ದಾರೆ. ಬಿಹಾರದ ಸೀಟು ಹಂಚಿಕೆ ಪ್ರಕ್ರಿಯೆ ಅದಕ್ಕಿಂತ ಮೊದಲು ಪೂರ್ಣಗೊಳ್ಳುವ ಸಾಧ್ಯತೆ ಇದೆ. ಜಾರ್ಖಂಡ್ ಸೀಟು ಹಂಚಿಕೆ ಶೀಘ್ರ ಅಂತಿಮಗೊಳ್ಳುವ ಸಂಭವವಿದೆ.

ಅಲ್ಲದೆ, ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಮಾತುಕತೆಗಳ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಪಕ್ಷವು ಎನ್‌ಡಿಎ ಜತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಹಿಂಜರಿಯುವುದಿಲ್ಲ ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಹೇಳಿದ್ದರು.

ಪಕ್ಷವು ಇಂಡಿಯಾ ಮೈತ್ರಿಯ ಭಾಗವಾಗಿಯೇ ಇದೆ ಎಂದು ಪುತ್ರ ಒಮರ್ ಅಬ್ದುಲ್ಲಾ ಸ್ಪಷ್ಟಪಡಿಸಿದ್ದರು. ಮೈತ್ರಿಕೂಟವನ್ನು ಪಿಡಿಪಿ ತೊರೆಯಲಿದೆ ಎಂಬ ವದಂತಿಗಳನ್ನು ಪಕ್ಷದ ನಾಯಕಿ ಮೆಹಬೂಬಾ ಮುಫ್ತಿ ತಳ್ಳಿ ಹಾಕಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣ

ಜಾರಿ ನಿರ್ದೇಶನಾಲಯದ ಆರೋಪಗಳ ಆಧಾರದ ಮೇಲೆ ತನಿಖೆ ಕೈಗೊಂಡಿರುವ ಸಿಬಿಐ, ಈ ವರೆಗೆ ಹಲವು ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದೆ

26ರಂದು ವಿಚಾರಣೆಗೆ ಹಾಜರಾಗಲು ಬಿಆರ್‌ಎಸ್ ನಾಯಕಿ ಕವಿತಾಗೆ ಸಮನ್ಸ್

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಫೆ.26ರಂದು ವಿಚಾರಣೆಗೆ ಹಾಜರಾಗುವಂತೆ ಬಿಆರ್‌ಎಸ್ ಶಾಸಕಿ ಕೆ.ಕವಿತಾ ಅವರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ದೆಹಲಿಯಲ್ಲಿರುವ ಸಿಬಿಐನ ಕೇಂದ್ರ ಕಚೇರಿಯಲ್ಲಿ ತನಿಖಾ ತಂಡದ ಎದುರು ಹಾಜರಾಗುವಂತೆ ಕವಿತಾ ಅವರಿಗೆ ಸೂಚಿಸಲಾಗಿದೆ. ಈ ಹಿಂದೆ, 2022ರ ಡಿಸೆಂಬರ್‌ನಲ್ಲಿ ಹೈದರಾಬಾದ್‌ನಲ್ಲಿರುವ ಅವರ ನಿವಾಸದಲ್ಲಿ ಕವಿತಾ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿತ್ತು ಎಂದು ತಿಳಿಸಿದ್ದಾರೆ.



ಕೆ.ಕವಿತಾ

ಹಗರಣದಲ್ಲಿ ಆರೋಪಿಯಾಗಿರುವ ವಿಜಯ್ ನಾಯರ್‌ಗೆ ಕವಿತಾ, ಶರತ್ ರೆಡ್ಡಿ ಹಾಗೂ ಮಾಗುಂಟ ಶ್ರೀನಿವಾಸುಲು ರೆಡ್ಡಿ ಮಾಲೀಕತ್ವದ ಸೌಥ್ ಗ್ರೂಪ್‌ನಿಂದ ₹100 ಕೋಟಿಯಷ್ಟು ಲಂಚ ನೀಡಲಾಗಿದೆ. ಆಮ್ ಆದ್ಮಿ ಪಕ್ಷದ ನಾಯಕರ ಪರವಾಗಿ ಈ ಹಣ ನೀಡಲಾಗಿದೆ ಎಂದು ಇ.ಡಿ ಆರೋಪಿಸಿದೆ.

ಮರಾಠ ಮೀಸಲಾತಿ: ಪ್ರತಿಭಟನೆ ಎಚ್ಚರಿಕೆ ಕೊಟ್ಟ ಜರಾಂಗೆ

ಪ್ರಜಾವಾಣಿ ವಾರ್ತೆ

ಮುಂಬೈ: ರಾಜಕೀಯವಾಗಿ ಪ್ರಬಲವಾಗಿರುವ ಮರಾಠ ಸಮುದಾಯವು ಎರಡು ವರ್ಗಗಳ ಪೈಕಿ ಒಂದರ ಅಡಿಯಲ್ಲಿ ಮೀಸಲಾತಿ ಪಡೆಯುವ ಆಯ್ಕೆ ಕೊಡಲಾಗಿದೆ. ಹಾಗಿದ್ದರೂ ಮನೋಜ್ ಜರಾಂಗೆ ಅವರು 24ರಿಂದ (ಶನಿವಾರ) ಮತ್ತೆ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಮರಾಠ ಸಮುದಾಯಕ್ಕೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಶೇ 10ರಷ್ಟು ಮೀಸಲಾತಿ ಒದಗಿಸುವ ಮಸೂದೆಯನ್ನು ಮಹಾರಾಷ್ಟ್ರ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಮಂಗಳವಾರ ಸರ್ವಾನುಮತದಿಂದ ಅಂಗೀಕರಿಸಿದ ಬೆನ್ನಲ್ಲೇ ಜರಾಂಗೆ ಅವರು ಪ್ರತಿಭಟನೆ ನಡೆಸುವುದಾಗಿ ಹೇಳಿದ್ದಾರೆ.



ಮನೋಜ್ ಜರಾಂಗೆ

ಈ ಕುರಿತು ತಮ್ಮ ಸ್ವಗ್ರಾಮ ಅಂತರ್ವಾವಿ ಸಾರಥಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾವು ಕೇಳಿದ್ದನ್ನು ಸರ್ಕಾರ ನೀಡಿಲ್ಲ. ರಾಜಕೀಯ ಕಾರಣಗಳಿಗಾಗಿ ಈ ವಿಶೇಷ ಅಧಿವೇಶನ ನಡೆಸಲಾಗಿದೆ. ಮರಾಠರ ಹಿತಾಸಕ್ತಿ ನಾವು ಸಂರಕ್ಷಿಸಬೇಕಾಗಿದೆ. ಪ್ರಸ್ತುತ ಸರ್ಕಾರದ ಮೀಸಲಾತಿಯು ಮೋಟರ್ ಸೈಕಲ್ ಕೊಟ್ಟು, ಪೆಟ್ರೋಲ್ ಕೊಟ್ಟಿಲ್ಲ ಎಂಬಂತಿದೆ. ಇದು ನಮಗೆ ಸ್ವೀಕಾರಾರ್ಹವಲ್ಲ' ಎಂದು ತಿಳಿಸಿದ್ದಾರೆ.

ಕೇರಳ ಸರ್ಕಾರ ಟೀಕಿಸಿದ ಸಚಿವ

ನವದೆಹಲಿ (ಪಿಟಿಐ): 'ಕೇರಳ ಸರ್ಕಾರ ಮತ್ತು ಸ್ಥಳೀಯ ಪ್ರತಿನಿಧಿಗಳ ನಿರ್ಲಕ್ಷ್ಯದಿಂದ ವಯನಾಡ್ ಜಿಲ್ಲೆಯಲ್ಲಿ ಮಾನವ– ವನ್ಯಜೀವಿ ನಡುವಿನ ಸಂಘರ್ಷ ಹೆಚ್ಚಳವಾಗಿದೆ' ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಬುಧವಾರ ಆರೋಪಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಬರೆದುಕೊಂಡಿರುವ ಯಾದವ್ ಅವರು, 'ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ತಜ್ಞರು ಮತ್ತು ಭಾರತೀಯ ವನ್ಯಜೀವಿ ಸಂಸ್ಥೆಯ ತಜ್ಞರ ತಂಡದೊಂದಿಗೆ ನಾನು ಈಗ ವಯನಾಡ್‌ಗೆ ತೆರಳುತ್ತಿದ್ದೇನೆ. ಆ ಪ್ರದೇಶದಲ್ಲಿನ ಪರಿಸ್ಥಿತಿ ಅವಲೋಕಿಸಿ, ಸಂತ್ರಸ್ತರನ್ನು ಭೇಟಿಯಾಗಲಿದ್ದೇನೆ' ಎಂದಿದ್ದಾರೆ.

'ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರ ಪರವಾಗಿ ನಾವು ನಿಲ್ಲಲಿದ್ದೇವೆ. ಅಲ್ಲದೇ ಅವರಿಗೆ ಶೀಘ್ರದಲ್ಲೇ ಪರಿಹಾರ ದೊರಕಿಸುವ ಬಗ್ಗೆಯೂ ಖಚಿತಪಡಿಸಿಕೊಳ್ಳಲಾಗುವುದು' ಎಂದೂ ಅವರು ಹೇಳಿದ್ದಾರೆ.

ರೈತ ಸಾವು: 'ಚಲೋ'ಗೆ ವಿರಾಮ

ಒಂದನೇ ಪುಟದಿಂದ

ಸರ್ಕಾರದೊಂದಿಗೆ ನಡೆಸಿದ ನಾಲ್ಕನೇ ಸುತ್ತಿನ ಮಾತುಕತೆ ವಿಫಲವಾದ ಎರಡು ದಿನಗಳ ಬಳಿಕ ಸಹಸ್ರಾರು ರೈತರು 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆಯನ್ನು ಪುನರಾರಂಭಿಸಿದ್ದರು. ವಾರದಿಂದಲೇ ಟ್ರ್ಯಾಕ್ಟರ್, ಟ್ರಾಲಿ, ಮಿನಿ ವ್ಯಾನ್‌ಗಳು ಮತ್ತು ಪಿಕಪ್ ಟ್ರಕ್‌ಗಳೊಂದಿಗೆ ಗಡಿ ಭಾಗಗಳಲ್ಲಿ ಬಂದು ರೈತರು ಜಮಾಯಿಸಿದ್ದರು.

ಐದನೇ ಸುತ್ತಿನ ಮಾತುಕತೆಗೆ ಆಹ್ವಾನ: ರೈತರ ಪ್ರತಿಭಟನೆಯ ಕಾವು ಜೋರಾದ ಬೆನ್ನಲ್ಲೇ 'ಎಂಎಸ್‌ಪಿ ಸೇರಿದಂತೆ ಎಲ್ಲ ಬಗೆಯ ಸಮಸ್ಯೆಗಳ ಕುರಿತು ಚರ್ಚಿಸಲು ಸರ್ಕಾರದ ಜತೆಗೆ ಐದನೇ ಸುತ್ತಿನ ಮಾತುಕತೆಗೆ ರೈತ ಮುಖಂಡರು ಬರಬೇಕು' ಎಂದು ಕೃಷಿ ಸಚಿವ ಅರ್ಜುನ್ ಮುಂಡಾ ಆಹ್ವಾನಿಸಿದರು.

ಇದೇ ವೇಳೆ, ಪ್ರತಿಭಟನೆ ಸಂದರ್ಭದಲ್ಲಿ ಶಾಂತಿ ಕಾಪಾಡುವಂತೆ ರೈತ ಮುಖಂಡರು ರೈತರನ್ನು ಕೋರಿದರು. 'ನೀವು ಈ ಹೋರಾಟದಲ್ಲಿ ಗೆಲ್ಲಲು ಬಯಸಿದ್ದರೆ ಶಾಂತಿ ಕಾಯ್ದುಕೊಳ್ಳಿ' ಎಂದು ಎಸ್‌ಕೆಎಂ (ರಾಜಕೀಯೇತರ) ನಾಯಕ ಜಗಜೀತ್ ಸಿಂಗ್ ಡಲ್ಲೆವಾಲ್ ಹೇಳಿದರು.

ಇದಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಡಲ್ಲೆವಾಲ್, 'ಶಾಂತಿ ಕದಡುವುದು ನಮ್ಮ ಉದ್ದೇಶವಲ್ಲ. ಸರ್ಕಾರ ವಿಳಂಬ ನೀತಿ ಅನುಸರಿಸದೇ, ರೈತರ ಪರ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

ಜೆಸಿಬಿ ನೀಡದಿರಲು ಪೊಲೀಸರ ಸೂಚನೆ: ಪ್ರತಿಭಟನೆನಿರತ ರೈತರಿಗೆ ತಮ್ಮ ಜೆಸಿಬಿ, ಪೋಕ್ಲೇನ್, ಹಿಟಾಚಿ, ಬುಲ್ಡೋಜರ್‌ನಂತಹ ಯಂತ್ರಗಳನ್ನು ನೀಡದಂತೆ ಅವುಗಳ ಮಾಲೀಕರು ಮತ್ತು ನಿರ್ವಾಹಕರಿಗೆ ಹರಿಯಾಣ ಪೊಲೀಸರು ಸೂಚಿಸಿದ್ದಾರೆ. ಒಂದು ವೇಳೆ ಅವುಗಳನ್ನು ನೀಡಿದ್ದರೆ ಕೂಡಲೇ ಹಿಂತೆಗೆದುಕೊಳ್ಳಿ. ಈ ಯಂತ್ರಗಳಿಂದ ಭದ್ರತಾ ಪಡೆಗಳಿಗೆ ಹಾನಿ ಉಂಟಾಗಬಹುದು. ಹಾಗಾದಲ್ಲಿ ಅದು ಜಾಮೀನುರಹಿತ ಅಪರಾಧ. ಆಗ ಕ್ರಿಮಿನಲ್ ಪ್ರಕರಣ ಹೂಡಬಹುದು ಎಂದು ಎಚ್ಚರಿಸಿ ಪೊಲೀಸರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ರೈತರು ಮತ್ತು ಸರ್ಕಾರದ ನಡುವೆ ನಾಲ್ಕು ಸುತ್ತಿನ ಮಾತುಕತೆ ನಡೆದಿದ್ದು, ಫಲಪ್ರದವಾಗಿಲ್ಲ. ನಾಲ್ಕನೇ ಸುತ್ತಿನ ಮಾತುಕತೆ ವೇಳೆ, ದ್ವಿದಳ ಧಾನ್ಯಗಳು, ಮೆಕ್ಕೆಜೋಳ, ಹತ್ತಿಯನ್ನು ಐದು ವರ್ಷ ಸರ್ಕಾರಿ ಸಂಸ್ಥೆಗಳಿಂದ ಎಂಎಸ್‌ಪಿ ದರದಲ್ಲಿ ಖರೀದಿಸುವ ಕೇಂದ್ರದ ಪ್ರಸ್ತಾವವನ್ನು ರೈತರು ತಿರಸ್ಕರಿಸಿದ್ದರು.

ಸಂದೇಶ್‌ಖಾಲಿಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆರೋಪ

ಮಮತಾ ಸರ್ಕಾರಕ್ಕೆ ಎನ್‌ಎಚ್‌ಆರ್‌ಸಿ ನೋಟಿಸ್

ನವದೆಹಲಿ (ಪಿಟಿಐ): ಹಿಂಸಾಚಾರ ಪೀಡಿತ ಸಂದೇಶ್‌ಖಾಲಿಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗಿದೆ ಎಂಬ ವರದಿಯನ್ನು ಆಧರಿಸಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಪಶ್ಚಿಮ ಬಂಗಾಳ ಸರ್ಕಾರಕ್ಕೆ ಮತ್ತು ಡಿಜಿಪಿಗೆ ನೋಟಿಸ್ ಜಾರಿ ಮಾಡಿದೆ.

ವಿಷಯದ ಗಂಭೀರತೆಯನ್ನು ಪರಿಗಣಿಸಿ, ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲು ನಿಯೋಗವನ್ನು ಕಳುಹಿಸಲು ಎನ್‌ಎಚ್‌ಆರ್‌ಸಿ ನಿರ್ಧರಿಸಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ.

ಎನ್‌ಎಚ್‌ಆರ್‌ಸಿ ಸದಸ್ಯರ ನೇತೃತ್ವದ ನಿಯೋಗದಲ್ಲಿ ಆಯೋಗದ ಅಧಿಕಾರಿಗಳೂ ಇರಲಿದ್ದಾರೆ ಎಂದಿವೆ.

ಪತ್ರಿಕೆ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳ ವರದಿಗಳನ್ನು ಪರಿಶೀಲಿಸಿ ಆಯೋಗವು ಸ್ವಯಂಪ್ರೇರಿತವಾಗಿ ಈ ನಿರ್ಧಾರ ಕೈಗೊಂಡಿದೆ ಎಂದು ಹೇಳಿವೆ.

'ದೌರ್ಜನ್ಯದಲ್ಲಿ ಸಿಪಿಎಂ ಸರ್ಕಾರವನ್ನು ಮೀರಿಸಿದ ಮಮತಾ': ಪಶ್ಚಿಮ ಬಂಗಾಳದ ಜನರ ಮೇಲೆ ದೌರ್ಜನ್ಯ ಎಸಗುವಲ್ಲಿ ಮಮತಾ ಬ್ಯಾನರ್ಜಿ ಸರ್ಕಾರವು ಹಿಂದಿನ ಸಿಪಿಎಂ ಸರ್ಕಾರವನ್ನು ಮೀರಿಸಿದೆ ಎಂದು ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಹೇಳಿದರು.

ದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಜನರು ಆಡಳಿತಾರೂಢ ಟಿಎಂಸಿಗೆ ತಕ್ಕ ಪ್ರತ್ಯುತ್ತರ ನೀಡಬೇಕು ಎಂದು ಕರೆ ನೀಡಿದರು.

ಸಂದೇಶ್‌ಖಾಲಿಯಲ್ಲಿ ನಡೆದಿರುವ ದೌರ್ಜನ್ಯದ ಕುರಿತು 'ಇಂಡಿಯಾ' ಒಕ್ಕೂಟದಲ್ಲಿರುವ ಕಾಂಗ್ರೆಸ್ ಸೇರಿದಂತೆ ವಿವಿಧ ವಿರೋಧ ಪಕ್ಷಗಳು ಯಾಕೆ ಮೌನ ವಹಿಸಿವೆ ಎಂದು ಪ್ರಶ್ನಿಸಿದರು.

ಸಂದೇಶ್‌ಖಾಲಿಯಲ್ಲಿ ನಡೆದಿರುವ ದೌರ್ಜನ್ಯವು ಗಂಭೀರ ಸ್ವರೂಪದ್ದು. ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯವು ಇಡೀ ಸಮಾಜವೇ ತಲೆತಗ್ಗಿಸುವಂತಹದ್ದು ಎಂದು ಹೇಳಿದರು.

'ಮಹಿಳೆಯರಿಗೆ ರಕ್ಷಣೆಯಿಲ್ಲ'

ಪಶ್ಚಿಮ ಬಂಗಾಳದಲ್ಲಿ ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಮಮತಾ ಬ್ಯಾನರ್ಜಿ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಬಿಜೆಪಿ ರಾಜ್ಯಸಭೆ ಸದಸ್ಯೆ ಕವಿತಾ ಪಾಟೀದಾರ್ ಆರೋಪಿಸಿದರು.

ದೌರ್ಜನ್ಯ ಎಸಗಿದವರನ್ನು ಸರ್ಕಾರವು ರಕ್ಷಣೆ ಮಾಡುತ್ತಿದೆ ಎಂದೂ ಅವರು ಹೇಳಿದರು.

'ಕಾಂಗ್ರೆಸ್ ಖಾತೆಗಳಿಂದ ಐ.ಟಿಗೆ ₹65 ಕೋಟಿ'

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್ ಪಕ್ಷದ ವಿವಿಧ ಬ್ಯಾಂಕ್ ಖಾತೆಗಳಿಂದ ₹65 ಕೋಟಿ ಜಮಾ ಮಾಡಿಕೊಂಡಿದೆ ಎಂದು ಪಕ್ಷವು ಬುಧವಾರ ಆರೋಪಿಸಿದೆ. ಹಿಂದಿನ ವರ್ಷಗಳ ತೆರಿಗೆ ಪಾವತಿಗೆ ಸಂಬಂಧಿಸಿದ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವಾಗಲೇ ಇಂಥ 'ಪ್ರಜಾಪ್ರಭುತ್ವ ವಿರೋಧಿ' ಕ್ರಮ ಕೈಗೊಳ್ಳಲಾಗಿದೆ ಎಂದು ದೂರಿದೆ.

'ಕೇಂದ್ರೀಯ ತನಿಖಾ ಸಂಸ್ಥೆಗಳ ಇಂಥ ಕ್ರಮವು ಬಹುಪಕ್ಷೀಯ ವ್ಯವಸ್ಥೆ ಹೊಂದಿರುವ ಭಾರತಕ್ಕೆ ಎಚ್ಚರಿಕೆಯ ಕರೆಗಂಟೆಯಾಗಿದೆ. ಇದನ್ನು ಸರಿಪಡಿಸದಿದ್ದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೇ ಅಂತ್ಯವಾಗಲಿದೆ' ಎಂದು ಪಕ್ಷದ ಖಜಾಂಚಿ ಅಜಯ್ ಮಾಕನ್ ಹರಿಹಾಯ್ದರು.

'ಕಾಂಗ್ರೆಸ್ ಮತ್ತು ಭಾರತೀಯ ಯುವ ಕಾಂಗ್ರೆಸ್‌ನ ಬ್ಯಾಂಕ್ ಖಾತೆಗಳಿಂದ ₹65 ಕೋಟಿ ಕಡಿತ ಮಾಡುವಂತೆ ಆದಾಯ ತೆರಿಗೆ ಇಲಾಖೆಯು ವಿವಿಧ ಬ್ಯಾಂಕ್‌ಗಳಿಗೆ ಪತ್ರ ಬರೆದಿದೆ' ಎಂದು ಅಜಯ್ ಮಾಕನ್ ತಿಳಿಸಿದರು.

₹201 ಕೋಟಿ ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದ ಪ್ರಕರಣದಲ್ಲಿ ಇಲಾಖೆಯ ಕ್ರಮಕ್ಕೆ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯು (ಐಟಿಎಟಿ) ತಡೆ ನೀಡಿದ್ದರೂ ಪ್ರಕರಣದ ವಿಚಾರಣೆ ಬಾಕಿ ಇದ್ದರೂ ಬ್ಯಾಂಕ್ ಖಾತೆಗಳಿಂದ ಹಣ ತೆಗೆದಿರುವುದು 'ಪ್ರಜಾಸತ್ತಾತ್ಮಕ' ಕ್ರಮವಲ್ಲ ಎಂದು ಕಿಡಿ ಕಾರಿದರು.

'ಪ್ರಕರಣದ ವಿಚಾರಣೆ ನಡೆಯುತ್ತಿರುವುದರಿಂದ ಹಣವನ್ನು ಜಮಾ ಮಾಡಕೂಡದು ಎಂದು ಬ್ಯಾಂಕ್‌ಗಳಿಗೆ ಪಕ್ಷವು ಪತ್ರ ಬರೆದಿದೆ. ನಮಗೆ ನ್ಯಾಯಾಂಗದ ಮೇಲೆ ನಂಬಿಕೆ ಇದೆ. ಈ ಬಗ್ಗೆ ಶೀಘ್ರವೇ ಹೆಚ್ಚು ಮಾಹಿತಿ ಹಂಚಿಕೊಳ್ಳುತ್ತೇನೆ' ಎಂದೂ ಅವರು ಎಕ್ಸ್‌ನಲ್ಲಿ ಹೇಳಿದ್ದಾರೆ.

'ನ್ಯಾಯಯಾತ್ರೆ'ಗೆ 5 ದಿನ ವಿರಾಮ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿಶೇಷ ಉಪನ್ಯಾಸ ನೀಡಲು ಕೇಂಬ್ರಿಜ್ ವಿಶ್ವವಿದ್ಯಾಲಯಕ್ಕೆ ತೆರಳುತ್ತಿರುವುದರಿಂದ ಮತ್ತು ದೆಹಲಿಯಲ್ಲಿ ಪ್ರಮುಖ ಸಭೆಗಳಲ್ಲಿ ಭಾಗವಹಿಸುತ್ತಿರುವುದರಿಂದ 'ಭಾರತ್ ಜೋಡೊ ನ್ಯಾಯ ಯಾತ್ರೆ'ಗೆ ಇದೇ 26ರಿಂದ ಮಾರ್ಚ್ 1ರವರೆಗೆ ಐದು ದಿನ ವಿರಾಮ ನೀಡಲಾಗುತ್ತಿದೆ ಎಂದು ಕಾಂಗ್ರೆಸ್ ಬುಧವಾರ ತಿಳಿಸಿದೆ.

ಫೆ.22 ಮತ್ತು 23ರಂದು ಸಹ ಯಾತ್ರೆಗೆ ವಿರಾಮ ನೀಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದರು.

ಯಾತ್ರೆಯು ಫೆ.24ರಂದು ಉತ್ತರಪ್ರದೇಶದ ಮೊರಾದಾಬಾದ್‌ನಿಂದ ಮತ್ತೆ ಆರಂಭವಾಗಲಿದೆ. ನಂತರ ಸಂಬಲ್, ಅಲೀಗಢ, ಹಾಥರಸ್ ಮತ್ತು ಆಗ್ರಾ ಜಿಲ್ಲೆಗಳ ಮೂಲಕ ರಾಜಸ್ಥಾನ ತಲುಪಲಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜೀವನದಲ್ಲಿ ಸವಾಲುಗಳನ್ನು ಸ್ವೀಕರಿಸಿ. ಗೆದ್ದರೆ, ನಾಯಕತ್ವ ವಹಿಸಬಹುದು; ಸೋತರೆ, ಮಾರ್ಗದರ್ಶನ ಮಾಡಬಹುದು.

-ಸ್ವಾಮಿ ವಿವೇಕಾನಂದ

ಚಂಡೀಗಢ ಮೇಯರ್ ಆಯ್ಕೆ ಪ್ರಜಾತಂತ್ರ ರಕ್ಷಿಸಿದ 'ಸುಪ್ರೀಂ'

ಚಂಡೀಗಢ ಮಹಾನಗರಪಾಲಿಕೆಯ ಮೇಯರ್ ಆಯ್ಕೆಯ ಮತದಾನ ಪ್ರಕ್ರಿಯೆಯಲ್ಲಿ ಚುನಾವಣಾಧಿಕಾರಿ ಅನಿಲ್ ಮಸೀಹ್ ತೋರಿದ 'ದುರ್ವರ್ತನೆ' ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಐತಿಹಾಸಿಕ. ಮೇಯರ್ ಚುನಾವಣೆಯಲ್ಲಿ ಎಎಪಿ-ಕಾಂಗ್ರೆಸ್ ಮೈತ್ರಿಕೂಟದ ಪರವಾಗಿ 20 ಮತಗಳು ಚಲಾವಣೆಯಾಗಿದ್ದವು. ಆದರೆ, ಅವುಗಳ ಪೈಕಿ ಎಂಟು ಮತಪತ್ರಗಳನ್ನು ಚುನಾವಣಾಧಿಕಾರಿಯೇ ವಿರೂಪಗೊಳಿಸಿದ್ದರು. ವಿರೂಪಗೊಳಿಸಿ ಮತಪತ್ರಗಳು ಅಸಿಂಧು ಎಂದು ಘೋಷಿಸಿದ್ದರು. ಪರಿಣಾಮವಾಗಿ, ಬಿಜೆಪಿ ಅಭ್ಯರ್ಥಿಗೆ ಮೈತ್ರಿಕೂಟದ ಅಭ್ಯರ್ಥಿಗಿಂತ ಹೆಚ್ಚು ಮತಗಳು ಸಿಕ್ಕವು. ಹೀಗಾಗಿ, ಬಿಜೆಪಿ ಅಭ್ಯರ್ಥಿಯು ಗೆದ್ದಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದ್ದರು. ಆದರೆ, ಈಗ, ಅಭೂತಪೂರ್ವ ನಡವಳಿಕೆಯ ಮೂಲಕ ಮರು ಮತಎಣಿಕೆ ನಡೆಸಿರುವ ಸುಪ್ರೀಂ ಕೋರ್ಟ್, ಎಎಪಿ ಅಭ್ಯರ್ಥಿ ಗೆದ್ದಿದ್ದಾರೆ ಎಂದು ಪ್ರಕಟಿಸಿದೆ. ಚುನಾವಣಾಧಿಕಾರಿಯ ನಡವಳಿಕೆಯ ಕುರಿತು ಆಕ್ರೋಶ ವ್ಯಕ್ತಪಡಿಸಿದೆ. 'ಚುನಾವಣಾಧಿಕಾರಿಯ ನಡವಳಿಕೆಯು ಗಂಭೀರ ದುರ್ವರ್ತನೆ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ' ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿದೆ. 'ಚುನಾವಣಾ ಪ್ರಜಾತಂತ್ರದ ಮೂಲಭೂತ ಜನಾದೇಶವು ಅನುಷ್ಠಾನಗೊಂಡಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ನ್ಯಾಯಾಲಯವು ಅಸಾಧಾರಣವಾದ ಸಂದರ್ಭಗಳಲ್ಲಿ ಮಧ್ಯ ಪ್ರವೇಶಿಸಲೇಬೇಕು' ಎಂದು ಕೋರ್ಟ್ ಹೇಳಿರುವುದು ಸಮಂಜಸವಾಗಿದೆ. ಚುನಾವಣಾಧಿಕಾರಿಯು ಚುನಾವಣಾ ಪ್ರಕ್ರಿಯೆಯನ್ನು ಹಾಳುಗೆಡವಿದ್ದಲ್ಲದೆ, ನ್ಯಾಯಾಲಯದಲ್ಲಿ ಸುಳ್ಳು ಹೇಳಿದ್ದಾರೆ. ಹಾಗಾಗಿ, ಅವರಿಗೆ ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 340ರ ಅಡಿಯಲ್ಲಿ ನೋಟಿಸ್ ನೀಡುವಂತೆಯೂ ನ್ಯಾಯಪೀಠವು ಸೂಚಿಸಿದೆ. ಪ್ರಜಾಪ್ರಭುತ್ವದ ಪಾವಿತ್ರ್ಯ ಉಳಿಯುವುದಕ್ಕೆ ಅಗತ್ಯವಾಗಿ ಬೇಕಾಗಿದ್ದ ಕ್ರಮವನ್ನು ಸುಪ್ರೀಂ ಕೋರ್ಟ್ ಕೈಗೊಂಡಿದೆ.



ದೇಶದಲ್ಲಿ ಪ್ರಜಾಪ್ರಭುತ್ವದ ಉಳಿವಿಗಾಗಿ ಚುನಾವಣೆಗಳು ನ್ಯಾಯಯುತವಾಗಿ, ಪಾರದರ್ಶಕವಾಗಿ ನಡೆಯಬೇಕಾದುದು ಅಗತ್ಯ ಎಂಬುದನ್ನು ಎಲ್ಲ ಪಕ್ಷಗಳೂ ಅರ್ಥ ಮಾಡಿಕೊಳ್ಳಬೇಕು

ಚುನಾವಣಾಧಿಕಾರಿಯು ಚುನಾವಣೆ ನಡೆಯುವ ಮುನ್ನ ಮತ್ತು ನಂತರ ಹಲವು ಕುತಂತ್ರಗಳನ್ನು ಎಸಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಜನವರಿ 18ಕ್ಕೆ ಮತದಾನವು ನಿಗದಿಯಾಗಿತ್ತು. ಆದರೆ ಕೊನೆಯ ಕ್ಷಣದಲ್ಲಿ ತಮಗೆ ಅನಾರೋಗ್ಯವಿದೆ ಎಂಬ ಕಾರಣ ಒಡ್ಡಿ ಚುನಾವಣಾಧಿಕಾರಿಯು ಮತದಾನವನ್ನು ಫೆಬ್ರುವರಿ 6ಕ್ಕೆ ಮುಂದೂಡಿದ್ದರು. ಆದರೆ ಹೈಕೋರ್ಟ್ ಮಧ್ಯಪ್ರವೇಶಿಸಿ ಜನವರಿ 30ರಂದೇ ಮತದಾನ ನಡೆಸಲು ಆದೇಶಿಸಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ನಡೆದ ವಿಚಾರಣೆ ವೇಳೆ, ಚುನಾವಣಾಧಿಕಾರಿ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ಅವರು ಮರುಮತದಾನಕ್ಕೆ ಅವಕಾಶ ಕೊಡಬೇಕು ಎಂದು ಕೋರಿದ್ದರು. ಏಕೆಂದರೆ, ಜನವರಿ 30ರ ಮತದಾನದ ನಂತರ, ಎಎಪಿಯ ಮೂವರು ಕಾರ್ಪೊರೇಟರ್‌ಗಳು ಬಿಜೆಪಿ ಸೇರಿದ್ದರು. ಈಗ ಎಎಪಿ- ಕಾಂಗ್ರೆಸ್ ಮೈತ್ರಿಕೂಟಕ್ಕಿಂತ ಬಿಜೆಪಿಯ ಬಲ ಹೆಚ್ಚಾಗಿದೆ. ಮತದಾನವನ್ನು ಅನಗತ್ಯವಾಗಿ ಮುಂದೂಡಿದ್ದರ ಹಿಂದೆಯೂ ಕಾರ್ಪೊರೇಟರ್‌ಗಳನ್ನು ಖರೀದಿಸಿದ ನಂತರ ಮತದಾನ ನಡೆಸೋಣ ಎಂಬ ಸಂಚು ಇದ್ದಂತೆ ಈಗ ಕಾಣಿಸುತ್ತದೆ. 'ಮತಪತ್ರ ವಿರೂಪಗೊಳಿಸಿದ್ದು ಬಿಟ್ಟರೆ ಮತದಾನ ಪ್ರಕ್ರಿಯೆಯಲ್ಲಿ ಬೇರೆ ಯಾವುದೇ ಲೋಪ ಆಗಿಲ್ಲ. ಹಾಗಾಗಿ, ಮರುಮತದಾನ ಅಗತ್ಯ ಇಲ್ಲ' ಎಂಬ ಸುಪ್ರೀಂ ಕೋರ್ಟ್‌ನ ಅಭಿಪ್ರಾಯವು ವಿವೇಕಯುತವಾದುದೇ ಆಗಿದೆ.

ನಗರಪಾಲಿಕೆ ಮೇಯರ್ ಚುನಾವಣೆಯಲ್ಲಿಯೂ ಇಂತಹ ಕುಯುಕ್ತಿ ನಡೆಸುತ್ತಾರೆ ಎಂಬುದನ್ನು ಊಹಿಸುವುದೇ ಕಷ್ಟಕರ. ಸ್ಪಷ್ಟವಾದ ರಾಜಕೀಯ ಪ್ರಜ್ಞೆ ಇರುವ, ಸಾಕ್ಷರತೆ ಪ್ರಮಾಣವೂ ಹೆಚ್ಚು ಇರುವ ಚಂಡೀಗಢದಂತಹ ನಗರದಲ್ಲಿಯೇ ಇಂತಹ ನಡವಳಿಕೆ ಸಾಧ್ಯವಾಗುತ್ತದೆ ಎಂದಾದರೆ ಇತರೆಡೆಗಳಲ್ಲಿಯೂ ಹೀಗೆಯೇ ಮಾಡಬಹುದು. ಸಾರ್ವಜನಿಕ ಅಭಿಪ್ರಾಯ, ಮಾಧ್ಯಮದ ಪರಿಶೀಲನೆ ಅಥವಾ ನ್ಯಾಯಾಲಯದ ಕ್ರಿಯೆಯ ಬಗ್ಗೆ ತಮಗೆ ಭೀತಿ ಇಲ್ಲ ಎಂಬಂತೆ ಚುನಾವಣಾಧಿಕಾರಿ ವರ್ತಿಸಿದ್ದು ಆಶ್ಚರ್ಯ ಹುಟ್ಟಿಸುತ್ತದೆ. ಬೇರೆ ಕಡೆಗಳಲ್ಲಿ, ಬೇರೆ ಚುನಾವಣೆಗಳಲ್ಲಿ ದೊಡ್ಡ ಮಟ್ಟದಲ್ಲಿಯೇ ಇಂತಹ ವಂಚನೆ ನಡೆದಿರಬಹುದು ಎಂಬುದಕ್ಕೆ ಚಂಡೀಗಢದ ವಿದ್ಯಮಾನವು ಪುಷ್ಟಿ ಕೊಡುತ್ತದೆ. ದೆಹಲಿ ಮೇಯರ್ ಚುನಾವಣೆಯನ್ನು ಕೂಡ ತಿರುಚುವ ಪ್ರಯತ್ನ ಈ ಹಿಂದೆ ನಡೆದಿತ್ತು. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷವು ಈ ರೀತಿಯ ಚುನಾವಣಾ ಅಕ್ರಮವನ್ನು ಬೆಂಬಲಿಸುವುದಾಗಲೀ ಪ್ರೋತ್ಸಾಹಿಸುವುದಾಗಲೀ ಮಾಡಕೂಡದು. ಚಂಡೀಗಢದಲ್ಲಿ ನಡೆದಂತಹ ಘಟನೆಯು ಇನ್ನು ಮುಂದಿನ ಯಾವುದೇ ಚುನಾವಣೆಯಲ್ಲಿ ಮರುಕಳಿಸಬಾರದು ಎಂಬ ಧ್ವನಿಯು ಸುಪ್ರೀಂ ಕೋರ್ಟ್‌ನ ಆದೇಶದಲ್ಲಿ ಸ್ಪಷ್ಟವಾಗಿದೆ. ತಪ್ಪು ಎಸಗಿದ ಚುನಾವಣಾಧಿಕಾರಿಗೆ ಶಿಕ್ಷೆಯಾಗಬೇಕು ಎಂದೂ ಕೋರ್ಟ್ ಹೇಳಿದೆ. ಚುನಾವಣೆಗಳು ನ್ಯಾಯಯುತವಾಗಿ, ಪಾರದರ್ಶಕವಾಗಿ ನಡೆಯಬೇಕು. ದೇಶದಲ್ಲಿ ಪ್ರಜಾಪ್ರಭುತ್ವದ ಉಳಿವಿಗೆ ಇದು ಅಗತ್ಯ ಎಂಬುದನ್ನು ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳು ಅರ್ಥ ಮಾಡಿಕೊಳ್ಳಬೇಕು.

ದಿನದ ಟ್ವೀಟ್

ಆರಂಭಿಸಿದ್ದು ಯಾರು?



ಆಶ್ಚರ್ಯವಾಗುತ್ತಿದೆ, 'ಬುಲ್ಡೋಜರ್ ರಾಜಕೀಯ'ವನ್ನು ಆರಂಭಿಸಿದವರು ಯಾರು?!

(ಭದ್ರತಾ ಪಡೆಗಳಿಗೆ ಹಾನಿಯುಂಟು ಮಾಡುವ ಸಂಭವ ಇರುವುದರಿಂದ, ಜೆಸಿಬಿಯಂತಹ ಬೃಹತ್ ಯಂತ್ರಗಳನ್ನು ಪ್ರತಿಭಟನಕಾರರಿಗೆ ನೀಡಬಾರದೆಂದು ಹರಿಯಾಣ ಪೊಲೀಸರು ಅವುಗಳ ಮಾಲೀಕರಿಗೆ ಎಚ್ಚರಿಕೆ ನೀಡಿರುವುದಕ್ಕೆ ಪ್ರತಿಕ್ರಿಯೆ)

ಅರವಿಂದ್ ಗುಣಶೇಖರ್, ಪತ್ರಕರ್ತ

ಕಿಡಿನುಡಿ



ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಉತ್ತಮವಾದುದನ್ನು ನಿರೀಕ್ಷಿಸಿದ್ದೆ. ಭಾರತವು ಆಗ ಈಗ ಮತ್ತು ಯಾವಾಗಲೂ ಪ್ರತ್ಯೇಕಿಸಲಾಗದ ರಾಷ್ಟ್ರ. ಇಲ್ಲಿನ ನಾಗರಿಕರಿಗೆ ದೇಶದ ಯಾವುದೇ ಭಾಗದಲ್ಲಿ ನೆಲಸುವ ಮತ್ತು ಉದ್ಯೋಗ ಹೊಂದುವ ಹಕ್ಕನ್ನು ಭಾರತದ ಪವಿತ್ರ ಸಂವಿಧಾನ ನೀಡಿದೆ. ಹಿಂದಿ ಭಾಷಿಕರು ಭಾರತದ ಯಾವುದೇ ಭಾಗದಲ್ಲಿ ನೆಲಸುವ ಮತ್ತು ಉದ್ಯೋಗ ಹೊಂದುವ ಹಕ್ಕನ್ನು ಹೊಂದಿದ್ದಾರೆ. ಹೀಗಿರುವಾಗ, ಇಂತಹ ಅಂಧಾಭಿಮಾನವನ್ನು ಕೇಂದ್ರ ಸರ್ಕಾರವು ಆರಂಭದಲ್ಲೇ ಚಿವುಟಿ ಹಾಕಬೇಕು. ಹಿಂದಿ, ತಮಿಳು, ಕನ್ನಡ ಎಲ್ಲವೂ ಸಮಾನ ಗೌರವಾರ್ಹ ಭಾರತೀಯ ಭಾಷೆಗಳು.

(ಬಹುರಾಷ್ಟ್ರೀಯ ಕಂಪನಿಗಳು ತಮ್ಮಲ್ಲಿನ ಕನ್ನಡಿಗ ಉದ್ಯೋಗಿಗಳ ಮಾಹಿತಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸದಿದ್ದರೆ ಕ್ರಮ ಜರುಗಿಸಲಾಗುವುದು ಎಂಬ ಸಚಿವ ಶಿವರಾಜ್ ತಂಗಡಗಿ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಡಾ. ಜೈಸನ್ ಫಿಲಿಪ್, ಮೂತ್ರಶಾಸ್ತ್ರಜ್ಞ

25 ವರ್ಷಗಳ ಹಿಂದೆ

ಸೋಮವಾರ, 22-2-1999

- **ಎಲ್ಲ ಪ್ರಶ್ನೆ ಇತ್ಯರ್ಥಕ್ಕೆ ಭಾರತ-ಪಾಕ್ ಸಮ್ಮತಿ**

ಲಾಹೋರ್, ಫೆ. 21-ಜಮ್ಮು-ಕಾಶ್ಮೀರವೂ ಸೇರಿದಂತೆ ಎಲ್ಲಾ ದ್ವಿಪಕ್ಷೀಯ ಪ್ರಶ್ನೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ನಡೆಸುವುದಾಗಿ ಭಾರತ-ಪಾಕಿಸ್ತಾನ ಒಪ್ಪಂದ ಮಾಡಿಕೊಂಡ ವಲ್ಲದೆ, ಪರಸ್ಪರ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದೇ ಇರಲು ಸಮ್ಮತಿಸಿದವು.

ಭಾರತದ ಪ್ರಧಾನಿ ಎ.ಬಿ.ವಾಜಪೇಯಿ ಅವರ ಚಾರಿತ್ರಿಕ ಬಸ್ ಪ್ರಯಾಣದ ನಂತರ ಅವರು ಪಾಕಿಸ್ತಾನದ ಪ್ರಧಾನಮಂತ್ರಿ ನವಾಜ್ ಷರೀಫ್ ಅವರ ಜತೆ ಇಂದು ನಡೆಸಿದ ಶೃಂಗಸಭೆಯಲ್ಲಿ ಈ ಒಪ್ಪಂದಕ್ಕೆ ಬರಲಾಯಿತು.

- **ವಾಜಪೇಯಿಗೆ ಪಾಕ್ ವಧು!**

ಲಾಹೋರ್, ಫೆ. 21- ಪಾಕಿಸ್ತಾನದ ಕಾದಂಬರಿಗಾರ್ತಿಯೊಬ್ಬರು ಭಾರತದ ಪ್ರಧಾನಿ ಎ.ಬಿ.ವಾಜಪೇಯಿ ಅವರನ್ನು ವಿವಾಹವಾಗಲು ಮುಂದೆ ಬಂದಿದ್ದಾರೆ!

ಆದರೆ ಅದಕ್ಕೆ ಅವರದು ಒಂದೇ ಷರತ್ತು. ವಾಜಪೇಯಿ ಅವರು ಕಾಶ್ಮೀರ ಸಮಸ್ಯೆಯನ್ನು ಪಾಕಿಸ್ತಾನ ಬಯಸುವಂತೆ ಬಗೆಹರಿಸಬೇಕು!

ವಾಜಪೇಯಿ ಅವರು ಕಾಶ್ಮೀರದ ವಿಷಯದಲ್ಲಿ ಮಾತುಕತೆ ಪುನರಾರಂಭಿಸಿರುವುದರಿಂದ ಹಾಗೂ ಪಾಕಿಸ್ತಾನದ ಜತೆ ಬಾಂಧವ್ಯ ವೃದ್ಧಿಗೆ ಪ್ರಯತ್ನ ನಡೆಸಿರುವುದರಿಂದ ಅವರ ಬಗ್ಗೆ ತಮಗೆ ಮೆಚ್ಚುಗೆ ಇದೆ ಎಂದು 37 ವರ್ಷದ ಅತಿಯಾ ಶಂಶದ್ ಹೇಳಿರುವುದಾಗಿ ಉರ್ದು ಪತ್ರಿಕೆ 'ಜಂಗ್' ವರದಿ ಮಾಡಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 22-2-1974

- **ವೈದ್ಯರುಗಳಿಲ್ಲದ ಆಸ್ಪತ್ರೆಗೆ ಕಾಂಟ್ರ್ಯಾಕ್ಟ್ ಮೇಲೆ ನೇಮಕ ಪರಿಶೀಲನೆಯಲ್ಲಿ**

ಬೆಂಗಳೂರು, ಫೆ. 21- ವೈದ್ಯರುಗಳಿಲ್ಲದ ಆಸ್ಪತ್ರೆಗಳಿಗೆ ಕಾಂಟ್ರ್ಯಾಕ್ಟ್ ಆಧಾರದ ಮೇಲೆ ವೈದ್ಯರುಗಳನ್ನು ನೇಮಿಸಲು ಸರ್ಕಾರ ಯೋಚಿಸುತ್ತಿದೆ.

ಈಗ ರಾಜ್ಯದಲ್ಲಿನ 400ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲದಿರುವುದರಿಂದ ಜೂನಿಯರ್ ವೈದ್ಯರುಗಳನ್ನು ಕಾಂಟ್ರ್ಯಾಕ್ಟ್ ಆಧಾರದ ಮೇಲೆ ನೇಮಿಸಲಾಗುವುದು ಎಂದು ಆರೋಗ್ಯ ಸಚಿವ ಎಚ್.ಸಿದ್ಧವೀರಪ್ಪ ಅವರು ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

- **ಮೊರಾದಾಬಾದ್ ಬಳಿ ರೈಲುಗಳ ಡಿಕ್ಕಿ: 41 ಸಾವು**

ನವದೆಹಲಿ, ಫೆ. 21- ಮೊರಾದಾಬಾದಿಗೆ ನಾಲ್ಕು ಕಿಲೊ ಮೀಟರ್ ದೂರದ ಕಠಗಡದ ಬಳಿ ನಿಂತಿದ್ದ ಗೂಡ್ಸ್ ರೈಲಿಗೆ ಡೆಹ್ರಾಡೂನ್-ವಾರಾಣಸಿ ಜನತಾ ಎಕ್ಸ್‌ಪ್ರೆಸ್ ಬುಧವಾರ ಮಧ್ಯರಾತ್ರಿ ಡಿಕ್ಕಿ ಹೊಡೆದು ನಲವತ್ತೊಂದು ಜನ ಸತ್ತರು. ಅರವತ್ತಮೂರು ಜನ ಗಾಯಗೊಂಡಿದ್ದಾರೆ.

ನಾವು ನೀರು ಹಾಕಿ ಬೆಳೆಸುವ ಬಿತ್ತುಗಳು ನಮ್ಮನ್ನು ಬಲಪಡಿಸುವಂತಿರಲಿ

ಟೋಪಿ ಬದಲಿಸುವ ಈ ಆಟ



ವಿಶ್ಲೇಷಣೆ

ಸಬಿತಾ ಬನ್ನಾಡಿ

'ಎಂಟು ತಿಂಗಳ ಕೆಳಗೆ ಇಲ್ಲಿ ಈ ಫೋಟೊಗಳು ಇರಲಿಲ್ಲ. ಅದಕ್ಕೆ ಬದಲಾಗಿ ಜಾರ್ಜ್ ರಾಜ ರಾಣಿಯರ ಪಟಗಳಿದ್ದವು. ಆಗಸ್ಟ್ 14ನೇ ತಾರೀಕು ಸಾಯಂಕಾಲ ಅವುಗಳನ್ನು ತೆಗೆದು ಬೇರೆ ಕಡೆಗೆ ಸಾಗಿಸಿ ಈ ಪಟಗಳನ್ನು ಇಲ್ಲಿ ಹಚ್ಚಬೇಕಾಯಿತು... ಬ್ರಿಟಿಷ್ ಸರ್ಕಾರ ಇರುವವರೆಗೆ ಚಕ್ರವರ್ತಿಗಳ ಪಟ ಹಾಕುತ್ತಿದ್ದೆ, ಈಗ ಅವರೇ ನೆಹರೂರವರಿಗೆ ಅಧಿಕಾರ ಕೊಟ್ಟು ಹೊರಟುಹೋದರು. ಸರಿ, ನಾವೂ ಗಾಂಧಿ, ನೆಹರೂ ಪಟ ಹಾಕಿದೆವು. ಅಂದೇ ನಾಲ್ಕಾಣೆ ಕೊಟ್ಟು ನಾನು ಕಾಂಗ್ರೆಸ್ ಸದಸ್ಯನಾದದ್ದೂ ಆಯಿತು. ಖಾದಿ ಬಟ್ಟೆ ಹಾಕಿದ್ದೂ ಆಯಿತು' ಎಂದು ಶ್ರೀಮಂತ ಬಂಡವಾಳಿಗನೊಬ್ಬ ಸ್ವಾತಂತ್ರ್ಯ ಬಂದ ಕಾಲದಲ್ಲಿ ಹೇಳುವ, ಮುಂದೆ ಇಂತಹವರೇ ರಾಜಕೀಯದಲ್ಲಿ ಮುನ್ನೆಲೆಗೆ ಬರುವ ಈ ಮೇಲಿನ ಮಾತುಗಳು ಬಸವರಾಜ ಕಟ್ಟೀಮನಿ ಅವರ 'ಜ್ವಾಲಾಮುಖಿಯ ಮೇಲೆ' (1951) ಕಾದಂಬರಿಯಲ್ಲಿ ಬರುತ್ತವೆ.

ಹೋರಾಡಿದವರು ಹಿನ್ನೆಲೆಯಲ್ಲಿ ಉಳಿದು, ನಡುವೆ ಟೋಪಿ ಬದಲಿಸಿದವರು ಮುನ್ನೆಲೆಗೆ ಬರುವ ಸಂಗತಿಯೆಡೆಗೆ ಬೆಳಕು ಚೆಲ್ಲುವ ಈ ಕತೆ ನಮಗೆ ಈಗಲೂ ಚಿರಪರಿಚಿತ. ಸಾಮಾಜಿಕ ಚರಿತ್ರೆಯಂತೆ ನಿರೂಪಿತವಾದ ಕಟ್ಟೀಮನಿಯವರ ಕೃತಿಗಳು ಇನ್ನೂ ಹಲವು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತವೆ. ಅವರ 'ಅಜ್ಞಾತವಾಸಿ' ಕತೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರನ ಹೆಂಡತಿ ಬ್ರಿಟಿಷ್ ಸರ್ಕಾರದ ಪೊಲೀಸರಿಂದ ನಿರಂತರವಾಗಿ ಹಿಂಸೆ, ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ. ಸಾವು ಬಂದರೂ ಆಕೆ ತನ್ನ ಗಂಡನ ಕುರಿತು ಯಾವುದೇ ಸುಳಿವು ಬಿಟ್ಟುಕೊಡುವುದಿಲ್ಲ. ದುರಂತವೇನೆಂದರೆ, ಈ ಪೊಲೀಸರು ಬ್ರಿಟಿಷ್ ಸರ್ಕಾರದಲ್ಲಿದ್ದ ಭಾರತೀಯರೇ ಆಗಿದ್ದರು. ಕನ್ನಡದ ಹೆಣ್ಣಿನ ಮೇಲೆ ಆಕ್ರಮಣ ಮಾಡಿದ ಕನ್ನಡಿಗರೇ ಆಗಿದ್ದರು. ಹಾಗಾದರೆ, ಇವರು ಸ್ವಾತಂತ್ರ್ಯಾನಂತರ ಏನಾದರು? ಭಾರತೀಯ ಸರ್ಕಾರದಲ್ಲೂ ಇವರೇ ಮುಂದುವರಿದರೇ ಅಥವಾ ಇವರಂತೆ ಇರುವವರು ಮುಂದುವರಿದರೇ? ಇದು ಬಹಳ ಮಹತ್ವದ ಪ್ರಶ್ನೆ. ಯಾಕೆಂದರೆ ಇವರು ಬದಲಾಗದೆ ಇನ್ನಾವ ಬದಲಾವಣೆ ಸಾಧ್ಯ?

ಅದುವರೆಗೂ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರತಿಪಾದಿಸಿದ ಸುಧಾರಣಾ ಸಿದ್ಧಾಂತವು ಮುಂದೆ ಸರ್ಕಾರಗಳ ನೀತಿಯಾಗಿ ಚಲಾವಣೆಗೆ ಬಂದಿತೇ? ಸುಧಾರಣೆಯ ಅಂಶಗಳನ್ನು ಜನಮನದೊಳಗೆ ಅಂತರ್ಗತಗೊಳಿಸಲು ಕಾರ್ಯಪಡೆ ಸಿದ್ಧವಾಯಿತೇ? ಅದು ನಾವು ಅನುಸರಿಸಲೇಬೇಕಾದ ಜೀವನಕ್ರಮ ಎಂಬ ನಂಬಿಕೆ ಪಸರಿಸಲು ನಮ್ಮ ಶಿಕ್ಷಣ ಕ್ರಮಕ್ಕೆ ಸಾಧ್ಯವಾಯಿತೇ? ಕೊನೆಯ ಪಕ್ಷ ಮನಃಸ್ಥಿತಿ ಬದಲಾಯಿತೇ? ಅಥವಾ ಬರೀ ಕಾನೂನಿನ ಭೀತಿಯಷ್ಟೇ ಆಗಿ, 'ಒಳಗೆ ಕುದಿ ಹೊರಗೆ ವಿಧಿ' ಎಂಬಂತೆ ಅದೂ ಟೋಪಿ ಧರಿಸಿತೇ? ಹಲವರು ಈ ಕುದಿ ಹೊರಬರುವುದಕ್ಕೆ ಸೂಕ್ತ ಸಮಯವನ್ನು ಕಾಯುತ್ತಿದ್ದಾರೆ ಎಂಬುದು ಇಂದಿನ ವಾಸ್ತವವೂ ಆಗಿದೆಯಲ್ಲವೇ?

ಇಷ್ಟಾಗಿಯೂ ಸಂವಿಧಾನದ ಕಾರಣದಿಂದ ಮತ್ತು ಇವೆಲ್ಲದರ ನಡುವೆಯೂ ಕಲ್ಯಾಣ ರಾಜ್ಯದ ಕಲ್ಪನೆಯು ಸಂಪೂರ್ಣ ಅಳಿಯದ ಕಾರಣದಿಂದ ಸಾಮಾನ್ಯ ಭಾರತೀಯರ ಸ್ಥಿತಿಯಲ್ಲಿ ಹಲವು ರೀತಿಯ ಪಲ್ಲಟಗಳು ಕಾಣಿಸಿಕೊಂಡವು. ಸರ್ಕಾರಿ ಶಾಲೆಗಳಲ್ಲಿ ಪಡೆದುಕೊಂಡ ಸಮಾನ ಶಿಕ್ಷಣ, ಚಿಕ್ಕಪುಟ್ಟ ಉದ್ಯೋಗಗಳು, ಕಾನೂನಿನ ಮೂಲಕವಾದರೂ ಸಿಕ್ಕಿದ ಸಣ್ಣ ಮಟ್ಟದ ಸಮಾನತೆ, ಆಸ್ತಿ ಹಂಚಿಕೆ, ಹುಟ್ಟೂರಿನಿಂದ ಆಚೆಗೂ ಕಟ್ಟಿಕೊಳ್ಳಬಹುದಾದ ಬದುಕಿನ ಸಾಧ್ಯತೆಗಳು, ಶಿಕ್ಷಣ ವಲಯ, ಬ್ಯಾಂಕ್‌ನಂತಹ ಕ್ಷೇತ್ರಗಳಲ್ಲಿ ತೆರೆದುಕೊಂಡ ಸರ್ಕಾರಿ ಉದ್ಯೋಗಗಳು, ಆರೋಗ್ಯ ಕ್ಷೇತ್ರದಲ್ಲಾದ ಕ್ರಾಂತಿಕಾರಕ ಬದಲಾವಣೆಗಳು, ಶ್ರೇಣೀಕೃತ ಸಮಾಜದಲ್ಲಿ ಕಾಣಿಸಿಕೊಂಡ ಚಲನೆಗಳು ಹೀಗೆ ಹತ್ತು ಹಲವು ಬದಲಾವಣೆಗಳಿಗೆ ತೆರೆದುಕೊಂಡ ನಮ್ಮ ಬದುಕುಗಳು ಅವುಗಳೆಡೆಗೆ ಒಂದು ಮಟ್ಟದ ಋಣಭಾರವನ್ನು ಹೊಂದಿವೆ.

ಒಂದೆಡೆ ನಂಬಿಕೆಗಾಗಿ, ಸ್ವಾಭಿಮಾನಕ್ಕಾಗಿ ಛಲ ಬಿಡದೆ ಹೋರಾಡುವ, ಜೀವ ಕೊಡುವ ಜನರು ಇರುವಂತೆಯೇ ಇನ್ನೊಂದೆಡೆ, ತಮ್ಮ ಹಿತಾಸಕ್ತಿಗಾಗಿ ತಮ್ಮದೇ ಶತ್ರುಗಳೊಂದಿಗೆ ಕೈಜೋಡಿಸುವ, ನಿರ್ಲಜ್ಜೆಯಿಂದ ತಮ್ಮ ನಡೆಗಳನ್ನು ಸಮರ್ಥಿಸಿಕೊಳ್ಳುವ ಜನರು ನಿರಂತರವಾಗಿ ಕಾಣಿಸುತ್ತಾರೆ. ಈಗಿಲ್ಲಿ ಯಾರನ್ನು ಬುದ್ಧಿವಂತರೆಂದು ಭಾವಿಸಬೇಕು? ಯಾಕೆಂದರೆ, ಯಾರು ಪ್ರಾಮಾಣಿಕವಾಗಿ ತಮ್ಮ ಬದುಕನ್ನು ಜನರ ಸೇವೆಗಾಗಿ ಮುಡಿಪಾಗಿಡುತ್ತಾರೋ ಅವರನ್ನು ಜನ ನೆನಪಿಟ್ಟುಕೊಳ್ಳುತ್ತಾರೆಯೇ? ಯಾವಾಗ ಒಂದು ಸಮಾಜದಲ್ಲಿ ಜನರೇ ಭ್ರಷ್ಟರಾಗತೊಡಗುತ್ತಾರೋ ಆಗ ಅಲ್ಲಿ ಯಾವ ಭರವಸೆಯೂ ಉಳಿಯುವುದಿಲ್ಲ.

ಕರ್ನಾಟಕದ ಪ್ರಾಮಾಣಿಕ ರಾಜಕಾರಣಿ ಶಾಂತವೇರಿ ಗೋಪಾಲಗೌಡರ ಪರಿಚಯ ಅವರದೇ ಶಿವಮೊಗ್ಗ ಜಿಲ್ಲೆಯ ಯುವಜನರಲ್ಲಿ ಹೆಚ್ಚಿನವರಿಗೆ ಇಲ್ಲ. ಕುದ್ಮುಲ್ ರಂಗರಾಯರು ಯಾರಿಗಾಗಿ ಹೋರಾಟ ಮಾಡಿದರು, ಯಾವುದರ ವಿರುದ್ಧ ಹೋರಾಟ ಮಾಡಿದರು ಎಂಬುದು ಮಂಗಳೂರಿನ ಫಲಾನುಭವಿಗಳಿಗೆ ನೆನಪಿರುವುದಿಲ್ಲ. ಬಹುಶಃ ಇದು ಎಲ್ಲ ಜಿಲ್ಲೆಗಳ ಕಥೆ ಇರಬೇಕು. ಆದರೆ, ಇಂತಹ ಒಳಿತಿನ ಕತೆಗಳು ಎಳೆಯರ ಮನದೊಳಗೆ ಬೆಳೆಯಬೇಕಿರುವುದು ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ತೀರಾ ಅವಶ್ಯವಾದುದು. ಮನುಷ್ಯನ ಏಳಿಗೆಯನ್ನು ಬರೀ ವಸ್ತುಮೂಲದಿಂದ ಗುರುತಿಸುವ ಚಿಂತನಾಕ್ರಮವನ್ನು ಪುನರ್‌ಪರಿಶೀಲಿಸುವ ಕಾಲ ಈಗ ಬಂದಿರುವಂತಿದೆ. ಇಂದು ಮನುಷ್ಯರ ಮನಸ್ಸುಗಳನ್ನು ಕೆರಳಿಸದೆ ಏನನ್ನೂ ಪಡೆಯಲಾಗದು ಎಂಬ ಹಂತಕ್ಕೆ ಬಂದಿರುವಾಗ, ಇದಕ್ಕಾಗಿ ಹೆಣೆಯುವ ಆಟಗಳು ಮನುಷ್ಯರೊಳಗೆ ರಾಕ್ಷಸರನ್ನು ಪ್ರತಿಷ್ಠಾಪಿಸಲು ಸ್ಪರ್ಧೆಗಿಳಿದಂತೆ ಕಾಣುತ್ತಿವೆ. ಆದರೆ ಇದಕ್ಕೂ ಒಂದು ಕೊನೆ ಎನ್ನುವುದು ಇರಲೇಬೇಕಲ್ಲವೇ?



ಕೆರಳಿಸುವಿಕೆಯ ಹಿಂದೆ ಆಳುವಿಕೆಯ ಕೇಡು ಇದ್ದೇ ಇರುತ್ತದೆ. 'ವೀ ಫಾರ್ ವೆಂಡೇಟಾ' ಎನ್ನುವ ಕಾಮಿಕ್ ಕಾದಂಬರಿಯನ್ನು ಆಧಾರವಾಗಿಸಿಕೊಂಡ ಇಂಗ್ಲೆಂಡಿನ ಇದೇ ಹೆಸರಿನ ಸಿನಿಮಾ ಹೇಳ ಹೊರಡುವುದೂ ಇದನ್ನೇ. ಕಾಲ್ಪನಿಕ ಭವಿಷ್ಯದಲ್ಲಿ ಸರ್ವಾಧಿಕಾರಿಯು ಆಳುವಂತಾದಲ್ಲಿ ಏನಾಗಬಹುದು ಎನ್ನುವುದನ್ನು ಹೇಳುತ್ತಾ, ಆ ಸರ್ವಾಧಿಕಾರಿಗೆ ಜೊತೆ ನೀಡುವ ಭಟ್ಟಂಗಿ ಮಾಧ್ಯಮಗಳು, ಅಧಿಕಾರಿಗಳನ್ನು ಬಳಸಿಕೊಳ್ಳುತ್ತಾ, ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಆತ ಹೇಗೆ ಕಲ್ಪಿತ ಶತ್ರುಗಳನ್ನು ಹುಟ್ಟುಹಾಕಿಕೊಳ್ಳುತ್ತಾನೆ ಮತ್ತು ಇವರಿಂದಾಗಿ ದೇವರುಗಳಿಗೆ ಎಂತಹ ಆತಂಕ ಎದುರಾಗುತ್ತದೆ ಎಂಬ ಭೀತಿಯನ್ನು ಜನರೊಳಗೆ ಹುಟ್ಟಿಸಿ, ತನ್ನೆಲ್ಲ ಕೃತ್ಯಗಳಿಗೆ ಜನರ ಒಪ್ಪಿಗೆಯನ್ನು ಹೇಗೆ ಉತ್ಪಾದಿಸುತ್ತಾನೆ ಎನ್ನುವುದನ್ನೂ ಹೇಳುತ್ತದೆ. ಆದರೆ ಅಂತಹ ಕಠಿಣ ಕಾಲದಲ್ಲೂ ಪ್ರತಿರೋಧವೊಂದು ಹುಟ್ಟಿಯೇ ಹುಟ್ಟುತ್ತದೆ ಎನ್ನುವುದನ್ನೂ ಈ ಕತೆ ಹೇಳುತ್ತದೆ.

ಮುಖವಾಡವನ್ನು ಧರಿಸಿ ಊಹಾತೀತವಾಗಿ ಭ್ರಷ್ಟರನ್ನು ಚೆಂಡಾಡುವ, ವಿ ಅಕ್ಷರದಲ್ಲಿ ಗುರುತಿಸಿಕೊಳ್ಳುವ ನಾಯಕನನ್ನು ಉಗ್ರಗಾಮಿ ಎಂದು ಘೋಷಿಸಿ ಬಲಿಹಾಕಲು ಪ್ರಭುತ್ವ ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಅಷ್ಟರಲ್ಲಾಗಲೇ ಆತ ಜನರ ಮನಸ್ಸನ್ನು ಪ್ರಭಾವಿಸಿ ಪ್ರತಿರೋಧಕ್ಕೆ ಸಿದ್ಧಪಡಿಸಿರುತ್ತಾನೆ. ಆತ ಧರಿಸುವ ವಿಶಿಷ್ಟ ಮುಖವಾಡವನ್ನು ಜನರು ತಾವಾಗಿಯೇ ಬಯಸಿ ಧರಿಸಿ ಮೆರವಣಿಗೆ ಬರುತ್ತಾರೆ. ಬರೀ ಸಿನಿಮಾದಲ್ಲಷ್ಟೇ ಅಲ್ಲ, ಯುರೋಪಿನ ಹಲವು ದೇಶಗಳಲ್ಲೂ ಈ ಮುಖವಾಡವು ಪ್ರತಿರೋಧದ ಸಂಕೇತವಾಗಿ ಬಳಕೆಯಾಗತೊಡಗಿದ್ದೊಂದು ವಿಶೇಷ.

ಬೌದ್ಧ ಧರ್ಮವು ಸಂಪತ್ತು, ಪ್ರಸಿದ್ಧಿ, ಅಧಿಕಾರ ಮತ್ತು ಕಾಮವು ಕೊನೆಯಿಲ್ಲದ ಮಹಾಬಯಕೆಗಳಾಗಿದ್ದು, ಇವುಗಳೇ ನಮ್ಮ ಸಂತೋಷಕ್ಕೆ ಅಡ್ಡಿ ಮಾಡುವ ಶತ್ರುಗಳು ಎನ್ನುತ್ತದೆ (ಆದರೆ ನಾವಾದರೋ ಇವುಗಳನ್ನೇ ನಮ್ಮ ಸಂತೋಷದ ಕೀಲಿಕೈಗಳು ಎಂದು ಭಾವಿಸಿದ್ದೇವೆ). ಇವು ನಮ್ಮ ಸಂತೋಷಕ್ಕೆ ಅಡ್ಡಿ ಮಾಡದಂತಿರಲು ನಾವು ನಮ್ಮ ಮನಸ್ಸಿನ ತಳದಲ್ಲಿರುವ ಒಳ್ಳೆಯ ಬಿತ್ತುಗಳಾದ ಆತ್ಮವಿಶ್ವಾಸ, ನಂಬಿಕೆ, ಶ್ರದ್ಧೆ, ಮನಃಪೂರ್ವಕತೆ, ಏಕಾಗ್ರತೆ, ಒಳನೋಟಗಳಿಗೆ ನೀರೆರೆದು ಮೇಲಕ್ಕೆ ತಂದು, ಕೆಟ್ಟ ಬಿತ್ತುಗಳಾದ ಕೋಪ, ಹಿಂಸೆ, ದ್ವೇಷದಂತಹವನ್ನು ತಳಕ್ಕೆ ಕಳಿಸಿದರೆ, ಸಂತೋಷದ ತಳಹದಿ ಸಿದ್ಧವಾಗುತ್ತದೆ. ಹಾಗೆಯೇ ದೇವರನ್ನು ಕಾಣುವುದೆಂದರೆ, ತನ್ನೊಳಗನ್ನು ನೋಡಿಕೊಳ್ಳುವುದು, ಮನುಷ್ಯರೊಳಗೆ ಅರಸುವುದು ಎಂದು ಬುದ್ಧ ಹೇಳುತ್ತಾನೆ. ಬಹುಶಃ ಇದನ್ನು ಅರಿತ ದಿನ ಟೋಪಿ ಬದಲಿಸುವ ಆಯಾಸವೂ ಕೊನೆಗೊಳ್ಳುತ್ತದೆ.

ಚುರುಮುರಿ



ಸ್ಕೂಲ್ ಸಿಲೆಬಸ್

• ಮಣ್ಣೆ ರಾಜು

'ಶಾಲೆ ಮಕ್ಕಳ ಗಲಾಟೆಯಿಂದ ನಮಗೆ ತೊಂದರೆ ಆಗುತ್ತೆ, ಶಾಲೆಯಲ್ಲಿ ನಿಶ್ಶಬ್ದ ಕಾಪಾಡಿಕೊಳ್ಳಿ ಅಂತ ನೆರೆಹೊರೆ ನಿವಾಸಿಗಳು ಕಂಪ್ಲೇಂಟ್ ಮಾಡಿದ್ದಾರೆ. ಶಾಲೆಯಲ್ಲಿ ಕನ್ನಡ ಕಡೆಗಣಿಸ್ತೀರಿ ಅಂತ ಗುಂಪೊಂದು ಬಂದು ಶಾಲೆಯ ಇಂಗ್ಲಿಷ್ ಬೋರ್ಡ್ ಕಿತ್ತುಕೊಂಡು ಹೋಯ್ತು...' ಚೇರ್ಮನ್‌ಗೆ ವರದಿ ನೀಡಿದರು ಶಾಲೆಯ ಹೆಡ್ ಮಿಸ್.

'ದಿನಾ ಒಂದೊಂದು ರಗಳೆ ಆಗ್ತಿದೆಯಲ್ರೀ' ಚೇರ್ಮನ್ ಬೇಸರಗೊಂಡರು.

'ಮಕ್ಕಳು ಗಲಾಟೆ ಮಾಡಿದರೆ, ಹೋಂವರ್ಕ್ ಮಾಡದಿದ್ದರೆ ಟೀಚರ್‌ಗಳು ಬೈಯಬಾರದು, ಬೆಂಚ್ ಮೇಲೆ ನಿಲ್ಲಿಸಿ ಅವಮಾನ ಮಾಡಬಾರದು ಎಂದು ಕೆಲವು ಪೇರೆಂಟ್ಸ್ ತಾಕೀತು ಮಾಡಿದ್ದಾರೆ'.

'ಮಕ್ಕಳು ಏನೇ ಮಾಡಿದ್ರೂ ಟೀಚರ್‌ಗಳು ತೆಪ್ಪಗಿರಿ, ಇಲ್ಲಾಂದ್ರೆ ಶಾಲೆ ನಡೆಸಲಾಗೋಲ್ಲ'.

'ಟೀಚರ್ ಮಾಡಿದ ಜಾತಿ ಅವಹೇಳನ ಪ್ರಕರಣ ಗಂಭೀರವಾಗಿದೆಯಂತೆ. ಶಾಲೆಯ ಬಂದೋಬಸ್ತಿಗೆ ಪೊಲೀಸರು ಬರ್ತಾರೆ ಅಂತ ಇನ್‌ಸ್ಪೆಕ್ಟರ್ ಫೋನ್ ಮಾಡಿದ್ರು ಸಾರ್'.

'ಪೊಲೀಸರ ಕಾವಲಿನಲ್ಲಿ ಶಾಲೆ ನಡೆಸಲು ಆಗುತ್ತೇನ್ರೀ? ಪೊಲೀಸರು ಲಾಠಿ ಹಿಡಿದು ನಿಂತರೆ ಮಕ್ಕಳು ಶಾಲೆಗೆ ಬರಲು ಹೆದರುವುದಿಲ್ಲವೇನ್ರೀ?'

'ಮಾನವರೆಲ್ಲಾ ಒಂದೇ, ಮಾನವ ಧರ್ಮ ಒಂದೇ ಎಂದು ಆ ಟೀಚರ್ ಮಹನೀಯರ ನೀತಿ ಪಾಠ ಹೇಳಿದ್ದರು ಸಾರ್'.

'ಆ ಮಹನೀಯ ಯಾವ ಜಾತಿಯಲ್ಲಿ ಹುಟ್ಟಿದ್ದರು, ಅವರ ಆದರ್ಶಗಳನ್ನು ಉಳಿದ ಜಾತಿಯವರು ಸಹಿಸಿಕೊಳ್ತಾರಾ ಅನ್ನುವ ತಿಳಿವಳಿಕೆ ಟೀಚರ್‌ಗೆ ಇರಬೇಕಾಗಿತ್ತು'.

'ಇನ್ಮೇಲೆ ಶಾಲೆಯಲ್ಲಿ ನೀತಿ, ಆದರ್ಶದ ಬೋಧನೆ ಮಾಡಬೇಡಿ ಅಂತ ಟೀಚರ್‌ಗಳಿಗೆ ಸೂಚನೆ ನೀಡಿದ್ದೇನೆ. ಮಕ್ಕಳಿಗೆ ಒಳ್ಳೆಯ ನೀತಿ, ನಡವಳಿಕೆ ಕಲಿಸಬೇಕೆನಿಸಿದರೆ ಪೋಷಕರು ಮನೆಯಲ್ಲಿ ಕಲಿಸಿಕೊಳ್ಳಲಿ'.

'ಹೌದು, ನಮಗೆ ಅದರ ಉಸಾಬರಿ ಬೇಡ. ದೇವರು, ಜಾತಿ, ಧರ್ಮದಂತಹ ಸೆನ್ಸಿಟಿವ್ ವಿಚಾರಗಳಿಲ್ಲದ ಸ್ಕೂಲ್ ಸಿಲೆಬಸ್ ಸಿದ್ಧ ಮಾಡಿದ್ದೇನೆ, ಇದನ್ನು ಅಳವಡಿಸಿಕೊಳ್ಳಿ' ಎಂದು ಚೇರ್ಮನ್ ಹೇಳಿದರು.

ಸಂಗತ

ನವಪೀಳಿಗೆ ಮತ್ತು ನೈಜ ಜಗತ್ತು

ತಂತ್ರಜ್ಞಾನ ನಿರ್ಮಿತ ಜಗತ್ತಿನ ಮೇಲಿನ ಅತಿಯಾದ ಅವಲಂಬನೆಯಿಂದ ಮಕ್ಕಳು ಸಾಮಾಜಿಕ ಸಂವಹನದಿಂದ ದೂರವಾಗುತ್ತಿರುವುದು ಹಲವಾರು ಸಮಸ್ಯೆಗಳನ್ನು ಸೃಷ್ಟಿಸಿದೆ

• ಶಿವಲಿಂಗಸ್ವಾಮಿ ಎಚ್.ಕೆ.

ನಮ್ಮ ಕಣ್ಮುಂದೆ ಇರುವ ನವಪೀಳಿಗೆಯನ್ನು ಜೆನ್ ಝಡ್ (Gen Z) ಎಂದು ಕರೆಯುತ್ತಾರೆ. ಈ ಮಕ್ಕಳು 1990ರಿಂದ 2010ರ ನಡುವೆ ಹುಟ್ಟಿದವರಾಗಿರುತ್ತಾರೆ. ಇವರೆಲ್ಲರ ವೈಶಿಷ್ಟ್ಯ ಏನೆಂದರೆ, ಬಡವ ಬಲ್ಲಿದ ಎನ್ನದೆ ಇವರೆಲ್ಲರನ್ನೂ ಸುತ್ತುವರಿದಿರುವುದು ಸಾಮಾಜಿಕ ಜಾಲತಾಣಗಳು, ಅಭೂತಪೂರ್ವ ತಂತ್ರಜ್ಞಾನ ಮತ್ತು ಅಂಗೈಯಲ್ಲಿ ಸುಲಭವಾಗಿ ದೊರೆಯುವ ಅಂತರ್ಜಾಲ. ಇವುಗಳ ಕಾರಣದಿಂದ ಈ ಮಕ್ಕಳು ನೈಜ ಜಗತ್ತಿಗೆ ಸಂಪೂರ್ಣ ಪರಕೀಯರಾಗಿ ತಮ್ಮದೇ ವರ್ಚುವಲ್ (ವಾಸ್ತವೋಪಮ) ಜಗತ್ತನ್ನು ತಮ್ಮ ಮೊಬೈಲುಗಳಲ್ಲಿ ಕಟ್ಟಿಕೊಳ್ಳುತ್ತಾರೆ. ಆ ಜಗತ್ತಿನಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ ಮತ್ತು ನೈಜ ಜಗತ್ತಿಗೆ ವಿಮುಖರಾಗುತ್ತಾರೆ.

ತಮ್ಮೆಲ್ಲ ಆಜ್ಞೆಗಳನ್ನು ವಿಧೇಯವಾಗಿ ಪಾಲಿಸುವ ವರ್ಚುವಲ್ ಸಹಾಯಕ ತಂತ್ರಜ್ಞಾನ 'ಅಲೆಕ್ಸಾ' ಅಥವಾ 'ಸಿರಿ'ಯನ್ನು ತಮ್ಮ ಸ್ನೇಹಿತರು ಎಂದು ಪರಿಭಾವಿಸುತ್ತಾರೆ. ಈ ಕೃತಕಬುದ್ಧಿಮತ್ತೆಯ ತಂತ್ರಜ್ಞಾನದೊಂದಿಗೆ ನಿರಂತರ ಸಂಭಾಷಣೆಯಲ್ಲಿ ತೊಡಗುವ ಇವರಿಗೆ ವಾಸ್ತವದ ಅವಶ್ಯಕತೆಯೇ ಬರುವುದಿಲ್ಲ. ಇದಕ್ಕೆ ಅದ್ಭುತ ಉದಾಹರಣೆ ಎಂದರೆ, ಚಾರ್ಲಿ ಬ್ರೂಕರ್ ಅವರು ನಿರ್ಮಿಸಿರುವ 'ಬ್ಲ್ಯಾಕ್ ಮಿರರ್' ಎಂಬ ವೆಬ್ ಸೀರೀಸ್. ಇದರಲ್ಲಿ ಕೃತಕ ಬುದ್ಧಿಮತ್ತೆಯ ಇಂದಿನ ಅಗಾಧ ಬೆಳವಣಿಗೆಯ ಬಗ್ಗೆ ಮೈ ಕಂಪಿಸುವಂತೆ ತೋರಿಸಲಾಗಿದೆ.

ಒಂದು ಅಧ್ಯಾಯದಲ್ಲಿ, ಯುವತಿಯೊಬ್ಬಳ ಗಂಡ ಸಾವನ್ನಪ್ಪಿರುತ್ತಾನೆ. ಅತೀವ ದುಃಖದಲ್ಲಿರುವ ಈಕೆಯನ್ನು ಸಂತೈಸುವ ಸಲುವಾಗಿ ಸ್ನೇಹಿತೆ ಒಂದು ಫೋನ್ ನಂಬರ್ ಕೊಟ್ಟು, ಅದನ್ನು ಸಂಪರ್ಕಿಸುವಂತೆ ಹೇಳುತ್ತಾಳೆ. ಯುವತಿಯು ಆ ನಂಬರನ್ನು ಸಂಪರ್ಕಿಸಿದೊಡನೆಯೇ ಸತ್ತಿರುವ ಆಕೆಯ ಪತಿಯ ಮೆಸೇಜು ಬರುತ್ತದೆ. ನಂತರ ಅವನ ಕರೆ ಬರುತ್ತದೆ. ಕಡೆಗೆ ಕೃತಕ ಬುದ್ಧಿಮತ್ತೆಯ ಸೃಷ್ಟಿಯಾದ ಅವನೇ ಬರುತ್ತಾನೆ. ಆದರೆ ಆ ಜಗತ್ತಿನಲ್ಲಿ ಮಾನವ ಸಹಜ ಭಾವನೆಗಳು ಇಲ್ಲದಿರುವುದು ಆಕೆಗೆ ಅಸಹನೀಯ ಅನ್ನಿಸಿ, ಪುಣ್ಯವಶಾತ್ ಪುನಃ ವಾಸ್ತವಕ್ಕೆ ಹಿಂದಿರುಗುತ್ತಾಳೆ.

ತಂತ್ರಜ್ಞಾನ ಮತ್ತು ಅಂತರ್ಜಾಲದ ಗೀಳು ಹಾಗೂ ಅದರ ದುಷ್ಪರಿಣಾಮಗಳನ್ನು ಜೆಫ್ ಅರ್ಲೋಸ್ಕಿ ಅವರು ನಿರ್ಮಿಸಿರುವ 'ದ ಸೋಷಿಯಲ್ ಡೈಲೆಮ' ಎಂಬ ಸಾಕ್ಷ್ಯಚಿತ್ರ ಅದ್ಭುತವಾಗಿ ಮನಗಾಣಿಸುತ್ತದೆ. ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸುವವರು ತಮ್ಮ ಅಲ್ಗಾರಿದಂಗಳ ಮೂಲಕ ಬಳಕೆದಾರರ ಮನಃಸ್ಥಿತಿಯನ್ನು ಹಿಡಿತದಲ್ಲಿ ಇಟ್ಟುಕೊಂಡು ಮೊಬೈಲ್ ಗೀಳು ಹತ್ತಿಸುತ್ತಾರೆ. ಈ ಅಲ್ಗಾರಿದಂಗಳು ಜನರ ಆಸಕ್ತಿಯ ಕ್ಷೇತ್ರಗಳು ಯಾವುವು ಎಂಬುದನ್ನು ಗ್ರಹಿಸಬಲ್ಲವು. ಹೀಗಿರುವಾಗ, ಯಾವುದೇ ವ್ಯಕ್ತಿ ಮೊಬೈಲನ್ನು ಬದಿಗೊತ್ತಿ ತನ್ನ ಭೌತಿಕ ಜಗತ್ತಿನತ್ತ ಗಮನಹರಿಸುವ ಪ್ರಯತ್ನ ಮಾಡಿದರೆ, ಸಾಮಾಜಿಕ ಜಾಲತಾಣಗಳ ಕೃತಕ ಬುದ್ಧಿಮತ್ತೆ ಅವನನ್ನು ನೂರೆಂಟು ಪ್ರಲೋಭನೆಗಳಿಗೆ ತಳ್ಳಿ ಪುನಃ ಮೊಬೈಲ್ ಗೀಳಿಗೆ ಹಚ್ಚುವಂತಹ ಸಾಮರ್ಥ್ಯವನ್ನು ಹೊಂದಿದೆ.

ಈ ಕಾರಣದಿಂದ, ಜೆನ್ ಝಡ್ ಮಕ್ಕಳು ದಿನದಲ್ಲಿ 6ರಿಂದ 7 ಗಂಟೆಗಳನ್ನು ಮೊಬೈಲ್ ಮೇಲೆಯೇ ವ್ಯಯಿಸುತ್ತಾರೆ. ಇದರಿಂದ ಸಾಮಾಜಿಕ ಜಾಲತಾಣಗಳಿಗೆ ಹೇರಳ ಲಾಭ ಮತ್ತು ಮಕ್ಕಳಿಗೆ ಮೊಬೈಲ್ ವ್ಯಸನ. ಸದಾಕಾಲ ವರ್ಚುವಲ್ ಜಗತ್ತಿನಲ್ಲಿ ಮುಳುಗಿರುವ ಮಕ್ಕಳು ನೈಜ ಭೌತಿಕ ಜಗತ್ತನ್ನು ಪ್ರವೇಶಿಸಿದೊಡನೆ ಅವರನ್ನು ಅತೀವವಾದ ಮಾನಸಿಕ ಒತ್ತಡ ಕಾಡುತ್ತದೆ ಎಂದು 'ದ ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್' ಅಭಿಪ್ರಾಯಪಡುತ್ತದೆ. ಆಲ್ವಿನ್ ಟಾಫ್ಲರ್ ಎಂಬ ಅಮೆರಿಕದ ಲೇಖಕ ತಮ್ಮ 'ಫ್ಯೂಚರ್ ಶಾಕ್' ಎಂಬ ಪುಸ್ತಕದಲ್ಲಿ, ಆಧುನಿಕ ಜಗತ್ತಿನಲ್ಲಿ ಆಗುತ್ತಿರುವ ತೀವ್ರತರ ತಾಂತ್ರಿಕ ಬೆಳವಣಿಗೆಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾರೆ. ಶರವೇಗದಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನದಿಂದ ನಮ್ಮ ಭವಿಷ್ಯ ನಮ್ಮನ್ನು ಆಘಾತಕ್ಕೆ ಒಳಪಡಿಸುತ್ತದೆ, ನಮ್ಮ ಸಾಂಪ್ರದಾಯಿಕ ವ್ಯವಸ್ಥೆಗಳು ಈ ಪೀಳಿಗೆಯ ಬೆಳವಣಿಗೆಗಳಿಗೆ ಹೊಂದಿಕೊಳ್ಳಲು ನಿಸ್ಸಹಾಯಕವಾಗಿವೆ ಎಂದು ಈ ಪುಸ್ತಕ ವಾದಿಸುತ್ತದೆ.



ತಂತ್ರಜ್ಞಾನದ ಬೆಳವಣಿಗೆಗಳಿಂದ ಆಗುವ ಲಾಭಗಳು ಹೇರಳ. ನಿಜ, ಜೆನ್ ಝಡ್ ಮಕ್ಕಳು ಸಾಮಾಜಿಕ ನ್ಯಾಯ, ಜನಾಂಗೀಯ ಸಮಾನತೆ, ಲಿಂಗತ್ವ ಸಮಾನತೆಯಂತಹ ವಿಷಯಗಳಲ್ಲಿ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿರುವುದು ಬೆಳಕಿಗೆ ಬಂದಿದೆ. ಆದರೆ ಈ ಹಂತಗಳಲ್ಲಿ ಕೆಲವು ಮಕ್ಕಳು ಆನ್‌ಲೈನ್ ಕಿರುಕುಳಕ್ಕೆ ಒಳಗಾಗಿದ್ದಾರೆ ಎಂಬುದೂ ಸತ್ಯ. ತಂತ್ರಜ್ಞಾನ ನಿರ್ಮಿತ ಜಗತ್ತಿನ ಮೇಲೆ ಅತಿಯಾದ ಅವಲಂಬನೆಯಿಂದ ಈ ಮಕ್ಕಳು ಸಾಮಾಜಿಕ ಸಂವಹನದಿಂದ ದೂರವಾಗುತ್ತಿದ್ದಾರೆ. ಸಣ್ಣಪುಟ್ಟ ಸಮಸ್ಯೆಗಳಿಗೂ ಆತ್ಮಹತ್ಯೆಯೇ ಪರಿಹಾರ ಎಂಬಂತೆ ಈ ಮಕ್ಕಳು ಮಾತನಾಡುವುದು ಹಿರಿಯರನ್ನು ಇನ್ನೂ ಹೆಚ್ಚು ಆತಂಕಕ್ಕೆ ದೂಡುತ್ತಿದೆ.

ಉದ್ಯೋಗ ಮಾರುಕಟ್ಟೆ ಮತ್ತು ನಮ್ಮ ಶಿಕ್ಷಣ ವ್ಯವಸ್ಥೆ ನಿರೀಕ್ಷಿಸುವ ಗುಣಮಟ್ಟಕ್ಕೆ ಏರಬೇಕೆಂದರೆ, ಜೆನ್ ಝಡ್ ಮಕ್ಕಳಿಗೆ ವರ್ಚುವಲ್ ಜಗತ್ತಿಗೆ ಬದಲಾಗಿ ನೈಜ ಜಗತ್ತಿನೊಡನೆ ಸಂಪರ್ಕ ಇರಬೇಕು. ಆಗಷ್ಟೇ ಅವರು ಸ್ಪರ್ಧಾತ್ಮಕವಾಗಿಯೂ ಬೆಳೆಯಲು ಸಾಧ್ಯ. ಕಾಲ ಕೆಟ್ಟುಹೋಯಿತು ಎಂದು ನಾವು ಹಲುಬದೇ ಇರಬೇಕೆಂದರೆ, ನಮ್ಮ ಜೆನ್ ಝಡ್ ಮಕ್ಕಳು ಸಹಜವಾದ ಮಾನವ ಸಂಬಂಧಗಳನ್ನು ಕಟ್ಟಿಕೊಳ್ಳುವಂತೆ ಆಗಬೇಕು. ಮೊಬೈಲ್‌ನ ಅತಿಯಾದ ಬಳಕೆಯನ್ನು ತಪ್ಪಿಸಿ ಜೀವನದ ನಿಜವಾದ ಸವಾಲುಗಳನ್ನು ವಿಮರ್ಶಾತ್ಮಕ ಚಿಂತನೆಯ ಮೂಲಕ ಎದುರಿಸುವುದನ್ನು ಕಲಿಯಬೇಕು.

ಲೇಖಕ: ಪ್ರಾಧ್ಯಾಪಕ, ತುಮಕೂರು ವಿಶ್ವವಿದ್ಯಾಲಯ ತುಮಕೂರು

ವಾಚಕರ ವಾಣಿ

ಮೇಯರ್ ಚುನಾವಣೆ: ಸಾಂವಿಧಾನಿಕ ಗೆಲುವು

ಚಂಡೀಗಢ ಮೇಯರ್ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿಯಿಂದ ನಡೆದಿದ್ದ ಅಕ್ರಮವನ್ನು ಎತ್ತಿತೋರಿಸಿದ ಸುಪ್ರೀಂ ಕೋರ್ಟ್, ಎಎಪಿಯ ಕುಲದೀಪ್ ಕುಮಾರ್ ಅವರನ್ನು ಮೇಯರ್ ಎಂದು ಘೋಷಿಸಿರುವುದು ಪ್ರಜಾತಂತ್ರ ವ್ಯವಸ್ಥೆಯ ಸಾಂವಿಧಾನಿಕ ಗೆಲುವಾಗಿದೆ. ಪ್ರಜಾಸತ್ತಾತ್ಮಕ ತತ್ವಗಳನ್ನು ಸಂರಕ್ಷಿಸುವಲ್ಲಿ ವಿಫಲರಾಗಿರುವ ಚುನಾವಣಾ ಅಧಿಕಾರಿ ಅನಿಲ್ ಮಸೀಹ್, ಒಂದು ರಾಜಕೀಯ ಪಕ್ಷದ ಪರವಾಗಿ ಕೆಲಸ ಮಾಡಿರುವುದು ಇದರಿಂದ ಸ್ಪಷ್ಟವಾಗಿದೆ. ಹೀಗಾಗಿ, ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರ್ಟ್ ಹೇಳಿರುವುದು ಸರಿಯಾಗಿದೆ. ಅನಿಲ್ ಅವರ ಕೃತ್ಯಕ್ಕೆ ಕುಮ್ಮಕ್ಕು ನೀಡಿದವರಿಗೂ ಶಿಕ್ಷೆಯಾಗಬೇಕು. ಜೊತೆಗೆ ಇಂತಹ ಚುನಾವಣಾ ಅಕ್ರಮಗಳನ್ನು ತಡೆಯಲು ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ

ಅಲೆಮಾರಿ ಮಕ್ಕಳ ಪಾಲಿಗೆ ದಾರಿದೀಪ

ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ವಿದ್ಯಾರ್ಥಿಗಳಿಗೆ ಏಕಲವ್ಯ ಮಾದರಿಯ ಪ್ರತಿ ವಸತಿಶಾಲೆಯಲ್ಲಿಯೂ 20 ಸೀಟುಗಳನ್ನು ಮೀಸಲಿಡುವುದರ ಜೊತೆಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿ ನೇರ ಪ್ರವೇಶ ಕಲ್ಪಿಸಲಾಗುವುದು ಎಂಬ ಬಜೆಟ್‌ನ ಘೋಷಣೆಯು ಸಂವಿಧಾನದ ಪ್ರಸ್ತಾವನೆಗೆ ಪೂರಕವಾಗಿದೆ. ಇದು ಬರೀ ಘೋಷಣೆಯಾಗಿ ಉಳಿಯದೆ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಅನುಷ್ಠಾನಕ್ಕೆ ಬರುವಂತಾದರೆ ಎಷ್ಟೋ ಅಲೆಮಾರಿ ಮಕ್ಕಳ ಪಾಲಿಗೆ ದಾರಿದೀಪವಾಗುತ್ತದೆ. ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಎಂಬ ಮೂಲಭೂತ ಹಕ್ಕು ಅಲೆಮಾರಿಗಳ ಪಾಲಿಗೆ ಮರೀಚಿಕೆಯಾಗಿಯೇ ಉಳಿದಿದೆ.

ಊರೂರಿನಲ್ಲೂ ಸರ್ಕಾರಿ ಶಾಲೆಗಳಿದ್ದರೂ ತಮ್ಮ ವಲಸೆಯ ಕಾರಣಕ್ಕೋ ಶಿಕ್ಷಣದ ಮಹತ್ವ ಅರಿಯದಿರುವುದಕ್ಕೋ ಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಅಲೆಮಾರಿ ಪೋಷಕರು ಇದಕ್ಕೆ ಕಾರಣರಿರಬಹುದು. ಸರ್ಕಾರಿ ಶಾಲೆಗೆ ಸೇರಿರುವ ಮಕ್ಕಳಿಗೂ ಮನೆಯಲ್ಲಿ ಓದುವ ಉತ್ತಮ ವಾತಾವರಣ ಇರುವುದಿಲ್ಲ. ಇಂತಹವರಿಗೆ ವಸತಿಶಾಲೆಗಳಿಗೆ ಸೇರಲು ಬರೆಯಬೇಕಾದ ಪ್ರವೇಶ ಪರೀಕ್ಷೆಯ ಬಗೆಗೆ ತಿಳಿವಳಿಕೆಯೇ ಇರುವುದಿಲ್ಲ. ಇದ್ದರೂ ಆ ವಿಷಯದಲ್ಲಿ ಅಸಡ್ಡೆ ತೋರುವ ಪೋಷಕರೂ ಇದ್ದಾರೆ. ಇಂತಹ ಮಕ್ಕಳು ವಸತಿಶಾಲೆಗಳನ್ನು ಸೇರುವಂತಾಗಿ ಶಿಕ್ಷಣ ಎಂಬ ಹಕ್ಕನ್ನು ಪಡೆಯುವಂತಾಗಲಿ ಎಂಬ ಸರ್ಕಾರದ ಆಶಯ ಖಂಡಿತವಾಗಿಯೂ ಅಲೆಮಾರಿ ಮಕ್ಕಳ ಭವಿಷ್ಯವನ್ನು ರೂಪಿಸುವುದಕ್ಕೆ ಪೂರಕವಾಗಿದೆ.

ಅಲೆಮಾರಿ, ಅರೆಅಲೆಮಾರಿ ಸಮುದಾಯಗಳಲ್ಲಿನ ಕೆಲವು ಹಿಂದುಳಿದ ಜಾತಿಗಳಿಗೆ ಅಲೆಮಾರಿ ಜನಾಂಗದ ಪ್ರಮಾಣಪತ್ರ ಸಿಕ್ಕಿಲ್ಲದೇ ಇರುವುದರಿಂದ, ಸರ್ಕಾರಿ ದಾಖಲೆಗಳನ್ನು ಸಕಾಲದಲ್ಲಿ ಒದಗಿಸಿಲ್ಲವೆಂಬ ಕಾರಣಕ್ಕಾಗಿ ಈ ಮಕ್ಕಳನ್ನು ಅನುಕೂಲವಂಚಿತರನ್ನಾಗಿ ಮಾಡದೆ ಅಂತಹವರಿಗೂ ಅವಕಾಶ ಮಾಡಿಕೊಡಬೇಕು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

ನ್ಯಾಯಾಂಗದ ಪರಿಧಿಯಲ್ಲಿ ಪರಿಹಾರ ಸೂಕ್ತ

ರಾಮನಗರದಲ್ಲಿ ವಕೀಲರ ವಿರುದ್ಧ ಪೊಲೀಸ್ ಅಧಿಕಾರಿಯೊಬ್ಬರು ಪ್ರಕರಣ ದಾಖಲಿಸಿದ ಸಂಬಂಧ ವಕೀಲರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಕಚೇರಿಗೆ ಘೇರಾವ್ ಕೂಡ ಮಾಡಿದ್ದಾರೆ. ಇದರಿಂದ ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ. ಈ ಪ್ರಕರಣ ದಿನೇದಿನೇ ರಾಜಕೀಯ ತಿರುವು ಪಡೆದುಕೊಳ್ಳುತ್ತಿದೆ. ನ್ಯಾಯಾಂಗದ ಘನತೆಯನ್ನು ಎತ್ತಿಹಿಡಿಯಬೇಕಾದ ವಕೀಲರ ಈ ಕ್ರಮ ನ್ಯಾಯಾಲಯದ ಬಗ್ಗೆ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತದೆ. ಹೀಗಾಗಿ, ವಕೀಲರು ಈ ಸಮಸ್ಯೆಗೆ ನ್ಯಾಯಾಲಯದ ಮೂಲಕವೇ ಪರಿಹಾರ ಕಂಡುಕೊಳ್ಳುವುದು ಸೂಕ್ತ.

ರುದ್ರೇಶ್ ಅದರಂಗಿ, ಬೆಂಗಳೂರು

ಬೇಕಾಗಿದೆ ವನರಕ್ಷಕ ಸಮಿತಿ

ಮಂಗನ ಕಾಯಿಲೆ ತಡೆಗೆ ಸರ್ಕಾರವು ಉತ್ತಮ ಲಸಿಕೆ ಒದಗಿಸುವ ಬದಲು ಅರಣ್ಯ ಇಲಾಖೆಯು ಒಣ ಉಪದೇಶ ನೀಡುತ್ತಿದೆ ಎಂದು ಟೀಕಿಸಿ ಶರತ್ ಕಲ್ಕೋಡ್ ಮತ್ತು ನಾಗೇಶ ಹೆಗಡೆ ಅವರು ಬರೆದಿರುವ ಪತ್ರ (ವಾ.ವಾ., ಫೆ. 21) ಅತ್ಯಂತ ಸಮಂಜಸವಾಗಿದೆ. ಅವರು ಹೇಳಿರುವಂತೆ, ಮಲೆನಾಡಿನಲ್ಲಿ ನೀಲಗಿರಿ, ಅಕೇಶಿಯಾ ಹಾವಳಿ ಅತಿಯಾಗಿದೆ. ದಶಕಗಳ ಕೆಳಗೆ ಹರಿಹರ ಪಾಲಿಫೈಬರ್ಸ್ ಕಾರ್ಖಾನೆ ಆರಂಭವಾದಾಗ ಆ ಕಾರ್ಖಾನೆಗೆ ಬೇಕಾದ ಕಚ್ಚಾ ವಸ್ತುಗಳಾದ ನೀಲಗಿರಿ, ಅಕೇಶಿಯಾ ಬೆಳೆಗಾಗಿ ಅರಣ್ಯ ಇಲಾಖೆಯು ಮಲೆನಾಡಿನ ಸಮೃದ್ಧ, ವೈವಿಧ್ಯಪೂರ್ಣ, ಉಪಯುಕ್ತ, ಪರಿಸರರಕ್ಷಕ, ಜೀವಿಪೋಷಕ ಅರಣ್ಯಗಳನ್ನು ಕಡಿದು ಅಲ್ಲೆಲ್ಲ ನೀಲಗಿರಿ, ಅಕೇಶಿಯಾ ನೆಡುತೋಪು ಬೆಳೆಸಿತು. ಮಲೆನಾಡಿನಲ್ಲಿ ಅರಣ್ಯನಾಶ, ಹರಿಹರದ ಸುತ್ತಮುತ್ತ ಕಾರ್ಖಾನೆಯ ಹೊಗೆ ಮತ್ತು ತ್ಯಾಜ್ಯದಿಂದಾಗಿ ಉಂಟಾದ ಪರಿಸರ ಮಾಲಿನ್ಯ, ಬೆಳೆಹಾನಿ, ದುರ್ವಾಸನೆ, ಉಸಿರಾಟದ ಸಮಸ್ಯೆ ಇವೆಲ್ಲವುಗಳ ಕುರಿತು ಪತ್ರಿಕಾ ಬರಹಗಳ ಮೂಲಕ ಹಲವು ಪ್ರಜ್ಞಾವಂತರು ಸರ್ಕಾರದ ಕಿವಿ ಹಿಂಡುತ್ತಿದ್ದುದನ್ನು ಗಮನಿಸಿರುವ ಅನೇಕ ಹಿರಿಯರು ಇಂದು ನಮ್ಮೊಡನಿದ್ದಾರೆ.

ಮಲೆನಾಡಿನ ಹುಂಚ, ಕಡಸೂರು, ಹುಂಚದಕಟ್ಟೆ, ಕೆಸರೆ, ಗರ್ತಿಕೆರೆ, ಹಾಲಂದೂರು ಮೊದಲಾದ ಗ್ರಾಮಗಳಲ್ಲಿ ಕೃಷಿಕ ಜೀವನ ಸಾಗಿಸುತ್ತಿರುವವರ ಕಥೆ-ವ್ಯಥೆಯ ಅರಿವು ನನಗಿದೆ. ಮಾತ್ರವಲ್ಲ, ಮೇಲೆ ಹೇಳಿರುವ ಅರಣ್ಯನಾಶವನ್ನು ಕಣ್ಣಾರೆ ಕಂಡಿದ್ದೇನೆ. ಅಲ್ಲೆಲ್ಲ ಈಚೆಗೆ ಹೊರಗಿನವರು ಬಂದು ಉಪಯುಕ್ತ ಅರಣ್ಯವನ್ನು ಬೋಳಿಸಿ ರಬ್ಬರ್ ಪ್ಲ್ಯಾಂಟೇಶನ್ ಮಾಡುವ ಚೋದ್ಯವೂ ಜೋರಾಗಿದೆ! ಅರಣ್ಯನಾಶದ ಕುರಿತಾಗಲೀ ಪರಿಣಾಮ ರೂಪಿಯಾಗಿ ಪಶುಗಳಿಂದಾಗುತ್ತಿರುವ ಬೆಳೆಹಾನಿ, ಮಂಗನ ಕಾಯಿಲೆಯಂತಹವುಗಳ ಬಗ್ಗೆಯಾಗಲೀ ನಿರ್ಲಕ್ಷ್ಯ ಸಲ್ಲದು. ಸರ್ಕಾರವು ಉತ್ತಮ ಲಸಿಕೆ ನೀಡಬೇಕು, ಸರಿಯೇ. ಜೊತೆಗೆ, ಆಯಾ ಗ್ರಾಮಗಳ ನಿವಾಸಿಗಳಿಂದಲೇ ಆಯ್ಕೆಯಾದ, ಸ್ಥಳೀಯರನ್ನು ಒಳಗೊಂಡ ವನರಕ್ಷಕ ಸಮಿತಿಗಳನ್ನು ರಚಿಸಿ, ಅವುಗಳಿಗೆ ಅವಶ್ಯ ಧನಸಹಾಯದ ಜೊತೆಗೆ ಅರೆ ನ್ಯಾಯಿಕ ಅಧಿಕಾರವನ್ನೂ ನೀಡಬೇಕು. ತನ್ಮೂಲಕ, ಸ್ಥಳೀಯರೇ ತಮ್ಮ ಮತ್ತು ಅರಣ್ಯದ ರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಗಬೇಕು.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಾಕಿಸ್ತಾನ: ಸ್ಥಿತಿ ಡೋಲಾಯಮಾನ

ಪ್ರಜಾವಾಣಿ ವಾರ್ತೆ


ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಗೆ (ಸಂಸತ್ತು) ಚುನಾವಣೆ ಮುಗಿದು 15 ದಿನ ಕಳೆದಿವೆ. ಜನರು ಯಾವ ಪಕ್ಷಕ್ಕೂ ಬಹುಮತ ನೀಡಲಿಲ್ಲ. ಈ ಕಾರಣ ಈವರೆಗೂ ಸರ್ಕಾರ ರಚನೆಯಾಗಿಲ್ಲ. ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) (54 ಸ್ಥಾನ) ಹಾಗೂ ಪಾಕಿಸ್ತಾನ ಮುಸ್ಲಿಂ ಲೀಗ್ –ನವಾಜ್ (ಪಿಎಂಎಲ್‌ಎನ್) (75 ಸ್ಥಾನ) ಸೇರಿ ಸರ್ಕಾರ ರಚನೆ ಆಗಲಿದೆ ಎಂದು ಮಂಗಳವಾರ ತಡರಾತ್ರಿ ಸುದ್ದಿಗೋಷ್ಠಿ ನಡೆಸಿ ಘೋಷಿಸಿವೆ. ಕೆಲವು ಸಣ್ಣ ಸಣ್ಣ ಪಕ್ಷಗಳೂ ಈ ಮೈತ್ರಿಯೊಂದಿಗೆ ಸೇರಿ ಬಹುಮತದ 133 ಸಂಖ್ಯೆಯನ್ನು ತಲುಪಿವೆ. ಆದರೆ, ರಾಜಕೀಯ ಅಸ್ಥಿರತೆ ಮಾತ್ರ ತನ್ನ ಹಿಡಿತವನ್ನು ಬಿಗಿ ಮಾಡುತ್ತಲೇ ಇದೆ.



ಇಮ್ರಾನ್ ಖಾನ್

ತಾವು ವಿರೋಧ ಪಕ್ಷದಲ್ಲಿ ಕೂರುತ್ತೇವೆ ಎಂದಿದ್ದ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ತೆಹರೀಕ್ ಎ ಇನ್ಸಾಫ್ (ಪಿಟಿಐ) ಈಗ ಪಿಪಿಪಿ ಹಾಗೂ ಪಿಎಂಎಲ್‌ಎನ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಏರುವುದು ರಾಜಕೀಯ ಅಸ್ಥಿರತೆಗೆ ನಾಂದಿ ಆಗಲಿದೆ ಎಂದಿದೆ. ವಿರೋಧ ಪಕ್ಷದ ಸ್ಥಾನದಲ್ಲಿ ಕೂರಲು ಹಿಂದೇಟು ಹಾಕಿದೆ. ಈ ಬಾರಿಯ ಚುನಾವಣೆಯಲ್ಲಿ ಪಿಟಿಐ ಪಕ್ಷವು ಸ್ಪರ್ಧಿಸದಂತೆ ಪಾಕಿಸ್ತಾನ ಚುನಾವಣಾ ಆಯೋಗ ನಿರ್ಬಂಧ ಹೇರಿತ್ತು. ಈ ಕಾರಣ ಈ ಪಕ್ಷದ ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಹೀಗೆ ಸ್ಪರ್ಧಿಸಿ ಕೂಡ 93 ಸ್ಥಾನಗಳನ್ನು ಅವರು ಗೆದ್ದುಕೊಂಡಿದ್ದಾರೆ. ನೈತಿಕವಾಗಿ ತಾವೇ ಅಧಿಕಾರದಲ್ಲಿ ಕೂರಬೇಕು ಎನ್ನುವುದು ಪಿಟಿಐನ ಅಭಿಲಾಷೆ. ಆದರೆ, ಪಿಪಿಪಿ ಹಾಗೂ ಪಿಎಂಎಲ್‌ಎನ್ ಮೈತ್ರಿ ಮಾಡಿಕೊಂಡಿವೆ.

‘ಅಸ್ಥಿರತೆ’ ಎನ್ನುವುದು ಪಾಕಿಸ್ತಾನ ರಾಜಕೀಯಕ್ಕೆ ಹೊಸತೇನು ಅಲ್ಲ. ಪಾಕಿಸ್ತಾನದಲ್ಲಿ ಐದು ವರ್ಷದ ಅವಧಿ ಪೂರೈಸಿದ ಪ್ರಧಾನಿಗಳ ಸಂಖ್ಯೆ ಬಹಳ ಕಮ್ಮಿ ಇದೆ. ಅಧಿಕಾರದಿಂದ ಇಳಿದ ಬಳಿಕ ಒಂದೋ ದೇಶ ಬಿಡುತ್ತಾರೆ. ಇಲ್ಲವೇ ಪ್ರಕರಣವೊಂದರಲ್ಲಿ ಜೈಲು ಸೇರುತ್ತಾರೆ. ಚುನಾವಣೆಯ ಹಿಂದೆ ಮುಂದೆ ಇಂತಹ ಕ್ಷಿಪ್ರ ಬೆಳವಣಿಗೆಗಳಿಗೆ ಪಾಕಿಸ್ತಾನವು ಸದಾ ಸಾಕ್ಷಿಯಾಗಿದೆ.



ಶೆಹಬಾಜ್ ಷರೀಫ್

ಈ ಬಾರಿಯ ಚುನಾವಣಾ ವಾತಾವರಣ ಕೂಡ ಇದೇ ರೀತಿಯಿತ್ತು. 2022ರಲ್ಲಿ ಪ್ರಧಾನಿಯಾಗಿದ್ದ ಇಮ್ರಾನ್ ಖಾನ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲಾಯಿತು. ವಿವಿಧ ಪ್ರಕರಣಗಳಲ್ಲಿ ಇಮ್ರಾನ್ ಅವರಿಗೆ ಜೈಲು ಶಿಕ್ಷೆಯಾಯಿತು. ಇತ್ತೀಚೆಗೆ ಅವರ ಪತ್ನಿಯನ್ನೂ ಜೈಲಿಗೆ ಕಳುಹಿಸಲಾಯಿತು. ನಂತರ, ಪಿಎಂಎಲ್‌ಎನ್ ಪಕ್ಷದ ಶೆಹಬಾಜ್ ಷರೀಫ್ ಅವರು ಪ್ರಧಾನಿಯಾದರು. ಅಸೆಂಬ್ಲಿಯ ಅವಧಿ ಮುಕ್ತಾಯಗೊಂಡಿತು. ನಂತರ ಹಂಗಾಮಿ ಸರ್ಕಾರವನ್ನು ನಿಯೋಜಿಸಲಾಯಿತು. ಈ ಎಲ್ಲಾ ರಾಜಕೀಯ ಅಸ್ಥಿರತೆಯ ಮಧ್ಯೆ ದೇಶದ ಆರ್ಥಿಕತೆ ಮಾತ್ರ ಕುಸಿಯುತ್ತಲೇ ಸಾಗಿತು.

ಸೇನೆ ಮಾತು ಕೇಳದ ಜನ: ಪಾಕಿಸ್ತಾನ ರಾಜಕೀಯಕ್ಕೂ ಅಲ್ಲಿನ ಸೇನೆಗೂ ಇರುವ ನೇರ ಸಂಬಂಧ ರಹಸ್ಯವಾದುದೇನಲ್ಲ. ಸೇನೆ ಬಯಸಿದ ಪಕ್ಷ, ವ್ಯಕ್ತಿಯೇ ಅಲ್ಲಿನ ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ. ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಪಕ್ಷಕ್ಕೆ ಈ ಬಾರಿ ಸೇನೆಯು ತಮ್ಮ ಬೆಂಬಲ ನೀಡಿತ್ತು. ಆದರೆ, ಚುನಾವಣಾ ಫಲಿತಾಂಶವನ್ನು ಗಮನಿಸಿದರೆ, ಈ ಬಾರಿಯ ಚುನಾವಣೆಯಲ್ಲಿ ಸೇನೆ ಬೆಂಬಲಿಸಿದ ಪಕ್ಷಕ್ಕೆ ಜನರು ಬಹುಮತ ನೀಡಲಿಲ್ಲ.

ಕಳೆದ ಐದು ವರ್ಷಗಳಲ್ಲಿ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷಕ್ಕೂ ಸೇನೆಗೂ ಇರುವ ವೈಮನಸ್ಯ ಹಲವು ಬಾರಿ ಬಹಿರಂಗಗೊಂಡಿತ್ತು. ಅಧಿಕಾರದಿಂದ ಇಳಿದ ಬಳಿಕ ಇಮ್ರಾನ್ ಖಾನ್ ಹಲವು ಸಾರ್ವಜನಿಕ ರ‍್ಯಾಲಿಗಳನ್ನು ನಡೆಸಿದರು. ಅಲ್ಲೆಲ್ಲಾ ಪಕ್ಷದ ಹಾಗೂ ಸೇನೆಯ ನಡುವೆ ಜಟಾಪಟಿ ನಡೆದಿತ್ತು. ಇಮ್ರಾನ್ ಅವರಿಗೆ ರ‍್ಯಾಲಿಯೊಂದರಲ್ಲಿ ಗುಂಡೇಟು ಬಿದ್ದಿತ್ತು ಕೂಡ. ಸೇನೆ ಹಾಗೂ ಪಿಟಿಐ ಮಧ್ಯದ ವೈರತ್ವದ ಕುರಿತು ಜನರು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಜನರು ಪಿಟಿಐ ಪಕ್ಷಕ್ಕೆ ಹೆಚ್ಚಿನ ಸ್ಥಾನಗಳನ್ನು ಕೊಟ್ಟಿದ್ದಾರೆ. ಸೇನೆಯ ಆದ್ಯತೆಯನ್ನೂ ಮೀರಿ ತಮ್ಮ ಇಚ್ಛೆಯ ಪಕ್ಷಕ್ಕೆ ಜನ ಮತ ಹಾಕಿದ್ದಾರೆ. ಆದರೆ ಆ ಪಕ್ಷ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲು ಸಾಧ್ಯವಾಗಿಲ್ಲ. ಅತಂತ್ರ ಸ್ಥಿತಿ ನಿರ್ಮಾಣವಾದ ಕಾರಣ ಪಾಕಿಸ್ತಾನದ ರಾಜಕೀಯ ಅಸ್ಥಿರತೆ ಮತ್ತೂ ಮುಂದುವರಿದಿದೆ. ❖



ಫಲಿತಾಂಶವನ್ನು ತಿರುಚಲಾಗಿದೆ ಎಂದು ಆರೋಪಿಸಿ, ಸಾವಿರಾರು ಪಿಟಿಐ ಪಕ್ಷದ ಕಾರ್ಯಕರ್ತರು ಹಾಗೂ ಪಕ್ಷದ ಬೆಂಬಲಿಗರು ಪೆಶಾವರದಲ್ಲಿ ಈಚೆಗೆ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರಗಳು

ಚುನಾವಣಾ ಅಕ್ರಮ ಆರೋಪ: ಜನರ ಹೋರಾಟ

ಯಾರು ಸರ್ಕಾರ ರಚಿಸಬೇಕು ಎನ್ನುವ ಲೆಕ್ಕಾಚಾರ ನಡೆಯುತ್ತಿದ್ದರೆ, ‘ಸೋಲುವ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದೇನೆ. ಈ ಮಹಾ ಅಪರಾಧದಲ್ಲಿ ಮುಖ್ಯ ಚುನಾವಣಾ ಆಯುಕ್ತ ಹಾಗೂ ಮುಖ್ಯ ನ್ಯಾಯಮೂರ್ತಿಯೂ ಶಾಮೀಲಾಗಿದ್ದಾರೆ’ ಎಂದು ರಾವಲ್ಪಿಂಡಿಯ ಕಮಿಷನರ್ ಲಿಯಾಕತ್ ಅಲಿ ಚಟ್ಟಾ ಅವರು ಇದೇ 17ರಂದು (ಶನಿವಾರ) ಸುದ್ದಿಗೋಷ್ಠಿ ನಡೆಸಿ ಹೇಳಿಕೆ ನೀಡಿದರು. ಇದು ದೇಶದಲ್ಲಿ ರಾಜಕೀಯ ತಲ್ಲಣಕ್ಕೆ ಕಾರಣವಾಯಿತು. ‘13 ಕ್ಷೇತ್ರಗಳಲ್ಲಿ ಪಿಟಿಐ ಪಕ್ಷದ ಅಭ್ಯರ್ಥಿಗಳು ಸುಮಾರು 70 ಸಾವಿರ ಮತಗಳಿಂದ ಗೆಲ್ಲುವವರಿದ್ದರು. ಆ ಮತಗಳನ್ನು ಕುಲಗೆಡಿಸಿ, ಅವರನ್ನು ಸೋಲಿಸಲಾಯಿತು’ ಎಂದಿದ್ದು, ಜನರ ಆಕ್ರೋಶಕ್ಕೆ ಕಾರಣವಾಯಿತು. ಇದಕ್ಕೆ ಸಾಕ್ಷ್ಯಗಳನ್ನು ಒದಗಿಸಿ ಎಂದು ಚುನಾವಣಾ ಆಯೋಗ ಸವಾಲು ಎಸೆಯಿತು.

‘ಪಿಪಿಪಿ ಹಾಗೂ ಪಿಎಂಎಲ್‌ಎನ್ ಮಧ್ಯೆ ಮೈತ್ರಿಯ ಮಾತುಕತೆ ನಡೆಯುತ್ತಿದ್ದ ವೇಳೆಯಲ್ಲಿಯೇ ಜನರು ಬೀದಿಗಿಳಿದು ಪ್ರತಿಭಟಿಸಲು ಆರಂಭಿಸಿದರು. ‘ಖದೀಮರೆ ನಮ್ಮ ಮತವನ್ನು ಕದಿಯುವುದನ್ನು ನಿಲ್ಲಿಸಿ’ ಎಂದು ಫಲಕಗಳನ್ನು ಹಿಡಿದು ಪ್ರತಿಭಟಿಸತೊಡಗಿದರು. ಪಿಟಿಐ ಪಕ್ಷ ಕೂಡ ಹಲವು ಕಡೆ ದೊಡ್ಡ ಮಟ್ಟದ ಪ್ರತಿಭಟನೆಗಳನ್ನು ನಡೆಸಿತು.



ಇಸ್ಲಾಮಾಬಾದ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕುಟುಂಬ ಸಮೇತರಾಗಿ ಜನರು ಬೀದಿಗಿಳಿದು ಪ್ರತಿಭಟಿಸಿದರು.

ತಾನು ಚುನಾವಣಾ ಅಕ್ರಮ ಎಸಗಿದ್ದೇನೆ ಎಂದು ಕಮಿಷನರ್ ಒಬ್ಬರು ಬಹಿರಂಗವಾಗಿ ತಪ್ಪೊಪ್ಪಿಕೊಂಡಿದ್ದರೂ ಅವರ ಮೇಲೆ ಯಾವುದೇ ಕ್ರಮವನ್ನು ಇಲ್ಲಿಯವರೆಗೂ ಕೈಗೊಂಡಿಲ್ಲ. ಚುನಾವಣಾ ಆಯೋಗ ಹಾಗೂ ಮುಖ್ಯ ನ್ಯಾಯಮೂರ್ತಿಯು ಕಮಿಷನರ್ ಚಟ್ಟಾ ಅವರ ಆರೋಪವನ್ನು ಅಲ್ಲಗಳೆದಿದ್ದಾರೆ. ಕಮಿಷನರ್ ಒಬ್ಬರಿಗೆ ಈ ರೀತಿ ಅಕ್ರಮ ನಡೆಸಲು ಸಾಧ್ಯವೇ ಆಗುವುದಿಲ್ಲ ಎಂದು ಆಯೋಗ ಹೇಳಿಕೆ ನೀಡಿದೆ. ‘ಚಟ್ಟಾ ಅವರ ವಿರುದ್ಧ ಯಾವುದೇ ದೂರು ಬಂದಿಲ್ಲ. ಆದ್ದರಿಂದ ಅವರನ್ನು ಹೇಗೆ ಬಂಧಿಸಲು ಸಾಧ್ಯ’ ಎಂದು ಪೊಲೀಸರು ಪ್ರಶ್ನಿಸುತ್ತಾರೆ. ‘ಚಟ್ಟಾ ಅವರು ಮಾರ್ಚ್ 13ರಂದು ನಿವೃತ್ತರಾಗುವವರಿದ್ದರು. ನಂತರದ ತಮ್ಮ ರಾಜಕೀಯ ಜೀವನ ರೂಪಿಸಿಕೊಳ್ಳುವವರಿದ್ದರು. ಅದಕ್ಕಾಗಿ ಈ ರೀತಿ ಪ್ರಚಾರತಂತ್ರ ಅನುಸರಿಸಿದ್ದಾರೆ’ ಎಂದು ಪಿಎಂಎಲ್‌ಎನ್ ಹೇಳಿಕೆ ನೀಡಿದೆ.

ಚೀನಾ ಜೊತೆಗಿದ್ದರೆ ಸಾಕು...

ದೇಶದ ಒಳಗಿನ ರಾಜಕೀಯ ಅಸ್ಥಿರತೆಯ ಕಾರಣಕ್ಕಾಗಿಯೇ ಪಾಕಿಸ್ತಾನದ ಆರ್ಥಿಕತೆ ಜೊತೆಗೆ ಈ ದೇಶದ ವಿದೇಶಾಂಗ ನೀತಿಗಳೂ ಕೆಟ್ಟಿವೆ ಎನ್ನುವುದು ರಾಜಕೀಯ ವಿಶ್ಲೇಷಕರ ಮಾತು. ಪಾಕಿಸ್ತಾನವು ಯಾವ ದೇಶವನ್ನು ಹೆಚ್ಚು ಅವಲಂಬಿಸುತ್ತದೆ ಎನ್ನುವುದರ ಮೇಲೆ ಅದರ ಬೆಳವಣಿಗೆ ನಿಂತಿದೆ. ಮೊದಲು ಪಾಕಿಸ್ತಾನವು ಅಮೆರಿಕವನ್ನು ಹೆಚ್ಚು ಅವಲಂಬಿಸಿತ್ತು. ಈಗ ಅದಕ್ಕಿಂತ ಹೆಚ್ಚು ಅವಲಂಬನೆಯು ಚೀನಾದ ಮೇಲಾಗಿದೆ. ತನ್ನ ಸಾಂಪ್ರದಾಯಿಕ ಸ್ನೇಹವಲಯದಲ್ಲಿದ್ದ ಯುಎಇ ಅನ್ನು ಕೂಡ ಪಾಕಿಸ್ತಾನ ದೂರ ಮಾಡಿಕೊಂಡಿದೆ.

ತನ್ನಲ್ಲಿ ಆಶ್ರಯ ಪಡೆದಿದ್ದ ಅಫ್ಗಾನಿಸ್ತಾನದ ಲಕ್ಷಗಟ್ಟಲೆ ಜನರನ್ನು ಪಾಕಿಸ್ತಾನವು ಗಡೀಪಾರು ಮಾಡಿ ವಾಪಸು ಅಫ್ಗಾನಿಸ್ತಾನದ ಗಡಿಗೆ ದೂಡಿದೆ. ಇದರಿಂದ ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದೆ. ಪಾಕಿಸ್ತಾನದೊಂದಿಗೆ ಗಡಿ ಜಗಳಕ್ಕೆ ಅದು ಮುಂದಾಗಿದೆ. ಬಲೂಚಿಸ್ತಾನ ನಮ್ಮದು ಎನ್ನುವ ಇರಾನ್‌ನ ಜಗಳ ಕೂಡ ಹೆಚ್ಚಾಗತೊಡಗಿದೆ. ಈ ಜಗಳಗಳು ಪಾಕಿಸ್ತಾನದ ಒಳಗೆ ಅಸ್ಥಿರತೆಯನ್ನು, ಭಯೋತ್ಪಾದನಾ ಚಟುವಟಿಕೆಯನ್ನು ಉಂಟುಮಾಡುತ್ತಿವೆ. ಭಾರತದೊಂದಿಗಿನ ಪಾಕಿಸ್ತಾನದ ಸಂಬಂಧವು ಹಳಸುತ್ತಲೇ ಸಾಗಿದೆ. ‘ಅರಬ್ ರಾಷ್ಟ್ರದವರ ಬಳಿ ಆರ್ಥಿಕ ಸಹಾಯ ಕೇಳಲು ಹೋದಾಗ ಅವಮಾನವಾಯಿತು’ ಎಂದು ಶೆಹಬಾಜ್ ಷರೀಫ್ ಅವರು ಬಹಿರಂಗವಾಗಿಯೇ ಹೇಳಿಕೊಂಡಿದ್ದರು.

ಚೀನಾ ಜೊತೆಗಿದ್ದರೆ ಸಾಕು. ಬೇರೆ ಯಾವ ದೇಶದ ಸ್ನೇಹ ಸಂಬಂಧವೂ ಯಾಕೆ ಬೇಕು – ಹೀಗೆ ಪಾಕಿಸ್ತಾನದ ವಿದೇಶಾಂಗ ನೀತಿಯನ್ನು ಒಂದು ಮಾತಿನಲ್ಲಿ ಬಣ್ಣಿಸಬಹುದು ಎನ್ನುವುದು ವಿದೇಶಾಂಗ ನೀತಿ ತಜ್ಞರ ಅಭಿಪ್ರಾಯ.

ಕುಸಿತದ ಹಾದಿಯಲ್ಲಿ ಆರ್ಥಿಕತೆ

ಪಾಕಿಸ್ತಾನದ ಆರ್ಥಿಕತೆ ಕುಸಿಯುತ್ತಲೇ ಇದೆ. ಅದು ದಿನೇ ದಿನೇ ಬಿಗಡಾಯಿಸುತ್ತಿದೆಯೇ ಹೊರತು, ಸುಧಾರಿಸುತ್ತಿಲ್ಲ ಎಂಬುದು ಜಾಗತಿಕ ಮಟ್ಟದ ಆರ್ಥಿಕ ತಜ್ಞರ ಅಭಿಮತ. ಪಾಕಿಸ್ತಾನದ ಆರ್ಥಿಕ ಬಿಕ್ಕಟ್ಟಿಗೆ ಅಲ್ಲಿನ ರಾಜಕೀಯ ಅಸ್ಥಿರತೆಯನ್ನೇ ಮೊದಲ ಹೊಣೆ ಮಾಡಬೇಕಾಗುತ್ತದೆ. ಅದರ ಜತೆಯಲ್ಲಿ ವಿದೇಶಾಂಗ ನೀತಿಯೂ ಆರ್ಥಿಕತೆ ಹದಗೆಡಲು ಅಷ್ಟೇ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಪಾಕಿಸ್ತಾನದ ಆರ್ಥಿಕತೆಯು ಸ್ವಾವಲಂಬಿ ಆಗಿದ್ದಕ್ಕಿಂತ ಬಾಹ್ಯ ನೆರವಿನಿಂದ ಚಲಾವಣೆಯಲ್ಲಿತ್ತು ಎಂಬುದನ್ನು ಅಲ್ಲಿನ ಆರ್ಥಿಕ ತಜ್ಞರೂ ಒಪ್ಪಿಕೊಳ್ಳುತ್ತಾರೆ. ಸ್ವಾತಂತ್ರ್ಯಾನಂತರ ಆರ್ಥಿಕ ನೆರವಿಗೆ ಪಾಕಿಸ್ತಾನವು ಅಮೆರಿಕವನ್ನು ಆಶ್ರಯಿಸಿತ್ತು. ಈಚಿನ ದಶಕಗಳಲ್ಲಿ ಅಷ್ಟೇ ಪ್ರಮಾಣದಲ್ಲಿ ಚೀನಾವನ್ನು ಆಶ್ರಯಿಸಿದೆ. ಅಮೆರಿಕಕ್ಕೆ ಏಷ್ಯಾದಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಒಂದು ದೇಶಬೇಕಾಗಿತ್ತು ಮತ್ತು ಅದಕ್ಕಷ್ಟೇ ಪಾಕಿಸ್ತಾನವನ್ನು ಬಳಸಿಕೊಂಡಿತು. ಅಲ್ಲಿನ ಆರ್ಥಿಕತೆಯನ್ನು ಉತ್ತೇಜಿಸಲು ಅಮೆರಿಕ ಆದ್ಯತೆ ನೀಡಲಿಲ್ಲ. ಅಮೆರಿಕದ ಸೇನಾ ನೆಲೆಯಂತೆ ಬಳಕೆಯಾದುದರ ಪರಿಣಾಮವಾಗಿ ಪಾಕಿಸ್ತಾನವೂ, ಸೇನಾ ಬಲವನ್ನು ಹೆಚ್ಚಿಸಿಕೊಳ್ಳಲೇ ಆದ್ಯತೆ ನೀಡಿತು. ಅದೇ ಅದರ ಆರ್ಥಿಕತೆ ಕುಸಿತಕ್ಕೆ ಕಾರಣವಾಯಿತು ಎಂದು ‘ದಿ ಡಾನ್’ ವಿಶ್ಲೇಷಿಸಿದೆ.

ಪಾಕಿಸ್ತಾನದ ಆರ್ಥಿಕತೆಯ ಬಹುಪಾಲು ಕೊಡುಗೆ ಬರುವುದು ಜವಳಿ ಉದ್ಯಮದಿಂದ. ದೇಶದ ಒಟ್ಟು ಜಿಡಿಪಿಯಲ್ಲಿ ಜವಳಿಯದ್ದೇ ಶೇ 60ರಷ್ಟು ಪಾಲು. ಚೀನಾದ ‘ಒನ್ ಬೆಲ್ಟ್ ಒನ್ ರೋಡ್’ ಕಾರಿಡಾರ್ ಯೋಜನೆಯ ಭಾಗವಾದ ನಂತರ ಪಾಕಿಸ್ತಾನದ ಜವಳಿ ಉದ್ಯಮ ನೆಲಕಚ್ಚಿತು ಎಂದು ವಿಶ್ಲೇಷಿಸಲಾಗಿದೆ.

ಈ ಯೋಜನೆಯ ಭಾಗವಾಗಿ ಚೀನಾದ ಸರಕುಗಳು ಯಾವುದೇ ಸುಂಕವಿಲ್ಲದೆ ಪಾಕಿಸ್ತಾನದ ಮಾರುಕಟ್ಟೆಗೆ ಬಂದವು. ಸುಂಕವಿಲ್ಲದೇ ಇದ್ದ ಕಾರಣ ಕಡಿಮೆ ಬೆಲೆಗೆ ದೊರೆಯುತ್ತಿದ್ದ ಈ ವಸ್ತುಗಳಿಗೆ ಬೇಡಿಕೆ ಹೆಚ್ಚಾಯಿತು. ಸ್ಥಳೀಯ ಉತ್ಪನ್ನಗಳು ದುಬಾರಿಯಾಗಿದ್ದ ಕಾರಣ ಬೇಡಿಕೆ ಕಳೆದುಕೊಂಡವು. ಈ ಯೋಜನೆ ಆರಂಭಕ್ಕೂ ಮುನ್ನ ಪಾಕಿಸ್ತಾನದಲ್ಲಿ ಇದ್ದ ಬೃಹತ್ ಹತ್ತಿ ಗಿರಣಿಗಳು ಮತ್ತು ಸಿದ್ಧ ಉಡುಪು ಕಾರ್ಖಾನೆಗಳ ಸಂಖ್ಯೆ 5,000ದಷ್ಟು. ಆದರೆ ಯೋಜನೆ ಆರಂಭದಿಂದ ಈವರೆಗೆ ಅಂತಹ 1,600ಕ್ಕೂ ಹೆಚ್ಚು ಬೃಹತ್ ಉದ್ಯಮಗಳು ಬಾಗಿಲು ಹಾಕಿವೆ. ಇದು ಜವಳಿ ಉದ್ಯಮದ ಉದಾಹರಣೆ ಅಷ್ಟೆ. ಬೇರೆ ಉದ್ಯಮಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. 2022ರ ಭೀಕರ ನೆರೆ ಆರ್ಥಿಕತೆಯನ್ನು ಮತ್ತಷ್ಟು ಹದಗೆಡಿಸಿತು.



ಬಲೂನುಗಳನ್ನು ಮಾರಾಟ ಮಾಡಲು ಅಪ್ಪನೊಂದಿಗೆ ಹೊರಟ ಮಗು

ರಾಜಕೀಯ ಅಸ್ಥಿರತೆ, ವಿದೇಶಿ ವಿನಿಮಯ ಮೀಸಲು ಕುಸಿತ, ಸಾಲ ತೀರಿಸುವ ಸಾಮರ್ಥ್ಯ ಕ್ಷೀಣಿಸಿರುವುದು ಎಲ್ಲವೂ ಪಾಕಿಸ್ತಾನಕ್ಕೆ ಜಾಗತಿಕ ಮಟ್ಟದ ಆರ್ಥಿಕ ನೆರವಿನ ಬಾಗಿಲುಗಳನ್ನು ಮುಚ್ಚಿವೆ. ದೇಶದ ಜಿಡಿಪಿ ಬೆಳವಣಿಗೆ ದರ ಶೇ 1ಕ್ಕಿಂತಲೂ ಕಡಿಮೆ ಮಟ್ಟಕ್ಕೆ ಕುಸಿದಿದೆ. ಈಗಿನ ಹಣದುಬ್ಬರದ ಪ್ರಮಾಣ ಶೇ 29ರಷ್ಟು ಇದೆ. ಇಂತಹ ಪರಿಸ್ಥಿತಿಯಲ್ಲಿ ಫಲಿತಾಂಶ ಘೋಷಣೆಯಾಗಿ ಹಲವು ವಾರ ಕಳೆದರೂ ಸುಸ್ಥಿರ ಸರ್ಕಾರ ರಚನೆಯಾಗಿಲ್ಲ. ಮಾರ್ಚ್ ಮೊದಲ ವಾರದ ವೇಳೆಗೆ ಈ ರಾಜಕೀಯ ಅಸ್ಥಿರತೆ ಕೊನೆಗೊಳ್ಳದೇ ಇದ್ದರೆ, ಐಎಂಎಫ್ ನೆರವೂ ನಿಂತುಹೋಗುತ್ತದೆ. ಅಂತಹದ್ದೊಂದು ಇಕ್ಕಟ್ಟಿನ ಸ್ಥಿತಿಯಲ್ಲಿ ಪಾಕಿಸ್ತಾನವಿದೆ.

1,600 ಬಾಗಿಲು ಮುಚ್ಚಿದ ಬೃಹತ್ ಜವಳಿ ಉದ್ಯಮಗಳ ಸಂಖ್ಯೆ

7 ಲಕ್ಷ ಇತ್ತೀಚಿನ ವರ್ಷಗಳಲ್ಲಿ ಜವಳಿ ಕ್ಷೇತ್ರದಲ್ಲಿ ಕೆಲಸ ಕಳೆದುಕೊಂಡ ಕಾರ್ಮಿಕರ ಸಂಖ್ಯೆ

29% ಹಣದುಬ್ಬರ ಪ್ರಮಾಣ

ಆಧಾರ: ಪಿಟಿಐ, ರಾಯಿಟರ್ಸ್, ದಿ ಡಾನ್ ಪತ್ರಿಕೆ, ಬಿಬಿಸಿ

‘ಕ್ರೀಂ’ ಟ್ರೇಲರ್ ಬಿಡುಗಡೆ



ಕ್ರೀಂ ಚಿತ್ರತಂಡ

‘ಕಿರಿಕ್ ಪಾರ್ಟಿ’ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಮಿಂಚಿದ ನಟಿ ಸಂಯುಕ್ತ ಹೆಗ್ಡೆ ನಟನೆಯ ‘ಕ್ರೀಂ’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಗ್ನಿ ಶ್ರೀಧರ್ ನಟಿಸಿದ್ದು, ಚಿತ್ರ ಮಾರ್ಚ್ 1ರಂದು ಬಿಡುಗಡೆಯಾಗಲಿದೆ. ಡಿ.ಕೆ. ದೇವೇಂದ್ರ ನಿರ್ಮಿಸಿರುವ ಈ ಚಿತ್ರವನ್ನು ಅಭಿಷೇಕ್ ಬಸಂತ್ ನಿರ್ದೇಶಿಸಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಅಗ್ನಿ ಶ್ರೀಧರ್ ಬರೆದಿದ್ದಾರೆ.

‘ನನಗೆ ಬರವಣಿಗೆಯಲ್ಲಿ ಹೆಚ್ಚು ಆಸಕ್ತಿ. ನಟನೆಯಲ್ಲಿ ಆಸಕ್ತಿ ಇರಲಿಲ್ಲ. ನಿರ್ಮಾಪಕರು ಹಾಗೂ ಹತ್ತಿರದವರ ಒತ್ತಾಯಕ್ಕೆ ನಟಿಸಿದೆ. ‘ಕ್ರೀಂ’ ಎಂದರೆ ಬೀಜಾಕ್ಷರ ಮಂತ್ರ. ಈ ಚಿತ್ರದ ಕಥೆ, ಹಣ ಹಾಗೂ ಅಧಿಕಾರಕ್ಕಾಗಿ ನಡೆಯುವ ಹೆಣ್ಣುಮಕ್ಕಳ ಬಲಿಯನ್ನು ಕುರಿತಾದ ಕಥಾಹಂದರ ಹೊಂದಿದೆ. ಹಲವೆಡೆ ಈ ರೀತಿಯ ಕೃತ್ಯಗಳು ನಡೆಯುತ್ತಲೇ ಇವೆ. ಇಂತಹ ಸೂಕ್ಷ್ಮ ವಿಚಾರವನ್ನು ಈ ಚಿತ್ರದ ಮೂಲಕ ತೋರಿಸಲಾಗಿದೆ’ ಎಂದರು.

ಇದು ಅಭಿಷೇಕ್ ಅವರ ನಿರ್ದೇಶನದ ಚೊಚ್ಚಲ ಸಿನಿಮಾವಾಗಿದೆ. ಐದು ವರ್ಷಗಳ ಬಳಿಕ ಸಂಯುಕ್ತ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದು, ಆ್ಯಕ್ಷನ್ ಸೀಕ್ವೆನ್ಸ್‌ನಲ್ಲೂ ಅವರು ಮಿಂಚಿದ್ದಾರೆ. ಅಚ್ಯುತ್ ಕುಮಾರ್, ಅರುಣ್ ಸಾಗರ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಸೆಟ್ಟೇರುತ್ತಿದೆ ‘ಮೆಜೆಸ್ಟಿಕ್‌-2’

ದರ್ಶನ್ ಅಭಿನಯದ ‘ಮೆಜೆಸ್ಟಿಕ್’ ಚಿತ್ರ ಹಿಟ್ ಆಗಿತ್ತು. 22 ವರ್ಷಗಳ ಬಳಿಕ ‘ಮೆಜೆಸ್ಟಿಕ್‌–2’ ಚಿತ್ರ ಸೆಟ್ಟೇರುತ್ತಿದೆ. ‘ಮೆಜೆಸ್ಟಿಕ್’ ಚಿತ್ರದ ಕಥೆಯಲ್ಲಿ ಕೆಲಸ ಮಾಡಿದ್ದ ರಾಮು ಅವರೇ ಈ ಚಿತ್ರದ ನಿರ್ದೇಶಕರು. ಆದರೆ ಇಲ್ಲಿ ದರ್ಶನ್ ಇಲ್ಲ. ಬದಲಿಗೆ ನಿರ್ಮಾಪಕ, ವಿತರಕ ಶಿಲ್ಪಾ ಶ್ರೀನಿವಾಸ್ ಅವರ ಪುತ್ರ ಭರತ್ ನಾಯಕನಾಗಿ ಪರಿಚಯವಾಗುತ್ತಿದ್ದಾರೆ.

ಅಮ್ಮಾ ಎಂಟರ್‌ಪ್ರೈಸಸ್ ಮೂಲಕ ಟಿ. ಆನಂದಪ್ಪ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಟೈಟಲ್ ಅನಾವರಣಗೊಳಿಸಲಾಯಿತು.


‘ನಾನು ಪಿ.ಎನ್. ಸತ್ಯ, ಪ್ರೇಮ್ ಜೊತೆ ಕೆಲಸ ಮಾಡಿದ್ದೆ. ‘ಮೆಜೆಸ್ಟಿಕ್’ ಸ್ಕ್ರಿಪ್ಟ್ ಬರೆದಿದ್ದು ನಾನೇ. ನಂತರ ಸತ್ಯ ಅವರ ಜೊತೆ ಮನಸ್ತಾಪವಾಗಿ ನನ್ನನ್ನು ಬಿಟ್ಟು ಚಿತ್ರ ಮಾಡಿದರು. ಮೆಜೆಸ್ಟಿಕ್ ಸಿನಿಮಾ ನನ್ನ ಕನಸು, ಅದೀಗ ನನಸಾಗುತ್ತಿದೆ’ ಎಂದರು ನಿರ್ದೇಶಕ ರಾಮು.

ಸಂಹಿತಾ ವಿನ್ಯಾ ನಾಯಕಿ. ವಿನು ಮನಸು ಸಂಗೀತ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ ಈ ಚಿತ್ರಕ್ಕೆ ಇರಲಿದೆ.



ಸಂಹಿತಾ ವಿನ್ಯಾ, ಭರತ್

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 22, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ತ್ರಯೋದಶಿ ಗಂ. 13-22 ನಕ್ಷತ್ರ: ಪುಷ್ಯ ಗಂ. 16-43 ಯೋಗ: ಸೌಭಾಗ್ಯ ಗಂ. 12-12 ಕರಣ: ತೈತಿಲ ಗಂ. 13-22, ಕುಂಭ ಮಾಸದ 09 ನೇ ದಿನ, ಮಳೆನಕ್ಷತ್ರ: ಶತಭಿಷ 1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-54 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 11 ಶಬನ್
ಅದೃಷ್ಟ ಸಂಖ್ಯೆ : 4, 7

ಮೇಷ: ವ್ಯಾಪಾರದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶ ನೋವನ್ನು ತರಲಿದೆ. ಕುಟುಂಬ ವರ್ಗದಲ್ಲಿ ಸಣ್ಣಪುಟ್ಟ ವಿವಾದಗಳು ಉಂಟಾಗಬಹುದು. ಎಲ್ಲಾ ಭಾವನೆಗಳಿಗೆ ಸಕರಾತ್ಮಕ ಪ್ರತಿಕ್ರಿಯೆ ದೊರೆಯಲಿದೆ.

ವೃಷಭ: ಹಣಕಾಸಿನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದರಲ್ಲಿ ವ್ಯತ್ಯಾಸವಾಗಬಹುದು. ಪ್ರಯತ್ನಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ.

ಮಿಥುನ: ಏರುಪೇರಾಗಿದ್ದ ಆರ್ಥಿಕ ಪರಿಸ್ಥಿತಿಯನ್ನು ಸರಿದಾರಿಗೆ ತಂದ ನೆಮ್ಮದಿ ಕಾಣಲಿದೆ. ವೃತ್ತಿಯನ್ನು ಸವಾಲೆಂಬಂತೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತದೆ. ಗೊಂದಲ ಈ ದಿನ ತಿಳಿಯಾಗುತ್ತದೆ.

ಕರ್ಕಾಟಕ: ಈ ದಿನ ಸಾಲ ತೆಗೆದುಕೊಳ್ಳುವುದು ಮತ್ತು ಸಾಲ ಕೊಡುವುದು ಉಚಿತವಲ್ಲ. ಸತ್ಯದ ಹಾದಿಗೆ ಯಾವಾಗಲೂ ಅಡೆತಡೆಗಳಿರುತ್ತವೆ ಎಂಬುದನ್ನು ಮರೆಯದಿರಿ. ಮಹಾಗಣಪತಿಯನ್ನು ಆರಾಧಿಸಿ. ಶುಭವಾಗುವುದು.

ಸಿಂಹ: ಪ್ರೀತಿ ಪಾತ್ರರಲ್ಲಿ ನಿಮ್ಮ ಮನಸ್ಸಿನ ಭಾವನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಸೂಕ್ತವಾದ ದಿನ. ಕುಟುಂಬದಲ್ಲಿ ಎಲ್ಲರ ಆರೋಗ್ಯವೂ ಉತ್ತಮವಾಗಿರುವುದು. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಕನ್ಯಾ: ಮಂದಗತಿಯಲ್ಲಿರುವ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ಒತ್ತಡ ಹೇರುವಿರಿ. ಹಿರಿಯರ ಆಶೀರ್ವಾದ ಲಭಿಸುವುದು. ಮುಕ್ತಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸಿಕೊಳ್ಳಿರಿ.

ತುಲಾ: ಮನೆಯವರ ಸಹಾಯದಿಂದ ಹಿಂದಿನ ಹಣಕಾಸಿನ ತೊಂದರೆಗಳು ದೂರಾಗಿ ಯೋಜನೆಗೆ ಚಾಲನೆಯು ದೊರೆಯಲಿದೆ. ಆರ್ಥಿಕ ಪರಿಸ್ಥಿತಿಯು ದಿನದಿಂದ ದಿನಕ್ಕೆ ಸುಧಾರಣೆಯಾಗುತ್ತದೆ.

ವೃಶ್ಚಿಕ: ಮತ್ಸರ ಗುಣವನ್ನು ಹೊಂದಿದ ಬಂಧುಗಳ ಅಥವಾ ಗೆಳೆಯರ ಯಾವ ಮಾತಿಗೂ ಕಿವಿಗೊಡದಿರಿ. ದುರ್ಗಾಪರಮೇಶ್ವರಿಯ ಆರಾಧನೆಯಿಂದ ವೈಯಕ್ತಿಕ ವ್ಯವಹಾರಗಳಲ್ಲಿ ಇದ್ದ ಇರುಸುಮುರುಸುಗಳು ದೂರಾಗಲಿದೆ.

ಧನು: ಈವರೆಗೆ ಬಾಕಿಯಿದ್ದ ವ್ಯಾಜ್ಯಗಳು ಒಡಹುಟ್ಟಿದವರ ಸಹಾಯದಿಂದ ಬಗೆಹರಿಯುವವು. ದೇವರ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು. ಹಣಕಾಸಿನ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಿಲ್ಲ.

ಮಕರ: ಖರ್ಚು ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ. ದಿನೇ ದಿನೇ ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ. ಬೋಧನೆಯಲ್ಲಿ ವಿಶೇಷ ಪರಿಣತಿ ಹೊಂದಿರುವವರಿಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ.

ಕುಂಭ: ಸಿಬ್ಬಂದಿಯಲ್ಲಿ ಉತ್ಸಾಹ ತುಂಬಿ ನಾಯಕತ್ವದ ಸ್ಥಾನದಲ್ಲಿ ಕೆಲಸ ಕಾರ್ಯಗಳನ್ನು ಪೂರ್ತಿಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಕ್ರಿಯೆ ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ. ಕಾರ್ಯತಂತ್ರ ಸುಧಾರಣೆ ಬಗ್ಗೆ ಚಿಂತಿಸಿ.

ಮೀನ: ಜಾಣ್ಮೆಗೆ ಸಂಬಂಧಪಟ್ಟವರಿಂದ ಸರಿಯಾದ ಪ್ರೋತ್ಸಾಹ ದೊರೆಯಲಿದ್ದು, ಧ್ಯೇಯದಲ್ಲಿ ಗಂಭೀರ ಬದಲಾವಣೆ ಹೊಂದುವಿರಿ. ಸಹೋದ್ಯೋಗಿಯೊಂದಿಗೆ ಮದುವೆ ಪ್ರಸ್ತಾಪ ಬರಲಿದೆ.

ನುಡಿ ಬೆಳಗು

ಭಾರವನ್ನು ಹಗುರವಾಗಿಸಿಕೊಳ್ಳುವ ಬಗೆ



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಹದ್ದುಗಳು ಬಲಶಾಲಿ ಹಕ್ಕಿಗಳು. ತೀಕ್ಷ್ಣದೃಷ್ಟಿಯ ಇವು ದೀರ್ಘ ಜೀವಿತಾವಧಿಯನ್ನು ಹೊಂದಿರುತ್ತವೆ. ಇವುಗಳ ಕುರಿತು ಒಂದು ಚಿಕ್ಕ ಪ್ರತೀತಿಯಿದೆ. ಸಣ್ಣಪುಟ್ಟ ಪಕ್ಷಿಗಳು ಹದ್ದಿನ ತಂಟೆಗೆ ಹೋಗುವುದಿಲ್ಲ. ಆದರೆ ಕಾಗೆ ಮಾತ್ರ ಹದ್ದಿನ ಕುತ್ತಿಗೆಯ ಮೇಲೆ ಕೂತು ಕುಕ್ಕುತ್ತದೆ. ಆದರೆ ಹದ್ದು ತಲೆಕೆಡಿಸಿಕೊಳ್ಳುವುದಿಲ್ಲ. ತನ್ನ ಕುತ್ತಿಗೆಯ ಮೇಲೆ ಕುಳಿತ ಕಾಗೆಯನ್ನು ಲೆಕ್ಕಿಸದೇ ತನ್ನಷ್ಟಕ್ಕೆ ತಾನು ಎತ್ತರೆತ್ತರಕ್ಕೆ ಹಾರುತ್ತಿರುತ್ತದೆ. ಹದ್ದು ಮೇಲೆ ಮೇಲೆ ಹಾರಿದಂತೆ ಕಾಗೆಗೆ ಉಸಿರಾಡಲು ಸಾಧ್ಯವಾಗುವುದಿಲ್ಲ. ಕಾಗೆ ಸುಸ್ತಾಗಿ ಬಿದ್ದುಬಿಡುತ್ತದೆ. ಹದ್ದು ಮಾಮೂಲಿಯಂತೆ ತನ್ನ ಹಾರಾಟವನ್ನು ಮುಂದುವರಿಸುತ್ತದೆ.

ಇದರರ್ಥ ನಾವು ಒಂದು ಗುರಿಯನ್ನು ಇಟ್ಟುಕೊಂಡು ಮುನ್ನಡೆಯುವಾಗ ಹಲವಾರು ಅಡೆತಡೆಗಳು, ಸವಾಲುಗಳು ನಮಗೆ ಎದುರಾಗುತ್ತವೆ. ಕೆಲವು ಸಮಸ್ಯೆಗಳಂತೂ ಹದ್ದಿನ ಕುತ್ತಿಗೆಯ ಮೇಲೆ ಕೂತ ಕಾಗೆಯಂತೆ ಪಟ್ಟಾಗಿ ನಮ್ಮನ್ನು ಹಿಡಿದುಕೊಂಡು ಅವುಗಳಿಂದ ಬಿಡುಗಡೆಯೇ ಇಲ್ಲವೇನೋ ಎನಿಸುವಂತೆ ಮಾಡುತ್ತವೆ. ಉದಾಹರಣೆಗೆ ಬಡತನ, ಕುಟುಂಬದ ಸದಸ್ಯರ ಮರಣ, ಆರೋಗ್ಯ ಸಮಸ್ಯೆ, ಹಳಸಿದ ಸಂಬಂಧ ಇವು ಎಷ್ಟರ ಮಟ್ಟಿಗೆ ಭಾರವಾಗುತ್ತವೆ ಎಂದರೆ ಒಂದು ಸಲ ಈ ಭಾರ ಇಳಿದರೆ ಸಾಕು ಎನ್ನಿಸತೊಡಗಿ ತಕ್ಷಣದ ಪರಿಹಾರ ಕಂಡುಕೊಳ್ಳಲು ಹೊರಡುತ್ತೇವೆ. ಅವುಗಳಿಂದ ಬಿಡುಗಡೆ ಹೊಂದುವತ್ತ ನಮ್ಮ ಪೂರ್ತಿ ಗಮನ ಕೊಟ್ಟು ನಾವು ಮಾಡಬೇಕಾದ ಅತ್ಯಗತ್ಯವಾದ ಕೆಲಸಗಳನ್ನು ಮಾಡದೇ ಗುರಿಯಿಂದ ವಿಮುಖರಾಗಿ ಬಿಡುತ್ತೇವೆ.

ಈ ಸಮಸ್ಯೆಗಳು ಮಾತ್ರವಲ್ಲ, ಟಿ.ವಿ, ಮೊಬೈಲು, ಸಾಮಾಜಿಕ ಜಾಲತಾಣಗಳು ನಮ್ಮ ಗಮನವನ್ನು ಸೆಳೆಯಲು ಸದಾಕಾಲ ಸಿದ್ಧವಿರುತ್ತವೆ. ಅಷ್ಟೇ ಅಲ್ಲ, ಹೊಸದನ್ನು ಮಾಡಹೊರಟಾಗಲಂತೂ ಟೀಕೆ ಟಿಪ್ಪಣಿಗಳು ಸಹಜ. ನಮ್ಮ ಬಗೆಗಿನ ಇತರರ ಅಭಿಪ್ರಾಯಗಳು, ತೀರ್ಪುಗಳಿಗೆ ವಿಚಲಿತರಾಗಿ ಸದಾ ದಿಗಿಲಿನಲ್ಲಿರುವುದು, ಮನೆಯಲ್ಲಿನ ಎಲ್ಲ ಸಮಸ್ಯೆಗಳಿಗೆ ನಾವೇ ಕಾರಣರೆಂಬ ತಪ್ಪಿತಸ್ಥ ಭಾವನೆಯಲ್ಲಿರುವುದು ಇಂತಹ ತಲೆಭಾರದ ಸಂಗತಿಗಳನ್ನು ಹಗುರಗೊಳಿಸಿಕೊಳ್ಳುತ್ತ ಮುನ್ನಡೆಯಬೇಕು.

ಬದುಕಿನಲ್ಲಿ ನಿರೀಕ್ಷಿತ ಅನಿರೀಕ್ಷಿತ ಸಮಸ್ಯೆಗಳು ಬರುವುದು ಅತ್ಯಂತ ಸಾಮಾನ್ಯ ಸಂಗತಿ ಎಂಬುದನ್ನು ಅರ್ಥ ಮಾಡಿಕೊಂಡು ಅವುಗಳ ಕಡೆಗೆ ಅಗತ್ಯ ಇದ್ದಷ್ಟು ಗಮನ ನೀಡಿ ನಿರ್ಲಿಪ್ತವಾಗಿ ನಮ್ಮ ಲಕ್ಷ್ಯದೆಡೆಗೆ ನಾವು ಮುನ್ನಡೆದರೆ ಸವಾಲುಗಳೇ ಅಂತ್ಯವಾಗುತ್ತವೆ. ಹೇಗೆ ಹದ್ದು ಕಾಗೆಯನ್ನು ನಿರ್ಲಕ್ಷಿಸಿ ರೆಕ್ಕೆ ಬಿಚ್ಚಿ ಹಾರುವುದಕ್ಕೆ ಮಾತ್ರ ಗಮನ ಕೊಡುತ್ತದೆಯೋ ಅದೇ ರೀತಿ ನಮ್ಮ ಗುರಿಯಿಂದ ವಿಮುಖರಾಗದೇ ಮುನ್ನಡೆಯುವ ಪ್ರಾಮಾಣಿಕ ಪ್ರಯತ್ನ ಮಾಡುವುದರಿಂದ ನಮ್ಮ ಲಕ್ಷ್ಯ ತಲುಪಬಹುದು. ಇದು ಬರೀ ಗುರಿಸಾಧನೆಯ ಹಾದಿಯಲ್ಲಿ ಮಾತ್ರವಲ್ಲ, ಜೀವನದ ಪ್ರತೀ ಹಂತದಲ್ಲೂ ಅಳವಡಿಸಿ ಕೊಳ್ಳಬೇಕಾದ ಸಂಗತಿ. ❖

ಪದಬಂಧ 5599


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಕ್ರೂರವಾದ ನೋಟ (4)
4.ಮಠದ ಹತ್ತಿರವಿರುವ ಆಮೆ (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು! (3)
6.ದನಕ್ಕಾಗಿಯೇ ನಡೆದ ಯುದ್ಧ (3)
8.ಕಳೆಯುವ ಲೆಕ್ಕವಿದು (5)
10.ಮುಳ್ಳುಗಳ ನಡುವೆ ಅರಳುವ ಹೂವು (3)
12.ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
13.ಜಡಿಮಳೆಯಲ್ಲಿ ತಂದಿರುವ ವಂದರಿ (3)
15.ತೊಂದರೆಯ ನಿವಾರಣೆಗಾಗಿ ಮಾಡುವ ಮನವಿ (4)

ಮೇಲಿಂದ ಕೆಳಕ್ಕೆ

1.ನವಗ್ರಹಗಳಲ್ಲಿ ಇದೊಂದು (2)
2.ಹಣೆಯಲ್ಲಿ ಮುದ್ರೆ ಧರಿಸಿದವನ ಹೆಸರು (2)
3.ತರ್ಕ ಮಾಡುತ್ತಿರುವ ವ್ಯಾಪಾರಿ (3)
4.ಹಸುವಿನ ಮರಿಯಿದು (2)
5.ಎಲ್ಲರನ್ನೂ ಒಂದುಗೂಡಿಸುವುದು (5)
7.ವ್ಯವಧಾನದಲ್ಲೇ ಹೊಸದು ಇದೆ! (2)
9.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
11.ಸೂರ್ಯನ ಕಾವು ಇಲ್ಲಿದೆ (3)
12.ಮಹಡಿಯಲ್ಲಿರುವ ನೈರ್ಮಲ್ಯ (2)
14.ಬೆಲೆ ಬಾಳುವ ಮಣಿ (2)
16.ಚನ್ನಾಗಿ ಮಾತನಾಡುವವನು (2)



5598ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಲಯಜ 3.ಹಸನ್ಮುಖ
5.ಗಜ್ಜರಿ 6.ತಾರುಮಾರು
7.ರಿಯಾಯಿತಿ 9.ತರದೂದು
11.ಸಡಗರ 13.ಚಾಕರ
15.ಜವಾಹಿರಿ 16.ಸದ್ಭಾವನೆ

ಮೇಲಿಂದ ಕೆಳಕ್ಕೆ:
1.ಮಗ್ಗ 2.ಜಗದ್ಗುರು
3.ಹರಿದಾರಿ 4.ಖಗ
6.ತಾಯಿತ 8.ತಿಮಿರ
10.ದುರಾಚಾರಿ 11.ಸಮರಸ
12.ಹುಂಜ 14.ಮನೆ

ಸುಡೊಕು 5984

	9				5		6	
2		6	4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5983 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಈ ವರ್ಷ ಶೇ 9.5ರಷ್ಟು ವೇತನ ಹೆಚ್ಚಳ ಅಂದಾಜು


ನವದೆಹಲಿ (ಪಿಟಿಐ): ಪ್ರಸಕ್ತ ವರ್ಷ ದೇಶದಲ್ಲಿರುವ ಕಂಪನಿಗಳು ತಮ್ಮ ನೌಕರರಿಗೆ ನೀಡುವ ವೇತನದಲ್ಲಿ ಶೇ 9.5ರಷ್ಟು ಏರಿಕೆ ಮಾಡುವ ನಿರೀಕ್ಷೆಯಿದೆ ಎಂದು ಎಒನ್ ವಾರ್ಷಿಕ ವೇತನ ಹೆಚ್ಚಳ ಸಮೀಕ್ಷೆ ಹೇಳಿದೆ.

ದೇಶದ 1,414 ಕಂಪನಿಗಳ ಅಂಕಿ–ಅಂಶಗಳನ್ನು ವಿಶ್ಲೇಷಣೆ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ.

2023ರಲ್ಲಿ ಶೇ 9.7ರಷ್ಟು ವೇತನ ಹೆಚ್ಚಳವಾಗಿತ್ತು. ಇದಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚಳದಲ್ಲಿ ಕೊಂಚ ಕಡಿಮೆಯಾಗಲಿದೆ. 2022ರಲ್ಲಿ ಕಂಪನಿಗಳು ವೇತನವನ್ನು ಹೆಚ್ಚಿಸಿದ್ದವು. ಆ ನಂತರ ನಿರೀಕ್ಷಿತ ಪ್ರಮಾಣದಲ್ಲಿ ಸಂಬಳದ ಏರಿಕೆಯಾಗಿಲ್ಲ ಎಂದು ವರದಿ ಹೇಳಿದೆ.

ಹಣಕಾಸು ಸಂಸ್ಥೆಗಳು, ಎಂಜಿನಿಯರಿಂಗ್, ಔಷಧ, ಬಯೊತಂತ್ರಜ್ಞಾನ, ಬಯೊಮೆಡಿಕಲ್ ಟೆಕ್ನಾಲಜಿ, ಆಹಾರ ಸಂಸ್ಕರಣೆ ವಲಯಗಳಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ವೇತನ ಏರಿಕೆ ಆಗಲಿದೆ. ಚಿಲ್ಲರೆ, ತಂತ್ರಜ್ಞಾನ ಕನ್ಸಲ್ಟೆನ್ಸಿ ಮತ್ತು ಸೇವಾ ವಲಯಗಳಲ್ಲಿ ವೇತನ ಕಡಿಮೆ ನಿಗದಿಯಾಗಲಿದೆ ಎಂದು ಸಮೀಕ್ಷೆಯು ಅಂದಾಜಿಸಿದೆ. 2022ರಲ್ಲಿ ಕಂಪನಿಗಳಲ್ಲಿ ಕೆಲಸ ತೊರೆಯುವ ಉದ್ಯೋಗಿಗಳ ಪ್ರಮಾಣವು ಶೇ 21.4ರಷ್ಟಿತ್ತು. 2023ರಲ್ಲಿ ಶೇ 18.7ಕ್ಕೆ ಇಳಿಕೆಯಾಗಿದೆ. ಆದರೆ, ಉದ್ಯೋಗ ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿದ್ದು, ನಿರ್ದಿಷ್ಟ ಅವಧಿಯೊಳಗೆ ಕಂಪನಿಗಳಲ್ಲಿ ಕೆಲಸ ತೊರೆಯುವ ನೌಕರರ ಸಂಖ್ಯೆ ಏರಿಕೆಯಾಗಬಹುದು ಎಂದು ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,196
ಇಂದಿನ ಅಂತ್ಯ	22,055
▼	141
ದಿನದ ಕನಿಷ್ಠ	21,997

ವಿನಿಮಯ ದರ

$ ಡಾಲರ್	82.96
£ ಪೌಂಡ್	104.63
€ ಯುರೊ	89.61
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1495)
ಸೋಯಾ (ರಿಫೈನ್ಡ್)	₹900 (895)
ಸೂರ್ಯಕಾಂತಿ (ರಿಫೈನ್ಡ್)	₹905 (900)
ಪಾಮೋಲಿನ್	₹860 (858)

ಇನ್ನೂ ಆರಂಭವಾಗದ ಪ್ರಕ್ರಿಯೆ: 25 ಲಕ್ಷ ಕ್ವಿಂಟಲ್ ಕೊಬ್ಬರಿ ಉತ್ಪಾದನೆ– ಸರ್ಕಾರದ ಅಂದಾಜು

ಸಿದ್ಧತೆ ಕೊರತೆ: ನೋಂದಣಿಗೆ ವಿಘ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಕೇಂದ್ರಗಳಲ್ಲಿ ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳದಿರುವುದರಿಂದ ಬುಧವಾರ ಉಂಡೆ ಕೊಬ್ಬರಿ ಖರೀದಿಗೆ ರೈತರ ಹೆಸರು ನೋಂದಣಿ ಪ್ರಕ್ರಿಯೆ ಆರಂಭವಾಗಲಿಲ್ಲ. ಹಾಗಾಗಿ, ಬೆಳಿಗ್ಗೆಯೇ ಕೇಂದ್ರಗಳಿಗೆ ಬಂದಿದ್ದ ನೂರಾರು ರೈತರು ನಿರಾಸೆಯಿಂದ ಮನೆಯತ್ತ ಹೆಜ್ಜೆ ಹಾಕಿದರು.

ಅಗತ್ಯ ತಾಂತ್ರಿಕ ಸಿಬ್ಬಂದಿ, ಕಂಪ್ಯೂಟರ್, 'ಇಂಟರ್‌ನೆಟ್' ಸೇವೆ ಕಲ್ಪಿಸದೆ ಏಕಾಏಕಿ ನೋಂದಣಿ ಆರಂಭಿಸುವುದಾಗಿ ಪ್ರಕಟಿಸಿದ ಕೃಷಿ ಮಾರುಕಟ್ಟೆ ಸಚಿವರ ವಿರುದ್ಧ ರೈತರಿಂದ ಆಕ್ರೋಶ ವ್ಯಕ್ತವಾಯಿತು. ರೈತರ ಹೆಸರಲ್ಲಿ ವರ್ತಕರು ನೋಂದಣಿ ಮಾಡಿಸಿದ್ದಾರೆ ಎಂಬ ಆರೋಪ ವ್ಯಾಪಕವಾಗಿ ಕೇಳಿ ಬಂದಿದ್ದರಿಂದ ಸರ್ಕಾರ ಹಳೆಯ ನೋಂದಣಿಯನ್ನು ರದ್ದುಪಡಿಸಿದ್ದು, ಹೊಸ ನೋಂದಣಿಗೆ 45 ದಿನಗಳ ಕಾಲಾವಕಾಶ ನೀಡಿದೆ.

ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ಸಭೆ ನಡೆಸಿದ ಬಳಿಕ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ವರದಿ ಸಲ್ಲಿಸಬೇಕಿದೆ. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಒಂದು ವಾರ ಬೇಕಿದೆ. ಆ ನಂತರವೇ ರೈತರ ಹೆಸರು ನೋಂದಣಿ ಆರಂಭಿಸಲಾಗುವುದು ಎಂದು ಮಹಾಮಂಡಳದ ಅಧಿಕಾರಿಗಳು ತಿಳಿಸಿದ್ದಾರೆ.

6.25 ಲಕ್ಷ ಕ್ವಿಂಟಲ್ ಖರೀದಿ: ಪ್ರಸಕ್ತ ಖುತುವಿನಡಿ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಒಟ್ಟು 6.25 ಲಕ್ಷ ಕ್ವಿಂಟಲ್ (62,500 ಟನ್) ಕೊಬ್ಬರಿ ಖರೀದಿಗೆ ನಿರ್ಧರಿಸಿದೆ. ಈ ಮಾರುಕಟ್ಟೆ ಖುತುವಿನಲ್ಲಿ ರಾಜ್ಯದಲ್ಲಿ 25 ಲಕ್ಷ ಕ್ವಿಂಟಲ್‌ನಷ್ಟು ಕೊಬ್ಬರಿ ಉತ್ಪಾದನೆ ಆಗಲಿದೆ ಎಂದು ಸರ್ಕಾರ ಅಂದಾಜಿಸಿದೆ. ಸದ್ಯ ಕೇಂದ್ರವು ರಾಜ್ಯದಲ್ಲಿ ಉತ್ಪಾದನೆಯಾಗುವ ಶೇ25ರಷ್ಟನ್ನು ಮಾತ್ರ ಖರೀದಿಸಲಿದೆ.

'ಉತ್ಪಾದನಾ ಪ್ರಮಾಣದ ಶೇ 50ರಷ್ಟನ್ನು ಖರೀದಿಸಬೇಕು. ಕೇರಳ, ತಮಿಳುನಾಡಿಗೆ ನಿಗದಿಪಡಿಸಿರುವ ಮಾನದಂಡವನ್ನೇ ಕರ್ನಾಟಕಕ್ಕೂ ಅನ್ವಯಿಸಬಾರದು ಎಂದು ಪತ್ರ ಬರೆಯಲಾಗಿದೆ. ಆದರೆ, ಇದಕ್ಕೆ ಕೇಂದ್ರದಿಂದ ಇನ್ನೂ ಉತ್ತರ ಬಂದಿಲ್ಲ' ಎಂದು ಮೂಲಗಳು ತಿಳಿಸಿವೆ.

ಖರೀದಿ ಯಾವಾಗ: 'ಮಹಾಮಂಡಳಗಳ ಪೋರ್ಟಲ್‌ನಲ್ಲಿ ನೋಂದಣಿಯಾದ ಕೊಬ್ಬರಿ ಬೆಳೆಗಾರರ ದತ್ತಾಂಶವು ನಾಫೆಡ್‌ನ ಇ–ಸಮೃದ್ಧಿ ಪೋರ್ಟಲ್‌ಗೆ ರವಾನೆಯಾದ ನಂತರ ಖರೀದಿಯನ್ನು ಆರಂಭಿಸಲಾಗುತ್ತದೆ' ಎಂದು ನಾಫೆಡ್‌ನ ರಾಜ್ಯ ಮುಖ್ಯಸ್ಥೆ ಜ್ಯೋತಿ ಪಾಟೀಲ್ ತಿಳಿಸಿದ್ದಾರೆ.



ಹಾಸನ ಜಿಲ್ಲೆಯ ಹಿರೀಸಾವೆಯ ಕೃಷಿ ಪತ್ತಿನ ಸಹಕಾರ ಸಂಘದ ಮುಂಭಾಗ ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಾಯಿಸಲು ರೈತರು ಕಾಯುತ್ತಾ ಕುಳಿತಿದ್ದರು

ಬೆಳೆಗಾರರಿಗೆ ನಿರಾಶೆ

ಚಿಕ್ಕಮಗಳೂರು: ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ ಎಂಬ ಸುದ್ದಿ ತಿಳಿದು ಜಿಲ್ಲೆಯ ಕಡೂರಿನ ನೋಂದಣಿ ಕೇಂದ್ರಕ್ಕೆ ಬಂದಿದ್ದ ರೈತರು ನಿರಾಸೆಯಿಂದ ಮನೆಯತ್ತ ತೆರಳಿದರು. ಜಿಲ್ಲಾಧಿಕಾರಿಯಿಂದ ಆದೇಶ ಬಂದ ಬಳಿಕ ನೋಂದಣಿಯ ದಿನಾಂಕವನ್ನು ಪ್ರಕಟಿಸಲಾಗುವುದು ಎಂದು ಎಪಿಎಂಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರೈತರ ನಿರಾಸಕ್ತಿ: ದಕ್ಷಿಣ ಕನ್ನಡ ಜಿಲ್ಲೆಯ ತೆಂಗು ಬೆಳೆಗಾರರು ಬೆಂಬಲ ಬೆಲೆಯಡಿ ಕೊಬ್ಬರಿ ಮಾರಾಟಕ್ಕೆ ಅಷ್ಟಾಗಿ ಆಸಕ್ತಿ ತೋರಿಸುತ್ತಿಲ್ಲ.

'ಜಿಲ್ಲೆಯಲ್ಲಿ ಈಚೆಗೆ ನಡೆದ ನೋಂದಣಿ ವೇಳೆ ಐದಾರು ಮಂದಿ ಮಾತ್ರ ಈ ಬಗ್ಗೆ ವಿಚಾರಿಸಿದ್ದರು. ಇಬ್ಬರು ರೈತರ ಹೊರತಾಗಿ ಯಾರೂ ಮಾರಾಟಕ್ಕೆ ಆಸಕ್ತಿ ತೋರಿಸಿಲ್ಲ' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರೈತರಿಗೆ ಮನವರಿಕೆ: ಚಿತ್ರದುರ್ಗ ಜಿಲ್ಲೆಯಲ್ಲೂ ನೋಂದಣಿ ಶುರುವಾಗಿಲ್ಲ.

'ತಂತ್ರಾಂಶದಲ್ಲಿ ಕೆಲ ಬದಲಾವಣೆ ಮಾಡುತ್ತಿರುವುದರಿಂದ ವಿಳಂಬವಾಗುತ್ತಿದೆ. ಇದನ್ನು ರೈತರಿಗೆ ಮನವರಿಕೆ ಮಾಡಿಕೊಡಲಾಗಿದೆ' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಜಿಲ್ಲಾ ಶಾಖಾ ವ್ಯವಸ್ಥಾಪಕ ಬಸವೇಶ ಎಸ್. ನಾಡಿಗರ್ ತಿಳಿಸಿದ್ದಾರೆ.

ಖರೀದಿ ಪ್ರಮಾಣ ಕಡಿತಕ್ಕೆ ಆಕ್ಷೇಪ

ಹಾಸನ: ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಕೊಬ್ಬರಿ ಖರೀದಿಸುವುದಾಗಿ ಕೇಂದ್ರ ಸರ್ಕಾರವು ಈ ಹಿಂದೆ ಪ್ರಕಟಿಸಿತ್ತು. ಹೊಸ ಆದೇಶದಲ್ಲಿ 15 ಕ್ವಿಂಟಲ್‌ಗೆ ಇಳಿಸಲಾಗಿದೆ ಎಂದು ಕರ್ನಾಟಕ ರಾಜ್ಯ ತೆಂಗು ಬೆಳೆಗಾರರ ಹೋರಾಟ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

'ರೈತರ ಬಳಿ ದಾಸ್ತಾನಿರುವ ಕೊಬ್ಬರಿ ಪೈಕಿ ಶೇ 50ರಷ್ಟನ್ನು ಖರೀದಿಸಬೇಕು' ಎಂದು ಸಮಿತಿಯ ಅಧ್ಯಕ್ಷ ಜಿ.ಪಿ. ಬಯ್ಯಾರೆಡ್ಡಿ ಒತ್ತಾಯಿಸಿದ್ದಾರೆ.

ಹೊಸ ತಂತ್ರಾಂಶ ಅಳವಡಿಕೆ: 'ಈ ಹಿಂದೆ ಹೆಚ್ಚು ಕಂಪ್ಯೂಟರ್‌ಗಳನ್ನು ಬಳಸಿಕೊಂಡು, ಅಂತರ ಜಿಲ್ಲೆಯವರು ಹೆಸರನ್ನು ನೋಂದಾಯಿಸಿರುವುದು ಪತ್ತೆಯಾಗಿದೆ. ಹೊಸ ತಂತ್ರಾಂಶ ಸಿದ್ಧಪಡಿಸಲು ಒಂದು ವಾರ ಬೇಕಿದೆ. ಆಯಾ ಜಿಲ್ಲೆಯವರು ನಿಗದಿಪಡಿಸಿರುವ ಸ್ಥಳಗಳಲ್ಲಿಯೇ ನೋಂದಣಿ ಮಾಡಿಸಲು ಅನುಕೂಲವಾಗುವಂತೆ ತಂತ್ರಾಂಶವನ್ನು ರೂಪಿಸಲಾಗುವುದು' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

> ಹೋಬಳಿಮಟ್ಟದಲ್ಲೂ ಖರೀದಿ ಕೇಂದ್ರ ತೆರೆಯಬೇಕು. ಕೇಂದ್ರದಲ್ಲಿ ಕನಿಷ್ಠ ನಾಲ್ಕು ಕಂಪ್ಯೂಟರ್‌ಗಳು ಹಾಗೂ ಬೆರಳಚ್ಚು ಯಂತ್ರ ಇಟ್ಟರೆ ರೈತರಿಗೆ ಅನುಕೂಲವಾಗಲಿದೆ
>
> **ದಿನೇಶ್,** ರೈತ, ಯಳಗೊಂಡನಹಳ್ಳಿ, ಕಡೂರು ತಾಲ್ಲೂಕು

ಎಲ್ಲೆಲ್ಲಿ ಖರೀದಿ?

- ತುಮಕೂರು
- ಮೈಸೂರು
- ಚಾಮರಾಜನಗರ
- ಹಾಸನ
- ಚಿಕ್ಕಮಗಳೂರು
- ಚಿತ್ರದುರ್ಗ
- ಮಂಡ್ಯ
- ಮೈಸೂರು
- ದಕ್ಷಿಣ ಕನ್ನಡ
- ರಾಮನಗರ

ಖರೀದಿಗೆ ನಿಗದಿಯಾಗದ ದಿನಾಂಕ

ತುಮಕೂರು: ಜಿಲ್ಲೆಯಲ್ಲಿ ರೈತರ ಹೆಸರು ನೋಂದಣಿ ಸಂಬಂಧ ಜಿಲ್ಲಾಡಳಿತ ಸಭೆ ನಡೆಸಿದರೂ ದಿನಾಂಕವನ್ನು ನಿಗದಿಪಡಿಸಿಲ್ಲ. ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆಯಿಂದ ಬರುವ ನಿರ್ದೇಶನ ನೋಡಿಕೊಂಡು ಮುಂದಿನ ನಿರ್ಧಾರ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು (ಎಪಿಎಂಸಿ) ಖರೀದಿ ಏಜೆನ್ಸಿಯನ್ನಾಗಿ ನೇಮಿಸಲಾಗಿದೆ. ಎಪಿಎಂಸಿ ಬಳಿ ಸಿಬ್ಬಂದಿ, ಕಂಪ್ಯೂಟರ್ ಕೊರತೆ ಇದ್ದು, ಮೂಲ ಸೌಕರ್ಯ ಒದಗಿಸಿದ ನಂತರವೇ ನೋಂದಣಿ ಪ್ರಕ್ರಿಯೆಗೆ ಚಾಲನೆ ಸಿಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹307-431
ದ್ವಿತಳಿ (ಬಿ.ವಿ)	₹276-541

ಸಾರ್ವಜನಿಕ ಪ್ರಕಟಣೆ

ಕರ್ನಾಟಕದ ಉಚ್ಚ ನ್ಯಾಯಾಲಯ ಬೆಂಗಳೂರು
(ಮೂಲ ನ್ಯಾಯವ್ಯಾಪ್ತಿ)
ಕಂಪನಿ ಅರ್ಜಿ ಸಂಖ್ಯೆ. 231/2011
ಈ ವಿಷಯದಲ್ಲಿ :
ಕಂಪನಿಗಳ ಕಾಯ್ದೆ 1956, ಸೆಕ್ಷನ್ಸ್ 433 ಮತ್ತು 434
ಮತ್ತು
ಈ ವಿಷಯದಲ್ಲಿ:
ಕಂಪ್ಯೂಟೆಕ್ ಇಂಡಿಯಾ ಲಿಮಿಟೆಡ್
ಇವರ ನಡುವೆ:

1. ಕೊಟಕ್ ಮಹಿಂದ್ರ ಬ್ಯಾಂಕ್ ಲಿಮಿಟೆಡ್, ಒಂದು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಅರ್ಥದಲ್ಲಿ ಬ್ಯಾಂಕಿಂಗ್ ಕಂಪನಿ ಮತ್ತು ಕಂಪನಿಗಳ ಕಾಯಿದೆ, 1956ರ ಅಡಿಯಲ್ಲಿ ನೋಂದಾಯಿಸಲಾಗಿದೆ. 36–38ಎ, ನಾರಿಮನ್ ಭವನ, 227, ನಾರಿಮನ್ ಪಾಯಿಂಟ್, ಮುಂಬೈ–400021. ಇಲ್ಲಿ ಅದರ ನೊಂದಾಯಿತ ಕಛೇರಿ ಹೊಂದಿದೆ. 1ನೇ ಮಹಡಿ, ಹೀರಾ ಪ್ಯಾರಡೈಸ್, 487, 9ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು –560011. ಇಲ್ಲಿ ಶಾಖಾ ಕಛೇರಿ ಹೊಂದಿದೆ. ಪ್ರತಿನಿಧಿಸುವವರು ಅದರ ಹಿರಿಯ ಪ್ರಬಂಧಕರು ...ಅರ್ಜಿದಾರರ ಸಂಖ್ಯೆ.1
2. ಭಾರತೀಯ ಸ್ಟೇಟ್ ಬ್ಯಾಂಕ್, ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು–560001. ಪ್ರತಿನಿಧಿಸುವವರು ಅದರ ಹಿರಿಯ ಪ್ರಬಂಧಕರು ...ಅರ್ಜಿದಾರರ ಸಂಖ್ಯೆ.2

ಮತ್ತು:

ಕಂಪ್ಯೂಟೆಕ್ ಇಂಡಿಯಾ ಲಿಮಿಟೆಡ್, ಕಂಪನಿ ಕಾಯಿದೆ, 1956 ರ ನಿಬಂಧನೆಗಳ ಅಡಿ ಸಂಘಟಿತವಾದ ಕಂಪನಿ ಮತ್ತು ನಂ.29, ಕೆಹೆಚ್ ರಸ್ತೆ, ನಂಜಪ್ಪ ಮ್ಯಾನ್ಷನ್, ಬೆಂಗಳೂರು–560027. ಇಲ್ಲಿ ತನ್ನ ನೊಂದಾಯಿತ ಕಛೇರಿ ಹೊಂದಿದೆ. ಪ್ರತಿನಿಧಿಸುವವರು ಅದರ ವ್ಯವಸ್ಥಾಪಕ ನಿರ್ದೇಶಕರು ಶ್ರೀ ಶಶಾಂಕ್ ಎಂ ಷಾ ...ಪ್ರತಿವಾದಿ

ಕೊನೆಯ ಆದೇಶದ ನೋಟಿಸು

ದಿನಾಂಕ: 9ನೇ ಫೆಬ್ರುವರಿ, 2024 ರಂದು ಮೇಲಿನ ವಿಷಯದಲ್ಲಿ ಬೆಂಗಳೂರಿನಲ್ಲಿರುವ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯ ನೀಡಿದ ಆದೇಶದ ಮೂಲಕ ಕಂಪನಿಗಳ ಕಾಯಿದೆ, 1956 ರ ನಿಬಂಧನೆಗಳ ಅಡಿಯಲ್ಲಿ ಮೇಲೆ ಹೆಸರಿಸಲಾದ ಕಂಪನಿಯನ್ನು ಮುಚ್ಚಲು ಆದೇಶಿಸಲಾಯಿತು.

ದಿನಾಂಕ: 21.02.2024

ಅರ್ಜಿದಾರರ ಸಂಖ್ಯೆ1 ರವರ ಪರ ವಕೀಲರು
ಶ್ರೀ ಓ.ಪಿ.ಅಗರ್‌ವಾಲ್
ಶ್ರೀ ವಿ.ಜೆ.ಅಚಲಾನಂದ, ವಕೀಲರು,
ಎಂಬೆಸ್ಸಿ ಕ್ಯೂಬ್ಸ್, 3ನೇ ಮಹಡಿ,
45/1 ಮ್ಯಾಗ್ರತ್ ರಸ್ತೆ,
ಬೆಂಗಳೂರು–560025, ಇಂಡಿಯಾ

ಪಾಕಿಸ್ತಾನ: ಪಿಪಿಪಿ, ಪಿಎಂಎಲ್–ಎನ್ ನಡುವೆ ಮೂಡಿದ ಮೈತ್ರಿ

ಶೆಹಬಾಜ್ ಪ್ರಧಾನಿ, ಜರ್ದಾರಿ ಅಧ್ಯಕ್ಷ


ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಚುನಾವಣೆಯಲ್ಲಿ ಅತಂತ್ರ ಜನಾದೇಶದಿಂದ ಉಂಟಾಗಿದ್ದ ರಾಜಕೀಯ ಅನಿಶ್ಚಿತತೆ ಕೊನೆಗೊಳ್ಳುವ ಮಹತ್ವದ ಬೆಳವಣಿಗೆ ನಡೆದಿದೆ.

ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ ಮತ್ತು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ನಡುವಣ ಮಾತುಕತೆ ಕೊನೆಗೂ ಫಲಪ್ರದವಾಗಿದ್ದು, ಉಭಯ ಪಕ್ಷಗಳು ಸಮ್ಮಿಶ್ರ ಸರ್ಕಾರ ರಚನೆಯ ಅಧಿಕಾರ ಹಂಚಿಕೆಯ ಒಪ್ಪಂದಕ್ಕೆ ಸಮ್ಮತಿಸಿವೆ.


ಮಂಗಳವಾರ ತಡರಾತ್ರಿ ಇಲ್ಲಿನ ಜರ್ದಾರಿ ಹೌಸ್‌ನಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಅಧ್ಯಕ್ಷ ಬಿಲಾವಲ್ ಭುಟ್ಟೊ-ಜರ್ದಾರಿ ಅವರು, 'ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಅಧ್ಯಕ್ಷ ಶೆಹಬಾಜ್ ಷರೀಫ್ (72) ಅವರು ಮತ್ತೊಮ್ಮೆ ಪ್ರಧಾನಿಯಾಗಿ ಅಧಿಕಾರ ನಡೆಸಲಿದ್ದಾರೆ' ಎಂದು ಘೋಷಿಸಿದರು.

ಅಂತೆಯೇ, ಪಿಪಿಪಿ ಸಹ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ (68) ಅವರು ಅಧ್ಯಕ್ಷ ಗಾದಿಗೆ ಜಂಟಿ ಅಭ್ಯರ್ಥಿಯಾಗಲಿದ್ದಾರೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಲಾವಲ್, 'ಪಿಪಿಪಿ ಮತ್ತು ಪಿಎಂಎಲ್-ಎನ್ ಬಹುಮತಕ್ಕೆ ಅಗತ್ಯವಿರುವ ಸಂಖ್ಯಾಬಲವನ್ನು ಸಾಧಿಸಿವೆ. ನಾವು ಈಗ ಸರ್ಕಾರ ರಚಿಸುವ ಸ್ಥಿತಿಯಲ್ಲಿದ್ದೇವೆ. ಈ ರಾಜಕೀಯ ಮೈತ್ರಿಯು ದೇಶದ ಅರ್ಥ ವ್ಯವಸ್ಥೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ' ಎಂದು ಹೇಳಿದರು.



ಶೆಹಬಾಜ್



ಜರ್ದಾರಿ

ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷದ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು ಮತ್ತು ಸುನ್ನಿ ಇತ್ತೆಹಾದ್ ಕೌನ್ಸಿಲ್ (ಎಸ್‌ಐಸಿ) ಕೇಂದ್ರದಲ್ಲಿ ಸರ್ಕಾರ ರಚನೆಗಾಗಿ ಸಂಸತ್ತಿನಲ್ಲಿ ಸರಳ ಬಹುಮತ ಸಾಧಿಸಲು ವಿಫಲವಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶೆಹಬಾಜ್, ಕೇಂದ್ರದಲ್ಲಿ ಸರ್ಕಾರ ರಚಿಸಲು ಎರಡೂ ಪಕ್ಷಗಳು ಉತ್ತಮ ಸ್ಥಿತಿಯಲ್ಲಿವೆ. ಅಲ್ಲದೆ, ಉಭಯ ಪಕ್ಷಗಳಲ್ಲಿ ಒಗ್ಗಟ್ಟು ಇದೆ ಎಂದರು.

ಪಿಪಿಪಿ ಯಾವುದಾದರೂ ಖಾತೆಗಳನ್ನು ಪಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶೆಹಬಾಜ್, ಬಿಲಾವಲ್ ನೇತೃತ್ವದ ಪಕ್ಷವು ಮೊದಲ ದಿನದಿಂದ ಯಾವುದೇ ಖಾತೆಗಳಿಗೆ ಬೇಡಿಕೆ ಇಟ್ಟಿಲ್ಲ ಎಂದು ಹೇಳಿರುವುದಾಗಿ 'ದಿ ನ್ಯೂಸ್ ಇಂಟರ್‌ನ್ಯಾಷನಲ್' ವರದಿ ಮಾಡಿದೆ.

266 ಸದಸ್ಯ ಬಲದ ರಾಷ್ಟ್ರೀಯ ಅಸೆಂಬ್ಲಿ ಅಥವಾ ಸಂಸತ್ತಿನ ಕೆಳಮನೆಯಲ್ಲಿ ಚುನಾವಣೆ ನಡೆದಿರುವ 265 ಸ್ಥಾನಗಳಲ್ಲಿ ಸರ್ಕಾರ ರಚಿಸಲು ಯಾವುದೇ ಪಕ್ಷಕ್ಕೆ 133 ಸದಸ್ಯರ ಬೆಂಬಲ ಬೇಕು. ಫೆ. 8ರಂದು ಪಾಕಿಸ್ತಾನ ರಾಷ್ಟ್ರೀಯ ಅಸೆಂಬ್ಲಿಗೆ ಚುನಾವಣೆ ನಡೆದಿತ್ತು.

ಮರು ಚುನಾವಣೆ ಕೋರಿದ್ದ ಅರ್ಜಿ ವಜಾ

ಇಸ್ಲಾಮಾಬಾದ್ (ಪಿಟಿಐ): ಫೆಬ್ರುವರಿ 8ರ ಸಾರ್ವತ್ರಿಕ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳು ಕೇಳಿ ಬಂದಿರುವ ಕಾರಣ ಮರು ಚುನಾವಣೆ ನಡೆಸಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಪಾಕಿಸ್ತಾನದ ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ಪ್ರಚಾರಕ್ಕಾಗಿ ಈ ಅರ್ಜಿ ಸಲ್ಲಿಸಲಾಗಿದೆ ಎಂದಿರುವ ಮುಖ್ಯ ನ್ಯಾಯಮೂರ್ತಿ ಖಾಜಿ ಫಯಾಜ್ ಇಸಾ ಅವರನ್ನೊಳಗೊಂಡ ನ್ಯಾಯಪೀಠವು, ಅರ್ಜಿದಾರರಾದ ನಿವೃತ್ತ ಬ್ರಿಗೇಡಿಯರ್ ಅಲಿ ಖಾನ್ ಅವರಿಗೆ 5 ಲಕ್ಷ ಪಾಕಿಸ್ತಾನ ರೂಪಾಯಿ (₹1.48 ಲಕ್ಷ) ದಂಡ ವಿಧಿಸಿದೆ. ಅಲಿ ಖಾನ್ ಅವರು ವಿಚಾರಣೆಗೆ ಹಾಜರಾಗಿರಲಿಲ್ಲ.

ಮರು ಚುನಾವಣೆ ಕೋರಿರುವ ಅರ್ಜಿಯನ್ನು ತಿರಸ್ಕರಿಸುವ ಮೂಲಕ ನ್ಯಾಯಾಲಯವು, ಮೈತ್ರಿ ಸರ್ಕಾರ ರಚನೆಯ ಹಾದಿಯನ್ನು ಸುಗಮಗೊಳಿಸಿದೆ.

ನ್ಯಾಯಾಂಗದ ಮೇಲ್ವಿಚಾರಣೆಯಲ್ಲಿ 30 ದಿವಸಗಳೊಳಗೆ ಮರು ಚುನಾವಣೆ ನಡೆಸಬೇಕು ಎಂದು ಅಲಿ ಖಾನ್ ಅರ್ಜಿಯಲ್ಲಿ ಕೋರಿದ್ದರು.

ಪಾರದರ್ಶಕ ತನಿಖೆ ನಡೆಯಲಿ: ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳು ಕೇಳಿ ಬಂದಿರುವ ಕಾರಣ, ಸಂಪೂರ್ಣ ಮತ್ತು ಪಾರದರ್ಶಕ ತನಿಖೆ ನಡೆಯಲಿ ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯು ಮಿಲ್ಲರ್ ಹೇಳಿದರು.

ಚುನಾವಣಾ ಅಕ್ರಮದ ಕುರಿತು ರಾವಲ್ಪಿಂಡಿಯ ಮಾಜಿ ಕಮಿಷನರ್ ಲಿಯಾಕತ್ ಅಲಿ ಚಟ್ಟಾ ಅವರು ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಿ ಮ್ಯಾಥ್ಯು ಅವರು ಈ ಹೇಳಿಕೆ ನೀಡಿದ್ದಾರೆ. ಚುನಾವಣಾ ಅಕ್ರಮದಲ್ಲಿ ಮುಖ್ಯ ಚುನಾವಣಾ ಆಯುಕ್ತರು ಮತ್ತು ಮುಖ್ಯ ನ್ಯಾಯಮೂರ್ತಿಗಳು ಶಾಮೀಲಾಗಿದ್ದಾರೆ ಎಂದು ಈಚೆಗೆ ಲಿಯಾಕತ್ ಅವರು ಆರೋಪಿಸಿದ್ದರು. ಈ ಆರೋಪವನ್ನು ಚುನಾವಣಾ ಆಯೋಗವು ಅಲ್ಲಗಳೆದಿತ್ತು.

ಮುಂಬೈ ಧಾರಣೆ

ಶೇಂಗಾ

21-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1505)
ಒಂದು ವಾರದ ಡೆಲಿವರಿ	1495 (1500)
ಸೋಯಾ ಕಚ್ಚಾ	860 (857)
ಪಾಮ್ ವಾರದ ಡೆಲಿವರಿ	858 (856)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹62,000 (61,850)

ಬೆಳ್ಳಿ ಕೆ.ಜಿ ₹70,750 (70,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹161.50
ಆರ್‌ಎಸ್‌ಎಸ್-5	₹156.50
ಗುಡ್ ಲಾಟ್	₹140

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7200-9300
ತಿಪಟೂರು	₹8000-9000
ತುಮಕೂರು	₹8800-9800

ಸೇಬು ಮೇಲಿನ ಆಮದು ಸುಂಕ ರದ್ದು

ವಾಷಿಂಗ್ಟನ್ (ಪಿಟಿಐ): ಅಮೆರಿಕದಿಂದ ಆಮದಾಗುತ್ತಿದ್ದ ಸೇಬು ಸೇರಿದಂತೆ ಹಲವು ಸರಕುಗಳ ಮೇಲೆ 2019ರಲ್ಲಿ ವಿಧಿಸಿದ್ದ ಶೇ 20ರಷ್ಟು ಹೆಚ್ಚುವರಿ ಕಸ್ಟಮ್ಸ್ ಸುಂಕವನ್ನು ಭಾರತ ಹಿಂಪಡೆದಿದೆ.

ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ಸಂತಸಗೊಂಡ ಅಮೆರಿಕದ ಸಂಸದರು ಹಾಗೂ ಸೇಬು ಬೆಳೆಗಾರರು ಸಿಯಾಟಲ್ ಬಂದರಿನಲ್ಲಿ ಸಂಭ್ರಮಾಚರಣೆ ನಡೆಸಿದ್ದಾರೆ. ವಾಷಿಂಗ್ಟನ್ ರಾಜ್ಯದಿಂದ ಈ ಖುತುವಿನಲ್ಲಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಭಾರತಕ್ಕೆ ಸೇಬು ರವಾನೆಯಾಗುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	520
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-33000
ಹಳತು	33000-42500
ಕುಮಟ	
ಚಿಪ್ಪು	24169-29099
ಕೋಕ	15019-25559
ಫ್ಯಾಕ್ಟರಿ	11019-19699
ಹಳೆಚಾಲಿ	33069-35688
ಹೊಸಚಾಲಿ	29019-32599
ಸಾಗರ	
ಸಿಪ್ಪೆಗೋಟು	16500-17250
ಕಾರ್ಕಳ	
ಹೊಸತು	25000-34000
ಹಳತು	30000-43500
ಶಿವಮೊಗ್ಗ	
ಬೆಟ್ಟೆ	43399-54399
ಗೊರಬಲು	17000-33559
ರಾಶಿ	32009-48199
ಸರಕು	54359-81669
ಸಿದ್ದಾಪುರ	
ಬಿಳಿಗೋಟು	26899-28419
ಚಾಲಿ	35209-37099
ಕೋಕ	25499-30019
ಹೊಸಚಾಲಿ	29509-33399
ಕೆಂಪುಗೋಟು	31089-34699
ರಾಶಿ	44009-46969
ತಟ್ಟಿಬೆಟ್ಟೆ	38109-46099
ಶಿರಸಿ	
ಬೆಟ್ಟೆ	38199-43899
ಬಿಳಿಗೋಟು	24299-31298
ಚಾಲಿ	35208-38059
ಕೆಂಪುಗೋಟು	28418-31618
ರಾಶಿ	43208-47409
ಯಲ್ಲಾಪುರ	
ಬಿಳಿಗೋಟು	22109-26009
ಚಾಲಿ	29899-37499
ಕೋಕ	14601-25869
ಕೆಂಪುಗೋಟು	25100-33215
ರಾಶಿ	43290-50699
ತಟ್ಟಿಬೆಟ್ಟೆ	36860-42590

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14,100	-	191.60 ಸೇಂಟ್ಸ್
ಎಸಿ	-	7,700	-	
ಆರ್‌ಪಿ	-	13,500	-	ಲಂಡನ್
ಆರ್‌ಸಿ	-	280 on OT	-	3,248 ಡಾಲರ್ಸ್

ಷೇರುಪೇಟೆ ಸೂಚ್ಯಂಕಗಳು ಕುಸಿತ

ನವದೆಹಲಿ (ಪಿಟಿಐ): ಸತತ ಆರು ದಿನಗಳಿಂದ ಏರಿಕೆ ಕಂಡಿದ್ದ ಷೇರುಪೇಟೆ ಸೂಚ್ಯಂಕಗಳು ಬುಧವಾರ ಇಳಿಕೆ ಕಂಡಿವೆ.

ಹೂಡಿಕೆದಾರರು ಲಾಭ ಮಾಡಿಕೊಳ್ಳುವುದರತ್ತ ಗಮನ ಹರಿಸಿದ್ದರಿಂದ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 434 ಅಂಶ ಕುಸಿದು 72,623ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 141 ಅಂಶ ಇಳಿಕೆಯಾಗಿ 22,055ಕ್ಕೆ ಕೊನೆಗೊಂಡಿತು.

ಜೀ ಷೇರು ಕುಸಿತ: ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಜಿಇಇಎಲ್) ಷೇರಿನ ಮೌಲ್ಯ ಶೇ 15ರಷ್ಟು ಇಳಿಕೆಯಾಗಿದೆ.

ಕಂಪನಿಯ ವಹಿವಾಟಿನಲ್ಲಿ ಅವ್ಯವಹಾರ ನಡೆದಿರುವುದನ್ನು ಸೆಬಿ ಪತ್ತೆ ಹಚ್ಚಿದೆ ಎಂಬ ಸುದ್ದಿಯು ಷೇರುಗಳ ಕುಸಿತಕ್ಕೆ ಕಾರಣವಾಗಿದೆ. ಆದರೆ, ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಕಂಪನಿಯ ವಕ್ತಾರರು ಸ್ಪಷ್ಟನೆ ನೀಡಿದ್ದಾರೆ.

ಪೇಟಿಎಂ ಷೇರು ಏರಿಕೆ: ಪೇಟಿಎಂ ಷೇರುಗಳು ಸತತ ನಾಲ್ಕನೇ ದಿನವೂ ಶೇ 5ರಷ್ಟು ಏರಿಕೆ ಆಗಿವೆ. ಬಿಎಸ್‌ಇ ಮತ್ತು ಎನ್‌ಎಸ್‌ಇ ಷೇರಿನ ಬೆಲೆ ಕ್ರಮವಾಗಿ ₹395.25 ಮತ್ತು ₹395.05 ಆಗಿದೆ.

ರಾಂಚಿಯಲ್ಲಿ ನಾಳೆಯಿಂದ ಭಾರತ– ಇಂಗ್ಲೆಂಡ್ ನಡುವೆ ನಾಲ್ಕನೇ ಟೆಸ್ಟ್

ಧೋನಿಯ ತವರಲ್ಲಿ ಜುರೇಲ್ ಕನಸು



ಭಾರತ ತಂಡದ ಧ್ರುವ ಜುರೇಲ್ —ಪಿಟಿಐ ಚಿತ್ರ

ರಾಂಚಿ (ಪಿಟಿಐ): ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿರುವ ಭಾರತ ತಂಡದ ಯುವ ವಿಕೆಟ್‌ಕೀಪರ್ ಧ್ರುವ ಜುರೇಲ್ ಅವರು ಈಗ ಅಪಾರ ಉತ್ಸಾಹದಲ್ಲಿದ್ದಾರೆ.

ತಮ್ಮ ಆದರ್ಶಪ್ರಾಯ ಆಟಗಾರ ಮಹೇಂದ್ರಸಿಂಗ್ ಧೋನಿಯವರ ಊರಿನಲ್ಲಿ ಕಣಕ್ಕಿಳಿಯಲು ಕಾತುರರಾಗಿದ್ದಾರೆ. ಅಷ್ಟೇ ಅಲ್ಲ. ಭಾರತ ಕ್ರಿಕೆಟ್ ರಂಗ ಕಂಡ ಅತ್ಯಂತ ಯಶಸ್ವಿ ನಾಯಕ ಮತ್ತು ವಿಕೆಟ್‌ಕೀಪರ್ ಆಗಿದ್ದ ಧೋನಿ ಅವರನ್ನು ಭೇಟಿಯಾಗುವ ನಿರೀಕ್ಷೆಯಲ್ಲಿದ್ದಾರೆ.

ರಾಜ್‌ಕೋಟ್ ಟೆಸ್ಟ್‌ನಲ್ಲಿ ಜುರೇಲ್ ಅವರು ಪದಾರ್ಪಣೆ ಮಾಡಿದ್ದರು. ಮೊದಲ ಇನಿಂಗ್ಸ್‌ನಲ್ಲಿ ಚೆಂದದ ಬ್ಯಾಟಿಂಗ್ ಮಾಡಿ 46 ರನ್ ಗಳಿಸಿದ್ದರು. ಕೀಪಿಂಗ್‌ನಲ್ಲಿ ಉತ್ತಮ ಕೌಶಲ ತೋರಿದ್ದರು. ಮೂರು ವರ್ಷಗಳ ಹಿಂದೆ ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸಿದ್ದ ಜುರೇಲ್ ಪಂದ್ಯವೊಂದರಲ್ಲಿ ಧೋನಿಯವರನ್ನು ಭೇಟಿಯಾಗಿದ್ದರಂತೆ. ಇದೀಗ ಧೋನಿಯನ್ನು ಅವರದ್ದೇ ತವರಿನಲ್ಲಿ ಭೇಟಿಯಾಗುವ ಹುಮ್ಮಸ್ಸು 23 ವರ್ಷದ ಜುರೇಲ್ ಅವರದ್ದು.

‘ಮಹಿ ಭಾಯ್ (ಸಹೋದರ) ಅವರನ್ನು ಭೇಟಿಯಾಗುವುದು ನನ್ನ ಬಹುದಿನಗಳ ಕನಸಾಗಿತ್ತು. ಐಪಿಎಲ್ ಸಂದರ್ಭದಲ್ಲಿ ಒಂದು ಬಾರಿ ಭೇಟಿಯಾಗಿದ್ದೆ. ಇದೀಗ ನಾನು ಭಾರತ ತಂಡದ ಪೋಷಾಕು ಧರಿಸಿದ್ದೇನೆ. ಅವರನ್ನು ಭೇಟಿಯಾದಾಗ ನನ್ನ ಆಟ ಉತ್ತಮಗೊಳ್ಳುವಂತಹ ಸಲಹೆ ನೀಡಿದ್ದಾರೆ. ಅವರಿಂದ ಮತ್ತಷ್ಟು ಕಲಿಯುವ ಆಸೆ ಇದೆ’ ಎಂದು ಜುರೇಲ್ ಬಿಸಿಸಿಐ ಡಾಟ್ ಟಿವಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

‘2021ರಲ್ಲಿ ಐಪಿಎಲ್ ಪಂದ್ಯದ ಸಂದರ್ಭದಲ್ಲಿ ಅವರೊಂದಿಗೆ (ಧೋನಿ) ಮೊದಲ ಬಾರಿ ಮಾತನಾಡಿದೆ. ನನ್ನ ಕನಸು ನನಸಾದ ಕ್ಷಣ ಅದು. ಧೋನಿಯ ಮುಂದೆ ನಾನು ನಿಂತು ಮಾತನಾಡುತ್ತಿರುವೆ ಎಂಬುದನ್ನೇ ನಂಬಲಾಗಿರಲಿಲ್ಲ. ಅದೆಷ್ಟೋ ಸಲ ಕೈ ಜಿಗುಟಿಕೊಂಡು ಕನಸಲ್ಲ, ನನಸು ಎಂದು ದೃಢಪಡಿಸಿಕೊಂಡಿದ್ದೆ. ಅವರೊಂದಿಗೆ ಫೋಟೊ ತೆಗೆಸಿಕೊಂಡಿದ್ದೆ. ಹೊರಗೆ ಹೋಗು ಚೆಂಡಿನ ಮೇಲೆ ಏಕಾಗ್ರತೆ ನೆಟ್ಟು ಆಡು ಎಂದಷ್ಟೇ ಸಲಹೆ ಕೊಟ್ಟಿದ್ದರು’ ಎಂದು ಜುರೇಲ್ ನೆನಪಿಸಿಕೊಂಡರು.

ಇಂಗ್ಲೆಂಡ್ ಎದುರಿನ ಐದು ಪಂದ್ಯಗಳ ಸರಣಿಯಲ್ಲಿ ಭಾರತ ತಂಡವು ಈಗ 2–1ರಿಂದ ಮುನ್ನಡೆ ಸಾಧಿಸಿದೆ. ನಾಲ್ಕನೇ ಪಂದ್ಯವು ಶುಕ್ರವಾರದಿಂದ ರಾಂಚಿಯಲ್ಲಿ ನಡೆಯಲಿದೆ.

ರಾಂಚಿ ಟೆಸ್ಟ್ ಪಂದ್ಯಕ್ಕೆ ಬೆದರಿಕೆ

ರಾಂಚಿ (ಪಿಟಿಐ): ಇಂಗ್ಲೆಂಡ್ ತಂಡದ ವಿರುದ್ಧ ಇಲ್ಲಿ ನಡೆಯಲಿರುವ ನಾಲ್ಕನೇ ಟೆಸ್ಟ್ ಪಂದ್ಯವನ್ನು ರದ್ದುಗೊಳಿಸಬೇಕು ಇಲ್ಲದಿದ್ದರೆ ತಡೆಯೊಡ್ಡಲಾಗುವುದು ಎಂದು ಘೋಷಿತ ಭಯೋತ್ಪಾದಕ ಗುರುಪತ್ವಂತ್ ಸಿಂಗ್ ಪನ್ನೂ ಬೆದರಿಕೆ ಹಾಕಿದ್ದಾನೆ.

ಅಮೆರಿಕದಲ್ಲಿ ತಲೆಮರೆಸಿಕೊಂಡಿರುವ ಪನ್ನೂ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದಾನೆ. ಅದರ ಮೂಲಕ ಪಂದ್ಯಕ್ಕೆ ಅಡ್ಡಿಪಡಿಸಲು ಸಿದ್ಧರಾಗಿ ಎಂದು ಸಿಪಿಐ (ಮಾವೊವಾದಿಗಳು) ಉಗ್ರಗಾಮಿಗಳಿಗೆ ಕರೆ ನೀಡಿದ್ದಾನೆ.

‘ಇಂಗ್ಲೆಂಡ್ ಮತ್ತು ಭಾರತ ನಡುವಣ ಪಂದ್ಯಕ್ಕೆ ತಡೆಯೊಡ್ಡುವ ಬೆದರಿಕೆಯನ್ನು ಪನ್ನೂ ನೀಡಿದ್ದಾನೆ. ಪಂದ್ಯವನ್ನು ಸ್ಥಗಿತಗೊಳಿಸುವುದು ಅವನ ದುರುದ್ದೇಶವಾಗಿದೆ. ದುರ್ವಾ ಪೊಲೀಸ್ ಠಾಣೆಯಲ್ಲಿ ಐಟಿ ನಿಯಮದಡಿಯಲ್ಲಿ ಆತನ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ತನಿಖೆ ಆರಂಭಿಸಲಾಗಿದೆ’ ಎಂದು ಡಿಎಸ್‌ಪಿ ಪಿ.ಕೆ. ಮಿಶ್ರಾ ತಿಳಿಸಿದ್ದಾರೆ.

ಪಂದ್ಯದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದೂ ಮೂಲಗಳು ತಿಳಿಸಿವೆ. ಭಾರತ ಗೃಹ ಇಲಾಖೆಯು ಪನ್ನೂನನ್ನು ಭಯೋತ್ಪಾದಕ ಎಂದು ಘೋಷಿಸಿದೆ.

ಬೆಸ್ಟೊಗೆ ಬಿಡುವು ನೀಡಲು ಕುಕ್ ಸಲಹೆ

ಲಂಡನ್ (ಪಿಟಿಐ): ಬ್ಯಾಟರ್ ಜಾನಿ ಬೆಸ್ಟೊ ಅವರು ಭಾರತ ತಂಡದ ಎದುರಿನ ಟೆಸ್ಟ್ ಸರಣಿಯಲ್ಲಿ ಸತತ ವೈಫಲ್ಯ ಅನುಭವಿಸಿದ್ದಾರೆ. ಅದರಿಂದಾಗಿ ಅವರಿಗೆ ಒಂದಿಷ್ಟು ಬಿಡುವು ಕೊಟ್ಟು ಬೇರೆ ಆಟಗಾರನಿಗೆ ಅವಕಾಶ ಕೊಡಬೇಕು ಎಂದು ಇಂಗ್ಲೆಂಡ್ ತಂಡದ ಮಾಜಿ ನಾಯಕ ಅಲಸ್ಟೇರ್ ಕುಕ್ ಹೇಳಿದ್ದಾರೆ.

ಪ್ರಸಕ್ತ ಸರಣಿಯಲ್ಲಿ ಜಾನಿ 17ರ ಸರಾಸರಿಯಲ್ಲಿ (0, 4, 25, 26, 37 ಮತ್ತು 10) ರನ್ ಗಳಿಸಿದ್ದಾರೆ. ಆಡಿರುವ ಆರು ಇನಿಂಗ್ಸ್‌ಗಳಲ್ಲಿಯೂ ಅವರು ಲಯಕ್ಕೆ ಮರಳಿಲ್ಲ.

‘ಅವರಂತಹ ಒಬ್ಬ ಆಟಗಾರನನ್ನು ರಕ್ಷಿಸುವುದಕ್ಕೋಸ್ಕರವೇ ನಾನು ಹೀಗೆ ಹೇಳುತ್ತಿರುವೆ. ಅವರನ್ನೊಂದು ಮುಂದೆ ಎಂದೂ ಟೆಸ್ಟ್‌ನಲ್ಲಿ ಆಡಿಸಬಾರದು ಎನ್ನುತ್ತಿಲ್ಲ. ಅವರು ಇದೇ ಫಾರ್ಮ್‌ನಲ್ಲಿ ಮುಂದುವರಿದರೆ ಮುಂದೆ ಸ್ಥಾನ ಕಳೆದುಕೊಳ್ಳಬಹುದು. ಈಗ ಬಿಡುವು ಪಡೆದರೆ, ಮತ್ತೊಬ್ಬ ಉತ್ಸಾಹಿ ಆಟಗಾರ ಸ್ಥಾನ ಪಡೆಯಬಹುದು. ತಂಡಕ್ಕೆ ಲಾಭವಾಗುತ್ತದೆ’ ಎಂದಿದ್ದಾರೆ.

‘ಇಂಗ್ಲೆಂಡ್ ತಂಡವು ಜಾನಿಯನ್ನು ಬಿಟ್ಟುಕೊಡುವುದಿಲ್ಲ. ಈ ಹಂತದಲ್ಲಿ ಅವರು ಲಯಕ್ಕೆ ಮರಳಲು ಅವಕಾಶ ನೀಡುವುದು ಬಹುತೇಕ ಖಚಿತವಾಗಿದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅವರಿಗೆ ನೆರವು ನೀಡುವುದು ತಂಡದ ಉದ್ದೇಶವಾಗಿರಬಹುದು’ ಎಂದು ಇಂಗ್ಲೆಂಡ್ ಮಾಜಿ ಆಟಗಾರ ಮೈಕ್ ಆಥರ್ಟನ್ ಅವರು ಸ್ಕೈ ಸ್ಪೋರ್ಟ್ಸ್ ಕ್ರಿಕೆಟ್ ಪಾಡ್‌ಕಾಸ್ಟ್‌ಗೆ ಹೇಳಿದ್ದಾರೆ.

ಶೂಟೌಟ್‌ನಲ್ಲಿ ಮಣಿದ ಭಾರತ

ಪ್ರೊ ಲೀಗ್ ಹಾಕಿ: ಹಾಲಿ ಚಾಂಪಿಯನ್ ನೆದರ್ಲೆಂಡ್ಸ್‌ಗೆ ಜಯ

ರೂರ್ಕೆಲಾ (ಪಿಟಿಐ): ಭಾರತ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ವಿಶ್ವದ ಅಗ್ರ ಕ್ರಮಾಂಕದ ನೆದರ್ಲೆಂಡ್ಸ್ ವಿರುದ್ಧ ಶೂಟೌಟ್‌ನಲ್ಲಿ 2–4 ಗೋಲುಗಳಿಂದ ಸೋಲನುಭವಿಸಿತು. ಬುಧವಾರ ನಡೆದ ಈ ಪಂದ್ಯದಲ್ಲಿ ನಿಗದಿ ಅವಧಿಯ ಆಟದ ನಂತರ ಸ್ಕೋರ್ 1–1 ರಲ್ಲಿ ಸಮಬಲಗೊಂಡಿತ್ತು.

ಭುವನೇಶ್ವರದಲ್ಲಿ ಇತ್ತೀಚೆಗೆ ನಡೆದ ಮೊದಲ ಲೆಗ್ ಪಂದ್ಯದಲ್ಲಿ ಭಾರತ ತಂಡವು ಶೂಟೌಟ್‌ನಲ್ಲಿ 4–2 ರಿಂದ ಇದೇ ಎದುರಾಳಿಯನ್ನು ಸೋಲಿಸಿತ್ತು. ಆಗ ನಿಗದಿ ಅವಧಿಯ ಆಟ 2–2ರಲ್ಲಿ ಸಮನಾಗಿತ್ತು.

ಪ್ರಬಲ ನೆದರ್ಲೆಂಡ್ಸ್ ನಾಲ್ಕನೇ ನಿಮಿಷ ಫ್ಲೋರಿಸ್ ಮಿಡೆನ್‌ಡಾರ್ಪ್ ಮೂಲಕ ಮುನ್ನಡೆ ಗಳಿಸಿತು. ಕೊಯೆನ್ ಬಿಜೆನ್ಸ್ ಅವರ ಉತ್ತಮ ಯತ್ನವನ್ನು ಭಾರತದ ಗೋಲ್‌ಕೀಪರ್ ಕೃಷನ್ ಬಹಾದ್ದೂರ್ ಪಾಠಕ್ ಅವರು ತಡೆದು ಹಿಂದಕ್ಕೆ ಕಳಿಸಿದಾಗ, ಮಿಡೆನ್‌ಡಾರ್ಪ್ ರಿ ಬೌಂಡ್‌ನಲ್ಲಿ ಸ್ಕೋರ್ ಮಾಡಿದರು. ಇದು ಅಂತರರಾಷ್ಟ್ರೀಯ ಪಂದ್ಯದಲ್ಲಿ ಅವರ ಮೊದಲ ಗೋಲು.

ಆದರೆ, ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತ ತಂಡ ಮೂರನೇ ಕ್ವಾರ್ಟರ್‌ನಲ್ಲಿ ಹಾರ್ದಿಕ್ ಸಿಂಗ್ ಅವರ ಮೂಲಕ ಸ್ಕೋರ್ ಸಮ ಮಾಡಿಕೊಂಡಿತು. ವಿರಾಮ ಕಳೆದು ಎಂಟು ನಿಮಿಷಗಳ ನಂತರ ದೊರೆತ ಪೆನಾಲ್ಟಿ ಕಾರ್ನರ್‌ನಲ್ಲಿ ಜುಗರಾಜ್ ಸಿಂಗ್ ಅವರು ಫ್ಲಿಕ್ ಮೂಲಕ ನಡೆಸಿದ ಗೋಲು ಯತ್ನವನ್ನು ಡಚ್ ರಕ್ಷಣಾ ಪಡೆ ತಡೆದು ಹಿಂದಿಕ್ಕಿತು. ಮರಳಿ ಬಂದ ಚೆಂಡನ್ನು, ಅಲ್ಲೇ ಅವಕಾಶಕ್ಕೆ ಕಾಯುತ್ತಿದ್ದ ಹಾರ್ದಿಕ್ ಗೋಲಾಗಿ ಪರಿವರ್ತಿಸಿದರು. ಸ್ಕೋರ್ ಸಮನಾಗಿ ಭಾರತದ ಆಟಗಾರರು ನಿಟ್ಟುಸಿರು ಬಿಟ್ಟರು.

ಶೂಟೌಟ್‌ನಲ್ಲಿ ಭಾರತದ ಪರ ಅರಿಜಿತ್ ಸಿಂಗ್ ಹುಂಡಲ್ ಮತ್ತು ಲಲಿತ್ ಕುಮಾರ್ ಉಪಾಧ್ಯಾಯ ತಮ್ಮ ಯತ್ನದಲ್ಲಿ ಯಶಸ್ಸು ಕಂಡರೆ, ಸುಖಜೀತ್ ಸಿಂಗ್ ಮತ್ತು ಶಂಷೇರ್ ಸಿಂಗ್ ವಿಫಲರಾದರು.

ನೆದರ್ಲೆಂಡ್ಸ್ ಈ ಗೆಲುವಿನಿಂದ ಎರಡು ಪಾಯಿಂಟ್ಸ್ ಸಂಪಾದಿಸಿದರೆ, ಭಾರತ ಒಂದು ಪಾಯಿಂಟ್ ಪಡೆಯಿತು.

ಭಾರತ ಶನಿವಾರ ನಡೆಯುವ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ನಂತರ ಭಾನುವಾರ ನಡೆಯುವ ತವರಿನ ಕೊನೆಯ ಪ್ರೊ ಲೀಗ್ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಆಡಲಿದೆ.

ಟಿ20 ಕ್ರಿಕೆಟ್: ಮಾರ್ಷ್, ಟಿಮ್ ಆಟಕ್ಕೆ ಒಲಿದ ಜಯ



ಆಸ್ಟ್ರೇಲಿಯಾ ತಂಡದ ಮಿಚೆಲ್ ಮಾರ್ಷ್ ಮತ್ತು ಟಿಮ್ ಡೇವಿಡ್ —ಎಎಫ್‌ಪಿ ಚಿತ್ರ

ವೆಲ್ಲಿಂಗ್ಟನ್, ನ್ಯೂಜಿಲೆಂಡ್ (ಎಪಿ): ಪಂದ್ಯದ ಕೊನೆಯ ಎಸೆತದಲ್ಲಿ ಬೌಂಡರಿ ಬಾರಿಸಿದ ಟಿಮ್ ಡೇವಿಡ್ ಅವರ ಆಟದ ಬಲದಿಂದ ಆಸ್ಟ್ರೇಲಿಯಾ ತಂಡವು ನ್ಯೂಜಿಲೆಂಡ್ ಎದುರಿನ ಮೊದಲ ಟಿ20 ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು.

6 ವಿಕೆಟ್‌ಗಳಿಂದ ಗೆದ್ದ ಆಸ್ಟ್ರೇಲಿಯಾ ತಂಡವು ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 215 ರನ್ ಗಳಿಸಿತು. ಡೆವೊನ್ ಕಾನ್ವೆ (63; 46ಎ) ಹಾಗೂ ರಚಿನ್ ರವೀಂದ್ರ (68; 35ಎ) ಅರ್ಧಶತಕ ಗಳಿಸಿದರು. ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು ಮಿಚೆಲ್ ಮಾರ್ಷ್ (ಔಟಾಗದೆ 72; 44ಎ, 4X2, 6X7) ಅಮೋಘ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 216 ರನ್ ಗಳಿಸಿ ಜಯಿಸಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 215 (ಡೆವೊನ್ ಕಾನ್ವೆ 63, ರಚಿನ್ ರವೀಂದ್ರ 68). ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 216 (ಮಿಚೆಲ್ ಮಾರ್ಷ್ ಔಟಾಗದೆ 72, ಟಿಮ್ ಡೇವಿಡ್ ಔಟಾಗದೆ 31, ಮಿಚೆಲ್ ಸ್ಯಾಂಟನರ್ 42ಕ್ಕೆ2)


ಅಫ್ಗಾನಿಸ್ತಾನಕ್ಕೆ ರೋಚಕ ಜಯ

ದಂಬುಲಾ, ಶ್ರೀಲಂಕಾ (ಎಎಫ್‌ಪಿ): ರೆಹಮಾನುಲ್ಲಾ ಗುರ್ಬಾಜ್ ಅವರ ಅರ್ಧಶತಕದ ಬಲದಿಂದ ಅಫ್ಗಾನಿಸ್ತಾನ ತಂಡವು ಶ್ರೀಲಂಕಾ ವಿರುದ್ಧದ ಮೂರನೇ ಟಿ20 ಪಂದ್ಯದಲ್ಲಿ 3 ರನ್‌ಗಳ ರೋಚಕ ಜಯ ಪಡೆಯಿತು.

ಮೊದಲೆರಡು ಪಂದ್ಯಗಳನ್ನು ಗೆದ್ದು ಸರಣಿಯನ್ನು ಕೈವಶ ಮಾಡಿಕೊಂಡಿದ್ದ ಲಂಕಾ ಪಡೆ, ಕೊನೆಯ ಪಂದ್ಯದಲ್ಲಿ ಮುಗ್ಗರಿಸಿತು. ಅಫ್ಗನ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗೆ 209 ರನ್ ಗಳಿಸಿತು. ಗುರ್ಬಾಜ್ 70 ರನ್ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು. ಗುರಿಯನ್ನು ಬೆನ್ನಟ್ಟಿದ ಲಂಕಾ ಪಡೆಯು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 206 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ಅಫ್ಗಾನಿಸ್ತಾನ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 209 (ರೆಹಮಾನುಲ್ಲಾ ಗುರ್ಬಾಜ್ 70, ಹಜರತ್‌ಉಲ್ಲಾ ಝಝೈ 45). ಶ್ರೀಲಂಕಾ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 206 (ಕಾಮಿಂದು ಮೆಂಡಿಸ್ 65, ಪಥುಮ್ ನಿಸಾಂಕ 60; ಮೊಹಮ್ಮದ್ ನಬಿ 35ಕ್ಕೆ 2)

ಐಸಿಸಿ ರ‍್ಯಾಂಕಿಂಗ್: ಅಗ್ರ 20ರಲ್ಲಿ ಯಶಸ್ವಿ ಜೈಸ್ವಾಲ್



ದುಬೈ (ಪಿಟಿಐ): ಸತತ ಎರಡು ಟೆಸ್ಟ್‌ಗಳಲ್ಲಿ ದ್ವಿಶತಕ ಗಳಿಸಿದ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ರ‍್ಯಾಂಕಿಂಗ್‌ನಲ್ಲಿ ಅಗ್ರ 20ರಲ್ಲಿ ಸ್ಥಾನ ಪಡೆದಿದ್ದಾರೆ.

ಟೆಸ್ಟ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಮುಂಬೈನ ಜೈಸ್ವಾಲ್ 14 ಸ್ಥಾನಗಳ ಬಡ್ತಿ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರೊಂದಿಗೆ 15ನೇ ಸ್ಥಾನಕ್ಕೇರಿದ್ದಾರೆ. 22 ವರ್ಷದ ಜೈಸ್ವಾಲ್ ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್ ಸರಣಿಯ 2 ಪಂದ್ಯಗಳಲ್ಲಿ ದ್ವಿಶತಕ ದಾಖಲಿಸಿದ್ದರು. ವಿನೋದ್ ಕಾಂಬ್ಳಿ ಮತ್ತು ವಿರಾಟ್ ಕೊಹ್ಲಿ ಅವರ ದಾಖಲೆಯನ್ನು ಸರಿಗಟ್ಟಿದ್ದರು.

ರಾಜ್‌ಕೋಟ್ ಟೆಸ್ಟ್‌ನಲ್ಲಿ ಆಲ್‌ರೌಂಡ್ ಆಟವಾಡಿದ್ದ ರವೀಂದ್ರ ಜಡೇಜ ಬ್ಯಾಟಿಂಗ್‌ನಲ್ಲಿ 41 ರಿಂದ 34ನೇ ಸ್ಥಾನಕ್ಕೇರಿದ್ದಾರೆ. ಅವರು ಈ ಪಂದ್ಯದಲ್ಲಿ 112 ರನ್ ಗಳಿಸಿದ್ದರು. ಅಲ್ಲದೇ ಒಟ್ಟು ಏಳು ವಿಕೆಟ್ ಕೂಡ ಗಳಿಸಿದ್ದರು. ಅದರಿಂದಾಗಿ ಬೌಲರ್‌ಗಳ ಪಟ್ಟಿಯಲ್ಲಿಯೂ ಅವರು ಆರನೇ ಸ್ಥಾನಕ್ಕೇರಿದ್ದಾರೆ. ಆಫ್‌ಸ್ಪಿನ್ನರ್ ಆರ್ ಅಶ್ವಿನ್ ಎರಡನೇ ಸ್ಥಾನಕ್ಕೆ ಜಿಗಿದಿದ್ದಾರೆ. ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಆಲ್‌ರೌಂಡರ್ ವಿಭಾಗದಲ್ಲಿಯೂ ಭಾರತದ ಆಟಗಾರರದ್ದೇ ಪಾರಮ್ಯ. ಅಶ್ವಿನ್ ಮತ್ತು ಜಡೇಜ ಮೊದಲೆರಡು ಸ್ಥಾನಗಳಲ್ಲಿ ಮುಂದುವರಿದಿದ್ದಾರೆ. ನಾಲ್ಕನೇ ಸ್ಥಾನದಲ್ಲಿ ಅಕ್ಷರ್ ಪಟೇಲ್ ಇದ್ದಾರೆ.

ಹಾಕಿ: ಡಿವೈಇಎಸ್ ತಂಡ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶ್ ಪೂವಯ್ಯ ಮತ್ತು ಆರ್ಯನ್ ಉತ್ತಪ್ಪ ಎಂ.ಟಿ. ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಡಿವೈಇಎಸ್ ತಂಡವು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಸ್ಮಾರಕ ಹಾಕಿ ಟೂರ್ನಿಯ ಪಂದ್ಯದಲ್ಲಿ 8–2 ರಿಂದ ಕರ್ನಾಟಕ ರಾಜ್ಯ ಪೊಲೀಸ್ ತಂಡವನ್ನು ಸೋಲಿಸಿತು.

ಟೂರ್ನಿಯ ಏಳನೇ ದಿನವಾದ ಬುಧವಾರ ನಡೆದ ಪಂದ್ಯದಲ್ಲಿ ಡಿವೈಇಎಸ್ ತಂಡದ ದೇಶ್ (20, 49, 54ನೇ ನಿಮಿಷ) ಮತ್ತು ಆರ್ಯನ್ (39, 44, 58ನೇ ನಿ.) ಅವರು ತಲಾ ಮೂರು ಗೋಲು ಗಳಿಸಿ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ಹುಬ್ಬಳ್ಳಿ ಸೌತ್ ವೆಸ್ಟ್ರನ್ ರೈಲ್ವೆ ತಂಡವು 3–2ರಿಂದ ಕೆನರಾ ಬ್ಯಾಂಕ್ ತಂಡವನ್ನು ಮಣಿಸಿತು. ಇತರ ಪಂದ್ಯದಲ್ಲಿ ರೈಲ್ ವೀಲ್ ಫ್ಯಾಕ್ಟರಿ ತಂಡವು 3–2ರಿಂದ ಸಾಯ್ ತಂಡದ ವಿರುದ್ಧ ಗೆಲುವು ಸಾಧಿಸಿತು.

ಭಾರತ ಸೈಕ್ಲಿಸ್ಟ್‌ಗಳಿಗೆ ಚಿನ್ನ, ಎರಡು ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಸೈಕ್ಲಿಸ್ಟ್‌ಗಳು, ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ಸ್‌ನಲ್ಲಿ ಉತ್ತಮ ಆರಂಭ ಮಾಡಿದರು. ಬುಧವಾರ ಮಹಿಳೆಯರ ಜೂನಿಯರ್ ತಂಡ ಸ್ಪ್ರಿಂಟ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿತು. ಇದರ ಜೊತೆಗೆ ಭಾರತ ತಂಡ ಎರಡು ಬೆಳ್ಳಿ, ಒಂದು ಕಂಚಿನ ಪದಕವನ್ನೂ ತನ್ನದಾಗಿಸಿಕೊಂಡಿತು.

ಸರಿತಾ ಕುಮಾರಿ, ನಿಯಾ ಸೆಬಾಸ್ಟಿಯನ್ ಮತ್ತು ಜೈನಾ ಮೊಹಮ್ಮದ್ ಅಲಿ ಪಿರ್ಖಾನ್ ಅವರನ್ನು ಒಳಗೊಂಡ ಭಾರತ ತಂಡ ಸಾಂಘಿಕ ಪ್ರದರ್ಶನ ನೀಡಿ 54.383 ಸೆ.ಗಳಲ್ಲಿ ಗುರಿ ತಲುಪಿ, ಕೊರಿಯಾ ತಂಡವನ್ನು ಎರಡನೇ ಸ್ಥಾನಕ್ಕೆ ಸರಿಸಿತು.

‘ಏಷ್ಯಾದ ಬಲಾಢ್ಯ ತಂಡವನ್ನು ಸೋಲಿಸಿರುವುದು ನಮಗೆ ಕನಸಿನಂತೆ ಕಾಣುತ್ತಿದೆ. ತಂಡದ ಎಲ್ಲರ ಶ್ರಮದಿಂದ ಇದು ಸಾಧ್ಯವಾಗಿದೆ’ ಎಂದು ನಿಯಾ ಪ್ರತಿಕ್ರಿಯಿಸಿದರು.

ಪ್ಯಾರಾ ಟೀಮ್ ಸ್ಪ್ರಿಂಟ್ ವಿಭಾಗದಲ್ಲಿ ಭಾರತ ತಂಡ (ಅರ್ಷದ್ ಶೇಕ್, ಜಲಾಲುದ್ದೀನ್ ಅನ್ಸಾರಿ ಮತ್ತು ಬಸವರಾಜ ಹೊರಡ್ಡಿ) 1ನಿ.02.661 ಸೆ.ಗಳ ಅವಧಿಯೊಡನೆ ರಜತ ಪದಕ ಪಡೆಯಿತು. ಮಲೇಷ್ಯಾ (52.284 ಸೆ.) ಚಿನ್ನ ಗೆದ್ದರೆ, ಸೌದಿ ಅರೇಬಿಯಾ ಕಂಚಿನ ಪದಕ ಗಳಿಸಿತು.

ಪೊಲೀಸರ ಕೆಲಸ ನೆನಪಿಸಿಕೊಟ್ಟ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ವಸೂಲಿ ಮಾಡಿಕೊಡಬೇಕಿರುವ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದಂತೆ ವರ್ತಿಸುವ ಅಧಿಕಾರವು ಪೊಲೀಸರಿಗೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 420 ಮತ್ತು 406ರಲ್ಲಿ ವಿವರಿಸಲಾಗಿರುವ ಕ್ರಿಮಿನಲ್ ಅಪರಾಧಗಳ ಸ್ವರೂಪ, ಒಪ್ಪಂದದ ಉಲ್ಲಂಘನೆ, ಹಣ ಪಾವತಿ ಮಾಡದಿರುವಿಕೆ ನಡುವಿನ ಸ್ಪಷ್ಟ ವ್ಯತ್ಯಾಸವನ್ನು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ವಿವರಿಸಿದೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇರುವ ವಿಭಾಗೀಯ ಪೀಠ ಹೇಳಿದೆ.

ಆದರೆ, ಈ ನ್ಯಾಯಾಲಯ ಮತ್ತೆ ಮತ್ತೆ ನೀಡಿರುವ ತೀರ್ಪುಗಳನ್ನು ಉಲ್ಲಂಘಿಸಲಾಗುತ್ತಿದೆ. ಅವುಗಳನ್ನು ಅನುಷ್ಠಾನಕ್ಕೆ ತರುತ್ತಿಲ್ಲ ಎಂದು ಪೀಠವು ಹೇಳಿದೆ.

ಉತ್ತರ ಪ್ರದೇಶದ ಹಾಪುರ್ ಪೊಲೀಸರು ದಾಖಲಿಸಿಕೊಂಡಿದ್ದ ಎಫ್‌ಐಆರ್, ಲಲಿತ್ ಚತುರ್ವೇದಿ ಮತ್ತು ಇತರರ ವಿರುದ್ಧ ಸಲ್ಲಿಸಿದ್ದ ದೋಷಾರೋಪ ಪಟ್ಟಿಯನ್ನು ಪೀಠವು ರದ್ದುಪಡಿಸಿದೆ. ಮರದ ವ್ಯಾಪಾರಿಯೊಬ್ಬರು ಮರ ಪೂರೈಸಿದ್ದಕ್ಕೆ ಪ್ರತಿಯಾಗಿ ಪಾವತಿಸಬೇಕಿರುವ ₹1.9 ಕೋಟಿಗಿಂತ ಹೆಚ್ಚಿನ ಮೊತ್ತವನ್ನು ಕೊಡುತ್ತಿಲ್ಲ ಎಂದು ಇವರ ವಿರುದ್ಧ ದೂರು ಸಲ್ಲಿಸಲಾಗಿತ್ತು.

‘ದೂರಿನಲ್ಲಿ ಹೇಳಿರುವುದು ನಿಜ ಎಂದು ಭಾವಿಸಿದರೂ, ಇಲ್ಲಿ ಕ್ರಿಮಿನಲ್ ಅಪರಾಧ ಸಾಬೀತಾಗುತ್ತಿಲ್ಲ’ ಎಂದು ಪೀಠವು ಹೇಳಿದೆ. ‘ದೂರುದಾರರು ಸಿವಿಲ್ ಪ್ರಕರಣ ದಾಖಲಿಸಬೇಕಿತ್ತು. ಆದರೆ, ಕುಟಿಲ ಉದ್ದೇಶದಿಂದ ಕ್ರಿಮಿನಲ್ ಪ್ರಕರಣ ದಾಖಲಿಸುವುದು ಕಾನೂನಿನ ದುರ್ಬಳಕೆಗೆ ಸಮ’ ಎಂದು ಪೀಠವು ಹೇಳಿದೆ.

ಬಿಜೆಪಿಯ ಅಧರ್ಮ ತಡೆಯಲು ದೇವರೇ ಬಂದಂತಾಗಿದೆ: ಕೇಜ್ರಿವಾಲ್



ಕೇಜ್ರಿವಾಲ್

ನವದೆಹಲಿ (ಪಿಟಿಐ): ಚಂಡೀಗಢದ ಮೇಯರ್ ಚುನಾವಣೆಯ ಫಲಿತಾಂಶವನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್ ಆದೇಶ ಉಲ್ಲೇಖಿಸಿ ಎಎಪಿ ಸಂಚಾಲಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬುಧವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ದೆಹಲಿ ವಿಧಾನಸಭೆಯಲ್ಲಿ ಮಾತನಾಡಿದ ಕೇಜ್ರಿವಾಲ್ ಭಗವದ್ಗೀತೆಯನ್ನು ಉಲ್ಲೇಖಿಸಿ, ‘ಬಿಜೆಪಿಯ ಅಧರ್ಮವನ್ನು ತಡೆಯುವುದಕ್ಕಾಗಿ ದೇವರು ಮಧ್ಯಪ್ರವೇಶ ಮಾಡಲು ನಿರ್ಧರಿಸಿದ್ದಾನೆ’ ಎಂದು ಹೇಳಿದರು.

‘ರಾಮ, ಕೃಷ್ಣ, ಶಿವ–ಪಾರ್ವತಿ ಎಲ್ಲ ದೇವರ ಭಕ್ತರೂ ದೇಶದಲ್ಲಿದ್ದಾರೆ. ಕೊನೆಗೆ ಬಿಜೆಪಿಯ ಅಧರ್ಮ ಅಂತ್ಯಗೊಂಡು, ಧರ್ಮ ಉಳಿಯುತ್ತದೆ’ ಎಂದು ಕೇಜ್ರಿವಾಲ್ ಹೇಳಿದರು.

‘ದೇವರೇ ಮುಖ್ಯ ನ್ಯಾಯಮೂರ್ತಿ ರೂಪದಲ್ಲಿ ಮಾತನಾಡಿದಂತೆ ಭಾಸವಾಗುತ್ತಿದೆ’ ಎಂದು ಕೇಜ್ರಿವಾಲ್ ಹೇಳಿದರು.

ತೀರ್ಪಿಗಾಗಿ ಸುಪ್ರೀಂ ಕೋರ್ಟ್ ಮತ್ತು ಮುಖ್ಯ ನ್ಯಾಯಮೂರ್ತಿಗೆ (ಸಿಜೆಐ) ಧನ್ಯವಾದ ತಿಳಿಸಿದ ಕೇಜ್ರಿವಾಲ್, ‘ಇದು ದೇಶದ ಪ್ರಜಾಪ್ರಭುತ್ವವನ್ನು ಉಳಿಸಿತು’ ಎಂದು ಹೇಳಿದರು.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಕೇಸರಿ ಪಕ್ಷವು ಚುನಾವಣೆ ಗೆಲ್ಲಲು ಏನು ಬೇಕಾದರೂ ಮಾಡುತ್ತದೆ. ಅದು ಶಾಸಕರನ್ನು ಬೇಟೆಯಾಡಿ, ಸರ್ಕಾರಗಳನ್ನು ಉರುಳಿಸುವುದರಲ್ಲಿ ತೊಡಗಿದೆ’ ಎಂದು ಆರೋಪಿಸಿದರು.

‘ಬಿನಾಕಾ ಗೀತ್‌ಮಾಲಾ’ದ ಅಮೀನ್ ನಿಧನ



ಅಮೀನ್ ಸಯಾನಿ —ಪಿಟಿಐ ಚಿತ್ರ

ಮುಂಬೈ (ಪಿಟಿಐ): ‘ಬಿನಾಕಾ ಗೀತ್‌ಮಾಲಾ’ ಕಾರ್ಯಕ್ರಮ ಆಲಿಸುತ್ತಿದ್ದ ಲಕ್ಷಾಂತರ ಶ್ರೋತೃಗಳ ಪಾಲಿಗೆ ಚಿರಪರಿಚಿತರಾಗಿದ್ದ ಅಮೀನ್ ಸಯಾನಿ (91) ಮುಂಬೈನಲ್ಲಿ ನಿಧನರಾದರು.

ಸಯಾನಿ ಅವರಿಗೆ ಮಂಗಳವಾರ ಸಂಜೆ ಹೃದಯಾಘಾತ ಆಗಿತ್ತು. ಅವರನ್ನು ದಕ್ಷಿಣ ಮುಂಬೈನ ಎಚ್.ಎನ್. ರಿಲಯನ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಉಳಿಸಿಕೊಳ್ಳಲು ಆಗಲಿಲ್ಲ. ಅವರು ಮಂಗಳವಾರ ರಾತ್ರಿ ನಿಧನರಾದರು ಎಂದು ಅವರ ಮಗ ರಜಿಲ್ ತಿಳಿಸಿದರು. ಗುರುವಾರ ಅಂತಿಮ ಸಂಸ್ಕಾರ ನಡೆಯಲಿದೆ.

‘ಸಹೋದರಿಯರೇ ಸಹೋದರರೇ, ನಮಸ್ಕಾರ. ನಾನು ನಿಮ್ಮ ಸ್ನೇಹಿತ ಅಮೀನ್ ಸಯಾನಿ ಮಾತನಾಡುತ್ತಿದ್ದೇನೆ’ ಎಂದು ಅವರು ರೇಡಿಯೊ ಸಿಲೋನ್‌ನಲ್ಲಿ ಹಿಂದಿಯಲ್ಲಿ ಮಾತು ಆರಂಭಿಸುತ್ತಿದ್ದರು. 1952ರಿಂದ 1988ರವರೆಗೆ ಅಸಂಖ್ಯ ಮನೆಗಳನ್ನು, ಮನಗಳನ್ನು ಅವರು ತಮ್ಮ ದನಿಯ ಮೂಲಕ ತಲುಪಿದ್ದರು.

1988ರ ನಂತರ ಬಿನಾಕಾ ಗೀತಮಾಲಾ ಕಾರ್ಯಕ್ರಮವನ್ನು ಆಲ್ ಇಂಡಿಯಾ ರೇಡಿಯೊದ ‘ವಿವಿಧ ಭಾರತಿ’ಗೆ ವರ್ಗಾಯಿಸಲಾಯಿತು. ಅಲ್ಲಿ ಅದು 1994ರವರೆಗೆ ಪ್ರಸಾರವಾಯಿತು. ಮುಂಬೈನ ಬಹುಭಾಷಿಕ ಕುಟುಂಬವೊಂದರಲ್ಲಿ 1932ರ ಡಿಸೆಂಬರ್ 21ರಂದು ಜನಿಸಿದ ಸಯಾನಿ, 42 ವರ್ಷಗಳಲ್ಲಿ 50 ಸಾವಿರಕ್ಕೂ ಹೆಚ್ಚಿನ ಕಾರ್ಯಕ್ರಮಗಳಿಗೆ ಧ್ವನಿ ನೀಡಿದ್ದಾರೆ.

‘ಭಾರತೀಯ ರೇಡಿಯೊ ಪ್ರಸಾರದಲ್ಲಿ ಕ್ರಾಂತಿಯನ್ನು ಉಂಟುಮಾಡುವಲ್ಲಿ ಸಯಾನಿ ಅವರು ತಮ್ಮ ಕೆಲಸಗಳ ಮೂಲಕ ಮುಖ್ಯವಾದ ಪಾತ್ರ ನಿಭಾಯಿಸಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ‘ಎಕ್ಸ್’ ವೇದಿಕೆಯಲ್ಲಿ ಬರೆದಿದ್ದಾರೆ.

ಸಯಾನಿ ಅವರು ಬಾಲ್ಯದಿಂದಲೂ ಸೃಜನಶೀಲ ವ್ಯಕ್ತಿಯಾಗಿದ್ದರು. ತಾಯಿ ನಡೆಸುತ್ತಿದ್ದ ಪಾಕ್ಷಿಕ ಪತ್ರಿಕೆಗೆ ತಮ್ಮ 13ನೆಯ ವಯಸ್ಸಿನಿಂದಲೇ ಬರೆಯಲು ಆರಂಭಿಸಿದರು. ಆಗಲೇ ಅವರು ಇಂಗ್ಲಿಷ್‌ನ ರೇಡಿಯೊ ಕಾರ್ಯಕ್ರಮಗಳ ನಿರೂಪಣೆಯಲ್ಲಿ ಪರಿಣತಿ ಸಾಧಿಸಿದರು.

ಗ್ವಾಲಿಯರ್‌ನಲ್ಲಿ ಶಿಕ್ಷಣ ಪಡೆದು ಮುಂಬೈಗೆ ಹಿಂದಿರುಗಿದ ನಂತರ ಸಯಾನಿ ಅವರು ಎಐಆರ್‌ನ ಹಿಂದಿ ವಿಭಾಗಕ್ಕೆ ಆಡಿಷನ್ ನೀಡಿದ್ದರು. ಆದರೆ, ಅವರ ಮಾತಿನಲ್ಲಿ ತುಸು ಗುಜರಾತಿ ಶೈಲಿ ಇದೆ ಎಂಬ ಕಾರಣಕ್ಕೆ ಅವರಿಗೆ ಅವಕಾಶ ಸಿಗಲಿಲ್ಲ. 1952ರಲ್ಲಿ ಎಐಆರ್‌ನಲ್ಲಿ ಹಿಂದಿ ಚಿತ್ರಗೀತೆಗಳ ಪ್ರಸಾರ ನಿಷೇಧಿಸಲಾಯಿತು. ಆ ಹೊತ್ತಿನಲ್ಲಿ ರೇಡಿಯೊ ಸಿಲೋನ್ ಜನಪ್ರಿಯತೆ ಪಡೆಯಲಾರಂಭಿಸಿತು. ಸಯಾನಿ ಅವರು ರೇಡಿಯೊ ಸಿಲೋನ್‌ನಲ್ಲಿ ‘ಬಿನಾಕಾ ಗೀತ್‌ಮಾಲಾ’ದ ನಿರೂಪಕರಾದರು. ನಂತರದ್ದೆಲ್ಲ ಇತಿಹಾಸ. ಈ ಕಾರ್ಯಕ್ರಮವು 42 ವರ್ಷ ಪ್ರಸಾರವಾಯಿತು.

ಭಾರತ, ಚೀನಾ ಸೇನಾ ಮಾತುಕತೆ; ಕಾಣದ ಪ್ರಗತಿ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಮೂರೂವರೆ ವರ್ಷಗಳಿಂದ ಉದ್ಭವಿಸಿರುವ ಗಡಿ ವಿವಾದ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಭಾರತ ಮತ್ತು ಚೀನಾ ಸೇನೆಗಳ ನಡುವೆ ಉನ್ನತ ಮಟ್ಟದಲ್ಲಿ ಮಾತುಕತೆಗಳು ನಡೆದಿವೆ. ಎರಡೂ ದೇಶಗಳ ಸೇನಾ ಅಧಿಕಾರಿಗಳು ಶಾಂತಿ ಕಾಪಾಡಲು ಒಪ್ಪಿದ್ದಾರೆ. ಆದರೆ, ಗಡಿ ವಿವಾದಕ್ಕೆ ಸಂಬಂಧಿಸಿದ ಈ ಮಾತುಕತೆಯಲ್ಲಿ ಯಾವುದೇ ಮಹತ್ವದ ಪ್ರಗತಿಯಾದ ಸೂಚನೆ ಕಂಡುಬಂದಿಲ್ಲ.

ಚುಶುಲ್-ಮೊಲ್ಡೊ ಗಡಿಯಲ್ಲಿ ಸಂಧಿಸುವ ಸ್ಥಳದಲ್ಲಿ 21ನೇ ಸುತ್ತಿನ ಭಾರತ-ಚೀನಾ ಕಾರ್ಪ್ಸ್ ಕಮಾಂಡರ್ ಮಟ್ಟದ ಸಭೆಯು ಫೆ. 19ರಂದು ನಡೆಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬುಧವಾರ ತಿಳಿಸಿದೆ.

‘ಸ್ನೇಹ ಮತ್ತು ಸೌಹಾರ್ದದ ವಾತಾವರಣದಲ್ಲಿ ನಡೆದ ಮಾತುಕತೆಯಲ್ಲಿ ಎರಡೂ ಕಡೆಯವರು ತಮ್ಮ ದೃಷ್ಟಿಕೋನವನ್ನು ಹಂಚಿಕೊಂಡಿದ್ದಾರೆ. ಸೇನಾ ಮತ್ತು ರಾಜತಾಂತ್ರಿಕ ಕಾರ್ಯವಿಧಾನಗಳ ಮೂಲಕ ಮಾತುಕತೆ ಮುಂದುವರಿಸಿಕೊಂಡು ಹೋಗಲು, ಗಡಿಯಲ್ಲಿ ಶಾಂತಿ ಮತ್ತು ನೆಮ್ಮದಿ ಕಾಪಾಡಲು ಉಭಯತ್ರರು ಬದ್ಧರಾಗಿದ್ದಾರೆ’ ಎಂದು ಸಚಿವಾಲಯ ಹೇಳಿದೆ.

‘ಭಾರತ-ಚೀನಾ ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದ ಮರುಸ್ಥಾಪನೆಗೆ ಅಗತ್ಯವಾದ ಪೂರ್ವ ಲಡಾಖ್‌ನ ಎಲ್‌ಎಸಿ (ವಾಸ್ತವ ನಿಯಂತ್ರಣ ರೇಖೆ) ಉದ್ದಕ್ಕೂ ಉಳಿದಿರುವ ಪ್ರದೇಶಗಳಲ್ಲಿ ಸೇನೆ ಸಂಪೂರ್ಣ ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆ ಬಗ್ಗೆಯೇ ಈ ಹಿಂದಿನ ಮಾತುಕತೆಗಳಲ್ಲೂ ಚರ್ಚೆ ನಡೆಸಲಾಗಿದೆ’ ಎಂದು ಅದು ಹೇಳಿದೆ.

ಡೆಪ್ಸಾಂಗ್ ಮತ್ತು ಡೆಮ್‌ಚೋಕ್‌ನಲ್ಲಿ ಉದ್ಭವಿಸಿರುವ ವಿವಾದಗಳನ್ನು ಬಗೆಹರಿಸುವಂತೆ ಭಾರತ ಬಲವಾಗಿ ಒತ್ತಾಯಿಸಿತು. ಈ ಮಾತುಕತೆಯಲ್ಲಿ ಯಾವುದೇ ಸ್ಪಷ್ಟ ಪ್ರಗತಿ ಕಾಣಿಸಲಿಲ್ಲ ಎಂದು ಮೂಲಗಳು ಹೇಳಿವೆ.

ಕಳೆದ ಅಕ್ಟೋಬರ್ 9 ಮತ್ತು 10 ರಂದು 20ನೇ ಸುತ್ತಿನ ಉಭಯ ದೇಶಗಳ ನಡುವೆ ಸೇನಾ ಮಾತುಕತೆ ನಡೆದಿತ್ತು.

ಕಲ್ಯಾಣ್ ರೈಲು ನಿಲ್ದಾಣದಲ್ಲಿ 54 ಡಿಟೊನೇಟರ್

ಠಾಣೆ(ಮಹಾರಾಷ್ಟ್ರ)(ಪಿಟಿಐ): ಜಿಲ್ಲೆಯ ಕಲ್ಯಾಣ್ ರೈಲು ನಿಲ್ದಾಣದ ಪ್ಲಾಟ್ ಫಾರ್ಮ್‌ನಲ್ಲಿ 54ಕ್ಕೂ ಹೆಚ್ಚು ಡಿಟೊನೇಟರ್‌ಗಳಿದ್ದ ಎರಡು ಪೆಟ್ಟಿಗೆಗಳು ಬುಧವಾರ ಪತ್ತೆಯಾಗಿವೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಹೆಚ್ಚು ಜನಸಂದಣಿ ಇರುವ ಪ್ಲಾಟ್ ಫಾರ್ಮ್ ನಂ. 1ರಲ್ಲಿ ಈ ಪೆಟ್ಟಿಗೆಗಳು ಕಂಡುಬಂದಿವೆ. ತಕ್ಷಣವೇ ಶ್ವಾನದಳ ಹಾಗೂ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ (ಬಿಡಿಡಿಎಸ್) ಸಿಬ್ಬಂದಿಯನ್ನು ಕರೆಸಿಕೊಂಡು ಪರಿಶೀಲಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಕಲ್ಯಾಣ್ ನಿಲ್ದಾಣವು ಮುಂಬೈ ಹೊರವಲಯದ ಪ್ರಮುಖ ರೈಲು ನಿಲ್ದಾಣವಾಗಿದ್ದು, ಉಪನಗರ ಹಾಗೂ ದೂರದ ಊರುಗಳಿಗೆ ಸಂಚರಿಸುವ ರೈಲುಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಹೀಗಾಗಿ, ಇಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಿರುತ್ತದೆ.

ಬಿಹಾರ ವಿಧಾನಸಭೆ ಡೆಪ್ಯುಟಿ ಸ್ಪೀಕರ್ ರಾಜೀನಾಮೆ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆ ಡೆಪ್ಯುಟಿ ಸ್ಪೀಕರ್ ಆಗಿದ್ದ ಜೆಡಿಯುನ ಮಹೇಶ್ವರ್ ಹಜಾರಿ ಅವರು ಬುಧವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ವಿಧಾನಸಭಾ ಕಾರ್ಯಾಲಯ ಹೇಳಿದೆ.

ಕಾರ್ಯಾಲಯದ ಅಧಿಸೂಚನೆಯ ಪ್ರಕಾರ, ಹಜಾರಿ ಅವರ ರಾಜೀನಾಮೆಯನ್ನು ಫೆಬ್ರುವರಿ 21ರ ನಸುಕಿನಿಂದ ಪರಿಗಣಿಸಲಾಗಿದೆ. ಕಲ್ಯಾಣಪುರ ಮೀಸಲು ವಿಧಾನಸಭಾ ಕ್ಷೇತ್ರಕ್ಕೆ ಎರಡನೇ ಅವಧಿಗೆ ಶಾಸಕರಾಗಿ ಆಯ್ಕೆಯಾಗಿದ್ದ ಹಜಾರಿ ಅವರು 2021ರ ಮಾರ್ಚ್‌ನಿಂದ ಡೆಪ್ಯುಟಿ ಸ್ಪೀಕರ್ ಹುದ್ದೆ ಅಲಂಕರಿಸಿದ್ದರು. ಡೆಪ್ಯೂಟಿ ಸ್ಪೀಕರ್ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಲಿದೆ.

ಭಯೋತ್ಪಾದನೆ ಎದುರಿಸಲು ಸಹಕಾರ, ರಕ್ಷಣಾ ಉತ್ಪಾದನೆಗೆ ಒಪ್ಪಿಗೆ

ಗ್ರೀಸ್ –ಭಾರತ ನಡುವೆ ಹಲವು ಒಪ್ಪಂದ



ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ನವದೆಹಲಿಯಲ್ಲಿನ ಹೈದರಾಬಾದ್ ಹೌಸ್‌ಗೆ ಆಗಮಿಸಿದ ಗ್ರೀಸ್ ಪ್ರಧಾನಿ ಕಿರಿಯಾಕೋಸ್ ಮಿತ್ಸೋಟಾಕಿಸ್ ಅವರಿಗೆ ಹಸ್ತಲಾಘವ ನೀಡಿ ಸ್ವಾಗತಿಸಿದರು— ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಭಯೋತ್ಪಾದನೆ ಎದುರಿಸಲು ತಮ್ಮ ಸಹಕಾರ ಹೆಚ್ಚಿಸುವುದರ ಜೊತೆಗೆ, ವ್ಯಾಪಾರ, ರಕ್ಷಣಾ ಉತ್ಪಾದನೆ, ವಲಸೆ ಮತ್ತು ಸಂಚಾರ ವಲಯಕ್ಕೆ ಸಂಬಂಧಿಸಿ ಶೀಘ್ರವೇ ಒಪ್ಪಂದ ಮಾಡಿಕೊಳ್ಳಲು ಭಾರತ ಮತ್ತು ಗ್ರೀಸ್ ಬುಧವಾರ ಒಪ್ಪಿವೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಗ್ರೀಸ್ ಪ್ರಧಾನಿ ಕೈರಿಯಾಕೋಸ್ ಮಿತ್ಸೋಟಾಕಿಸ್ ನಡುವಿನ ಸುದೀರ್ಘ ಮಾತುಕತೆಯ ಸಂದರ್ಭದಲ್ಲಿ ಒಟ್ಟಾರೆ ಕಾರ್ಯತಂತ್ರದ ಸಹಕಾರದ ವಿಸ್ತರಣೆಯು ಪ್ರಮುಖವಾಗಿ ಪ್ರಸ್ತಾಪವಾಯಿತು.

ಮಿತ್ಸೋಟಾಕಿಸ್ ಅವರು ಭಾರತಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ. 15 ವರ್ಷಗಳ ನಂತರ ಗ್ರೀಸ್ ದೇಶದ ಪ್ರಧಾನಿ ಭಾರತಕ್ಕೆ ಬಂದಿರುವುದು ಇದೇ ಮೊದಲು.

‘ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತ ಮತ್ತು ಗ್ರೀಸ್ ಸಮಾನ ಕಾಳಜಿ ಮತ್ತು ಆದ್ಯತೆಗಳನ್ನು ಹೊಂದಿವೆ. ಭಯೋತ್ಪಾದನೆ ಎದುರಿಸುವಲ್ಲಿ ನಮ್ಮ ಸಹಕಾರವನ್ನು ಇನ್ನಷ್ಟು ಬಲಪಡಿಸುವುದು ಹೇಗೆ ಎನ್ನುವ ಬಗ್ಗೆಯೂ ವಿಸ್ತೃತವಾಗಿ ಚರ್ಚಿಸಿದ್ದೇವೆ’ ಎಂದು ಪ್ರಧಾನಿ ಮೋದಿ ಅವರು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ವಲಸೆ ಮತ್ತು ಸಾರಿಗೆ ಸೌಲಭ್ಯದ ಪಾಲುದಾರಿಕೆ ದೃಢಪಡಿಸುವ, ಕೃಷಿ ವಲಯದಲ್ಲಿ ಉಭಯ ರಾಷ್ಟ್ರಗಳ ಸಹಕಾರ ವಿಸ್ತರಿಸುವ ಬಗ್ಗೆಯೂ ವ್ಯಾಪಕವಾಗಿ ಚರ್ಚಿಸಿದ್ದೇವೆ. ಹಾಗೆಯೇ, ಎಲ್ಲ ವಿವಾದಗಳು ಮತ್ತು ಬಿಕ್ಕಟ್ಟುಗಳನ್ನು ಮಾತುಕತೆ, ರಾಜತಾಂತ್ರಿಕತೆ ಮೂಲಕ ಪರಿಹರಿಸಬೇಕು ಎಂಬುದಕ್ಕೆ ಸಮ್ಮತಿಸಿದ್ದೇವೆ’ ಎಂದು ಮೋದಿ ಹೇಳಿದರು.

ವಿಶ್ವ ಟೇಬಲ್ ಟೆನಿಸ್ ಟೀಮ್ ಚಾಂಪಿಯನ್‌ಷಿಪ್ • ಒಲಿಂಪಿಕ್ಸ್ ಅರ್ಹತೆ ಅವಕಾಶ ಜೀವಂತ

16ರ ಘಟ್ಟ: ಭಾರತ ತಂಡಗಳಿಗೆ ಸೋಲು

ಬೂಸಾನ್ (ದಕ್ಷಿಣ ಕೊರಿಯಾ), (ಪಿಟಿಐ): ಭಾರತ ತಂಡಗಳು, ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಟೀಮ್ ಚಾಂಪಿಯನ್‌ಷಿಪ್‌ನ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದವು. ಬುಧವಾರ ಪುರುಷರ ವಿಭಾಗದ ಪಂದ್ಯದಲ್ಲಿ ಆತಿಥೇಯ ದಕ್ಷಿಣ ಕೊರಿಯಾ 3–0 ಯಿಂದ ಭಾರತ ತಂಡವನ್ನು ಸೋಲಿಸಿತು.

ಮಹಿಳೆಯರ ವಿಭಾಗದಲ್ಲಿ ಭಾರತ ತಂಡ 1–3 ರಿಂದ ಚೀನಾ ತೈಪೆ ತಂಡಕ್ಕೆ ಮಣಿಯಿತು. ಆದರೆ ಸೋಲಿನ ಹೊರತಾಗಿಯೂ, ಈ ಕೂಟದಲ್ಲಿ ಉತ್ತಮ ನಿರ್ವಹಣೆ ಹಾಗೂ ಸುಧಾರಿತ ವಿಶ್ವ ರ‍್ಯಾಂಕಿಂಗ್ ಬಲದಿಂದ ಭಾರತದ ತಂಡಗಳು ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಅವಕಾಶ ಉಜ್ವಲವಾಗಿದೆ.

ಕ್ವಾರ್ಟರ್ ಫೈನಲ್ ತಲುಪಿದಲ್ಲಿ ಭಾರತ ತಂಡಗಳು ನೇರವಾಗಿ ಅರ್ಹತೆ ಪಡೆಯುತ್ತಿದ್ದವು.



ಭಾರತದ ಮಣಿಕಾ ಬಾತ್ರಾ —ಪಿಟಿಐ ಚಿತ್ರ

ವಿಶ್ವ ಚಾಂಪಿಯನ್‌ಷಿಪ್ ಪಾಯಿಂಟ್ಸ್ ಗಣನೆಗೆ ತೆಗೆದುಕೊಂಡ ನಂತರ ಈ ಸಂಬಂಧ ಅಂತಿಮ ಘೋಷಣೆ ಮಾರ್ಚ್ 5ರಂದು ಪ್ರಕಟವಾಗಲಿದೆ. ಮಹಿಳೆಯರ ಪ್ರಸ್ತುತ 17ನೇ ಮತ್ತು ಪುರುಷರ ತಂಡ 15ನೇ ಕ್ರಮಾಂಕ ಪಡೆದಿವೆ.

'ಪುರುಷರ ಮತ್ತು ಮಹಿಳಾ ತಂಡ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಎಲ್ಲಾ ಸಾಧ್ಯತೆಗಳಿವೆ. ಆದರೆ ನಾವು ಮಾರ್ಚ್‌ನಲ್ಲಿ ಅಧಿಕೃತ ಘೋಷಣೆಯಾಗುವವರೆಗೆ ಕಾಯಬೇಕಾಗಿದೆ' ಎಂದು ಭಾರತ ಟೇಬಲ್ ಟೆನಿಸ್ ಫೆಡರೇಷನ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಬಲ ಕೊರಿಯಾ ಪುರುಷರ ತಂಡ ನಿರೀಕ್ಷೆಯಂತೆ ಭಾರತದ ಮೇಲೆ ಜಯಗಳಿಸಿತು. 41 ವರ್ಷದ ಶರತ್ ಕಮಾಲ್ ಒಂದು ಗೇಮ್ ಪಡೆದಿದ್ದನ್ನು ಬಿಟ್ಟರೆ ಉಳಿದಂತೆ ಕೊರಿಯಾದ್ದೇ ಮೇಲುಗೈ. ಮೊದಲ ಸಿಂಗಲ್ಸ್‌ನಲ್ಲಿ ಜಾಂಗ್ ವೂಜಿನ್ 12–10, 13–11, 11–7 ರಿಂದ ಹರ್ಮೀತ್ ದೇಸಾಯಿ ಅವರನ್ನು ಹಿಮ್ಮೆಟ್ಟಿಸಿದರೆ, ಲಿಮ್ ಜಾಂಗ್‌ಹೂನ್ ಎರಡನೇ ಸಿಂಗಲ್ಸ್‌ನಲ್ಲಿ 11–9, 11–5, 8–11, 11–4 ರಿಂದ ಅಚಿಂತ ಶರತ್ ಕಮಾಲ್ ವಿರುದ್ಧ ಗೆಲುವು ಸಾಧಿಸಿದರು. ಲೀ ಸಂಗ್ ಸು 11–5, 11–8, 11–2 ರಿಂದ ಜ್ಞಾನಶೇಖರನ್ ಸತ್ಯನ್ ಅವರನ್ನು ಮಣಿಸಲು ಕಷ್ಟಪಡಲಿಲ್ಲ.

ಮಹಿಳೆಯರ ವಿಭಾಗದ ಪ್ರಿಕ್ವಾರ್ಟರ್ ಫೈನಲ್‌ನ ಮೊದಲ ಸಿಂಗಲ್ಸ್‌ನಲ್ಲಿ ಮಣಿಕಾ ಬಾತ್ರಾ ತೀವ್ರ ಹೋರಾಟದ ನಂತರ 11-8, 8-11, 4-11, 11-9, 11-9 ರಿಂದ ತೈಪೆಯ ಚೆನ್ ತ್ಸು ಯು ಅವರನ್ನು ಸೋಲಿಸಿದರು. ಆದರೆ ಅಕುಲಾ ಶ್ರೀಜಾ 6-11, 9-11, 5-11 ರಲ್ಲಿ ಚೆಂಗ್ ಐ ಚಿಂಗ್ ಅವರಿಗೆ ಮಣಿದರು. ಐಹಿಕಾ ಮುಖರ್ಜಿ 10-12, 13-15, 11-9, 2-11 ರಲ್ಲಿ ಲೀ ಯು ಜುನ್ ಎದುರು ಸೋಲನುಭವಿಸಿದರು. ಎರಡನೇ ಬಾರಿ ಸಿಂಗಲ್ಸ್ ಆಡಿದ ಮಣಿಕಾ 10-12, 11-5, 9-11, 5-11 ರಿಂದ ಚೆಂಗ್ ಐ ಚಿಂಗ್ ಅವರೆದುರು ಪರಾಜಯ ಕಂಡರು.

ಭಾರತಕ್ಕೆ ಮಣಿದ ಕಜಕಸ್ತಾನ: ಬೆಳಿಗ್ಗೆ ನಡೆದ 32ರ ಸುತ್ತಿನ ಪಂದ್ಯಗಳಲ್ಲಿ ಭಾರತ ಪುರುಷರ ತಂಡ 3–2 ರಲ್ಲಿ ಪ್ರಯಾಸದಿಂದ ಕಜಕಸ್ತಾನ ತಂಡವನ್ನು ಮಣಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿತ್ತು. ಮಹಿಳೆಯರ ತಂಡ 3–0 ಯಿಂದ ಇಟಲಿ ತಂಡದ ಮೇಲೆ ಗೆಲುವು ಸಾಧಿಸಿ 16ರ ಘಟ್ಟ ತಲುಪಿತ್ತು. ಆದರೆ ಮಧ್ಯಾಹ್ನ ಪ್ರಿಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ನಿರಾಸೆ ಅನುಭವಿಸಿದವು.

ರ‍್ಯಾಂಕಿಂಗ್: ಅಗ್ರ 100ರಿಂದ ಹೊರಬಿದ್ದ ನಗಾಲ್

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಹೊಸದಾಗಿ ಪ್ರಕಟವಾದ ಎಟಿಪಿ ರ‍್ಯಾಂಕಿಂಗ್‌ನಲ್ಲಿ ವಿಶ್ವದ ಅಗ್ರ 100 ಆಟಗಾರರ ಪಟ್ಟಿಯಿಂದ ಹೊರಬಿದ್ದಿದ್ದಾರೆ. 16 ರ‍್ಯಾಂಕಿಂಗ್ ಪಾಯಿಂಟ್ಸ್ ಕಳೆದುಕೊಂಡ ಅವರು ಮೂರು ಸ್ಥಾನಗಳಷ್ಟು ಕೆಳಗೆ ಸರಿದು 101ನೇ ಸ್ಥಾನದಲ್ಲಿದ್ದಾರೆ.

ಭಾರತದ ಇತರ ಆಟಗಾರರ ಪೈಕಿ ರಾಮಕುಮಾರ್ ರಾಮನಾಥನ್ 42 ಸ್ಥಾನಗಳಷ್ಟು ಮೇಲೇರಿ 420ನೇ ಕ್ರಮಾಂಕ ಹೊಂದಿದ್ದು, ಭಾರತದ ಎರಡನೇ ಉತ್ತಮ ಸಿಂಗಲ್ಸ್ ಆಟಗಾರ ಎನಿಸಿದ್ದಾರೆ.

ಶಶಿಕುಮಾರ್ ಮುಕುಂದ್ (457), ಎಸ್.ಡಿ.ಪ್ರಜ್ವಲ್ ದೇವ್ (595) ಮತ್ತು ದಿಗ್ವಿಜಯ ಪ್ರತಾಪ್ ಸಿಂಗ್ (623) ಅವರು ನಂತರದ ಸ್ಥಾನಗಳಲ್ಲಿದ್ದಾರೆ.

ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ಯೂಕಿ ಭಾಂಬ್ರಿ (60ನೇ ಸ್ಥಾನ), ಎನ್.ಶ್ರೀರಾಮ್ ಬಾಲಾಜಿ (80ನೇ,-1), ವಿಜಯ್‌ಸುಂದರ್‌ಪ್ರಶಾತ್ (81, +1), ಸಾಕೇತ್ ಮೈನೇನಿ (89, +16)) ಮತ್ತು ಅನಿರುದ್ಧ ಚಂದ್ರಶೇಖರ್ (94, -4) ಅವರು ನಂತರದ ಸ್ಥಾನಗಳಲ್ಲಿದ್ದಾರೆ.




ಭಾರತದ ಸುಮಿತ್ ನಗಾಲ್

ಯುಎಇ: ರಜಪೂತ್ ಮುಖ್ಯ ಕೋಚ್


ದುಬೈ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ ಲಾಲ್‌ಚಂದ್ ರಜಪೂತ್ ಅವರು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಮೂರು ವರ್ಷಗಳ ಅವಧಿಗೆ ನೇಮಕಗೊಂಡಿದ್ದಾರೆ. ಪಾಕಿಸ್ತಾನದ ಮುದಸ್ಸರ್ ನಜರ್ ಸ್ಥಾನದಲ್ಲಿ ರಜಪೂತ್ ಅವರನ್ನು ನೇಮಕ ಮಾಡಲಾಗಿದೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಈ ವರ್ಷದ ಮಧ್ಯದಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆಯಲು ಯುಎಇ ವಿಫಲವಾದ ಕಾರಣ ಆ ತಂಡಕ್ಕೆ ರಜಪೂತ್ ಅವರನ್ನು ನೇಮಕ ಮಾಡಲಾಗಿದೆ.



ಲಾಲ್‌ಚಂದ್ ರಜಪೂತ್

ಐಸಿಸಿ ಕ್ರಿಕೆಟ್ ವಿಶ್ವಕಪ್ ಲೀಗ್2 ಮೂರು ರಾಷ್ಟ್ರಗಳ (ಸ್ಕಾಟ್ಲೆಂಡ್, ಕೆನಡ ಇನ್ನೆರಡು ತಂಡಗಳು) ಸರಣಿಗೆ ತಂಡವನ್ನು ಸಜ್ಜುಗೊಳಿಸುವುದು ರಜಪೂತ್ ಅವರ ಮೊದಲ ಪ್ರಮುಖ ಕೆಲಸವಾಗಿದೆ. ಈ ಟೂರ್ನಿಯ ಆತಿಥ್ಯವನ್ನು ಯುಎಇ ವಹಿಸಿದ್ದು ಇದೇ ತಿಂಗಳ 28ರಂದು ಆರಂಭವಾಗಲಿದೆ. ಇದರ ಬೆನ್ನಿಗೇ ಮುಂದಿನ ತಿಂಗಳು ತವರಿನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಮೂರು ಪಂದ್ಯಗಳ ಟಿ20 ಸರಣಿ ಇದೆ.





ಐಎಸ್‌ಆರ್‌ಎಲ್ ಅಂತಿಮ ಸುತ್ತು 25ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಯಟ್ ಇಂಡಿಯನ್ ಸೂಪರ್ ಕ್ರಾಸ್ ರೇಸಿಂಗ್ ಲೀಗ್ (ಐಎಸ್‌ಆರ್‌ಎಲ್) ಸೀಸನ್ 1ರ ಮೂರನೇ ಹಾಗೂ ಅಂತಿಮ ಸುತ್ತಿನ ಗ್ರ್ಯಾಂಡ್ ಫಿನಾಲೆ ಇದೇ 25ರಂದು (ಭಾನುವಾರ) ಬೆಂಗಳೂರಿನ ಏರ್‌ಪೋರ್ಟ್ ರಸ್ತೆಯಲ್ಲಿರುವ ಚಿಕ್ಕಜಾಲದ ಬಯಲು ಪ್ರದೇಶದಲ್ಲಿ (ಫ್ಲೋಟಿಂಗ್ ವಾಲ್ಸ್ ಹಿಂಭಾಗ) ಏರ್ಪಡಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಗ್ರ್ಯಾಂಡ್ ಫಿನಾಲೆ ಕುರಿತು ಮಾತನಾಡಿದ, ಸಿಯಟ್ ಇಂಡಿಯನ್ ಸೂಪರ್ ಕ್ರಾಸ್ ರೇಸಿಂಗ್ ಲೀಗ್‌ನ ಸಹ ಸಂಸ್ಥಾಪಕ ಮತ್ತು ನಿರ್ದೇಶಕ ವೀರಪಟೇಲ್, 'ಈಗಾಗಲೇ ಸೀಸನ್ ಒಂದರ ಮೊದಲ ಮತ್ತು ಎರಡನೇ ಸುತ್ತನ್ನು ಕ್ರಮವಾಗಿ ಪುಣೆ ಹಾಗೂ ಅಹಮದಾಬಾದ್‌ನಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿದೆ. ಈಗ ಮೂರನೇ ಸುತ್ತನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದು, ಭಾನುವಾರ ಮಧ್ಯಾಹ್ನ 3 ಗಂಟೆಯಿಂದ ರೇಸ್ ಆರಂಭವಾಗಲಿದೆ' ಎಂದು ಹೇಳಿದರು.

ಮೊದಲ ಎರಡು ಲೆಗ್‌ನ ಸ್ಪರ್ಧೆಗಳು ಚಾಲಕರ ಕೌಶಲ ಮತ್ತು ವೇಗದ ಜೊತೆಗೆ ಭಾರತವನ್ನು ಸೂಪರ್‌ಕ್ರಾಸ್‌ನ ಕೇಂದ್ರಸ್ಥಾನವಾಗಿ ಗುರುತಿಸುವಲ್ಲಿ ನೆರವಾಗಿದೆ ಎಂದರು.

ಪ್ರಮುಖ ತಂಡಗಳಾದ ಬಿಗ್‌ರಾಕ್ ಮೋಟಾರ್ ಸ್ಪೋರ್ಟ್ಸ್, ಬಿಬಿ ರೇಸಿಂಗ್ ಮತ್ತು ಮೋಹಿತೆಸ್ ರೇಸಿಂಗ್ ಟೀಮ್ ಮೊದಲ ಎರಡು ಸುತ್ತುಗಳಲ್ಲಿ ಹೋರಾಟ ನಡೆಸಿದ್ದವು. ಈಗ ನಿರ್ಣಾಯಕ ಸುತ್ತಿನಲ್ಲೂ ಪ್ರಮುಖ ತಂಡಗಳ ನಡುವೆ ಪೈಪೋಟಿ ನಿರೀಕ್ಷಿಸಲಾಗಿದೆ.



ಸಿಇಎಟಿ ಇಂಡಿಯನ್ ಸೂಪರ್ ಕ್ರಾಸ್ ರೇಸಿಂಗ್ ಲೀಗ್‌ನ ಸಹ ಸಂಸ್ಥಾಪಕರಾದ ಅಶ್ವಿನಿ ಲೋಕಂಡೆ ಮತ್ತು ವೀರಪಟೇಲ್

450 ಸಿಸಿ ಇಂಟರ್‌ನ್ಯಾಷನಲ್ ರೈಡರ್ಸ್, 250 ಸಿಸಿ ಇಂಟರ್‌ನ್ಯಾಷನಲ್ ರೈಡರ್ಸ್, 250 ಸಿಸಿ ಇಂಡಿಯಾ–ಏಷ್ಯಾ ಮಿಕ್ಸ್ ಮತ್ತು 85 ಸಿಸಿ ಜ್ಯೂನಿಯರ್ ಕ್ಲಾಸ್ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಹೇಳಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ವೀರಪಟೇಲ್, ಈ ಸ್ಪರ್ಧೆಯನ್ನು ನವದೆಹಲಿಯಲ್ಲಿ ಆಯೋಜಿಸಲಾಗಿತ್ತು. ಆದರೆ ಅಲ್ಲಿ ರೈತರ ಪ್ರತಿಭಟನೆ ಕಾರಣ ಬೆಂಗಳೂರಲ್ಲಿ ಆಯೋಜನೆ ಮಾಡಲಾಗಿದೆ ಎಂದರು.

ಇಬ್ಬರು ಮಹಿಳೆಯರು ಸೇರಿದಂತೆ ವಿವಿಧ ದೇಶದ ಒಟ್ಟು 48 ರೈಡರ್‌ಗಳು ಭಾಗವಹಿಸಲಿದ್ದಾರೆ. ಇದರಲ್ಲಿ 14 ಜನ ಭಾರತೀಯರಿದ್ದಾರೆ. ವಿಜೇತ ತಂಡಕ್ಕೆ ₹1 ಕೋಟಿ ಬಹುಮಾನವಿದೆ. ರೇಸ್ ವೀಕ್ಷಣೆಯ ಟಿಕೆಟ್ ದರ ₹250 ಇದೆ. ಬುಕ್ ಮೈ ಷೊ ಅಥವಾ ಸ್ಥಳದಲ್ಲೇ ಟಿಕೆಟ್ ಖರೀದಿಸಬಹುದು ಎಂದರು.

ಅಗ್ರಸ್ಥಾನಕ್ಕೆ ಲಗ್ಗೆ ಇಟ್ಟ ಪುಣೇರಿ

ಕಬಡ್ಡಿ: ಗೆಲುವಿನೊಂದಿಗೆ ಅಭಿಯಾನ ಮುಗಿಸಿದ ಬುಲ್ಸ್

ಪಂಚಕುಲಾ (ಪಿಟಿಐ): ಪಂಕಜ್ ಮೋಹಿತೆ ಅವರ ಮಿಂಚಿನ ದಾಳಿಯ ಬಲದಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಯುಪಿ ಯೋಧಾಸ್ ವಿರುದ್ಧ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಪುಣೇರಿ ಪಲ್ಟನ್ ತಂಡವು 40–38ರಿಂದ ಯುಪಿ ಯೋಧಾಸ್ ಎದುರು ಜಯಿಸಿತು. ಇದರೊಂದಿಗೆ ನೇರವಾಗಿ ಸೆಮಿಫೈನಲ್ ಪ್ರವೇಶಿಸಿತು. ಜೈಪುರ್ ಪಿಂಕ್ ಪ್ಯಾಂಥರ್ಸ್ ಕೂಡ ಈಗಾಗಲೇ ಸೆಮಿ ಹಂತಕ್ಕೆ ಪ್ರವೇಶಿಸಿದೆ.

ಉಭಯ ತಂಡಗಳ ನಡುವಣ ನಡೆದ ರೋಚಕ ಹಣಾಹಣಿಯಲ್ಲಿ ಪುಣೇರಿ ತಂಡವು ಮೊದಲಾರ್ಧದಲ್ಲಿ 15–28ರಿಂದ ಹಿಂದೆ ಇತ್ತು. 13 ಅಂಕಗಳ ವ್ಯತ್ಯಾಸವನ್ನು ಮೀರಿ ನಿಂತು ಜಯಿಸುವಲ್ಲಿ ಪುಣೇರಿ ಸಫಲವಾಯಿತು. ಅದಕ್ಕೆ ಕಾರಣವಾಗಿದ್ದು ರೇಡರ್ ಪಂಕಜ್ ಮೋಹಿತೆ ಅವರ ಮಿಂಚಿನ ದಾಳಿ. ಅವರು 12 ಅಂಕಗಳನ್ನು ಗಳಿಸಿದರು. ಯುಪಿ ಯೋಧಾ ತಂಡದ ಗಗನ್ ಗೌಡ ಕೂಡ 16 ಅಂಕ ಗಳಿಸಿದರು.

ಸುಶೀಲ್ ಸಂಘಟಿಸಿದ ಮಿಂಚಿನ ದಾಳಿಯ ಬಲದಿಂದ ಬೆಂಗಳೂರು ಬುಲ್ಸ್ ತಂಡವು ಇನ್ನೊಂದು ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಬೆಂಗಳೂರು ತಂಡವು 53–39ರಿಂದ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯಿಸಿತು. ಆದರೆ ಪ್ಲೇ ಆಫ್ ಹಂತಕ್ಕೆ ಪ್ರವೇಶಿಸುವಲ್ಲಿ ವಿಫಲವಾಯಿತು.

ಸುಶೀಲ್ 22 ಅಂಕಗಳನ್ನು ಗಳಿಸಿ ತಂಡದ ಜಯದ ರೂವಾರಿಯಾದರು. ಲೆಫ್ಟ್ ರೇಡಿಂಗ್‌ನಲ್ಲಿ ಮಿಂಚಿದ ಅಕ್ಷಿತ್ ಎಂಟು ಅಂಕ ಗಳಿಸಿದರು. ಹರಿಯಾಣ ತಂಡದ ತೇಜಸ್ ಪಾಟೀಲ ಅವರೂ 11 ಅಂಕ ಗಳಿಸಿದರು.

ಎಲಿಮಿನೇಟರ್ ಪಂದ್ಯಗಳು (ಫೆ. 26ರಂದು)

- ದಬಂಗ್ ಡೆಲ್ಲಿ – Vs – ಪಟ್ನಾ ಪೈರೆಟ್ಸ್ (ರಾತ್ರಿ 8)
- ಗುಜರಾತ್ ಜೈಂಟ್ಸ್– Vs – ಹರಿಯಾಣ ಸ್ಟೀಲರ್ಸ್ (ರಾತ್ರಿ 9)
- 28ರಂದು ಎರಡು ಸೆಮಿಫೈನಲ್ ಪಂದ್ಯಗಳು ನಡೆಯಲಿವೆ
- ಪುಣೇರಿ ಪಲ್ಟನ್, ಜೈಪುರ್ ಪಿಂಕ್ ಪ್ಯಾಂಥರ್ಸ್ ನಾಲ್ಕರ ಘಟ್ಟ ಪ್ರವೇಶಿಸಿವೆ

ಸ್ಥಳ: **ಹೈದರಾಬಾದ್**

ಪ್ಲೇ ಆಫ್‌ಗಿಲ್ಲ ದಕ್ಷಿಣ ತಂಡಗಳು

ಪ್ರೊಕಬಡ್ಡಿ ಲೀಗ್ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಪ್ಲೇ ಆಫ್ ಹಂತದಲ್ಲಿ ದಕ್ಷಿಣ ಭಾರತದ ಯಾವುದೇ ತಂಡಗಳೂ ಇಲ್ಲ. ಬೆಂಗಳೂರು ಬುಲ್ಸ್, ತಮಿಳ್ ತಲೈವಾಸ್ ಮತ್ತು ತೆಲುಗು ಟೈಟನ್ಸ್ ತಂಡಗಳು ಪ್ಲೇಆಫ್ ಹಂತಕ್ಕೆ ಅರ್ಹತೆ ಗಿಟ್ಟಿಸುವಲ್ಲಿ ವಿಫಲವಾಗಿವೆ

ಫುಟ್‌ಬಾಲ್: ಭಾರತಕ್ಕೆ ಮಣಿದ ಎಸ್ಟೋನಿಯಾ

ಅಲನ್ಯಾ (ಟರ್ಕಿ), (ಪಿಟಿಐ): ಭಾರತ ಫುಟ್‌ಬಾಲ್ ತಂಡ, ಟರ್ಕಿಷ್ ಮಹಿಳಾ ಕಪ್ ಟೂರ್ನಿಯಲ್ಲಿ ಬುಧವಾರ ತೀವ್ರ ಹೋರಾಟದ ನಂತರ ಎಸ್ಟೋನಿಯಾ ತಂಡವನ್ನು 4–3 ಗೋಲುಗಳಿಂದ ಸೋಲಿಸಿತು. ಇದು ಭಾರತ ತಂಡ, ಯುರೋಪಿಯನ್ ತಂಡವೊಂದರ ವಿರುದ್ಧ ಗಳಿಸಿದ ಮೊದಲ ಜಯ.

ಚಾವೊಬಾ ದೇವಿ ಅವರಿಂದ ತರಬೇತಾಗಿರುವ ಭಾರತ ತಂಡದ ಪರ ಮನಿಷಾ ಕಲ್ಯಾಣ್ ಎರಡು ಗೋಲುಗಳನ್ನು ಗಳಿಸಿದರು. ವಿರಾಮದ ವೇಳೆ ಸ್ಕೋರ್ 1–1 ರಲ್ಲಿ ಸಮನಾಗಿತ್ತು.

ಮನಿಷಾ 17 ಮತ್ತು 81ನೇ ನಿಮಿಷ ಗೋಲುಗಳನ್ನು ಗಳಿಸಿದರು. ಇಂದುಮತಿ ಕದಿರೇಷನ್ (62ನೇ) ಮತ್ತು ಪ್ಯಾರಿ ಕ್ಸಾಕ್ಸಾ (79ನೇ) ಅವರಿಂದ ಉಳಿದೆರಡು ಗೋಲುಗಳು ಬಂದವು.

ಇಂದಿನಿಂದ ಎಜೀಸ್ ಕ್ರಿಕೆಟ್

ಬೆಂಗಳೂರು: ಭಾರತ ಆಡಿಟ್ ಅಂಡ್ ಅಕೌಂಟ್ಸ್ ಇಲಾಖೆಯ ದಕ್ಷಿಣ ವಲಯ ಕ್ರಿಕೆಟ್ ಟೂರ್ನಿ ಇದೇ 22 ಮತ್ತು 23ರಂದು ಎಂ.ಜಿ. ರಸ್ತೆಯ ಆರ್.ಎಸ್.ಐ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಟೂರ್ನಿಯಲ್ಲಿ ಕರ್ನಾಟಕ ಸೇರಿದಂತೆ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ತಂಡಗಳು ಪಾಲ್ಗೊಳ್ಳಲಿವೆ. 23ರಂದು ಬೆಳಿಗ್ಗೆ 10ಕ್ಕೆ ಫೈನಲ್ ಹಣಾಹಣಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಸ್ಕೆಟ್‌ಬಾಲ್ ಜೈನ್ ವಿವಿಗೆ ಚಿನ್ನ

ಬೆಂಗಳೂರು: ಇಲ್ಲಿನ ಜೈನ್ ವಿಶ್ವವಿದ್ಯಾಲಯದ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ತಂಡವು ಖೇಲೊ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಚಿನ್ನ ಗೆದ್ದುಕೊಂಡರೆ, ಪುರುಷರ ತಂಡವು ಕಂಚು ಪದಕ ಜಯಿಸಿತು.

ಗುವಾಹಟಿಯ ನವೀನ್‌ಚಂದ್ರ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಫೈನಲ್‌ನಲ್ಲಿ ಮಹಿಳೆಯರ ತಂಡವು ಮದ್ರಾಸ್ ವಿವಿ ತಂಡವನ್ನು 68–58ರಿಂದ ಮಣಿಸಿತು.

ಮಂಗಳೂರು ವಿವಿಗೆ ಚಿನ್ನ: ಪುರುಷರ ಕಬಡ್ಡಿಯಲ್ಲಿ ಮಂಗಳೂರು ವಿಶ್ವವಿದ್ಯಾಲಯ ತಂಡವು ಕೋಟಾ ವಿ.ವಿ ತಂಡವನ್ನು ಫೈನಲ್ ಹಣಾಹಣಿಯಲ್ಲಿ 36–22ರಿಂದ ಮಣಿಸಿ ಚಿನ್ನ ಗೆದ್ದುಕೊಂಡಿತು.



